ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಮತ್ತೆ ಟಾಟಾ ಅಂಗಳದಲ್ಲಿ 'ಲ್ಯಾಂಡ್' ಆದ 'ಹಾರುವ ಮಹಾರಾಜ' ಏರ್ ಇಂಡಿಯಾದ ಗತವೈಭವದ ಮಧುರ ಮೆಲುಕು



ಅಮರಿಂದರ್, ಮಜಿಥಿಯಾಗೆ ಸಿಧು ಸವಾಲು 7
ಪೆಗಾಸಸ್: ವಿರೋಧ ಪಕ್ಷಗಳು, ಬಿಜೆಪಿಯ ಸುಬ್ರಮಣಿಯನ್ ಸ್ವಾಮಿ ಆಕ್ರೋಶ
ಜಾಟ್ ಸಿಟ್ಟು: ಧ್ರುವೀಕರಣ ನೆಚ್ಚಿದ ಬಿಜೆಪಿ 7
'ಸುಪ್ರೀಂ', ಸಂಸತ್ತನ್ನು ತಪ್ಪುದಾರಿಗೆಳೆದ ಸರ್ಕಾರ' 7

2,430 ಬ್ಯಾಕ್‌ಲಾಗ್ ಹುದ್ದೆ: ಮೂರು ತಿಂಗಳಲ್ಲಿ ಭರ್ತಿ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ನಿಗಮಗಳು, ಮಂಡಳಿಗಳು, ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳಲ್ಲಿ ಖಾಲಿ ಇರುವ 2,430 ಬ್ಯಾಕ್‌ಲಾಗ್ ಹುದ್ದೆಗಳನ್ನು ಮೂರು ತಿಂಗಳೊಳಗೆ ಭರ್ತಿ ಮಾಡಲು ಕ್ರಮ ಕೈಗೊಳ್ಳುವಂತೆ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಪ್ರಕ್ರಿಯೆಯ ಉಸ್ತುವಾರಿಗಾಗಿ ನೇಮಿಸಿರುವ ಸಚಿವ ಗೋವಿಂದ ಕಾರಜೋಳ ನೇತೃತ್ವದ ಸಚಿವ ಸಂಪುಟ ಉಪ ಸಮಿತಿ ನಿರ್ದೇಶನ ನೀಡಿದೆ.

ಶನಿವಾರ ಸಭೆ ನಡೆಸಿದ ಸಂಪುಟ ಉಪ ಸಮಿತಿ, ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಪ್ರಕ್ರಿಯೆ ಕುರಿತು ಮಾಹಿತಿ ಪಡೆಯಿತು. ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳು, ಅನುದಾನಿತ ತಾಂತ್ರಿಕ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ 446 ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ 436 ಹುದ್ದೆಗಳು ಖಾಲಿ ಇವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಈ ಹುದ್ದೆಗಳ ಭರ್ತಿಗೆ ವಾರದೊಳಗೆ ಅಧಿಸೂಚನೆ ಹೊರಡಿಸುವಂತೆ ಸಮಿತಿ ಸೂಚಿಸಿತು.

6ನೇ ಪುಟ ನೋಡಿ

ಬಾರದ ವಲಸೆ ಪಕ್ಷಿಗಳು

• ವೆಂಕಟೇಶ ಜಿ.ಎಚ್.

ಬಾಗಲಕೋಟೆ: ಈ ವರ್ಷ ಚಳಿಗಾಲದಲ್ಲಿ ಇಲ್ಲಿನ ಆಲಮಟ್ಟಿ ಜಲಾಶಯದ ಹಿನ್ನೀರ ಹಾದಿಯಲ್ಲಿ ಫ್ಲೆಮಿಂಗೊ ಸೇರಿ ವಲಸೆ ಪಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದಿಲ್ಲ. ರಾಜ್ಯದ ಬಹುತೇಕ ಕಡೆ ಕೆರೆ ಕುಂಟೆಗಳಿಗೆ ಹೊರದೇಶಗಳಿಂದ ಬರುವ 'ಅತಿಥಿಗಳ' ಸಂಖ್ಯೆ ಬೇರೆ ಬೇರೆ ಕಾರಣಗಳಿಂದ ಗಣನೀಯವಾಗಿ ಕುಸಿದಿದೆ.

ಗುಜರಾತ್‌ನ ಕಛ್ ಖಾರಿಯಿಂದ (ರಣ್ ಆಫ್ ಕಛ್) ಸಂತಾನೋತ್ಪತ್ತಿಗಾಗಿಯೇ ಪ್ರತಿವರ್ಷ ಶರದೃತುವಿನಲ್ಲಿ ಫ್ಲೆಮಿಂಗೊ ಪಕ್ಷಿಯು ಹಿನ್ನೀರ ಪ್ರದೇಶಕ್ಕೆ ಬರುತ್ತವೆ. ಜೊತೆಗೆ ಮಧ್ಯ ಏಷ್ಯಾದಲ್ಲಿ ಕಾಣಸಿಗುವ ಪಟ್ಟೆತಲೆ ಹೆಬ್ಬಾತು (ಬಾರ್ ಹೆಡೆಡ್ ಗೂಸ್), ಆಸ್ಟ್ರೇಲಿಯಾ ಖಂಡದಿಂದ ಬರುವ ಮೂಡಣದ ಚಿಟವ ಹಕ್ಕಿ ಸೇರಿದಂತೆ ಹತ್ತಾರು ಬಗೆಯ ಅತಿಥಿಗಳು ವಲಸೆ ಬರುತ್ತವೆ.

ಒಳನೋಟ
ಬಾನಾಡಿಗಳ ಬವಣೆ
ಪ್ರತಿಕ್ರಿಯಿಸಿ: 9606038256
feedback@prajavani.co.in

ಹಿನ್ನೀರು ಆವರಿಸಿರುವ ಬೀಳಗಿ ತಾಲ್ಲೂಕು ಹೆರಕಲ್ ಬ್ಯಾರೇಜ್, ಗಲಗಲಿ, ಕದಂಪುರ, ಚಿಕ್ಕಸಂಗಮ, ಹಳೆಯ ಅನಗವಾಡಿಯಿಂದ ಕುಂದರಗಿ ರಸ್ತೆ, ಸಾಲಗುಂದಿ, ನೆಕ್ಕರಗುಂದಿ, ಸಿಂದಗಿ, ಕೊರ್ತಿ, ಕೊಲ್ಹಾರ, ಬಾಗಲಕೋಟೆ ತಾಲ್ಲೂಕಿನ ಗುಡ್ಡದ ಮಲ್ಲಾಪುರ, ಬೆನ್ನೂರು, ರಾಂಪುರ, ಅಚನೂರು, ಸೀತಿಮನಿ ಸುತ್ತಲಿನ ಪ್ರದೇಶ ಚಳಿಗಾಲದಲ್ಲಿ ಪಕ್ಷಿ ಕಾಶಿಯಾಗಿ ಬದಲಾಗುತ್ತವೆ.

4ನೇ ಪುಟ ನೋಡಿ

ಬೋನಾಳಕ್ಕೂ ಬಾರದ ಹಕ್ಕಿಗಳು

ಯಾದಗಿರಿ: ಸುರಪುರ ತಾಲ್ಲೂಕಿನ ಬೋನಾಳ ಕೆರೆ ಪಕ್ಷಿಧಾಮ ರಾಜ್ಯದಲ್ಲಿಯೇ ದೊಡ್ಡ ಪಕ್ಷಿಧಾಮವಾಗಿದ್ದರೂ ಪ್ರವಾಸಿ ತಾಣವಾಗಿ ರೂಪುಗೊಂಡಿಲ್ಲ. ದೇಶ-ವಿದೇಶಗಳಿಂದ ಸಾವಿರಾರು ಸಂಖ್ಯೆಯ ವಿವಿಧ ಬಗೆಯ ಪಕ್ಷಿಗಳು ಸಂತಾನೋತ್ಪತ್ತಿಗಾಗಿ ಬರುತ್ತಿದ್ದವು. ಇವುಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ.

ಸುರಪುರ ನಗರದಿಂದ 12 ಕಿ.ಮೀ. ದೂರದಲ್ಲಿರುವ ಬೋನಾಳ ಕೆರೆ ಪಕ್ಷಿಧಾಮಕ್ಕೆ ಅರ್ಜೆಂಟಿನಾ, ರಷ್ಯಾ (ಸೈಬೀರಿಯಾ ಭಾಗ) ಮುಂತಾದ ದೇಶಗಳಿಂದ ಪಕ್ಷಿಗಳು ಬರುತ್ತಿದ್ದವು. ಬೋನಾಳ ಕೆರೆಯು 600 ಎಕರೆಗೂ ಹೆಚ್ಚು ವಿಸ್ತಾರ ಹೊಂದಿದೆ. ಕೃಷ್ಣಾ ನದಿಯಿಂದ ಕೆರೆಗೆ ನೀರು ಹರಿಸಲಾಗುತ್ತಿದೆ.

ದೇಶಿ ಪಕ್ಷಿಗಳಾದ ರಾಜಹಂಸ, ಕರಿತಲೆ ಹಕ್ಕಿ, ಕಿರು ಬೆಳ್ಳಕ್ಕಿ, ದೊಡ್ಡ ಬೆಳ್ಳಕ್ಕಿ, ಬಿಳಿ ಕತ್ತಿನ ಕೊಕ್ಕರೆ, ಕೆಂಪು ಬಣ್ಣದ ಬುಲ್ ಬುಲ್, ವಿದೇಶಿ ಪಕ್ಷಿಗಳಾದ ಡಾರ್ಟರ್, ಕಪ್ಪು ತಲೆಯ ಐಬಿಸ್, ಲಾರ್ಜ್ ಎರೆಟ್, ಪೋಚಾರ್ಡ್ ಇಂಡಿಯನ್ ಶಾಗ್, ಸ್ನೇಕ್ ಬರ್ಡ್, ಇಂಡಿಯನ್ ಮೋರ್‌ಹೆನ್, ಪ್ವೆಡ್, ಮಿಂಚುಳ್ಳಿ (ಕಿಂಗ್ ಫಿಷರ್) ಸೇರಿದಂತೆ ಇನ್ನೂ ಹಲವಾರು ಪ್ರಭೇದದ ಪಕ್ಷಿ ಸಂಕುಲ ಇಲ್ಲಿಗೆ ಆಗಮಿಸುತ್ತಿದ್ದವು. ವರ್ಷದಿಂದ ವರ್ಷಕ್ಕೆ ಪಕ್ಷಿಗಳ ಬರುವಿಕೆ ಕಡಿಮೆಯಾಗುತ್ತಾ ಸಾಗುತ್ತಿದೆ.

4ನೇ ಪುಟ ನೋಡಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3ILEEjl

ಇನ್ನಷ್ಟು ಸುದ್ದಿಗಳು 4



ಬೀಳಗಿ ತಾಲ್ಲೂಕು ಹೆರಕಲ್ ಬಳಿ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಫ್ಲೆಮಿಂಗೊ ಕಲರವ. ಚಿತ್ರ: ಹಣಮಂತ ಡೋಣಿ

ಚಿನಕುರಳಿ
ಪ್ರಕಾಶ್ ಶೆಟ್ಟಿ



ನಾಳೆಯಿಂದ ರಾತ್ರಿ ಕರ್ಫ್ಯೂ ರದ್ದು
ನಿರ್ಬಂಧ ಭಾಗಶಃ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್‌ನಿಂದ ಆಸ್ಪತ್ರೆಗೆ ದಾಖಲಾಗುತ್ತಿರುವವರ ಪ್ರಮಾಣ ಶೇಕಡ 2ಕ್ಕೆ ಇಳಿಕೆಯಾಗಿರುವುದರಿಂದ ನಿರ್ಬಂಧಗಳನ್ನು ಭಾಗಶಃ ತೆರವು ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಜನವರಿ 31ರಿಂದ ರಾಜ್ಯದಾದ್ಯಂತ ರಾತ್ರಿ ಕರ್ಫ್ಯೂ ರದ್ದುಗೊಳಿಸಿ ಆದೇಶವನ್ನೂ ಹೊರಡಿಸಲಾಗಿದೆ.

ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಸಭೆಯಲ್ಲಿ, ಕೆಲವು ನಿರ್ಬಂಧಗಳನ್ನು ತೆರವು ಮಾಡುವ ನಿರ್ಧಾರ ಕೈಗೊಳ್ಳಲಾಯಿತು. ಇನ್ನು ಕೆಲವು ನಿರ್ಬಂಧಗಳನ್ನು ಸಡಿಲಿಸುವ ತೀರ್ಮಾನವನ್ನೂ ಕೈಗೊಳ್ಳಲಾಯಿತು.

6ನೇ ಪುಟ ನೋಡಿ

ಭಾರತ ಪೆಗಾಸಸ್ ಖರೀದಿಸಿದೆ: ನ್ಯೂಯಾರ್ಕ್ ಟೈಮ್ಸ್ ವರದಿ

ನ್ಯೂಯಾರ್ಕ್ (ಪಿಟಿಐ): ಇಸ್ರೇಲ್‌ನಿಂದ ಪೆಗಾಸಸ್ ಬೇಹುಗಾರಿಕೆ ಕುತಂತ್ರಾಂಶವನ್ನು ಭಾರತವು ಖರೀದಿಸಿದೆ ಎಂಬ 'ದ ನ್ಯೂಯಾರ್ಕ್ ಟೈಮ್ಸ್' (ಎನ್‌ವೈಟಿ) ವರದಿಯು ಭಾರಿ ಸಂಚಲನಕ್ಕೆ ಕಾರಣವಾಗಿದೆ.

ಭಾರತ ಮತ್ತು ಇಸ್ರೇಲ್ ನಡುವೆ 2017ರಲ್ಲಿ ನಡೆದ ರಕ್ಷಣಾ ಸಾಮಗ್ರಿ ಮತ್ತು ಗುಪ್ತಚರ ಸಾಧನಗಳ ಖರೀದಿ ಒಪ್ಪಂದದಲ್ಲಿ ಪೆಗಾಸಸ್ ಕುತಂತ್ರಾಂಶವು ಮುಖ್ಯವಾಗಿತ್ತು ಎಂದು ಎನ್‌ವೈಟಿ ತನಿಖಾ ವರದಿಯು ಹೇಳಿದೆ. ಇದು ಸುಮಾರು ₹15,000 ಕೋಟಿಯ ಒಪ್ಪಂದವಾಗಿತ್ತು. ಭಾರತ ಸೇರಿದಂತೆ ವಿವಿಧ ದೇಶಗಳಲ್ಲಿ ಇಸ್ರೇಲ್ ನಿರ್ಮಿತ ಪೆಗಾಸಸ್ ಕುತಂತ್ರಾಂಶ ಬಳಸಿ ಪತ್ರಕರ್ತರು, ರಾಜಕಾರಣಿಗಳು, ನ್ಯಾಯಮೂರ್ತಿಗಳು, ಮಾನವ ಹಕ್ಕುಗಳ ಹೋರಾಟಗಾರರು ಮತ್ತು ಇತರರ ಮೇಲೆ ಬೇಹುಗಾರಿಕೆ ನಡೆಸಲಾಗಿದೆ ಎಂಬ ತನಿಖಾ ವರದಿಯು ಕಳೆದ ವರ್ಷ ಪ್ರಕಟವಾಗಿತ್ತು.

7ನೇ ಪುಟ ನೋಡಿ

ಶತಮಾನದ ಸುಂದರ ನೆನಪುಗಳ 'ಕಲಾಮಂದಿರ'

• ಶಿವರಾಜ ರಾಮನಾಳ

ಬೆಂಗಳೂರು: ಆಕರ್ಷಕ ಕೆಂಪು ಕಟ್ಟಡ, ಗೋಡೆಗಳಲ್ಲಿ ಕಣ್ಸೆಳೆಯುವ ಕುಸುರಿ ಚಿತ್ತಾರಗಳು. ಇವು ನಗರದ ಹನುಮಂತನಗರದ ಕಲಾಮಂದಿರ ಕಲಾಶಾಲೆಗೆ ಭೇಟಿ ನೀಡಿದಾಗ ಎದುರುಗೊಳ್ಳುವ ನೋಟಗಳು. ಸಾವಿರಾರು ಮೇರು ಕಲಾವಿದರನ್ನು ನಾಡಿಗೆ ನೀಡಿರುವ ಈ ಕಲಾಶಾಲೆ ಶತಮಾನದ ಸಂಭ್ರಮವನ್ನು ಕಂಡಿದೆ. ಈಗಲೂ ಕಲಾ ಕೈಂಕರ್ಯವನ್ನು ಉತ್ಸಾಹದಿಂದ ಮುಂದುವರಿಸುತ್ತಿದೆ.

ಮಂಡ್ಯ ಜಿಲ್ಲೆಯ ರೈತಾಪಿ ಕುಟುಂಬದ ಅಕ್ಕಿ ಹೆಬ್ಬಾಳು ನರಸಿಂಹ ಸುಬ್ಬರಾವ್ 1919ರಲ್ಲಿ ಬೆಂಗಳೂರಿನ ಬಳೆಪೇಟೆಯ ಸುಗ್ರೀವ ದೇವಸ್ಥಾನದ ಬಳಿ ಕಲಾ ಶಾಲೆಯನ್ನು ಆರಂಭಿಸಿದ್ದರು. ಇದು ಕರ್ನಾಟಕದ ಮೊಟ್ಟ ಮೊದಲ ಚಿತ್ರಕಲೆಯ ಮಂದಿರ. ಬಳೆಪೇಟೆಯಲ್ಲಿದ್ದ ಕಲಾಶಾಲೆ 1938ರಲ್ಲಿ ಮೆಜೆಸ್ಟಿಕ್‌ಗೆ, 1944ರಲ್ಲಿ ಗಾಂಧಿಬಜಾರ್‌ಗೆ ಸ್ಥಳಾಂತರವಾಗುತ್ತದೆ. 1978 ರಿಂದ ಕಲಾಮಂದಿರವು ಶಾಶ್ವತವಾಗಿ ಹನಮಂತನಗರದಲ್ಲಿ ನೆಲೆಗೊಂಡಿದೆ. ಈ ಕಲಾಮಂದಿರದ ಪ್ರಾಂಗಣವನ್ನು ಪ್ರವೇಶಿಸುತ್ತಿದ್ದಂತೆಯೇ ಅ.ನ.ಸುಬ್ಬರಾಯರ ಪುತ್ಥಳಿಯೂ ನಿಮ್ಮನ್ನು ಸ್ವಾಗತಿಸುತ್ತದೆ. ಇಲ್ಲಿನ ಶಿಲ್ಪಶಾಸ್ತ್ರದ ವಿದ್ಯಾರ್ಥಿಗಳೇ ಇದನ್ನು ನಿರ್ಮಿಸಿದ್ದಾರೆ.

ಅ.ನ.ಸು ಬಾಲಕರಾಗಿದ್ದಾಗ ನಾಗಮಂಗಲದ ಹೊಯ್ಸಳ ಶಿಲ್ಪಗಳಿಂದ ಪ್ರೇರಿತರಾಗಿ ಮೈಸೂರಿನಲ್ಲಿ ಚಿತ್ರಕಲಾ ಡಿಪ್ಲೊಮಾ ಪದವಿ ಪಡೆದರು. ಬೆಂಗಳೂರಿಗೆ ಬಂದು ಬಿಷಪ್ ಕಾಟನ್ ಶಾಲೆಯಲ್ಲಿ ಕಲಾ ಶಿಕ್ಷಕರಾದರು. ಬಳಿಕ ಸರ್.ಎಂ.ವಿಶ್ವೇಶ್ವರಯ್ಯ ಸಲಹೆಯಂತೆ ಈ ಕಲಾ ಶಾಲೆ ಆರಂಭಿಸಿದ್ದರು. ಪ್ರಸ್ತುತ ಇಲ್ಲಿ ಚಿತ್ರಕಲೆ, ಶಿಲ್ಪಕಲೆಯ ಜೊತೆಗೆ ನಟನಾ ಕಲೆಯನ್ನು (ಅಭಿನಯ ತರಂಗ ಶಾಲೆಯಲ್ಲಿ) ಕಲಿಸಲಾಗುತ್ತದೆ.

ಅ.ನ.ಸು ಅವರ ಮೊಮ್ಮಗ ಎ.ಎಂ.ಪ್ರಕಾಶ್ ಅವರು ಸದ್ಯ ಕಲಾಮಂದಿರದ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. 1983ರಿಂದ 2020ರವರೆಗೆ ಕಲಾಶಾಲೆಯ ಪ್ರಾಂಶುಪಾಲಗಳುರಾಗಿದ್ದ ಪ್ರಕಾಶ್ ಈಗ ಆಡಳಿತ ಮಂಡಳಿಯ ಅಧ್ಯಕ್ಷರು. 1919 ರಿಂದ ಕಲಾ ಡಿಪ್ಲೊಮಾ ಕೋರ್ಸ್ ಮಾತ್ರ ಹೊಂದಿದ್ದ ಕಲಾಮಂದಿರ, 2005 ರಿಂದ ಕಲಾ ಪದವಿಯನ್ನೂ ನೀಡುತ್ತಿದೆ. ಇದು ಹಂಪಿ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿದೆ. ನಾಲ್ಕು ವರ್ಷಗಳ ಬಿ.ವಿ.ಎ (ದೃಶ್ಯಕಲೆ) ಪದವಿ ಕೋರ್ಸ್ ಇಲ್ಲಿದೆ. ಚಿತ್ರಕಲೆ, ವರ್ಣಚಿತ್ರ, ದೃಶ್ಯಕಲೆ, ಫೋಟೊಗ್ರಾಫಿ, ಕ್ರಿಯೇಟಿವ್ ಪೇಂಟಿಂಗ್, ಸ್ಥಿರಚಿತ್ರಣ, ವ್ಯಕ್ತಿಚಿತ್ರಣ, ರೂಪದರ್ಶಿ, ಭಾವಚಿತ್ರಣ, ರೇಖಾಚಿತ್ರ, ಕಲ್ಪನಾಚಿತ್ರ, ಕಲಾ ಚರಿತ್ರೆ, ಸೌಂದರ್ಯಶಾಸ್ತ್ರ ಕಲಿಸಲಾಗುತ್ತದೆ. ಗ್ರಾಫಿಕ್ಸ್ ಪಠ್ಯವನ್ನೂ ಸೇರಿಸಲಾಗಿದ್ದು ಭಾಷಾ ಶಾಸ್ತ್ರವನ್ನೂ ಹೇಳಿಕೊಡಲಾಗುತ್ತದೆ ಎಂದು ಪ್ರಕಾಶ್ ವಿವರಿಸಿದರು.

ಭಾರತದ ಮೊದಲ ಶಿಲ್ಪ ಕಲಾವಿದೆಯಾದ ಕನಕಾ ಮೂರ್ತಿ ಅವರು ಕಲಿತದ್ದು ಇಲ್ಲಿಯೇ. ಬಿ.ಕೆ.ಎಸ್.ವರ್ಮಾ, ವೆಂಕಟಾಚಲಪತಿ, ರುಮಾಲೆ ಚೆನ್ನಬಸಪ್ಪ ಮೊದಲಾದ ದಿಗ್ಗಜ ಕಲಾವಿದರು ಇಲ್ಲಿನ ವಿದ್ಯಾರ್ಥಿಗಳು. ಕರ್ನಾಟಕದಲ್ಲಿರುವ 70 ಕ್ಕೂ ಹೆಚ್ಚು ಕಲಾ ಶಾಲೆಗಳಿಗೆ ಕಲಾಮಂದಿರವೇ ಬುನಾದಿ.

'ಚಿತ್ರಕಲಾ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಒಂದು ಲಲಿತ ಕಲಾ ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕು. 2017-18ರಲ್ಲಿ ಈ ಬಗ್ಗೆ ಪ್ರಸ್ತಾವನೆ ಕೊಟ್ಟರೂ ಪ್ರಯೋಜನವಾಗಿಲ್ಲ. ಇದಕ್ಕಾಗಿ ರಾಜಕೀಯ ಇಚ್ಛಾಶಕ್ತಿ ಬೇಕು' ಎನ್ನುತ್ತಾರೆ ಪ್ರಕಾಶ್.

ಮೊದಲ ಕಲಾ ಪತ್ರಿಕೆ: 1930-33 ರ ಅವಧಿಯಲ್ಲಿ ಅ.ನ.ಸು. ಅವರು 'ಕಲಾ' ಹೆಸರಿನಲ್ಲಿ ಕರ್ನಾಟಕದ ಮೊದಲ ಸಂಕೀರ್ಣ ಪತ್ರಿಕೆ ಆರಂಭಿಸಿದರು. ಅ.ನ.ಕೃಷ್ಣರಾಯರು, ಡಿ.ವಿ.ಜಿ., ಮಾಸ್ತಿ, ದೇವುಡು, ಗೊರೂರು ಸೇರಿದಂತೆ ಅನೇಕರು ಇದಕ್ಕೆ ಲೇಖನ ಬರೆಯುತ್ತಿದ್ದರು.

ಬೆಂಗಳೂರು ನಮ್ಮ ಹೆಮ್ಮೆ...

ಅಂಕಿ-ಅಂಶಗಳು

68 ಕಲಾ ಮಂದಿರದ ವಿದ್ಯಾರ್ಥಿಗಳು

6 ಕಲಾ ಮಂದಿರದ ಅಧ್ಯಾಪಕರು

30 ಅಭಿನಯ ತರಂಗ ನಾಟಕ ಶಾಲೆಯ ವಿದ್ಯಾರ್ಥಿಗಳು



ಹನುಮಂತನಗರದಲ್ಲಿರುವ ಕಲಾಮಂದಿರ ಕಲಾಶಾಲೆಯ ಹೊರನೋಟ. ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್.ಜಿ.



ಸಂಸ್ಥಾಪಕ ಅ.ನ.ಸುಬ್ಬರಾಯರ ಪ್ರತಿಮೆ



ಸರ್ಕಾರದ ಅನುದಾನ ಪ್ರಾಂಶುಪಾಲರ ವೇತನಕ್ಕೆ ಮಾತ್ರ ಸಾಲುತ್ತದೆ. ಇತರ ನೇಮಕಾತಿ, ಕಲಾ ಪ್ರದರ್ಶನ, ಕಾರ್ಯಾಗಾರ ಯಾವುದಕ್ಕೂ ಹಣವಿಲ್ಲ. ಕಲಾಶಾಲೆಗಳನ್ನು ಪೋಷಿಸುವತ್ತ ಸರ್ಕಾರ ಚಿತ್ತ ಹರಿಸಬೇಕು

ಪ್ರಕಾಶ್ ಎ.ಎಂ., ಅಧ್ಯಕ್ಷ, ಕಲಾಮಂದಿರ ಆಡಳಿತ ಮಂಡಳಿ

ಅಖಿಲ ಭಾರತಮಟ್ಟದ ಕಲಾಪ್ರದರ್ಶನಗಳು

ಸುಬ್ಬರಾಯರು 1921ರಲ್ಲಿ ಮೆಜೆಸ್ಟಿಕ್‌ನಲ್ಲಿ ಮೊದಲ ಅಖಿಲ ಭಾರತ ಕಲಾ ಪ್ರದರ್ಶನ ಏರ್ಪಡಿಸಿದ್ದರು. ಮೈಸೂರಿನ ದಿವಾನರಾಗಿದ್ದ ಸರ್.ಮಿರ್ಜಾ ಇಸ್ಮಾಯಿಲ್ ಅವರಿಗೆ ಆಹ್ವಾನ ನೀಡಿದ್ದರು. ಅವರ ಕೈಬರಹ ನೋಡಿಯೇ ಆಕರ್ಷಿತರಾದ ಇಸ್ಮಾಯಿಲ್ ಆ ಪ್ರದರ್ಶನವನ್ನು ಉದ್ಘಾಟಿಸಿದ್ದಲ್ಲದೇ, ₹50 ದೇಣಿಗೆಯನ್ನೂ ನೀಡಿದ್ದರು.

1927ರಲ್ಲಿ ನಡೆದ ಎರಡನೇ ಪ್ರದರ್ಶನದಲ್ಲಿ ನೇಪಾಳದ ಆಗಿನ ಮಹಾರಾಜ ಜೈ ಬಹದ್ದೂರ್ ಸಿಂಗ್ ಭಾಗವಹಿಸಿದ್ದರು. 1929ರಲ್ಲಿ ಏರ್ಪಡಿಸಿದ್ದ ಮೂರನೇ ಪ್ರದರ್ಶನವನ್ನು ಹೈದರಾಬಾದ್‌ನ ಮಹಾರಾಣಿ ದುರೇಶಾ ಅವರು ಉದ್ಘಾಟಿಸಿದ್ದರು. ಅನೇಕ ಕಲಾಕೃತಿಗಳನ್ನೂ ಖರೀದಿಸಿದ್ದರು.

ಸಾಂಸ್ಕೃತಿಕ ಕೂಟವಾಗಿದ್ದ ಕಲಾಮಂದಿರ

ಕಲಾಮಂದಿರವು ಗಾಂಧಿ ಬಜಾರ್‌ನಲ್ಲಿದ್ದಾಗ ಅದೊಂದು ಸಾಂಸ್ಕೃತಿಕ ಕೇಂದ್ರವಾಗಿತ್ತು. ಜಿ.ಪಿ. ರಾಜರತ್ನಂ, ಮಾಸ್ತಿ, ಡಿ.ವಿ.ಜಿ. ಬೀಚಿ, ಅ.ನ.ಕೃ ಅಂಥವರು ಕಲೆಗಳ ಉದ್ದೇಶ, ಸೌಂದರ್ಯ ಶಾಸ್ತ್ರ, ನಾಟಕಗಳ ಬಗ್ಗೆ ಇಲ್ಲಿ ಚರ್ಚಿಸುತ್ತಿದ್ದರು. ಕವಿ ಮೇಳಗಳು ಹಾಗೂ ವಿಚಾರ ಸಂಕಿರಣಗಳು ನಡೆಯುತ್ತಿದ್ದವು. ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರೂ ಇಲ್ಲಿಗೆ ಭೇಟಿ ನೀಡುತ್ತಿದ್ದರು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಗುಪ್ತ ಚರ್ಚೆಗಳೂ ಇಲ್ಲಿ ನಡೆಯುತ್ತಿದ್ದವು. ಲಂಕೇಶ್, ಗಿರೀಶ ಕಾರ್ನಾಡ, ಚಂದ್ರಶೇಖರ ಕಂಬಾರರು ತಮ್ಮ ಮೊದಲ ನಾಟಕವನ್ನು ವಾಚಿಸಿದ್ದು ಇಲ್ಲಿಯೇ. ಮೈಸೂರು ಅನಂತಸ್ವಾಮಿ ಅವರು ರಾಜರತ್ನಂ ಸಮ್ಮುಖದಲ್ಲಿ ಮೊದಲ ಬಾರಿ ಸ್ವರಚಿತ ಕವನಗಳನ್ನು ಇಲ್ಲಿ ಹಾಡಿದ್ದರು. ಸಿ.ಅಶ್ವತ್ಥ್, ಪಿ.ಕಾಳಿಂಗರಾವ್ ಆಗಾಗ ಬರುತ್ತಿದ್ದರು ಎಂದು ಪ್ರಕಾಶ್ ತಿಳಿಸಿದರು.

ಗಾಂಧೀಜಿ ಭೇಟಿಯ ನೆನಪು

1934ರಲ್ಲಿ ಮಹಾತ್ಮ ಗಾಂಧಿ ಬೆಂಗಳೂರಿಗೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಸುಬ್ಬರಾಯರು ಮತ್ತು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಖಾದಿ ಬಟ್ಟೆಗಳ ಮೇಲೆ ವಿದ್ಯಾರ್ಥಿಗಳು ಬಿಡಿಸಿದ ಕಲಾಕೃತಿಗಳ ಪ್ರದರ್ಶನವನ್ನು ಏರ್ಪಡಿಸಿದ್ದರು. ಅದನ್ನು ವೀಕ್ಷಿಸಿದ್ದ ಗಾಂಧೀಜಿ ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಸುದ್ದಿ 2 ನಿಮಿಷ

ಸಹನಟಿ ಮೇಲೆ ಅತ್ಯಾಚಾರ ನಿರ್ಮಾಪಕ ಬಂಧನ

ಬೆಂಗಳೂರು: ಸಿನಿಮಾ ಸಹನಟಿಗೆ ಕೆಲಸದ ಆಮಿಷವೊಡ್ಡಿ ಅತ್ಯಾಚಾರ ಎಸಗಿರುವ ಆರೋಪದಡಿ ನಿರ್ಮಾಪಕರೂ ಆದ ನಟ ಹರ್ಷವರ್ಧನ್ ಅಲಿಯಾಸ್ ವಿಜಯ್ ಭಾರ್ಗವ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

'41 ವರ್ಷದ ಮಹಿಳೆ ದೂರು ನೀಡಿದ್ದರು. ಕೆಲಸ ಕೊಡಿಸುವುದಾಗಿ ವಂಚನೆ (ಐಪಿಸಿ 417), ಅತ್ಯಾಚಾರ (ಐಪಿಸಿ 376) ಹಾಗೂ ಜೀವ ಬೆದರಿಕೆ (ಐಪಿಸಿ 506) ಒಡ್ಡಿದ ಆರೋಪದಡಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಅನ್ನಪೂರ್ಣೇಶ್ವರಿನಗರ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

'ಚಿತ್ರೀಕರಣದ ವೇಳೆ ಆರೋಪಿಗೆ ಸಹ ನಟಿ ಪರಿಚಯವಾಗಿ, ಇಬ್ಬರ ನಡುವೆ ಸ್ನೇಹ ಏರ್ಪಟ್ಟಿತ್ತು. ಸಹನಟಿಯನ್ನು ಮದುವೆಯಾಗುವುದಾಗಿ ಹೇಳಿದ್ದ ಆರೋಪಿ, ಹಲವು ಬಾರಿ ಅತ್ಯಾಚಾರ ಎಸಗಿದ್ದ ಎನ್ನುವ ಸಂಗತಿ ಮಹಿಳೆ ನೀಡಿರುವ ದೂರಿನಲ್ಲಿದೆ' ಎಂದೂ ತಿಳಿಸಿವೆ.

'ಮಿಷನ್ 2023'ಹೆಸರಿನಲ್ಲಿ ಕನ್ನಡ ಸಿನಿಮಾ ನಿರ್ಮಿಸಿದ್ದ ಆರೋಪಿ, ಅದರಲ್ಲಿ ನಾಯಕನಾಗಿ ಅಭಿನಯಿಸಿದ್ದ. ಈಚೆಗೆ ಸಹ ನಟಿ ಯನ್ನು ಮದುವೆಯಾಗಲು ಅವರು ನಿರಾಕರಿಸಿದ್ದರು. ಅದನ್ನು ಪ್ರಶ್ನಿಸಿದ್ದಕ್ಕೆ ಜೀವ ಬೆದರಿಕೆಯೊಡ್ಡಿದ್ದರು. ನೊಂದ ಸಹನಟಿ, ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದೂ ಮೂಲಗಳು ಹೇಳಿವೆ.



₹ 20 ಕೋಟಿ ಮೊತ್ತದ ನಕಲಿ ನೋಟು ಜಪ್ತಿ, ನಾಲ್ವರ ಸೆರೆ

ಬೆಂಗಳೂರು: ಹಣ ದ್ವಿಗುಣಗೊಳಿಸುವ ಆಮಿಷವೊಡ್ಡಿ ವಂಚಿಸುತ್ತಿದ್ದ ನಾಲ್ವರು ಆರೋಪಿಗಳನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬಾಲಾಜಿ, ನಟರಾಜ್, ವೆಂಕಟೇಶ್ ಹಾಗೂ ರಾಕೇಶ್ ಬಂಧಿತರು. ಅವರಿಂದ ₹ 20 ಕೋಟಿ ಮೊತ್ತದ ನಕಲಿ ನೋಟುಗಳು ಹಾಗೂ 2 ಕಾರುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಡಿಮೆ ಸಮಯದಲ್ಲಿ ಹಣ ದ್ವಿಗುಣ ಮಾಡುತ್ತೇವೆ' ಎಂಬುದಾಗಿ ಆರೋಪಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಜಾಹೀರಾತು ನೀಡುತ್ತಿದ್ದರು. ಆರೋಪಿಗಳ ಮಾತು ನಂಬಿ ಹಲವರು ಸಂಪರ್ಕಿಸುತ್ತಿದ್ದರು. ಮೇಲ್ಭಾಗದಲ್ಲಿ ಅಸಲಿ ನೋಟು ಹಾಗೂ ಒಳಗೆ ನಕಲಿ ನೋಟುಗಳನ್ನು ಇಟ್ಟು ಕಂತೆಗಳನ್ನು ಸಿದ್ಧಪಡಿಸುತ್ತಿದ್ದರು. ಹಣ ದುಪ್ಪಟ್ಟಾಗಿರುವುದಾಗಿ ಹೇಳಿ, ಅದೇ ಕಂತೆಗಳನ್ನು ಜನರಿಗೆ ಕೊಟ್ಟು ವಂಚಿಸುತ್ತಿದ್ದರು' ಎಂದೂ ಮೂಲಗಳು ತಿಳಿಸಿವೆ.

ಅಪಹರಣ ಪ್ರಕರಣದಲ್ಲಿ ಸಿಕ್ಕಿಬಿದ್ದರು: 'ಆರೋಪಿಗಳು ವ್ಯಕ್ತಿಯೊಬ್ಬರನ್ನು ಅಪಹರಿಸಿ, ಅವರಿಂದ ₹ 10 ಲಕ್ಷ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದಾಗಲೇ ಆರೋಪಿಗಳು ಸಿಕ್ಕಿಬಿದ್ದರು' ಎಂದೂ ಮೂಲಗಳು ತಿಳಿಸಿವೆ.

ಮರಳು ಕೇಂದ್ರದಲ್ಲಿ ಕಾರ್ಮಿಕ ಆತ್ಮಹತ್ಯೆ

ಬೆಂಗಳೂರು: ನಾರಗಬಾವಿ ಬಿಡಿಎ ಸಮುಚ್ಚಯ ಬಳಿಯ ಮರಳು ದಾಸ್ತಾನು ಕೇಂದ್ರದ ಆವರಣದಲ್ಲೇ ಕಾರ್ಮಿಕ ಎಲ್.ಕೆ.ಸ್ವಾಮಿ (35) ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಅನ್ನಪೂರ್ಣೇಶ್ವರಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೊಟ್ಟಿಗೆಪಾಳ್ಯದ ಎಲ್.ಕೆ.ಸ್ವಾಮಿ, ದಾಸ್ತಾನು ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದರು. ಕೇಂದ್ರದಲ್ಲಿರುವ ಮರಕ್ಕೆ ನೇಣು ಬಿಗಿದು ಜ. 27ರಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಚಿತ್ರಾವಳಿ



ನಗರದ ಬೇಗೂರು ವಾರ್ಡ್‌ನ ದೊಡ್ಡಕಮ್ಮನಹಳ್ಳಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಂ. ಕೃಷ್ಣಪ್ಪ ಚಾಲನೆ ನೀಡಿದರು. ಸ್ಥಳೀಯ ಮುಖಂಡರಾದ ಅಭಿಷೇಕ್, ಅರುಣ್‌ಸಿಂಹ, ರಮೇಶ್ ಆರಾಧ್ಯ ಇದ್ದರು.



ಸಂಜಯನಗರದ ಯುಎಎಸ್ ಬಡಾವಣೆಯ ಸಾರ್ವಜನಿಕರ ಉದ್ಯಾನದಲ್ಲಿ ಶಾಸಕ ಬೈರತಿ ಸುರೇಶ್ ತಮ್ಮ ಸ್ವಂತ ಹಣದಲ್ಲಿ ನವೀಕರಣಗೊಳಿಸಿರುವ ವಿಶ್ರಾಂತಿ ತಾಣವನ್ನು ಶನಿವಾರ ಉದ್ಘಾಟಿಸಿದರು. ಕಾಂಗ್ರೆಸ್ ಮುಖಂಡರಾದ ಅಬ್ದುಲ್ ವಾಜೀದ್, ಆನಂದ್ ಹಾಗೂ ಪಕ್ಷದ ಕಾರ್ಯಕರ್ತರು ಇದ್ದಾರೆ.

ಸೌಂದರ್ಯ ನಿಗೂಢ ಸಾವು ಫ್ಲ್ಯಾಟ್‌ನಲ್ಲಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮೊಮ್ಮಗಳು ಸೌಂದರ್ಯ (30) ಅವರ ನಿಗೂಢ ಸಾವಿನ ಬಗ್ಗೆ ಹೈಗ್ರೌಂಡ್ಸ್ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದು, ಫ್ಲ್ಯಾಟ್‌ನಲ್ಲಿ ಶನಿವಾರ ಪರಿಶೀಲನೆ ನಡೆಸಿದರು.

ಯಡಿಯೂರಪ್ಪ ಪುತ್ರಿ ಪದ್ಮಾವತಿಅವರ ಮಗಳಾಗಿದ್ದ ವೈದ್ಯೆ ಸೌಂದರ್ಯ, ಪತಿ ಡಾ.ನೀರಜ್ ಹಾಗೂ 9 ತಿಂಗಳ ಮಗು ಜೊತೆ ವಾಸವಿದ್ದರು. ವಸಂತನಗರದಲ್ಲಿರುವ ಲೆಗೆಸಿ ಅಪಾರ್ಟ್‌ ಮೆಂಟ್ ಸಮುಚ್ಚಯದ ಫ್ಲ್ಯಾಟ್‌ನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಸೌಂದರ್ಯ ಅವರ ಮೃತದೇಹ ಶುಕ್ರವಾರ (ಜ. 28) ಸಿಕ್ಕಿತ್ತು.



ಸೌಂದರ್ಯ

'ಪತಿ ನೀರಜ್ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸೌಂದರ್ಯ ಅವರದ್ದು ಆತ್ಮಹತ್ಯೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆದರೆ, ಕಾರಣ ಏನು ಎಂಬುದು ತಿಳಿದುಬಂದಿಲ್ಲ. ಮೃತದೇಹದ ಮರಣೋತ್ತರ ಪರೀಕ್ಷೆಯನ್ನು ಶುಕ್ರವಾರವೇ ಪೂರ್ಣಗೊಳಿಸಲಾಗಿದೆ. ಕುಟುಂಬದವರು ಅಂತ್ಯಕ್ರಿಯೆಯನ್ನೂ ಮುಗಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸೌಂದರ್ಯ ತಾಯಿ ಪದ್ಮಾವತಿ, ತಂದೆ ವಿರೂಪಾಕ್ಷಪ್ಪ ಹಾಗೂ ನೀರಜ್ ಅವರ ಕುಟುಂಬದವರ ಹೇಳಿಕೆ ಪಡೆಯ ಬೇಕಿದೆ' ಎಂದೂ ಮೂಲಗಳು ತಿಳಿಸಿವೆ.

'ಫ್ಲ್ಯಾಟ್‌ನಲ್ಲಿ ಶನಿವಾರ ಮಹಜರು ಪ್ರಕ್ರಿಯೆ ನಡೆಸಲಾಯಿತು. ಅಕ್ಕ-ಪಕ್ಕದ ನಿವಾಸಿಗಳ ಹೇಳಿಕೆಯನ್ನೂ ಪಡೆಯಲಾಯಿತು. ಘಟನಾ ಸ್ಥಳದಲ್ಲಿ ಯಾವುದೇ ಮರಣ ಪತ್ರ ಸಿಕ್ಕಿಲ್ಲ. ಹೀಗಾಗಿ, ಸಾವಿನ ಕಾರಣ ನಿಗೂಢವಾಗಿದೆ. ಮರಣೋತ್ತರ ಪರೀಕ್ಷೆ ವರದಿ ಬಂದರೆ, ನಿಖರ ಕಾರಣ ತಿಳಿಯಲಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ರೈಲಿನಲ್ಲಿ ಗಾಂಜಾ ಸಾಗಿಸುತ್ತಿದ್ದವರ ಬಂಧನ

ಬೆಂಗಳೂರು: ರೈಲಿನಲ್ಲಿ ಗಾಂಜಾ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

'ಪ್ರಶಾಂತಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಗಾಂಜಾ ಸಾಗಿಸುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಆರೋಪಿಗಳು ರೈಲಿನಿಂದ ಕೆಳಗೆ ಇಳಿಯುತ್ತಿದ್ದಂತೆ ವಶಕ್ಕೆ ಪಡೆದು ಪರಿಶೀಲಿಸಿದಾಗ, 15.5 ಕೆ.ಜಿ ಗಾಂಜಾ ಪತ್ತೆಯಾಯಿತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಗರದಲ್ಲಿರುವ ಮಧ್ಯವರ್ತಿಗಳ ಮೂಲಕ ಗಾಂಜಾ ಮಾರಿಸುತ್ತಿದ್ದ ಬಗ್ಗೆ ಆರೋಪಿಗಳು ಹೇಳಿಕೆ ನೀಡಿದ್ದಾರೆ. ಡ್ರಗ್ಸ್ ಸಾಗಣೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

ಚಿಕಿತ್ಸೆ ನೀಡಲು ₹ 50 ಸಾವಿರಕ್ಕೆ ಬೇಡಿಕೆ: ಎಫ್‌ಐಆರ್

ಬೆಂಗಳೂರು: ಮಹಿಳೆಯೊಬ್ಬರಿಗೆ ಚಿಕಿತ್ಸೆ ನೀಡಲು ₹ 50 ಸಾವಿರಕ್ಕೆ ಬೇಡಿಕೆ ಇರಿಸಿದ್ದ ಆರೋಪದಡಿ ವಿಕ್ಟೋರಿಯಾ ಆಸ್ಪತ್ರೆಯ ನಾಲ್ವರು ಸಿಬ್ಬಂದಿ ವಿರುದ್ಧ ವಿ.ವಿ.ಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಭುವನೇಶ್ವರಿನಗರದ ನಿವಾಸಿ ಲಕ್ಷ್ಮಿ ಎಂಬುವರು ದೂರು ನೀಡಿದ್ದಾರೆ. ಆಸ್ಪತ್ರೆಯ ಪಿಆರ್‌ಒ ಎನ್ನಲಾದ ಆನಂದ್, ಸಹಾಯಕರಾದ ನಾಗೇಶ್, ಗಿರೀಶ್ ಹಾಗೂ ಭದ್ರತಾ ಸಿಬ್ಬಂದಿ ರಂಜಿತ್ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳಿಗೆ ನೋಟಿಸ್ ನೀಡಿ, ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಲಕ್ಷ್ಮಿ ಅವರ ತಾಯಿ ಯಲ್ಲಮ್ಮ ಅನಾರೋಗ್ಯಕ್ಕೀಡಾಗಿದ್ದರು. ಅವರನ್ನು ಜ. 21ರಂದು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆರೋಗ್ಯ ಸ್ಥಿತಿ ಹದಗೆಟ್ಟಿದ್ದರಿಂದ ತೀವ್ರ ನಿಗಾ ಘಟಕಕ್ಕೆ (ಐಸಿಯು) ಸ್ಥಳಾಂತರಿಸಲಾಗಿತ್ತು. ಅದೇ ಸಂದರ್ಭದಲ್ಲಿ ಆರೋಪಿಗಳು, ಚಿಕಿತ್ಸೆ ಮುಂದುವರಿಸಲು ₹ 50 ಸಾವಿರ ನೀಡುವಂತೆ ಬೇಡಿಕೆ ಇರಿಸಿದ್ದರು. ಹಣ ಕೊಡದಿದ್ದರೆ ಯಲ್ಲಮ್ಮ ಅವರು ಬದುಕುವುದಿಲ್ಲವೆಂದು ಹೆದರಿಸಿದ್ದರು'

'ನಾವು ಬಡವರು. ನಮ್ಮ ಬಳಿ ಹಣವಿಲ್ಲ' ಎಂಬುದಾಗಿ ಲಕ್ಷ್ಮಿ ಹೇಳಿದ್ದರು. ಕೋಪಗೊಂಡಿದ್ದ ಆರೋಪಿಗಳು, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಜೀವ ಬೆದರಿಕೆಯೊಡ್ಡಿದ್ದರು. ಈ ಸಂಗತಿ ದೂರಿನಲ್ಲಿದೆ' ಎಂದೂ ಮೂಲಗಳು ತಿಳಿಸಿವೆ. ಎಂದೂ ಮೂಲಗಳು ತಿಳಿಸಿವೆ.

ಪ್ರಕರಣದ ಬಗ್ಗೆ ಪ್ರತಿಕ್ರಿಯೆ ಪಡೆಯಲು ವಿಕ್ಟೋರಿಯಾ ಆಸ್ಪತ್ರೆ ಆಡಳಿತಾಧಿಕಾರಿ ಲಭ್ಯರಾಗಲಿಲ್ಲ.

ಗೂಂಡಾ ಕಾಯ್ದೆ; 'ಭೋಟಾ ಟೈಗರ್' ಬಂಧನ

ಅಪರಾಧ ಕೃತ್ಯಗಳಲ್ಲಿ ಪದೇ ಪದೇ ಭಾಗಿಯಾಗುತ್ತ ಜನರಲ್ಲಿ ಭಯವನ್ನುಂಟು ಮಾಡುತ್ತಿದ್ದ ಆರೋಪದಡಿ ರೌಡಿ ಮಹಮ್ಮದ್ ತಬ್ರೇಜ್ ಪಾಷಾ ಅಲಿಯಾಸ್ ಭೋಟಾ ಟೈಗರ್‌ನನ್ನು (44) ಗೂಂಡಾ ಕಾಯ್ದೆಯಡಿ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಜೆ.ಸಿ.ನಗರ ಠಾಣೆಯ ರೌಡಿ ಪಟ್ಟಿಯಲ್ಲಿ ತಬ್ರೇಜ್ ಪಾಷಾ ಹೆಸರಿತ್ತು. 2009ರಿಂದಲೇ ಅಪರಾಧ ಕೃತ್ಯ ನಡೆಸಲಾರಂಭಿಸಿದ್ದ ಈತ, ಹಲ್ಲೆ, ಸುಲಿಗೆ, ಕೊಲೆ, ಕೊಲೆ ಯತ್ನ ಹಾಗೂ ಜೀವ ಬೆದರಿಕೆ ಪ್ರಕರಣಗಳಲ್ಲಿ ಆರೋಪಿಯಾಗಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಜಗಳ ಬಿಡಿಸಲು ಹೋದ ಸಂಬಂಧಿ ಕೊಲೆ

ಬೆಂಗಳೂರು: ಜೀವನ್‌ಬಿಮಾನಗರ ಠಾಣೆ ವ್ಯಾಪ್ತಿಯಲ್ಲಿ ವೆಂಕಟೇಶ್ ಕೊಲೆಯಾಗಿದ್ದು, ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ನ್ಯೂ ತಿಪ್ಪಸಂದ್ರದ ಹನುಮಾನ್ ನಗರದ ಆರ್. ವಿನಯ್ (19) ಹಾಗೂ ಎಸ್. ಮೋಹನ್ (18) ಬಂಧಿತರು'.

'ಶುಕ್ರವಾರ ರಾತ್ರಿ ಮದ್ಯದ ಅಮಲಿನಲ್ಲಿ ಮನೆಗೆ ಬಂದಿದ್ದ ವಿನಯ್, ಮಲಗುವ ಹಾಸಿಗೆ ವಿಚಾರವಾಗಿ ಸಹೋದರನ ಜೊತೆ ಜಗಳ ತೆಗೆದಿದ್ದ. ಆಗ ಜಗಳ ಬಿಡಿಸಲು ಹೋದ ಸಂಬಂಧಿ ವೆಂಕಟೇಶ್ ಅವರನ್ನು ವಿನಯ್, ಮೋಹನ್ ಜತೆಗೂಡಿ ಇರಿದು ಕೊಲೆ ಮಾಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಮಹಾತ್ಮ ಗಾಂಧಿ ಸ್ಮರಣೆ ಮತ್ತು ಹುತಾತ್ಮರ ದಿನ: ಪುಷ್ಪನಮನ- ಎಸ್.ಟಿ.ಸೋಮಶೇಖರ್, ಅತಿಥಿಗಳು- ಪ್ರಕಾಶ್ ಮೂರ್ತಿ, ಕೆ.ವಿ.ನಾಗರಾಜ ಮೂರ್ತಿ, ಆಯೋಜನೆ-ಗಾಂಧಿ ಪಾರ್ಕ್ ನಡಿಗೆದಾರರ ಕೂಟ, ಸ್ಥಳ- ಗಾಂಧಿಪಾರ್ಕ್, ಭಾರತ್ ನಗರ 2ನೇ ಹಂತ, ಬೆಳಿಗ್ಗೆ 7

ಶಿರಸಂಗಿ ಲಿಂಗರಾಜ ದೇಸಾಯಿ ಮತ್ತು ಸಿದ್ದರಾಮೇಶ್ವರ ಜಯಂತ್ಯುತ್ಸವ: ಸಾನ್ನಿಧ್ಯ-ಅಭಿನವ ಶಿವಯೋಗಿ ಸಿದ್ದರಾಮೇಶ್ವರ ಸ್ವಾಮೀಜಿ, ಚನ್ನಬಸವಾನಂದ ಸ್ವಾಮೀಜಿ, ಅಧ್ಯಕ್ಷತೆ- ಬಾಪುಗೌಡ ಪಾಟೀಲ, ಆಯೋಜನೆ- ಲಿಂಗರಾಜ ದೇಸಾಯಿ ಜಯಂತ್ಯುತ್ಸವ ಸಮಿತಿ ಮತ್ತು ರಾಷ್ಟ್ರೀಯ ಬಸವದಳ, ಸ್ಥಳ-ಬಸವ ಮಂಟಪ, ವಿಶ್ವಕಲ್ಯಾಣ ಮಿಷನ್, ರಾಜಾಜಿನಗರ 2ನೇ ಬ್ಲಾಕ್, ಬೆಳಿಗ್ಗೆ 10

ದೇಶಭಕ್ತಿ ಗೀತೆಗಳ ಗಾಯನ ಸ್ಪರ್ಧೆ: ಉದ್ಘಾಟನೆ-ಬೈರಮಂಗಲ ರಾಮೇಗೌಡ, ಅತಿಥಿ-ಮೋಹನ್ ದೇವ್ ಆಳ್ವ, ಆಯೋಜನೆ ಮತ್ತು ಸ್ಥಳ- ಬಿಎಂಶ್ರೀ ಪ್ರತಿಷ್ಠಾನ, ಎಂ.ವಿ.ಸೀ ಸಭಾಂಗಣ, ಎನ್.ಆರ್.ಕಾಲೊನಿ, ಬೆಳಿಗ್ಗೆ 10

ಹುತಾತ್ಮರ ದಿನದ ಅಂಗವಾಗಿ ವಿಶೇಷ ಲಕೋಟೆ ಬಿಡುಗಡೆ: ಶಾರದಾ ಸಂಪತ್, ಅತಿಥಿ-ಕ್ಯಾಪ್ಟನ್ ನವೀನ್ ನಾಗಪ್ಪ, ಆಯೋಜನೆ-ಅಂಚೆ ಇಲಾಖೆ, ಸ್ಥಳ-ಮೇಘದೂತ ಸಭಾಂಗಣ, ಅಂಚೆ ಮಹಾಕಾರ್ಯಾಲಯ (ಜಿಪಿಒ), ಬೆಳಿಗ್ಗೆ 10

ವಚನ ಸರ್ವೋದಯ: ಗಾಂಧೀಜಿ ನಮನ ಮತ್ತು ಬೇಂದ್ರೆ ನೆನಪು, ಅಭಿನಂದನೆ-ದೇವೇಂದ್ರ ಕುಮಾರ್ ಪತ್ತಾರ್, ತಿಮ್ಮನಗೌಡ ಮೇಲ್ಸೀಮೆ, ಸನ್ಮಾನಿಸುವವರು-ಎಸ್. ಟಿ.ಸೋಮಶೇಖರ್, ವಚನ ಮಂದಿರ ಬಿನ್ನಹ ಬಿಡುಗಡೆ-ಎನ್.ಎಂ. ಶಿವಕುಮಾರ್, ಅತಿಥಿಗಳು- ಬಿ.ಆರ್.ಹಿರೇಮಠ್, ಪಂಪನಗೌಡ ಮೇಲ್ಸೀಮೆ, ಅನುಪಮ ಪಂಚಾಕ್ಷರಯ್ಯ, ಅನಿಲ್ ಕುಮಾರ್, ಜಗದೀಶ್ ಮುಳಬಾಗಿಲು, ಅಧ್ಯಕ್ಷತೆ- ಎಂ.ಮಾದಯ್ಯ, ಆಯೋಜನೆ-ವಚನ ಜ್ಯೋತಿ ಬಳಗ, ಸ್ಥಳ-ರಂಗಹನುಮಯ್ಯ ಬಯಲು ಮಂಟಪ, ಸೊಣ್ಣೇನಹಳ್ಳಿ, ವಿಶ್ವೇಶ್ವರಯ್ಯ ಬಡಾವಣೆ, ಜ್ಞಾನಭಾರತಿ, ಬೆಳಿಗ್ಗೆ 10

ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ಸಂಸ್ಥಾಪನಾ ದಿನ: ಉದ್ಘಾಟನೆ- ಪ್ರಕಾಶ್ ರಾಥೋಡ್, ಅತಿಥಿಗಳು- ಡಿ.ರಾಮನಾಯಕ್, ಬಾಲರಾಜ್, ಎ.ಆರ್.ಗೋವಿಂದಸ್ವಾಮಿ, ಕೆ.ಶಿವಮೂರ್ತಿ, ಗುರುನಾಥ್, ಅಧ್ಯಕ್ಷತೆ- ಎಸ್.ಆರ್.ರಾಜಾನಾಯಕ್, ಸ್ಥಳ-ರಿಜೆನ್ಸಿ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್ ಆ್ಯಂಡ್ ಕಲ್ಚರ್, ಮಾಗಡಿ ರಸ್ತೆ, ದಾಸರಹಳ್ಳಿ, ಬೆಳಿಗ್ಗೆ 10.30



ಜ್ಯೋತ್ಸ್ನಾ ಕಾಮತ್ ಅವರ 'ಕಲಕತ್ತಾ ದಿನಗಳು' ಪುಸ್ತಕ ಬಿಡುಗಡೆ: ಆರ್.ಶೇಷಶಾಸ್ತ್ರಿ, ಅತಿಥಿ-ನೇಮಿಚಂದ್ರ, ಆಯೋಜನೆ-ಅಂಕಿತ ಪುಸ್ತಕ, ಬುಕ್ ಬ್ರಹ್ಮ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)


'ಬೆಂಗಳೂರು ಫೈಟ್ಸ್ ಕೊರೊನಾ' ಕುರಿತು ಚರ್ಚೆ: ಅತಿಥಿಗಳು-ಆರೋಗ್ಯ ಸಚಿವ ಕೆ.ಸುಧಾಕರ್, ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ಆಯೋಜನೆ-ನಮ್ಮ ಬೆಂಗಳೂರು ಪ್ರತಿಷ್ಠಾನ, ಮಧ್ಯಾಹ್ನ 1 (ಆನ್‌ಲೈನ್ ಕಾರ್ಯಕ್ರಮ)

'ಕನ್ನಡ ವಿಶ್ವವಿದ್ಯಾಲಯದ ಸ್ಥಿತಿ-ಗತಿ' ವಿಚಾರಗೋಷ್ಠಿ: ಪ್ರಧಾನ ಭಾಷಣ- ಬಂಜಗೆರೆ ಜಯಪ್ರಕಾಶ್, ಅತಿಥಿಗಳು- ಎಸ್.ವೈ.ಗುರುಶಾಂತ್, ಕೆ.ಶರೀಫಾ, ಆಯೋಜನೆ-ಬಂಡಾಯ ಸಾಹಿತ್ಯ ಸಂಘಟನೆ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)

ಲೇಖಕಿಯರ ಸಾಹಿತ್ಯ ಮಂಥನ: ಲಲಿತಾ ಆರ್.ರೈ ಅವರ ಕೃತಿಗಳ ಕುರಿತು ವಿಚಾರ ಸಂಕಿರಣ, ವಿಚಾರ ಮಂಡನೆ-ಜ್ಯೋತಿ ಚೇಳ್ಯಾರು, ಸುಧಾರಾಣಿ, ಅಧ್ಯಕ್ಷತೆ- ವನಮಾಲಾ ಸಂಪನ್ನಕುಮಾರ್, ಉಪಸ್ಥಿತಿ-ಲಲಿತಾ ಆರ್.ರೈ, ಆಯೋಜನೆ- ಕರ್ನಾಟಕ ಲೇಖಕಿಯರ ಸಂಘ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ನಿಧನ ವಾರ್ತೆ

ಸೋಮನಾಥ್ ಸಪ್ರು



ಬೆಂಗಳೂರು: ಪತ್ರಕರ್ತ ಸೋಮನಾಥ್ ಸಪ್ರು (82) ಅವರು ನಗರದಲ್ಲಿ ಶುಕ್ರವಾರ ನಿಧನರಾದರು.

'ಡೆಕ್ಕನ್ ಹೆರಾಲ್ಡ್', 'ಇಂಡಿಯನ್ ಎಕ್ಸ್‌ಪ್ರೆಸ್', 'ದಿ ಪಿಯೋನಿಯರ್' ಪತ್ರಿಕೆಗಳಲ್ಲಿ ಸೋಮನಾಥ್ ಅವರು ಕೆಲಸ ಮಾಡಿದ್ದರು. 'ಲಾಸ್ಟ್ ಶಾಂಗ್ರಿಲಾ', 'ಕಂಬ್ಯಾಟ್ ಲೋರ್-ಇಂಡಿಯನ್ ಏರ್‌ಫೋರ್ಸ್ 1930-45' ಸೇರಿದಂತೆ ಹಲವು ಪುಸ್ತಕಗಳನ್ನು ಬರೆದಿದ್ದರು.

ಸಾವಿತ್ರಿ



ಬೆಂಗಳೂರು: ಕಲಾ ವಿಮರ್ಶಕ ಮೈಸೂರು ವಿ. ಸುಬ್ರಹ್ಮಣ್ಯ ಅವರ ಪತ್ನಿ ಸಾವಿತ್ರಿ (66) ಅವರು ಬುಧವಾರ ಬೆಂಗಳೂರಿನಲ್ಲಿ ನಿಧನರಾದರು.

ಗುರುವಾರ ಹರಿಶ್ಚಂದ್ರ ಘಾಟ್‌ನಲ್ಲಿ ಅವರ ಅಂತ್ಯಕ್ರಿಯೆ ನೆರವೇರಿತು. ಸಾವಿತ್ರಿ ಅವರು ಸಾಮಾಜಿಕ, ಸಾಂಸ್ಕೃತಿಕ ಸಂಘಟಕಿಯಾಗಿ ಸಕ್ರಿಯರಾಗಿದ್ದರು.

₹ 3 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ವ್ಯವಸ್ಥಿತ ಜಾಲದಡಿ ಮಾದಕ ವಸ್ತು (ಡ್ರಗ್ಸ್) ಮಾರುತ್ತಿದ್ದ ಆರೋಪದಡಿ ನೈಜೀರಿಯಾದ ಇಬ್ಬರು ಪ್ರಜೆಗಳನ್ನು ಗೋವಿಂದಪುರ ಪೊಲೀಸರು ಬಂಧಿಸಿದ್ದಾರೆ.

'ಸಿಕ್ವುಟಸ್ ಯುಚೆಕ್ (30) ಹಾಗೂ ಚುಕ್ವುಡಬೆನ್ ಹೆನ್ರಿ (34) ಬಂಧಿತರು. ಅವರಿಂದ ₹ 3 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ ತಿಳಿಸಿದರು.

'ವಿದೇಶ, ಹೊರ ರಾಜ್ಯ ಗಳಿಂದ ಡ್ರಗ್ಸ್ ತರುತ್ತಿದ್ದ ಆರೋಪಿಗಳು ಅದನ್ನು ನಗರದಲ್ಲಿ ಮಾರಾಟ ಮಾಡುತ್ತಿದ್ದರು. . ಎಚ್‌ಬಿಆರ್ ಬಡಾವಣೆಯ ಮೈದಾನದ ಬಳಿ ಜ. 27ರಂದು ಆರೋಪಿಗಳು ಕಾಣಿಸಿ ಕೊಂಡಿದ್ದರು. ಡ್ರಗ್ಸ್ ಅನ್ನು ಗ್ರಾಹಕರಿಗೆ ಮಾರಲು ಪ್ರಯತ್ನಿಸುತ್ತಿದ್ದರು. ಇದೇ ಸಂದರ್ಭದಲ್ಲೇ ಪೊಲೀಸರ ತಂಡ, ದಾಳಿ ಮಾಡಿ ಆರೋಪಿಗಳನ್ನು ಬಂಧಿಸಿದೆ' ಎಂದೂ ಹೇಳಿದರು.

'ನಗರದ ಕೆಲ ಉದ್ಯಮಿಗಳು, ಕೆಲ ತಾರೆಯರು, ಕಾಲೇಜು ವಿದ್ಯಾರ್ಥಿಗಳಿಗೆ ಡ್ರಗ್ಸ್ ಮಾರುತ್ತಿದ್ದ ಮಾಹಿತಿ ಲಭ್ಯವಾಗಿದೆ. ಅಂಥವರ ಪಟ್ಟಿ ಸಿದ್ಧಪಡಿಸಲಾಗುತ್ತಿದ್ದು, ಅವರನ್ನೂ ವಿಚಾರಣೆ ನಡೆಸಲಾಗುವುದು' ಎಂದರು.

ಬಹುಮಾನ: 'ಡ್ರಗ್ಸ್ ಜಾಲಭೇದಿಸಿರುವ ಪೊಲೀಸರ ತಂಡಕ್ಕೆ ಕಮಿಷನರ್ ಕಮಲ್ ಪಂತ್ ₹ 70 ಸಾವಿರ ಬಹುಮಾನ ಘೋಷಿಸಿದ್ದಾರೆ' ಎಂದು ಡಿಸಿಪಿ ಭೀಮಾಶಂಕರ್ ಹೇಳಿದರು.

ನಿವೃತ್ತ ಐಪಿಎಸ್ ಅಧಿಕಾರಿ ನಾರಾಯಣ ಗೌಡ ನಿಧನ



ಬೆಂಗಳೂರು: ನಿವೃತ್ತ ಐಪಿಎಸ್ ಅಧಿಕಾರಿ ಎಂ.ಸಿ. ನಾರಾಯಣ ಗೌಡ (69) ಅವರು ನಗರ ದಲ್ಲಿ ಶನಿವಾರ ನಿಧನರಾದರು.

ಅವರಿಗೆ ಪತ್ನಿ ಹಾಗೂ ಬೆಂಗಳೂರು ಕೇಂದ್ರ ವಿಭಾಗದ ಡಿಸಿಪಿ ಎಂ.ಎನ್. ಅನುಚೇತ್ ಸೇರಿ ಇಬ್ಬರು ಪುತ್ರರು ಇದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಬಿಡಿಎ ಅಕ್ರಮ: ಕೆಎಎಸ್ ಅಧಿಕಾರಿ ಸೇರಿ ಮೂವರು ಸಿಬ್ಬಂದಿ ಭಾಗಿ ● ಎಸಿಬಿ ತನಿಖೆಗೆ ಶಿಫಾರಸು

ಅಕ್ರಮ ಕ್ರಯಪತ್ರ; ಅಧಿಕಾರಿಗಳ ಸಾಥ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 2001ರಲ್ಲೇ ವ್ಯಕ್ತಿಯೊಬ್ಬರಿಗೆ ನಿವೇಶನ ಹಂಚಿಕೆ ಮಾಡಿದ್ದ ಬಿಡಿಎ
- ಗೃಹ ನಿರ್ಮಾಣ ಸಹಕಾರ ಸಂಘಕ್ಕೆ 2019ರಲ್ಲಿ ಸಗಟು ಜಮೀನು ಹಂಚಿಕೆ
- ಉಪಕಾರ್ಯದರ್ಶಿ–1, ಕಚೇರಿಯ ಸಿಬ್ಬಂದಿಯಿಂದ ಕರ್ತವ್ಯಲೋಪ

ಪ್ರಜಾವಾಣಿ ವಿಶೇಷ

ಬೆಂಗಳೂರು: ನಾಗರಭಾವಿಯಲ್ಲಿ ಬಿಡಿಎ ವ್ಯಕ್ತಿಯೊಬ್ಬರಿಗೆ ಹಂಚಿಕೆ ಮಾಡಿದ್ದ ನಿವೇಶನವನ್ನು ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಅಕ್ರಮವಾಗಿ ಶುದ್ಧ ಕ್ರಯಪತ್ರ ಮಾಡಿಕೊಡಲಾಗಿದ್ದು, ಇದರಲ್ಲಿ ಉಪಕಾರ್ಯದರ್ಶಿ ಹಾಗೂ ಇಬ್ಬರು ಸಿಬ್ಬಂದಿ ಭಾಗಿಯಾಗಿರುವುದು ಪ್ರಾಧಿಕಾರ ನಡೆಸಿದ ಆಂತರಿಕ ವಿಚಾರಣೆಯಿಂದ ದೃಢಪಟ್ಟಿದೆ. ಈ ಪ್ರಕರಣವನ್ನು ಭ್ರಷ್ಟಾಚಾರ ನಿಗ್ರಹ ದಳದಿಂದ (ಎಸಿಬಿ) ತನಿಖೆ ನಡೆಸಲು ಕ್ರಮ ಕೈಗೊಳ್ಳಬಹುದು ಎಂದು ಬಿಡಿಎ ಆಯುಕ್ತ ಎಂ.ಬಿ. ರಾಜೇಶ ಗೌಡ ಅವರು ನಗರಾಭಿವೃದ್ಧಿ ಇಲಾಖೆಗೆ ಶಿಫಾರಸು ಮಾಡಿದ್ದಾರೆ.

ನಾಗರಭಾವಿಯ ಬಿಡಿಎ ಬಡಾವಣೆಯ ಒಂಬತ್ತನೇ ಬ್ಲಾಕ್‌ನ ಎರಡನೇ ಹಂತದಲ್ಲಿ 18 x9.14 ಮೀ. ವಿಸ್ತೀರ್ಣದ ನಿವೇಶನಕ್ಕೆ (ಸಂಖ್ಯೆ 1241) 2001ರ ಸೆ.25ರಂದು ಭೋಜರಾಮ ಶೆಟ್ಟಿ ಅವರಿಗೆ ಹಂಚಿಕೆ ಮಾಡಿತ್ತು. 2003ರ ಏ.26ರಂದು ಹೆಚ್ಚುವರಿ ಜಿಲ್ಲಾ ನೋಂದಣಾಧಿಕಾರಿ ಕಚೇರಿಯಲ್ಲಿ ಶುದ್ಧ ಕ್ರಯಪತ್ರ ನೋಂದಾಯಿಸಿ, ಸ್ವಾಧೀನ ಪತ್ರವನ್ನೂ ನೀಡಲಾಗಿತ್ತು. ಅದೇ ರೀತಿ ನಿವೇಶನ ಸಂಖ್ಯೆ 1240 ಅನ್ನು ಆಂಕಾಳ್ ಅವರಿಗೆ ಹಂಚಿಕೆ ಮಾಡಲಾಗಿತ್ತು.

ಪ್ರಾಧಿಕಾರದ ಉಪಕಾರ್ಯದರ್ಶಿ-1 ವಿಭಾಗದಲ್ಲಿ ಕರ್ನಾಟಕ ಆದಾಯ ತೆರಿಗೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘದ ಹಂಚಿಕೆ ಕಡತ ಕಂಪ್ಯೂಟರ್ ನಂ: 7797 ನ್ನು ಪರಿಶೀಲಿಸಲಾಗಿ, ಕರ್ನಾಟಕ ಆದಾಯ ತೆರಿಗೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘದ ಕೋರಿಕೆ ಮೇರೆಗೆ ಮಾಳಗಾಲ ಗ್ರಾಮದ ಸರ್ವೆ ನಂ. 5 ಮತ್ತು 10 ಹಾಗೂ 73 ಮತ್ತು 98 ರಲ್ಲಿ ಖರೀದಿಸಿದ್ದ 32 ಎಕರೆ 09 ಗುಂಟೆ ಜಮೀನನ್ನು ಬಿಡಿಎ ನಾಗರಭಾವಿ ಬಡಾವಣೆಗಾಗಿ ಸರ್ಕಾರದ ಅಧಿಸೂಚನೆಯಂತೆ ಭೂ ಸ್ವಾಧೀನಪಡಿಸಿಕೊಂಡಿತ್ತು.

2014ರ ಸೆ. 27ರಂದು ನಡೆದ ಪ್ರಾಧಿಕಾರದ ಸಭೆಯ ನಿರ್ಣಯ ಪ್ರಕಾರ ಈ ಸಂಘಕ್ಕೆ 13 ಎಕರೆ ಜಮೀನನ್ನು ಹಂಚಿಕೆ ಮಾಡಬೇಕಾಗಿತ್ತು. ಅದರ ಮೂಲ ಕಡತದಲ್ಲಿ ಪಶ್ಚಿಮ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) ಮತ್ತು ಸಹಾಯಕ ಎಂಜಿನಿಯರ್ (ಎಇ) ಅವರು ನಾಗರಭಾವಿಯ ಸರ್ವೆ ನಂಬರ್ 94 ರಲ್ಲಿ 15 x41.10 ಮೀ. ವಿಸ್ತೀರ್ಣದ ಸಗಟು ಭೂಮಿಗೆ (ಒಟ್ಟು 616.50 ಚ.ಮೀ) ಖಚಿತ ಅಳತೆ ವರದಿ ನೀಡಿದ್ದಾರೆ. ಇದರ ಚೆಕ್ಕುಬಂದಿಯಲ್ಲಿ ಪೂರ್ವಕ್ಕೆ ರಾಜಕಾಲುವೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ನಿವೇಶನ ಸಂಖ್ಯೆ 1240 ಮತ್ತು ದಕ್ಷಿಣಕ್ಕೆ ನಿವೇಶನ ಸಂಖ್ಯೆ 1244 ಎಂದು ನಮೂದಿಸಿದ್ದರು. ಉತ್ತರಕ್ಕೆ ನಿ.ಸಂಖ್ಯೆ 1240 ಮತ್ತು ದಕ್ಷಿಣಕ್ಕೆ ನಿವೇಶನ ಸಂಖ್ಯೆ 1244ರ ನಡುವೆ ರಚಿತವಾಗಿದ್ದ ನಿವೇಶನ ಸಂಖ್ಯೆ 1241, ಮೂಲೆ ನಿವೇಶನ ಸಂಖ್ಯೆ 1242 ಮತ್ತು 1243ಗಳನ್ನು ಖಚಿತ ಅಳತೆ ವರದಿಯಲ್ಲಿ ನಮೂದಿಸಿದ್ದರು. ಉಪ ಕಾರ್ಯದರ್ಶಿ-1 ಆಗಿದ್ದ ಎನ್.ಎಸ್.ಚಿದಾನಂದ್ ಅವರು 2019ರ ಫೆ.2ರಂದು ಈ ಖಚಿತ ಅಳತೆಯ ಆಧಾರದಲ್ಲಿ ಸಂಘದ ಕಾರ್ಯದರ್ಶಿ ಕೆ.ಇ.ರಾಜನ್ ಹೆಸರಿಗೆ ಶುದ್ಧ ಕ್ರಯಪತ್ರವನ್ನು ನೋಂದಾಯಿಸಿಕೊಟ್ಟಿದ್ದರು.

ನಾಗರಭಾವಿಯ ನಿವೇಶನ ಸಂಖ್ಯೆ 1241 ಅನ್ನು ಭೋಜರಾಮಶೆಟ್ಟಿ ಅವರಿಗೆ ಪ್ರಾಧಿಕಾರದಿಂದ ಈ ಹಿಂದೆಯೇ ಹಂಚಿಕೆ ಮಾಡಿ ಶುದ್ಧ ಕ್ರಯಪತ್ರ ನೀಡಲಾಗಿದ್ದರೂ ಅದನ್ನು ಪರಿಶೀಲಿಸದೆಯೇ ಅಕ್ರಮವಾಗಿ ಕರ್ನಾಟಕ ಆದಾಯ ತೆರಿಗೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಶುದ್ಧಕ್ರಯ ಪತ್ರ ಮಾಡಿಕೊಡಲಾಗಿದೆ ಎಂಬುದು ಬಿಡಿಎಯ ವಿಶೇಷ ಕಾರ್ಯಪಡೆ ಮತ್ತು ಜಾಗೃತ ದಳದವರು ನಡೆಸಿದ ಆಂತರಿಕ ತನಿಖೆಯಲ್ಲಿ ದೃಢಪಟ್ಟಿದೆ. ಹಾಗಾಗಿ ಉಪಕಾರ್ಯದರ್ಶಿ –1 ಆಗಿದ್ದ ಚಿದಾನಂದ್, ಅವರ ಕಚೇರಿಯ ಮೇಲ್ವಿಚಾರಕರಾಗಿದ್ದ ಅಶ್ವತ್ಥನಾರಾಯಣ ರಾವ್, ಪ್ರಥಮ ದರ್ಜೆ ಸಹಾಯಕರಾಗಿದ್ದ ಎಸ್.ಮಂಜುನಾಥ್ (ನಿವೃತ್ತರಾಗಿದ್ದಾರೆ) ಅವರ ವಿರುದ್ಧ ಎಸಿಬಿಯಿಂದ ವಿಚಾರಣೆ/ ತನಿಖೆ ನಡೆಸಲು 1988ರ ಭ್ರಷ್ಟಾಚಾರ ತಡೆ ಕಾಯ್ದೆಯ ಕಲಂ 17(ಎ) ರನ್ವಯ ಅನುಮತಿ ನೀಡಬಹುದು ಎಂದು ಆಯುಕ್ತರು 2022ರ ಜ.17ರಂದು ಬರೆದ ಪತ್ರದಲ್ಲಿ ಶಿಫಾರಸು ಮಾಡಿದ್ದಾರೆ ಎಂದು ಗೊತ್ತಾಗಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪೌಷ್ಟಿಕ ಆಹಾರ ಸೇವಿಸಿ

ಮುಚ್ಚದ ರಸ್ತೆ ಗುಂಡಿ: ಸರ್ಕಾರದ ವಿರುದ್ಧ ಎಎಪಿ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಗಳ ಗುಂಡಿಗಳನ್ನು ಮುಚ್ಚುವಲ್ಲಿ ನಿರ್ಲಕ್ಷ್ಯ ತೋರುತ್ತಿರುವ ರಾಜ್ಯ ಸರ್ಕಾರ ಹಾಗೂ ಬಿಬಿಎಂಪಿ ವಿರುದ್ಧ ಆಮ್ ಆದ್ಮಿ ಪಕ್ಷ (ಎಎಪಿ) ಆಕ್ರೋಶ ವ್ಯಕ್ತಪಡಿಸಿದೆ.

ನಗರದ ಎಲ್ಲಾ ವಾರ್ಡ್‌ಗಳ ರಸ್ತೆಗಳಲ್ಲೂ ಗುಂಡಿಗಳ ಸುತ್ತ ರಂಗೋಲಿ ಬಿಡಿಸುವ ಮೂಲಕ ಎಎಪಿ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು.

ಎಎಪಿ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ, 'ನಗರದ ರಸ್ತೆಗಳ ಅಭಿವೃದ್ಧಿಗೆ ಈವರೆಗೆ ₹20 ಸಾವಿರ ಕೋಟಿ ವೆಚ್ಚ ಮಾಡಿರುವುದಾಗಿ ರಾಜ್ಯ ಸರ್ಕಾರ ಹೇಳಿದೆ. ಬಿಬಿಎಂಪಿ ಚುನಾವಣೆ ಸಮೀಪಿಸುತ್ತಿದ್ದಂತೆ ಸರ್ಕಾರವು ರಸ್ತೆಗಳ ಅಭಿವೃದ್ಧಿಗೆ ಮತ್ತೆ ₹6,500 ಕೋಟಿ ಖರ್ಚು ಮಾಡಲು ನಿರ್ಧರಿಸಿದೆ. ಜನಪ್ರತಿನಿಧಿಗಳು ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡದೆ ಆ ಹಣವನ್ನು ತಮ್ಮ ಜೇಬಿಗೆ ಹಾಕಿಕೊಳ್ಳುತ್ತಾರೆ' ಎಂದು ದೂರಿದರು.

'ಬಿಬಿಎಂಪಿಯು ರಸ್ತೆ ಗುಂಡಿಗಳಿಗೆ ಸಂಬಂಧಿಸಿ ತಪ್ಪು ಮಾಹಿತಿ ನೀಡಿ ಹೈಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡಿದೆ. ರಸ್ತೆ ದುರಸ್ತಿಗೊಳಿಸುತ್ತಿರುವುದಾಗಿ ಸರ್ಕಾರ ಸುಳ್ಳು ಹೇಳುತ್ತಿದೆ. ಸರ್ಕಾರದ ಗಮನ ಸೆಳೆಯುವ ಸಲುವಾಗಿಯೇ ಗುಂಡಿಗಳ ಸುತ್ತ ರಂಗೋಲಿ ಬಿಡಿಸುವ ಕಾರ್ಯಕ್ರಮ ನಡೆಸಿದ್ದೇವೆ' ಎಂದು ಹೇಳಿದರು.

ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ, 'ರಸ್ತೆ ಗುಂಡಿಗಳಿಂದಾಗಿ ಒಂದು ವರ್ಷದಲ್ಲಿ ಹತ್ತಕ್ಕೂ ಹೆಚ್ಚು ಮಂದಿ ಮೃತರಾಗಿದ್ದಾರೆ. ಸಾಕಷ್ಟು ಜನ ಅಪಘಾತಗಳಲ್ಲಿ ಗಾಯಗೊಂಡಿದ್ದಾರೆ. ಹೀಗಿದ್ದರೂ ಸರ್ಕಾರ ಹಾಗೂ ಬಿಬಿಎಂಪಿ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ. ಕಳಪೆ ಕಾಮಗಾರಿಯಿಂದಾಗಿ ದುರಸ್ತಿಪಡಿಸಲಾದ ರಸ್ತೆಗಳಲ್ಲಿ ಮತ್ತೆ ಗುಂಡಿಗಳಾಗಿವೆ. ಇದರಿಂದ ವಾಹನ ಸವಾರರು ಪರದಾಡುವಂತಾಗಿದೆ' ಎಂದು ಹೇಳಿದರು.

ಪಕ್ಷದ ಮುಖಂಡರಾದ ಬಿ.ಟಿ. ನಾಗಣ್ಣ, ಜಗದೀಶ್ ವಿ. ಸದಂ, ರಾಜಶೇಖರ್ ದೊಡ್ಡಣ್ಣ, ಉಷಾ ಮೋಹನ್, ಜಗದೀಶ್ ಚಂದ್ರ, ಗೋಪಿನಾಥ್, ಗುರುಮೂರ್ತಿ ಇದ್ದರು.



ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಮಲ್ಲೇಶ್ವರದ ಪೈಪ್‌ಲೈನ್ ರಸ್ತೆಯ ಗುಂಡಿಗಳ ಸುತ್ತ ರಂಗೋಲಿ ಬಿಡಿಸಿ ಆಕ್ರೋಶ ವ್ಯಕ್ತಪಡಿಸಿದರು–ಪ್ರಜಾವಾಣಿ ಚಿತ್ರ

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ಜ.31ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಬಿಎಚ್‌ಇಎಲ್ ಲೇಔಟ್, ಕೃಷ್ಣ ಗಾರ್ಡನ್, ಹರ್ಷ ಬಡಾವಣೆ, ವಿದ್ಯಾಪೀಠ ಬಡಾವಣೆ, ಬಿಜಿಎಸ್ ಆಸ್ಪತ್ರೆ ರಸ್ತೆ, ಮೈಸೂರು ಹೆದ್ದಾರಿ, ಗಾಂಧಿ ನಗರ, ದುಬಾಸಿಪಾಳ್ಯ, ಉತ್ತರಹಳ್ಳಿ ರಸ್ತೆ, ಕೋಡಿಪಾಳ್ಯ, ಅನ್ನಪೂರ್ಣೇಶ್ವರಿ ಬಡಾವಣೆ, ಕುವೆಂಪು ಮುಖ್ಯ ರಸ್ತೆ, ಜಿ.ಕೆ. ಗಲ್ಲಿ ರಸ್ತೆ, ಯಮುನಾನಗರ ಸ್ಕೂಲ್, ಕೆಎಲ್‌ಇ ಕಾಲೇಜು ರಸ್ತೆ, ಅಂಬೇಡ್ಕರ್ ನಗರ, ಉಲ್ಲಾಳ ಬಸ್ ನಿಲ್ದಾಣ, ಸುತ್ತಮುತ್ತ ಪ್ರದೇಶಗಳು.

ಖಾಸಗಿ ಸಂಸ್ಥೆಗೆ ಗೋಮಾಳ ಭೂಮಿ: ಸಮಿತಿ ರಚನೆ

ಬೆಂಗಳೂರು: ಗ್ರಾಮೀಣ ಪ್ರದೇಶದಲ್ಲಿರುವ ಸರ್ಕಾರಿ ಜಮೀನುಗಳನ್ನು ಖಾಸಗಿ ಸಂಸ್ಥೆಗಳಿಗೆ ಮಂಜೂರು ಮಾಡಲು ನೀತಿ ರೂಪಿಸಲು ಸರ್ಕಾರ ಮುಂದಾಗಿದೆ.

ಅದಕ್ಕಾಗಿ ಕಂದಾಯ ಸಚಿವ ಆರ್. ಅಶೋಕ ಅಧ್ಯಕ್ಷತೆಯಲ್ಲಿ ಸಂಪುಟ ಉಪಸಮಿತಿ ರಚಿಸಿ ಶನಿವಾರ ಆದೇಶ ಹೊರಡಿಸಲಾಗಿದೆ. ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ಗೃಹ ಸಚಿವ ಆರಗ ಜ್ಞಾನೇಂದ್ರ, ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ, ಕೃಷಿ ಸಚಿವ ಬಿ.ಸಿ. ಪಾಟೀಲ, ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಅವರನ್ನು ಸಂಪುಟ ಉಪ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗಿದೆ.

ಹೆಬ್ಬಾತು...ಹಾರಿ ಹೋಯಿತು!

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ: ಚಳಿಗಾಲದ ಆರಂಭದಲ್ಲೇ ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಮಾಗಡಿ ಕೆರೆಗೆ ಬಂದಿಳಿಯುತ್ತಿದ್ದ ಪಟ್ಟೆ ತಲೆ ಹೆಬ್ಬಾತುಗಳ ಸಂಖ್ಯೆ ಈ ಬಾರಿ ಗಣನೀಯವಾಗಿ ಕುಸಿದಿದೆ.

ಹೆಬ್ಬಾತುಗಳಿಗೆ ಮಾಗಡಿ ಕೆರೆ ಅಚ್ಚುಮೆಚ್ಚಾಗಿತ್ತು. ನಾಲ್ಕು ತಿಂಗಳು ಕೆರೆಯಲ್ಲಿ ಸ್ವಚ್ಛಂದವಾಗಿ ಈಜುತ್ತಿದ್ದ ಹಕ್ಕಿಗಳ ಮೇಲೆ ಊರಿನ ಗ್ರಾಮಸ್ಥರೂ ಅಷ್ಟೇ ಪ್ರೀತಿ ತೋರುತ್ತಿದ್ದರು. ಆದರೆ, ಇತ್ತೀಚಿನ ದಿನಗಳಲ್ಲಿ ಸುತ್ತಲಿನ ಪರಿಸರದಲ್ಲಿ ಆದ ಬದಲಾವಣೆಯಿಂದಾಗಿ ಬರುವ ಹಕ್ಕಿಗಳ ಸಂಖ್ಯೆ ಕಡಿಮೆ ಆಗುತ್ತಿದೆ. ಕಲ್ಲು ಸಿಡಿಸುವ ಸದ್ದು, ಕೆರೆಯ ಏರಿ ಮೇಲೆ ನಿರಂತರವಾಗಿ ಸಾಗುವ ಟಿಪ್ಪರ್‌ಗಳ ಶಬ್ದ ಹಕ್ಕಿಗಳಿಗೆ ಕಿರಿಕಿರಿ ಉಂಟು ಮಾಡುತ್ತಿದೆ.

ಕಳೆದ ವರ್ಷ ಗದಗ ಜಿಲ್ಲೆಯಲ್ಲಿ ಸುರಿದ ಅಕಾಲಿಕ ಮಳೆಯಿಂದಾಗಿ ಶೇಂಗಾ, ಕಡಲೆ, ಗೋಧಿ ಮೊದಲಾದ ಬೆಳೆಗಳಿಗೆ ಅಪಾರ ಹಾನಿಯಾಯಿತು. ಪಟ್ಟೆ ತಲೆ ಹೆಬ್ಬಾತುಗಳಿಗೆ ಶೇಂಗಾ ಅಚ್ಚುಮೆಚ್ಚಿನ ಆಹಾರ. ರೈತರ ಹೊಲಕ್ಕೆ ಹಿಂಡು ಹಿಂಡಾಗಿ ಲಗ್ಗೆಯಿಟ್ಟು ಶೇಂಗಾ ಮೆಲ್ಲುತ್ತಿದ್ದ ಹೆಬ್ಬಾತುಗಳಿಗೆ ಈ ಬಾರಿ ನಿರಾಸೆ ಕಾಡಿತು. ಅಕಾಲಿಕ ಮಳೆಗೆ ಶೇಂಗಾ ಕೊಳೆತು ಹೋಗಿದ್ದರಿಂದ ಹಕ್ಕಿಗಳಿಗೆ ಆಹಾರದ ಕೊರತೆಯೂ ಎದುರಾಯಿತು. ಆಹಾರ ಸಿಗದ ಕಾರಣಕ್ಕೆ ವಲಸೆ ಹಕ್ಕಿಗಳು ಜಾಗ ಬದಲಿಸಿವೆ.

‘ಗಣಿ ಸದ್ದು, ವಾಹನಗಳ ಶಬ್ದಕ್ಕೆ ಪಟ್ಟೆ ತಲೆ ಹೆಬ್ಬಾತುಗಳು ಬೆದರುತ್ತಿರಲಿಲ್ಲ. ನನ್ನ ಅನಿಸಿಕೆ ಪ್ರಕಾರ ವಲಸೆ ಹಕ್ಕಿಗಳಿಗೆ ಈ ಬಾರಿ ಆಹಾರದ ಕೊರತೆ ಪ್ರಮುಖವಾಗಿ ಕಾಡಿದೆ’ ಎನ್ನುತ್ತಾರೆ ಮಾಗಡಿ ಕೆರೆಯಲ್ಲಿರುವ ಅರಣ್ಯ ಇಲಾಖೆ ಸಿಬ್ಬಂದಿ ಸೋಮಣ್ಣ.

ಹಕ್ಕಿಗಳ ವಲಸೆ ಪ್ರಮಾಣ ಕುಸಿಯಲು ಆಹಾರದ ಕೊರತೆ ಒಂದು ಕಾರಣವಾದರೆ, ಶಿರಹಟ್ಟಿ ತಾಲ್ಲೂಕಿನಲ್ಲಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆಯೂ ಮತ್ತೊಂದು ಕಾರಣವಾಗಿದೆ.

‘ಗದಗದಿಂದ ಹೋದವೇ ಕಬಿನಿಯತ್ತ?’

ದಾವಣಗೆರೆ: ಪಟ್ಟೆ ತಲೆಯ ಹೆಬ್ಬಾತುಗಳು ನಂಜನಗೂಡಿನ ಹದಿನಾರು ಕರೆಗೆ ಒಂದೂವರೆ ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಹೋಗಿವೆ ಎಂಬ ಮಾಹಿತಿ ಇದೆ. ಕಳೆದ ವರ್ಷ ಗದಗದ ಮಾಗಡಿ ಕೆರೆಗೆ 16 ಸಾವಿರದಷ್ಟು ಈ ಹಕ್ಕಿಗಳು ಬಂದಿದ್ದವು. ಈ ವರ್ಷ ಸಂಖ್ಯೆ ಅರ್ಧದಷ್ಟು ಅಲ್ಲಿ ಕಡಿಮೆಯಾಗಿದೆ. ಇದಕ್ಕೆ ಆಹಾರದ ಅಲಭ್ಯತೆಯೇ ಕಾರಣ ಎನ್ನುತ್ತಾರೆ ದಾವಣಗೆರೆ ವಿಶ್ವವಿದ್ಯಾಲಯದ ಸೂಕ್ಷ್ಮಜೀವಿ ವಿಜ್ಞಾನ ವಿಭಾಗದ ಪ್ರೊಫೆಸರ್ ಎಸ್.ಶಿಶುಪಾಲ.

ಮಂಗೋಲಿಯಾದಿಂದ ಹಿಮಾಲಯ ದಾಟಿಕೊಂಡು 4,500 ಕಿ.ಮೀ. ಪಯಣಿಸಿ ರಾಜ್ಯಕ್ಕೆ ಬರುವ ಪಟ್ಟೆ ತಲೆಯ ಹೆಬ್ಬಾತುಗಳ ವರ್ತನೆಯನ್ನು ಪಕ್ಷಿ ಫೋಟೊಗ್ರಾಫರ್ ಕೂಡ ಆಗಿರುವ ಶಿಶುಪಾಲ ಅವರು ಗಮನಿಸುತ್ತಾ ಬಂದಿದ್ದಾರೆ. ಜಾಗತಿಕ ತಾಪಮಾನದಲ್ಲಿನ ಬದಲಾವಣೆ, ಅಣೆಕಟ್ಟೆಗಳಲ್ಲಿ ನೀರು ಈ ಸಲ ಕಡಿಮೆಯಾಗದೇ ಇರುವುದು ಕೂಡ ಹೆಬ್ಬಾತುಗಳ ವಲಸೆಯ ಮೇಲೆ ಪರಿಣಾಮ ಬೀರಿದೆ ಎನ್ನುತ್ತಾರೆ ಅವರು.

‘ದಾವಣಗೆರೆಯ ಕುಂದವಾಡ, ಟಿವಿ ಸ್ಟೇಷನ್ ಹಾಗೂ ಕೊಂಡಜ್ಜಿ ಕೆರೆಗೆ ಮಾಗಡಿಯಿಂದ ಹೆಬ್ಬಾತುಗಳು ಬರುತ್ತಿದ್ದವು. ಈ ಸಲ ಕುಂದವಾಡ ಕೆರೆಯಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿರುವುದರಿಂದ ಬಂದಿಳಿದ ಒಂದೆರಡು ಹಕ್ಕಿಗಳು ಚಕಿತವಾದಂತೆ ವರ್ತಿಸಿದ್ದನ್ನು ನಾನು ಕಂಡೆ. ಮಾಗಡಿ ಕೆರೆಯ ಸುತ್ತಮುತ್ತ ಕಡಲೆಗೆ ಕೀಟನಾಶಕ ಹೊಡೆಯುತ್ತಿರುವುದರಿಂದ ಹಕ್ಕಿಗಳು ಸಾಯುತ್ತಿವೆ. ಹೆಬ್ಬಾತುಗಳಿಗೆ ಕಡಲೆ ಪ್ರಿಯವಾದ ಆಹಾರ. ಈಗ ಬೆಳೆಯ ಪ್ರಮಾಣ ಕೂಡ ಕಡಿಮೆಯಾಗಿರುವುದರಿಂದ ಅವು ಬೇರೆ ಜಾಗಗಳನ್ನು ಹುಡುಕಿಕೊಂಡು ಹೋಗಿರಬಹುದು’ ಎನ್ನುತ್ತಾರೆ ಶಿಶುಪಾಲ.



ದಾವಣಗೆರೆಯ ಕೊಂಡಜ್ಜಿ ಕೆರೆಯಲ್ಲಿ ಪಟ್ಟೆತಲೆ ಹೆಬ್ಬಾತು (ಬಾರ್ ಹೆಡೆಡ್ ಗೂಸ್)ಗಳು ಈ ಸಲ ವಿರಳವಾಗಿವೆ.
–ಪ್ರಜಾವಾಣಿ ಚಿತ್ರ / ಸತೀಶ ಬಡಿಗೇರ್



ಮೈಸೂರಿನ ಹದಿನಾರು ಕೆರೆಯಲ್ಲಿ ಪಟ್ಟೆ ತಲೆ ಹೆಬ್ಬಾತುಗಳ ಕಲರವ –ಪ್ರಜಾವಾಣಿ ಚಿತ್ರ/ಸವಿತಾ ಬಿ.ಆರ್

ಲಕ್ಷದಿಂದ ಸಾವಿರಕ್ಕೆ ವಲಸೆ ಹಕ್ಕಿಗಳು

• ಮೋಹನ್ ಕುಮಾರ ಸಿ.

ಹಳೇ ಮೈಸೂರು ಭಾಗದಲ್ಲಿ ಕಡಿಮೆಯಾದ ಕಲರವ

ಮೈಸೂರು: ಹಳೇ ಮೈಸೂರು ಭಾಗಕ್ಕೆ ಪ್ರತಿ ವರ್ಷ ಬಂದಿಳಿಯುತ್ತಿದ್ದ ವಲಸೆ ಹಕ್ಕಿಗಳು ಲಕ್ಷದಿಂದ ಸಾವಿರಕ್ಕಿಳಿದಿವೆ. ಕೆರೆ, ಕಟ್ಟೆಗಳ ಪರಿಸರದಲ್ಲಿ ಒಂದೂವರೆ ದಶಕದಿಂದ ನಡೆಯುತ್ತಿರುವ ಮಿತಿ ಮೀರಿದ ನಗರೀಕರಣ ಹಾಗೂ ಮೀನುಗಾರಿಕೆಯೇ ಕುಸಿತಕ್ಕೆ ಕಾರಣ.

ಪಕ್ಷಿಧಾಮಗಳಿಗೆ ಮಾದರಿಯಾಗಿದ್ದ ಶ್ರೀರಂಗಪಟ್ಟಣದ ರಂಗನತಿಟ್ಟು, ಮದ್ದೂರಿನ ಕೊಕ್ಕರೆ ಬೆಳ್ಳೂರಿನಲ್ಲಿ ಯುರೇಷ್ಯಾ, ಉತ್ತರ ಭಾರತ ಹಾಗೂ ಕರಾವಳಿ ತಟಗಳಿಂದ ಬರುವ ಹಕ್ಕಿಗಳಿಗಿಂತ ಸ್ಥಳೀಯ ಹಕ್ಕಿಗಳೇ ಹೆಚ್ಚಿವೆ. ನದಿಗಳ ಹಿನ್ನೀರು, ಕೆರೆ-ಕಟ್ಟೆಗಳಲ್ಲಿ 90ರ ದಶಕದಲ್ಲಿ ಪ್ರತಿ ವರ್ಷ 1.5 ಲಕ್ಷ ವಲಸೆ ಹಕ್ಕಿಗಳಿರುತ್ತಿದ್ದವು. ಈಗ 30 ಸಾವಿರದಷ್ಟು ಮಾತ್ರ ಹಕ್ಕಿಗಳು ಬರುತ್ತಿವೆ. ಹೀಗಾಗಿ ಮೂರು ತಿಂಗಳು ನಡೆಯುತ್ತಿದ್ದ ಹಕ್ಕಿಗಳ ಸಮೀಕ್ಷೆ ಕೆಲವೇ ದಿನಕ್ಕೆ ಮುಗಿಯುತ್ತಿದೆ.

ಕೊಕ್ಕರೆ ಬೆಳ್ಳೂರಿನಲ್ಲಿ ನೂರಾರು ಮಹಡಿ ಕಟ್ಟಡಗಳು ತಲೆಯೆತ್ತಿವೆ. ಪ್ರವಾಸೋದ್ಯಮಕ್ಕೆಂದು ನೂರಾರು ವರ್ಷದ ಹಳೆಯ ಆಲ, ಹುಣಸೆ, ಅರಳಿ ಮರಗಳನ್ನು ಕಡಿಯಲಾಗಿದೆ. ಹಕ್ಕಿಗೊಬ್ಬರದ ಜಾಗದಲ್ಲಿ ರಾಸಾಯನಿಕ ಗೊಬ್ಬರ ಬಂದಿದೆ. ಹೆಜ್ಜಾರ್ಲೆ (ಪೆಲಿಕನ್)-ಗ್ರಾಮಸ್ಥರ ನಡುವಿನ ಕರುಳುಬಳ್ಳಿಯ ಸಂಬಂಧವೂ ಕಳಚಿದೆ. ಪರಿಣಾಮ? ಐದು ವರ್ಷದ ಹಿಂದೆ ಅಲ್ಲಿ ಸುಮಾರು 800 ಹೆಜ್ಜಾರ್ಲೆಗಳಿದ್ದವು. ಈಗ 70ಕ್ಕೆ ಇಳಿದಿವೆ.

‘ನಾಲ್ಕರಿಂದ ಹತ್ತು ಕೆ.ಜಿ.ವರೆಗೂ ತೂಗುವ 250 ಹೆಜ್ಜಾರ್ಲೆಗಳಿಗೆ ಆಶ್ರಯ ನೀಡಿದ್ದ ಬೆಳ್ಳೂರಿನ ಆಲದಮರದ ಕೊಂಬೆಗಳನ್ನು ಕಡಿಯಲಾಯ್ತು. ಈಗ ಮರದಲ್ಲಿರುವುದು 10ರಿಂದ 20 ಹೆಜ್ಜಾರ್ಲೆ. ಜಂತುಹುಳು ಬಾಧೆಯಿಂದ ಮೂರ್ನಾಲ್ಕು ವರ್ಷದ ಹಿಂದೆ 200ಕ್ಕೂ ಹೆಚ್ಚು ಹೆಜ್ಜಾರ್ಲೆಗಳು ಮೃತಪಟ್ಟವು. ಈಗ ಹೆಚ್ಚು ಬರುತ್ತಿಲ್ಲ’ ಎನ್ನುತ್ತಾರೆ, ಮರದಿಂದ ಬಿದ್ದ ಮರಿ ಹಕ್ಕಿಗಳ ರಕ್ಷಣೆಯಲ್ಲಿ ತೊಡಗಿರುವ ರೈತ ಬಿ.ಲಿಂಗೇಗೌಡ.

‘ಶಿಂಷಾ ನದಿ, ಕೆರೆಗಳಿಗೆ ಮಲಿನ ನೀರು ಹೆಚ್ಚು ಸೇರುತ್ತಿದ್ದು, ಎರಡು ತಿಂಗಳಿಂದ 7 ಹೆಜ್ಜಾರ್ಲೆಗಳು ಮೃತಪಟ್ಟಿವೆ’ ಎಂದು ವಿಷಾದಿಸಿದರು.

‘ಬಂಗಾಳಕೊಲ್ಲಿಯ ಸುತ್ತ ವಾಸಿಸುವ ಹೆಜ್ಜಾರ್ಲೆ, ಬಣ್ಣದ ಕೊಕ್ಕರೆಗಳು ನವೆಂಬರ್ ವೇಳೆಗೆ ಬಂದು ಸಂತಾನೋತ್ಪತ್ತಿ ಮಾಡಿ ವಾಪಸಾಗುತ್ತವೆ. ಕೊಕ್ಕರೆ ಬೆಳ್ಳೂರಿನಲ್ಲಿ ಪಕ್ಷಿಗಳಿಗೆ ಜಿಪಿಎಸ್ ಟ್ಯಾಗ್ ಅಳವಡಿಸಲಾಗುತ್ತಿದ್ದು, ಅವುಗಳ ಚಲನೆ ಕುರಿತು ಅಧ್ಯಯನ ಆರಂಭಿಸಲಾಗಿದೆ’ ಎಂದು ಡಿಸಿಎಫ್ (ವನ್ಯಜೀವಿ) ವಿ.ಕರಿಕಾಳನ್ ತಿಳಿಸಿದರು.

ಯುರೇಷ್ಯಾದಿಂದ ಬರುತ್ತಿದ್ದ ವಲಸೆ ಹಕ್ಕಿಗಳ ಮೇಲೆ, ಅಫ್ಘಾನಿಸ್ತಾನದಲ್ಲಿ ನಡೆಯುತ್ತಿರುವ ಯುದ್ಧವೂ ಪರಿಣಾಮ ಬೀರಿದೆ. ಪಟ್ಟೆ ತಲೆ ಹೆಬ್ಬಾತು, ನಾರ್ದನ್ ಶೋವ್‌ಲರ್, ಗಾರ್ಗಾನಿ, ಮರಳು ಪೀಪಿಗಳು (ಸ್ಯಾಂಡ್ ಪೈಪರ್ಸ್) ಮೈಸೂರಿನ ಹದಿನಾರು, ಕಬಿನಿ ಹಿನ್ನೀರು, ಚಾಮರಾಜನಗರದ ಕುಂತೂರು, ಕೆಸ್ತೂರು, ಎರಯೂರು ಕೆರೆಗಳಲ್ಲಿ ಕಾಣಿಸುತ್ತವೆ.

ಹಾಸನದ ಹುಣಸಿನಕೆರೆ, ಸತ್ಯಮಂಗಲ ಕೆರೆ, ಹೇಮಾವತಿ ಹಿನ್ನೀರಿನಲ್ಲೂ ವಲಸೆ ಹಕ್ಕಿಗಳು ಕಡಿಮೆಯಾಗಿವೆ. ಹಿಂದೆ ಇಲ್ಲಿ ಹಕ್ಕಿ ಬೇಟೆಯೂ ನಡೆಯುತ್ತಿತ್ತು.

‘ಸದಾ ಕಾಲ ನೀರು ತುಂಬಿಸುವುದರಿಂದ ಮೈಸೂರು ಭಾಗದ ಕೆರೆಗಳ ನೈಸರ್ಗಿಕ ದಿನಚರಿಯೂ ಬದಲಾಗಿ, ವಲಸೆ ಹಕ್ಕಿಗಳು ತಮಿಳುನಾಡು, ಆಂಧ್ರ, ಕೇರಳದ ಕರಾವಳಿಯತ್ತ ಹೋಗುತ್ತಿವೆ’ ಎಂದು ಮೈಸೂರಿನ ಪಕ್ಷಿತಜ್ಞ, ಮ್ಯಾನ್ ಸಂಸ್ಥೆಯ ಕೆ.ಮನು ಹೇಳಿದರು.

(ಪೂರಕ ಮಾಹಿತಿ: ಮಂಡ್ಯ;ಎಂ.ಎನ್.ಯೋಗೇಶ್, ಹಾಸನ;ಕೆ.ಎಸ್.ಸುನೀಲ್)

ರಂಗನತಿಟ್ಟನಲ್ಲಿ ಹೆಜ್ಜಾರ್ಲೆ ಗುಂಪು

ಶ್ರೀರಂಗಪಟ್ಟಣ ಸಮೀಪವಿರುವ ರಂಗನತಿಟ್ಟು ಪಕ್ಷಿಧಾಮದಲ್ಲಿ ಸ್ಪೂನ್ ಬಿಲ್, ಓಪನ್‌ಬಿಲ್, ರಿವರ್ ಟರ್ನ್, ಸ್ಟೋನ್ ಪ್ಲವರ್, ನೈಟ್ ಹೆರೋನ್, ಗ್ರೇ ಹೆರೋನ್ ಸೇರಿ ಒಂದು ಸಾವಿರಕ್ಕೂ ಹೆಚ್ಚು ಪಕ್ಷಿಗಳು ಬಂದಿವೆ. ನಡುಗಡ್ಡೆಯಲ್ಲಿ ಹೆಜ್ಜಾರ್ಲೆಯ ದೊಡ್ಡ ಗುಂಪು ಕಾಣಿಸಿಕೊಂಡಿದೆ.

‘ಕೊಕ್ಕರೆ ಬೆಳ್ಳೂರಿನಲ್ಲಿ ಮರಗಳನ್ನು ಉಳಿಸಿಕೊಂಡಿದ್ದರೆ ಹೆಜ್ಜಾರ್ಲೆಗಳು ರಂಗನತಿಟ್ಟು, ಲಿಂಗಾಂಬುಧಿ ಕೆರೆಗಳಿಗೆ ಬರುತ್ತಿರಲಿಲ್ಲ. ನಡುಗಡ್ಡೆಗಳನ್ನು ಹೆಜ್ಜಾರ್ಲೆ ಆಕ್ರಮಿಸಿಕೊಂಡರೆ ಸ್ಥಳೀಯ ಹಕ್ಕಿಗಳಿಗೆ ಜಾಗವಿರುವುದಿಲ್ಲ. ಹೆಜ್ಜಾರ್ಲೆಯ ಗೂಡಿನ ತೂಕ, ಹಾಕುವ ಹಿಕ್ಕೆಯನ್ನು ನಡುಗಡ್ಡೆಯ ಮರಗಳು ತಾಳಿಕೊಳ್ಳುವುದಿಲ್ಲ. ಮುಂದೆ ಇಲ್ಲಿಯೂ ಹಕ್ಕಿಗಳು ಕಡಿಮೆಯಾಗಲಿವೆ’ ಎಂದು ಕೆ.ಮನು ಆತಂಕ ವ್ಯಕ್ತಪಡಿಸಿದರು.

ಹಳೇ ಮೈಸೂರಿನಲ್ಲಿ ವಲಸೆ ಹಕ್ಕಿಗಳು

1991	1,84,190
2001	1,52,955
2011	34,551
2021	32,304

ಆಧಾರ: ಮ್ಯಾನ್ (ಮೈಸೂರು ಅಮೆಚೂರ್ ನ್ಯಾಚುರಲಿಸ್ಟ್) ಹಾಗೂ ಮೈಸೂರು ನೇಚರ್ ಸಂಸ್ಥೆಯ ಸಮೀಕ್ಷೆ


ಅವನತಿಯತ್ತ ಮಂಡಗದ್ದೆ, ಗುಡವಿ ಪಕ್ಷಿಧಾಮ

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಪ್ರಸಿದ್ಧ ಪಕ್ಷಿಧಾಮಗಳಾದ ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆ, ಸೊರಬ ತಾಲ್ಲೂಕಿನ ಗುಡವಿಯಲ್ಲಿ ದಶಕದಿಂದೀಚೆಗೆ ಪಕ್ಷಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ.

ತುಂಗಾ ಜಲಾಶಯದ ಹಿನ್ನೀರು, ಮುಂಗಾರು ಸಮಯದ ಪ್ರವಾಹದ ಸೆಳೆತಕ್ಕೆ ಸಿಲುಕಿ ಮಂಡಗದ್ದೆ ಪಕ್ಷಿಧಾಮ ಅಪಾಯದ ಸುಳಿಗೆ ಸಿಲುಕಿದೆ. ಗುಡವಿ ಪಕ್ಷಿಧಾಮದ ಸುತ್ತಲ ಹೊಲ, ತೋಟ, ಗದ್ದೆಗಳಲ್ಲಿ ಬೆಳೆಗಳಿಗೆ ರಾಸಾಯನಿಕ ಬಳಸುತ್ತಿರುವ ಪರಿಣಾಮ ಅಪರೂಪದ ಪಕ್ಷಿ ಸಂಕುಲಗಳು ಕಣ್ಮರೆಯಾಗುತ್ತಿವೆ.

ಮಂಡಗದ್ದೆ ಪಕ್ಷಿಧಾಮ: 2006ರಲ್ಲಿ ಗಾಜನೂರಿನ ತುಂಗಾ ಮೇಲ್ದಂಡೆ ಯೋಜನೆ ಪೂರ್ಣಗೊಂಡ ನಂತರ ಹಿನ್ನೀರಿನ ಮಟ್ಟದಲ್ಲಿ ಹೆಚ್ಚಳವಾಗಿ ಪಕ್ಷಿಧಾಮದ ಬಹುತೇಕ ನಡುಗಡ್ಡೆಗಳು ಮುಳುಗಿವೆ. ಅಳಿದುಳಿದ ಮರಗಳಲ್ಲಿ ಪಕ್ಷಿಗಳು ಆಸರೆ ಪಡೆದಿವೆ. ಮೇಲ್ದಂಡೆ ಯೋಜನೆ ಅನುಷ್ಠಾನಗೊಳ್ಳುವ ಮೊದಲು ಮಂಡಗದ್ದೆ ಪಕ್ಷಿಧಾಮ ಬಾನಾಡಿಗಳಿಂದ ಗಿಜಿಗುಡುತ್ತಿತ್ತು. ಪಕ್ಷಿಗಳಿಗೆ ಆಸರೆಯಾಗಿದ್ದ ಮರಗಳ ಸಂಖ್ಯೆ ಕ್ಷೀಣಿಸಿದ್ದರಿಂದ ಪಕ್ಷಿಗಳ ಸಂಖ್ಯೆಯಲ್ಲೂ ಇಳಿಕೆಯಾಗಿದೆ.



ಪಕ್ಷಿಗಳ ಆವಾಸಸ್ಥಾನ ನೈಸರ್ಗಿಕ ಕೆರೆಯ ಸುತ್ತಲಿನ ಕೃಷಿ ಭೂಮಿಗಳಲ್ಲಿ ಅತಿಯಾದ ರಾಸಾಯನಿಕ ಬಳಕೆ, ಕೀಟನಾಶಕ ಔಷಧಗಳ ಸಿಂಪಡಣೆ ಪಕ್ಷಿಗಳಿಗೆ ಮಾರಕವಾಗಿದೆ. ಒಂದು ದಶಕದ ಅವಧಿಯಲ್ಲಿ ಪಕ್ಷಿಗಳ ಸಂಖ್ಯೆ ಅರ್ಧಕ್ಕಿಂತ ಕ್ಷೀಣಿಸಿದೆ. ಪಕ್ಷಿಧಾಮ ಪುನಃಶ್ಚೇತನ ತುರ್ತು ಯೋಜನೆ ಜಾರಿ ಮಾಡಬೇಕು.

ಕೆ.ವೆಂಕಟೇಶ, ಸಂಚಾಲಕ, ವೃಕ್ಷಲಕ್ಷ ಆಂದೋಲನ.



ಗುಡವಿ ಪಕ್ಷಿಧಾಮ: 186 ಎಕರೆ ವಿಸ್ತಾರದಲ್ಲಿ ವ್ಯಾಪಿಸಿರುವ ಗುಡವಿ ಪಕ್ಷಿಧಾಮದಲ್ಲಿ ಪ್ರತಿವರ್ಷ ಮಳೆಗಾಲ–ಚಳಿಗಾಲದ ಸಮಯದಲ್ಲಿ 15 ಸಾವಿರಕ್ಕೂ ಹೆಚ್ಚು ಪಕ್ಷಿಗಳು ನೆಲೆ ನಿಲ್ಲುತ್ತಿದ್ದವು. ದೊಡ್ಡ ಬೆಳ್ಳಕ್ಕಿ, ಹಾವಕ್ಕಿ, ಬಿಳಿ ಕೆಂಬರಳು, ಕಪ್ಪು ತಲೆ ಬಾತು, ಜಕಣ ಮೊದಲಾದ 43 ಕುಟುಂಬಗಳ 217 ಜಾತಿಯ ಪಕ್ಷಿಗಳು ಅಲ್ಲಿ ಕಾಣಲು ಸಿಗುತ್ತಿದ್ದವು.

ಜೌಗು ಪ್ರದೇಶ ಕಡಿಮೆಯಾಗಿರುವುದು, ಅಡಿಕೆ, ಶುಂಠಿಯಂತಹ ವಾಣಿಜ್ಯ ಬೆಳೆ ಪ್ರದೇಶಗಳ ವಿಸ್ತರಣೆ, ಬೆಳೆಗಳಿಗೆ ರಾಸಾಯನಿಕ ಬಳಕೆ ಪರಿಣಾಮ ಪಕ್ಷಿ ಸಂಕುಲದ ವಿನಾಶವಾಗುತ್ತಿದೆ ಎಂದು ಪಕ್ಷಿ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಚಳಿಗಾಲದಲ್ಲಿ ಉತ್ತರ ಕನ್ನಡಕ್ಕೆ ವಲಸೆ ಬರುವ ದೇಶ ವಿದೇಶಗಳ ಹಕ್ಕಿಗಳು

ಅತ್ತಿವೇರಿಯಲ್ಲಿ ಹೆರಿಗೆ, ಕಡಲಲ್ಲಿ ಆಹಾರ!



• ಸದಾಶಿವ ಎಂ.ಎಸ್

ಕಾರವಾರ: ಮಳೆ ಮುಗಿದು ಚಳಿಗಾಲ ಶುರುವಾಗುತ್ತಿದ್ದಂತೆ ಉತ್ತರ ಕನ್ನಡವು ಪಕ್ಷಿಪ್ರಿಯರನ್ನು ಸೆಳೆಯುತ್ತದೆ. ಮುಂಡಗೋಡದ ಅತ್ತಿವೇರಿಗೆ 20ಕ್ಕೂ ಹೆಚ್ಚು ದೇಶಗಳ ಹತ್ತಾರು ಪ್ರಭೇದಗಳ ಹಕ್ಕಿಗಳು ‘ಹೆರಿಗೆ’ಗಾಗಿ ಬಂದರೆ, ಕಡಲ ತಡಿಗೆ ‘ಸೀಗಲ್’ಗಳು ಆಹಾರ ಅರಸುತ್ತ ಬರುತ್ತವೆ.

ಉತ್ತರಕನ್ನಡ, ಹಾವೇರಿ ಹಾಗೂ ಧಾರವಾಡ ಜಿಲ್ಲೆಗಳ ಗಡಿಯಲ್ಲಿರುವ ‘ಅತ್ತಿವೇರಿ’ ಪಕ್ಷಿಧಾಮವು ಮುಂಡಗೋಡ ತಾಲ್ಲೂಕಿನಲ್ಲಿದೆ. ಈ ಬಾರಿ ಹವಾಮಾನ ವೈಪರೀತ್ಯದಿಂದಾಗಿ ವಿದೇಶಿ ಪಕ್ಷಿಗಳ ಬರುವಿಕೆ ತಡವಾಗಿದ್ದರೂ ದೇಶದ ವಿವಿಧ ಭಾಗಗಳ ಖಗಸಂಕುಲಕ್ಕೆ ಕೊರತೆಯಿಲ್ಲ.

‘ಅತ್ತಿವೇರಿ ಪಕ್ಷಿಧಾಮಕ್ಕೆ ಪ್ರತಿವರ್ಷ 20ಕ್ಕೂ ಹೆಚ್ಚು ದೇಶಗಳಿಂದ 50ರಿಂದ 60 ಪ್ರಭೇದಗಳ ಪಕ್ಷಿಗಳು ವಲಸೆ ಬರುತ್ತವೆ. ಅವುಗಳಲ್ಲಿ ಕೆಲವು ಸಂತಾನೋತ್ಪತ್ತಿ ಕ್ರಿಯೆಯಲ್ಲಿ ತೊಡಗಿದರೆ, ಮತ್ತೆ ಕೆಲವು ಚಳಿಗಾಲದವರೆಗೆ ಆಹಾರ ಹುಡುಕುತ್ತ ಮರಳಿ ಹೋಗುತ್ತವೆ. ಈ ವರ್ಷ ಜನವರಿ ಮಧ್ಯದವರೆಗೆ 20ಕ್ಕೂ ಹೆಚ್ಚು ವಿಧಗಳ ಪಕ್ಷಿಗಳು ವಲಸೆ ಬಂದಿವೆ’ ಎನ್ನುತ್ತಾರೆ ಅತ್ತಿವೇರಿ ಪಕ್ಷಿಧಾಮದ ಉಪವಲಯ ಅರಣ್ಯಾಧಿಕಾರಿ ಸಂಜೀವ.

‘ನವೆಂಬರ್ ತಿಂಗಳ ಮಧ್ಯದಿಂದ ಫೆಬ್ರುವರಿ ಎರಡನೇ ವಾರದವರೆಗೆ ಪಕ್ಷಿಧಾಮದಲ್ಲಿ ವಲಸೆ ಹಕ್ಕಿಗಳನ್ನು ನೋಡಬಹುದು. ಹಿಂದಿನ ಕೆಲವು ವರ್ಷಗಳಿಗೆ ಹೋಲಿಸಿದರೆ ಈ ವರ್ಷ ವಲಸೆ ಪಕ್ಷಿಗಳ ಸಂಖ್ಯೆಯಲ್ಲಿ ಕಡಿಮೆಯಾಗಿದೆ. ವಲಸೆ ಹೊರಡುವ ಅವಧಿಯಲ್ಲಿಯೇ ಆಗಾಗ ಮಳೆ ಸುರಿದಿದೆ. ಇದು ಹಕ್ಕಿಗಳು ಮಾರ್ಗ ಬದಲಿಸಲು ಕಾರಣವಾಗಿರಬಹುದು’ ಎಂದು ಹೇಳುತ್ತಾರೆ.



ಅಂಕೋಲಾದ ರಾಷ್ಟ್ರೀಯ ಹೆದ್ದಾರಿ 66ರ ಹಾರವಾಡ ಕ್ರಾಸ್ ಬಳಿ ಡಿಸೆಂಬರ್‌ನಲ್ಲಿ ನಿತ್ರಾಣಗೊಂಡಂತೆ ಕಂಡುಬಂದ ಬಿಳಿ ರಣಹದ್ದಿನ ಮರಿಗೆ ಸ್ಥಳೀಯ ಯುವಕರು ಆರೈಕೆ ಮಾಡುತ್ತಿರುವುದು

ಇತ್ತ ಕಾರವಾರ ಸೇರಿ ಕರಾವಳಿಯ ವಿವಿಧ ಕಡಲತೀರಗಳಲ್ಲಿ ‘ಸೀಗಲ್’ಗಳ ಚಿನ್ನಾಟ ಆಕರ್ಷಿಸುತ್ತದೆ.

‘ಸೀಗಲ್’ಗಳು ಆಹಾರ ಹುಡುಕಿಕೊಂಡು, ಅವುಗಳಿಗೆ ಹೊಂದಾಣಿಕೆ ಆಗುವಂಥ ವಾತಾವರಣಕ್ಕೆ ವಲಸೆ ಬರುತ್ತವೆ. ಸಮುದ್ರದಲ್ಲಿ ಮೀನು ಕೊರತೆಯಾದರೆ ಅವು ಬರುವುದಿಲ್ಲ. ಈ ಬಾರಿ ಮೀನಿನ ಸಂತತಿ ಸ್ವಲ್ಪ ಸುಧಾರಿಸಿದೆ. ಇದರ ಪರಿಣಾಮ ಸೀಗಲ್‌ಗಳು ಹೆಚ್ಚು ಬಂದಿವೆ’ ಎಂದು ಕಾರವಾರದ ಕಡಲ ಜೀವವಿಜ್ಞಾನ ಅಧ್ಯಯನ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ.ಶಿವಕುಮಾರ ಹರಗಿ ವಿಶ್ಲೇಷಿಸುತ್ತಾರೆ.

ಮತ್ತೆ ಬಂದವು ರಣಹದ್ದುಗಳು!

ಕಾಳಿ ನದಿಯ ಸುತ್ತಮುತ್ತ ಕೆಲವು ವರ್ಷಗಳ ಹಿಂದಿನವರೆಗೆ ರಣಹದ್ದುಗಳು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತಿದ್ದವು. ಕಾಲಕ್ರಮೇಣ ಅವುಗಳು ನಾಪತ್ತೆಯಾದವು. ಈ ವರ್ಷ ಮತ್ತೆ ಕಾಣಿಸಿಕೊಂಡಿದ್ದು, ಪಕ್ಷಿ ವೀಕ್ಷಕರ ಸಂತಸ ಇಮ್ಮಡಿಗೊಳಿಸಿದೆ.

‘ಕೈಗಾ ಬರ್ಡರ್ಸ್’ ತಂಡವು ಸ್ಥಳೀಯ ವಲಸಿಗ ಬಿಳಿ ರಣಹದ್ದು (ಈಜಿಪ್ಷಿಯನ್ ವಲ್ಚರ್) ಹಾಗೂ ಹಿಮಾಲಯದ ದೊಡ್ಡ ರಣಹದ್ದು (ಹಿಮಾಲಯನ್ ಗ್ರಿಫೋನ್ ವಲ್ಚರ್) ಇರುವಿಕೆಯನ್ನು ಡಿಸೆಂಬರ್‌ನಲ್ಲಿ ಗುರುತಿಸಿದೆ. ರಣಹದ್ದುಗಳು 2016ರ ನಂತರ ಈ ವರ್ಷವೇ ಕಂಡುಬಂದಿವೆ.

ಅಲ್ಲದೇ ಉತ್ತರ ಯುರೋಪ್, ಸೈಬೀರಿಯಾ, ಫಿನ್ಲೆಂಡ್, ಮೆಡಿಟರೇನಿಯನ್ ಸಮುದ್ರ, ಟಿಬೆಟ್ ಹಾಗೂ ಲಡಾಖ್‌ಗಳಿಂದ ಬಂದಿರುವ ಹಕ್ಕಿಗಳನ್ನೂ ತಂಡ ಗುರುತಿಸಿದೆ.

ಅತ್ತಿವೇರಿಯಲ್ಲಿ ಈ ವರ್ಷ ಇರುವ ಪಕ್ಷಿಗಳು:
ಬ್ಲ್ಯಾಕ್ ಹೆಡೆಡ್ ಐಬೀಸ್, ಯುರೇಸಿಯನ್ ಸ್ಪೂನ್‌ಬಿಲ್, ರಿವರ್ಟನ್, ಮಲಬಾರ್ ಪೈಡ್ ಹಾರ್ನ್‌ಬಿಲ್, ಕಾರ್ಮೋರಂಟ್ಸ್, ಇಗ್ರೆಟ್ಸ್, ಏಷ್ಯನ್ ಓಪನ್ ಬಿಲ್ಡ್ ಸ್ಟಾರ್ಕ್, ಸ್ಯಾಂಡ್ ಪೈಪರ್ (ಕಾಮನ್ ಮತ್ತು ಗ್ರೀನ್ ಸ್ಯಾಂಡ್ ಪೈಪರ್), ಓರಿಯೆಂಟೆಡ್ ಡಾರ್ಟರ್, ಪರ್ಪಲ್ ಹೆರಾನ್, ಗ್ರೇ ಹೆರಾನ್, ಸ್ಪಾಟ್ ಬಿಲ್ಡ್ ಡಕ್, ಇಂಡಿಯನ್ ಗ್ರೇ ಹಾರ್ನ್‌ಬಿಲ್, ಫಾರೆಸ್ಟ್ ಮತ್ತು ವೈಟ್ ವಾಗ್ಟೇಲ್, ಮಾರ್ಶ್ ಹ್ಯಾರಿಯರ್, ಗ್ರೇಟ್ ಟಿಟ್.

ಕಾಳಿ ನದಿ ಸುತ್ತ ಕಂಡುಬಂದವು:
ಕಿತ್ತಳೆಕಾಲಿನ ಕಡಲಹಕ್ಕಿ, ನೀಲಕತ್ತಿನ ಉಲ್ಲಂಕಿ, ಕಡಲ ಉಲ್ಲಂಕಿ, ಬೂದುಬೆನ್ನಿನ ಕಡಲಕ್ಕಿ, ಕೆಂಪುಕಾಲಿನ ಚಾಣ , ಪಟ್ಟೆರೆಕ್ಕೆಯ ಸೆಳೆವ, ಪಟ್ಟೆ ತಲೆ ಹೆಬ್ಬಾತು ಹಾಗೂ ಬಿಳಿಕತ್ತಿನ ಉಲಿಯಕ್ಕಿ.

ಗುಂಡಣ್ಣ



ಬಾರದ ವಲಸೆ ಪಕ್ಷಿಗಳು

ಒಂದನೇ ಪುಟದಿಂದ...

‘ಮೂರು ವರ್ಷಗಳಿಂದ ಚಳಿಗಾಲದಲ್ಲಿ ಡ್ಯಾಂ ನೀರು (ಹಿನ್ನೀರು) ಹಿಂದಕ್ಕೆ ಸರಿದಿಲ್ಲ. ಹೀಗಾಗಿ ಫ್ಲೆಮಿಂಗೊ ಮಾತ್ರವಲ್ಲ ವಲಸೆ ಪಕ್ಷಿಗಳ್ಯಾವೂ ಹಿಂದಿನಂತೆ ದೊಡ್ಡ ಸಂಖ್ಯೆಯಲ್ಲಿ ಕಾಣಸಿಗುತ್ತಿಲ್ಲ’ ಎನ್ನುತ್ತಾರೆ ಸ್ವತಃ ಪಕ್ಷಿ ವೀಕ್ಷಕರೂ ಆದ ಬೀಳಗಿ ವಲಯ ಅರಣ್ಯಾಧಿಕಾರಿ ಹಣಮಂತ ಡೋಣಿ.

‘ಕಳೆದ ವರ್ಷ ಡಿಸೆಂಬರ್ 8ಕ್ಕೆ ಫ್ಲೆಮಿಂಗೊ ಹಿನ್ನೀರಿನಲ್ಲಿ ಕಾಣಸಿಕ್ಕಿದ್ದವು. ಈ ವರ್ಷ ಬಹುತೇಕ ಒಂದು ತಿಂಗಳು (ನ.8) ಮೊದಲೇ ಕಾಣಸಿಕ್ಕರೂ ನಂತರ ದೊಡ್ಡ ಪ್ರಮಾಣದಲ್ಲಿ ಅವುಗಳ ಚಲನವಲನ ಕಂಡು ಬಂದಿಲ್ಲ’ ಎನ್ನುತ್ತಾರೆ.

ಆಲಮಟ್ಟಿ ಜಲಾಶಯದಿಂದ ನವೆಂಬರ್ ಮೊದಲ ವಾರ ಕಾಲುವೆಗೆ ನೀರು ಹರಿಸಲಾಯಿತು. ಈ ವೇಳೆ ನೀರಿನ ಸಂಗ್ರಹ 517 ಮೀಟರ್‌ಗೆ ಇಳಿದಿತ್ತು. ಆದರೆ ನವೆಂಬರ್ ಕೊನೆ, ಡಿಸೆಂಬರ್‌ನಲ್ಲಿ ಮಳೆ ಹೆಚ್ಚಾಗಿ ಮತ್ತೆ ಜಲಾಶಯದಲ್ಲಿ 519 ಮೀಟರ್‌ಗೆ ನೀರು ಸಂಗ್ರಹವಾಗಿದೆ. ಇದರಿಂದ ಹೊರಗಿನಿಂದ ಬಂದ ಅತಿಥಿಗಳಿಗೆ ಆಹಾರ ಸಂಗ್ರಹಕ್ಕೆ ಅಡಚಣೆಯಾಯಿತು. ಹಿನ್ನೀರ ಪಾತ್ರದಲ್ಲಿ ನೀರು ಕಡಿಮೆಯಾಗಿ ಕೆಸರು ತುಂಬಿದ್ದರೆ ಪಕ್ಷಿಗಳ ವಾಸಕ್ಕೆ, ಹುಳು-ಹುಪ್ಪಟೆಗಳ ಭೂರಿ ಭೋಜನಕ್ಕೆ ಅನುಕೂಲ. ಅದೇ ನೀರು ತುಂಬಿಕೊಂಡರೆ ಆಹಾರದ ಕೊರತೆ. ಈ ಅಡಚಣೆಯಿಂದ ಅವು ಬೇರೆ ಕಡೆ ಹೋಗಿರಬಹುದು. ವಾತಾವರಣದಲ್ಲಿನ ಬದಲಾವಣೆಯಿಂದ ಕಳೆದ ನಾಲ್ಕು ವರ್ಷಗಳಿಂದ ಇದೇ ಪರಿಸ್ಥಿತಿ ಪುನರಾವರ್ತನೆ ಆಗುತ್ತಿದೆ. ವಲಸೆ ಹಕ್ಕಿಗಳ ಸಂಖ್ಯೆಯೂ ಕಡಿಮೆ ಆಗುತ್ತಿದೆ.

‘2017ರಲ್ಲಿ 10 ಸಾವಿರಕ್ಕೂ ಹೆಚ್ಚು ಫ್ಲೆಮಿಂಗೊ ಇಲ್ಲಿಗೆ ಬಂದಿರುವುದನ್ನು ಅರಣ್ಯ ಇಲಾಖೆಯ ಮೂಲಕ ದಾಖಲಿಸಿದ್ದೇವೆ. ಈಗ 300ರಷ್ಟು ಕಾಣಸಿಗುತ್ತಿವೆ. ಈ ಬಗ್ಗೆ ಹೆಚ್ಚಿನ ಅಧ್ಯಯನ ಅಗತ್ಯವಿದೆ’ ಎನ್ನುವ ಅಭಿಪ್ರಾಯ ಡೋಣಿ ಅವರದು.

ಬೋನಾಳಕ್ಕೂ ಬಾರದ ಪಕ್ಷಿಗಳು

ಒಂದನೇ ಪುಟದಿಂದ...

‘ಅತಿ ಹೆಚ್ಚು ಮೊಬೈಲ್ ಟವರ್‌ಗಳ ಬಳಕೆ, ಪ್ರವಾಸೋದ್ಯಮ ಇಲಾಖೆ ಮತ್ತು ಅರಣ್ಯ ಇಲಾಖೆ ನಿರ್ಲಕ್ಷ್ಯದಿಂದ ಪಕ್ಷಿಗಳು ಮೊದಲಿನಂತೆ ಸಂತಾನೋತ್ಪತ್ತಿಗಾಗಿ ಬರುತ್ತಿಲ್ಲ. ಅಲ್ಲದೇ ಕೆರೆಯ ಸುತ್ತಮುತ್ತ ಭತ್ತದ ಗದ್ದೆಗಳಿದ್ದು, ರಾಸಾಯನಿಕ ಬಳಕೆಯೂ ಸಹ ಪಕ್ಷಿಗಳು ಬಾರದಿರಲು ಕಾರಣವಾಗಿದೆ’ ಎಂದು ಗ್ರಾಮಸ್ಥರಾದ ರಾಹುಲ್ ಹುಲಿಮನಿ, ಕ್ಷೀರಲಿಂಗಯ್ಯ ಹಿರೇಮಠ, ಬಸವರಾಜ ಕಟ್ಟಿಮನಿ ಹೇಳುತ್ತಾರೆ.

ಮಾಹಿತಿ: ಬಿ.ಜಿ. ಪ್ರವೀಣಕುಮಾರ್ (ಯಾದಗಿರಿ)

ಪಕ್ಷಿ ಸಂರಕ್ಷಣಾ ಪ್ರದೇಶ

ಆಲಮಟ್ಟಿ ಹಿನ್ನೀರಿಗೆ ಎಲ್ಲಿಂದಲೋ ಬರುವ ಈ ದೇವದೂತರ (ವಲಸೆ ಹಕ್ಕಿಗಳು) ರಕ್ಷಣೆಗೆ ಅರಣ್ಯ ಇಲಾಖೆ ಟೊಂಕ ಕಟ್ಟಿ ನಿಂತಿದೆ. ಇಡೀ ಪ್ರದೇಶವನ್ನು ಪಕ್ಷಿ ಸಂರಕ್ಷಣಾ ಪ್ರದೇಶ ಎಂದು ಗುರುತಿಸಿ ಬೇಟೆ ನಿಷೇಧಿಸಿದೆ. ಚಳಿಗಾಲದಲ್ಲಿ ಹಿನ್ನಿರು ಪ್ರದೇಶದಲ್ಲಿ ಪಕ್ಷಿಗಳ ಚಲನವಲನ ಅರಿಯಲು, ಅವುಗಳಿಗೆ ರಕ್ಷಣೆ ನೀಡಲು ಸಿಬ್ಬಂದಿ ನಿಯೋಜಿಸುತ್ತಿದೆ.

25 ವರ್ಷಗಳ ಹಿಂದೆ

ಗುರುವಾರ, 30-1-1997

• **ಆಲಮಟ್ಟಿ ಕಾಮಗಾರಿ ನಿಲ್ಲದು– ಜೆ.ಎಚ್. ಪಟೇಲ್**

ನವದೆಹಲಿ, ಜ. 29– ಆಲಮಟ್ಟಿ ಅಣೆಕಟ್ಟು ಎತ್ತರದ ವಿವಾದ ಕುರಿತಂತೆ ಸಂಯುಕ್ತ ರಂಗದ ನಾಲ್ವರು ಮುಖ್ಯಮಂತ್ರಿಗಳು ನೇಮಕ ಮಾಡಿರುವ ತಜ್ಞರ ಸಮಿತಿಗೆ ಯಾವುದೇ ರೀತಿಯ ಶಾಸನಬದ್ಧ ಪಾವಿತ್ರ್ಯತೆ ಇಲ್ಲದಿರುವುದರಿಂದ ಅದನ್ನು ಯಾವುದೇ ರಾಜ್ಯವು ಕಡ್ಡಾಯವಾಗಿ ಪಾಲಿಸಬೇಕಾದ ಅವಶ್ಯಕತೆಯೂ ಕಂಡು ಬರುವುದಿಲ್ಲ ಎಂದು ಕರ್ನಾಟಕದ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಇಂದು ಸ್ಪಷ್ಟವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ರಾಜ್ಯವು ಬಚಾವತ್ ಆಯೋಗದ ವರದಿಯನ್ನು ಉಲ್ಲಂಘಿಸಿಲ್ಲ. ಹಾಗಾಗಿ ಆಲಮಟ್ಟಿ ಅಣೆಕಟ್ಟು ಕಾಮಗಾರಿ ಮುಂದುವರಿಸಲಾಗುವುದು ಎಂದರು.

50 ವರ್ಷಗಳ ಹಿಂದೆ

ಭಾನುವಾರ, 30-1-1972

• **ವರ್ಣ ಮತ್ತು ಜನಾಂಗ ಭೇದ ಶಕ್ತಿಗಳ ಮೂಲೋತ್ಪಾಟನೆ: ಭದ್ರತಾ ಸಮಿತಿಗೆ ಭಾರತದ ಪ್ರಧಾನಿ ಇಂದಿರಾ ಗಾಂಧಿ ಕರೆ**


ಅಡಿಸ್ ಅಬಾಬಾ, ಜ. 29– ಪ್ರಧಾನಿ ಇಂದಿರಾ ಗಾಂಧಿ ಅವರು ಭದ್ರತಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರಿಗೆ ಶುಭಾಶಯಗಳನ್ನು ಕೋರಿ ಭದ್ರತಾ ಸಮಿತಿ ಸಭೆಯು ವಸಾಹತು ಷಾಹಿ, ವರ್ಣಭೇದ ಮತ್ತು ಜನಾಂಗ ಭೇದ ಶಕ್ತಿಗಳನ್ನು ದಮನ ಮಾಡುವುದೇ ಅಲ್ಲದೆ ಮೂಲೋತ್ಪಾಟನೆ ಮಾಡಲು ಕ್ರಮಗಳನ್ನು ಕೈಗೊಳ್ಳಲಿ ಎಂದು ಆಶಿಸಿದ್ದಾರೆ. ‘ಭದ್ರತಾ ಸಮಿತಿಯ ಸದಸ್ಯ ರಾಷ್ಟ್ರವಾಗಿರುವ ಭಾರತವು ದಮನಕ್ಕೆ ಒಳಗಾಗಿರುವವರ ಸ್ವಾತಂತ್ರ್ಯ, ಸಮಾನತೆ ಹಕ್ಕುಗಳನ್ನು ಬೆಂಬಲಿಸಲಿದೆ’ ಎಂದೂ ಪ್ರಧಾನಿ ತಿಳಿಸಿದ್ದಾರೆ.

ಪದಬಂಧ 4854

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಜದಲ್ಲೇ ಮುಳುಗಿದ ಚಕ್ರವರ್ತಿ! (4)
3. ಆದಾಯ ಮತ್ತು ಖರ್ಚು (4)
5.ಉಚಿತವಲ್ಲ! ಇದು ನಿಶ್ಚಿತವಾದುದು! (3)
6.ದಿಗಂತ ರೇಖೆ (3)
8.ಅಳೆಯುವಿಕೆಯನ್ನು ಹೀಗೆ ಹೇಳಿ (3)
9.ಅವನಿರುವ ಭೂಮಿ! (3)
10.ಜಗಳಕ್ಕೊಂದು ಪರ್ಯಾಯ ಪದ (3)
12.ಜೈನರ ದೇವಾಲಯ (3)
14.ಹೊಸತನದ ಕಾಲ (4)
15. ಸರ ಧರಿಸಿ ಮಾಡಿದ ವ್ಯಾಯಾಮ! (4)

ಮೇಲಿಂದ ಕೆಳಕ್ಕೆ
1.ಆತ್ಮ ಸಾಕ್ಷಿಯಿದು (4)
2.ನಿಜವಾಗಿಯೂ ಖನಿಯಲ್ಲಿ ಸಿಕ್ಕಿದ್ದು ಉಲ್ಟಾ ಕಾಣುತ್ತಿದೆ! (3)
3.ಆಮದನ್ನು ಹೀಗೂ ಹೇಳುವರು (3)
4.ಒಡೆಯ ಇಲ್ಲಿದ್ದಾನೆ (4)
7.ಜನರ ಹತ್ತಿರವಿರುವ ತಾಯಿ (3)
8.ಮತ್ತು ಬರಿಸುವಂತದ್ದು (3)
9.ಅಂತ್ಯ ಹೀಗೆ ಬಂದಿದೆ (4)
11.ಕತ್ತು ಕೊನೆಗಿಟ್ಟು ಹೂಡಿದ ಸಂಚು! (4)
12.ನೆಂಟರ ಸಮೂಹ (3)
13.ತಾರೀಕನ್ನು ಹೀಗೆ ಹೇಳಿ (3)



4853ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಬೆಪ್ಪುತಕ್ಕಡಿ 4.ಸನಿಹ 5.ನಾಸಿಕ 9.ಗಣ್ಯ 10.ವಲ್ಮೀಕ 11.ತಾತಾ 12.ನಧಾನಿ 15.ಜವಾನ 16.ಮುದ್ರಣಾಲಯ

ಮೇಲಿಂದ ಕೆಳಕ್ಕೆ:
1.ಅಂತರ 2.ಬೆಹ 3.ನಾಡಿ 4.ಸಹಗಮನ 6.ಕರತಾಡನ 7.ಶ್ರವಣ 8.ಶಕಟ 13.ನಿಮು 14.ಪ್ರಣಾಮ 15.ಜಯ

ಸುಡೊಕು 5240

	6			9				8
1			8			5		2
		2		6				
		7			9	6		
4	2			3			5	9
6			7		8			
2		5	4		7	9		6
								5
9		6	3		5		4	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5239 ಸುಡೊಕು

8	7	3	2	1	9	4	6	5
6	2	9	4	5	8	7	1	3
4	1	5	6	7	3	9	2	8
5	4	2	7	9	6	8	3	1
3	6	7	8	4	1	5	9	2
1	9	8	3	2	5	6	4	7
9	8	1	5	6	2	3	7	4
2	3	4	9	8	7	1	5	6
7	5	6	1	3	4	2	8	9

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಬದಲಾವಣೆ ತಂದ ಕೃಷಿ ಇಲಾಖೆಯ ಮಹತ್ತರ ಹೆಜ್ಜೆಗಳು

ಅನ್ನದಾತನ ಬದುಕಿಗೆ ಚೈತನ್ಯ ತಂದ ಸಂಜೀವಿನಿ

ಆದಾಯ ದ್ವಿಗುಣಗೊಳಿಸುವ ಯೋಜನೆಗಳು ನಾಡಿನ ಅನ್ನದಾತರ ಆತ್ಮಸ್ಥೈರ್ಯವನ್ನು ಹೆಚ್ಚಿಸಿದೆ. ಕಾಯಕ ಜೀವಿಗಳ ಬದುಕು ಹಸನು ಮಾಡುವ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರದ ಪ್ರಯತ್ನಗಳು ಯಶಸ್ಸಿನ ಮಾರ್ಗದಲ್ಲಿ ಸಾಗಿವೆ. ಅನ್ನದಾತರ ಕಷ್ಟ–ಸುಖಗಳನ್ನು ಅರಿತಿರುವ ಮತ್ತು ಸ್ವತಃ ಗ್ರಾಮೀಣ ಪ್ರದೇಶದ ಹಿನ್ನೆಲೆಯ ಕೃಷಿ ಸಚಿವ ಬಿ.ಸಿ. ಪಾಟೀಲ್ ಅವರು ಇಲಾಖೆಗೆ ನವ ಸ್ಪರ್ಶ ನೀಡಿ ಮುನ್ನಡೆಸುತ್ತಿದ್ದರೆ.

ಆತ್ಮವಿಶ್ವಾಸ ವೃದ್ಧಿಸುವ ಯೋಜನೆಗಳು ಕೃಷಿಕರ ಬದುಕಿಗೆ ಸಂಜೀವಿನಿಯಾಗಿವೆ. ಇಡೀ ಕೃಷಿಕರ ಕುಟುಂಬಗಳಿಗೆ ರೂಪಿಸಿದ ಚೈತನ್ಯ ಮೂಡಿಸುವ ಯೋಜನೆಗಳಿಂದ ಅವರ ಮೊಗದಲ್ಲಿ ಮಂದಹಾಸ ಮೂಡುತ್ತಿದೆ.

ಅನ್ನದಾತೋ ಸುಖೀಭವ ಎಂಬ ಮಾತಿದೆ. ಇದರಂತೆ ಅನ್ನದಾತರನ್ನು ಸುಖವಾಗಿಡಲು ರಾಜ್ಯ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಕೂಡಲೇ ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ರಾಜ್ಯದ ಆರು ಕೃಷಿ ಹಾಗೂ ಕೃಷಿಗೆ ಸಂಬಂಧಿಸಿದ ವಿಶ್ವವಿದ್ಯಾಲಯಗಳಲ್ಲಿ ಕೃಷಿ ಪದವಿ ವ್ಯಾಸಂಗ ಮಾಡಲು ಮುಂದೆ ಬರುವ ರೈತರ ಮಕ್ಕಳಿಗೆ ಶೇ 40ರಿಂದ ಶೇ 50ರಷ್ಟು ಮೀಸಲಾತಿ ಹೆಚ್ಚಿಸಿದರು. ಆ ಮೂಲಕ ರೈತರ ಪರವಾದ ತಮ್ಮ ಕಾಳಜಿಯನ್ನು ಮುಖ್ಯಮಂತ್ರಿ ಮೆರೆದಿದ್ದಾರೆ. ರೈತರ ಭೂಮಿಗೆ ನೀರು ಹರಿಸಲು ಜಲಾನಯನ ಯೋಜನೆಗಳಿಗೆ ಈ ಸರ್ಕಾರ ಇನ್ನಿಲ್ಲದ ಕೊಡುಗೆ ನೀಡುತ್ತಿದೆ. ಇವೆಲ್ಲವೂ ಅನ್ನದಾತರ ಬಗ್ಗೆ ರಾಜ್ಯ ಸರ್ಕಾರಕ್ಕೆ ಇರುವ ಕಾಳಜಿಗೆ ಸಾಕ್ಷಿಯಾಗಿವೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್



ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ

- ರೈತರಿಗೆ ಬಲತುಂಬಲು ರಾಜ್ಯ ಸರ್ಕಾರ ಕೇಂದ್ರದ ಆತ್ಮನಿರ್ಭರ ಭಾರತ ಅಭಿಯಾನದ ಅಂಗವಾಗಿ ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ (ಪಿಎಂಎಫ್ಎಂಇ) ಯೋಜನೆಗೆ ಸಹಾಯ ಧನವನ್ನು ಹೆಚ್ಚಿಸಿ ಆದೇಶ ಹೊರಡಿಸಿದೆ.
- ‘ಪಿಎಂಎಫ್ಎಂಇ’ ಯೋಜನೆಗೆ ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಶೇ 35 ರಷ್ಟು ಅನುದಾನ ಒದಗಿಸಿತ್ತು. ಇದೀಗ ಸರ್ಕಾರ ರೈತರ ಅನುಕೂಲಕ್ಕಾಗಿ ಶೇ15 ರಷ್ಟು ಹೆಚ್ಚಿನ ಸಹಾಯಧನ ನೀಡಿದ್ದು, ಈಗ ಪಿಎಂಎಫ್ಎಂಇ ಯೋಜನೆಯ ಸಹಾಯಧನ ಶೇ 50 ರಷ್ಟಾಗಿದೆ.
- ಪ್ರಧಾನ ಮಂತ್ರಿಗಳ ಆಹಾರ ಸಂಸ್ಕರಣೆ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ ಹಾಗೂ ಇತರ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರ ಶೇ35 ರಷ್ಟನ್ನು ಒದಗಿಸಿತ್ತು. ಕಳೆದ ಬಾರಿ ಆಯವ್ಯಯದಲ್ಲಿ ಘೋಷಿಸಿದಂತೆ ರಾಜ್ಯ ಸರ್ಕಾರ ಶೇ15 ರಷ್ಟು ಸಹಾಯಧನ ನೀಡಿದ್ದು, ಈಗ ಸಹಾಯಧನ ಶೇ50ಕ್ಕೆ ಹೆಚ್ಚಿದೆ.

ಉತ್ಕೃಷ್ಟ ಕೇಂದ್ರ

ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಸಂಸ್ಥೆ ಆವರಣದಲ್ಲಿ ವೈಜ್ಞಾನಿಕವಾಗಿ ಜಲಾನಯನ ನಿರ್ವಹಣೆ ಕುರಿತು ಅಧ್ಯಯನ ಕೈಗೊಳ್ಳಲು ಹಾಗೂ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ತರಬೇತಿಗಳನ್ನು ಆಯೋಜಿಸಲು ಅತ್ಯುನ್ನತ ಮಟ್ಟದ ಉತ್ಕೃಷ್ಟ ಕೇಂದ್ರ ಸ್ಥಾಪಿಸಿರುವುದು ಭಾರತ ದೇಶದಲ್ಲಿಯೇ ಪ್ರಥಮವಾಗಿದೆ.

‘ನನ್ನ ಬೆಳೆ ನನ್ನ ಹಕ್ಕು’ ಸಮೀಕ್ಷೆ ರಾಷ್ಟ್ರಕ್ಕೆ ಮಾದರಿ

- 2021-22ನೇ ಸಾಲಿನಲ್ಲಿ ರೈತರ ಮೊಬೈಲ್ ಆ್ಯಪ್ –‘ ನನ್ನ ಬೆಳೆ ನನ್ನ ಹಕ್ಕು‘ ಮೂಲಕ 16.84 ಲಕ್ಷ ಹಾಗೂ ಖಾಸಗಿ ನಿವಾಸಿಗಳ ಆ್ಯಪ್ ಮೂಲಕ 306.06 ಲಕ್ಷ ತಾಕುಗಳಂತೆ (ಪೂರ್ವ ಮುಂಗಾರು, ಮುಂಗಾರು, ಹಿಂಗಾರು ಒಳಗೊಂಡಂತೆ) ಒಟ್ಟು 322.91 ಲಕ್ಷ ತಾಕುಗಳ ಬೆಳೆ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ.
- ಬೆಳೆ ಸಮೀಕ್ಷೆ ವಿಶಿಷ್ಟ ಕಾರ್ಯಕ್ರಮ ದತ್ತಾಂಶವನ್ನು ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಬಳಸುತ್ತಿರುವ ಪ್ರಯುಕ್ತ ಕೇಂದ್ರ ಸರ್ಕಾರದ ಕೃಷಿ ಮಂತ್ರಾಲಯದಿಂದ ಪ್ರಶಂಸನಾ ಪತ್ರವನ್ನು ರಾಜ್ಯಕ್ಕೆ ನೀಡಲಾಗಿದ್ದು,ಇತರೆ ರಾಜ್ಯಗಳಿಗೆ ಕರ್ನಾಟಕ ರಾಜ್ಯವು ರಾಷ್ಟ್ರಕ್ಕೆ ಮಾದರಿಯಾಗಿದೆ.



ಬೆಳೆ ಸಮೀಕ್ಷೆಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಕೃಷಿ ಸಚಿವ ಬಿ.ಸಿ. ಪಾಟೀಲ್

ಕೃವಿ. ವಿ.ವಿ.ಗಳಲ್ಲಿ ರೈತರ ಮಕ್ಕಳಿಗೆ ಮೀಸಲಾತಿ

- ರಾಜ್ಯದ ಆರು ಕೃಷಿ, ಹಾಗೂ ಕೃಷಿಗೆ ಸಂಬಂಧಿಸಿದ ವಿಶ್ವವಿದ್ಯಾಲಯಗಳಲ್ಲಿ ಕೃಷಿ ಪದವಿ ವ್ಯಾಸಂಗ ಮಾಡಲು ರೈತರ ಮಕ್ಕಳಿಗೆ 2021-22ನೇ ಸಾಲಿನಿಂದ ಶೇ 40 ರಿಂದ ಶೇ50 ರಷ್ಟು ಮೀಸಲಾತಿ ಹೆಚ್ಚಿಸಲಾಗಿದೆ. ಇದರಿಂದ, ಹೆಚ್ಚುವರಿಯಾಗಿ ರೈತರ ಮಕ್ಕಳಿಗೆ 265 ಸೀಟುಗಳು ಲಭ್ಯವಾಗಿವೆ.
- ಆಸಕ್ತ ಕೃಷಿಕರ ಮಕ್ಕಳನ್ನು ಈ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಸೀಟುಗಳನ್ನು ಹೆಚ್ಚಿಸಿರುವುದು ಕೃಷಿಕರ ಅಭ್ಯುದಯಕ್ಕೆ ಪೂರಕವಾಗಲಿದೆ.

ಕೃಷಿಕರ ಪರ ಯೋಜನೆಗಳು

- **ಕೃಷಿಕ ಸಮಾಜದ ನೂತನ ಕಟ್ಟಡ ಲೋಕಾರ್ಪಣೆ:** ದೇಶದಲ್ಲಿಯೇ ಸ್ವತಂತ್ರವಾಗಿ ರೈತರ ಶ್ರೇಯೋಭಿವೃದ್ಧಿಗಾಗಿ ಸರ್ಕಾರದ ಹಾಗೂ ರೈತರ ಪರವಾಗಿ ಕಾರ್ಯ ನಿರ್ವಹಿಸುತ್ತಿರುವ ಏಕೈಕ ರೈತರ ಸೇವಾ ಸಂಸ್ಥೆಯಾದ ಕೃಷಿಕ ಸಮಾಜದ ನೂತನ ಕಟ್ಟಡ ಸ್ಥಾಪಿಸಲಾಗಿದೆ.
- ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ ಅಡಿ ಎಲ್ಲ ವರ್ಗದ ರೈತರಿಗೆ ಎರಡು ಹೆಕ್ಟೇರ್ ಪ್ರದೇಶದವರೆಗೆ ತುಂತುರು ನೀರಾವರಿ ಘಟಕಗಳನ್ನು ಅಳವಡಿಸಲು ಶೇ 90 ರಷ್ಟು ಸಹಾಯಧನ ಕಲ್ಪಿಸಲಾಗಿದೆ.



ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವ ’ಮುಖ್ಯಮಂತ್ರಿ ರೈತ ವಿದ್ಯಾ ನಿಧಿ‘ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕೃಷಿ ಸಚಿವ ಬಿ.ಸಿ. ಪಾಟೀಲ ಅವರು ಚಾಲನೆ ನೀಡಿದ ಸಂದರ್ಭ

ಮುಖ್ಯಮಂತ್ರಿ ರೈತ ವಿದ್ಯಾನಿಧಿ

ಕರ್ನಾಟಕ ರಾಜ್ಯದ ರೈತರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಲು ‘ಮುಖ್ಯಮಂತ್ರಿ ರೈತ ವಿದ್ಯಾನಿಧಿ’ ಕಾರ್ಯಕ್ರಮದಡಿ 2021-22 ನೇ ಸಾಲಿನಿಂದ ಎಸ್ಸೆಸ್ಸೆಲ್ಸಿ 10 ನೇ ತರಗತಿಯ ನಂತರ ಕರ್ನಾಟಕದ ಯಾವುದೇ ಅಧಿಕೃತವಾಗಿ ನೊಂದಣಿಯಾಗಿರುವ ಶಿಕ್ಷಣ ಸಂಸ್ಥೆ/ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಶಿಕ್ಷಣವರೆಗೆ ಪ್ರವೇಶ ಪಡೆದಿರುವ ರೈತರ ಮಕ್ಕಳಿಗೆ ಹಾಗೂ ಪ್ರೌಢಶಾಲಾ (8 ರಿಂದ 10 ನೇ ತರಗತಿವರೆಗೆ) ಶಿಕ್ಷಣ ಪಡೆಯುತ್ತಿರುವ ಹೆಣ್ಣುಮಕ್ಕಳಿಗೆ ವಿದ್ಯಾರ್ಥಿವೇತನವನ್ನು ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ (Direct Benefit Transfer-DBT) ಮುಖಾಂತರ ವರ್ಗಾಯಿಸಲಾಗುವುದು. ಈ ವರೆಗೆ 182302 ವಿದ್ಯಾರ್ಥಿನಿಯರಿಗೆ ₹3646.04 ಲಕ್ಷ ಹಾಗೂ 276087 ಪದವಿಪೂರ್ವ ಹಾಗೂ ಉನ್ನತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ₹7574.65 ಲಕ್ಷ ವಿದ್ಯಾರ್ಥಿ ವೇತನವನ್ನು ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾಯಿಸಲಾಗಿದೆ.

ಕೋವಿಡ್ ಸಂಕಷ್ಟದಲ್ಲೂ ಸ್ಪಂದನೆ

- ಕೋವಿಡ್ ನಿರ್ಭಂದಿತ ಸಮಯದಲ್ಲಿ ರಾಜ್ಯದ ನಾಲ್ಕು ಕೃಷಿ ವಿಶ್ವವಿದ್ಯಾಲಯಗಳಲ್ಲಿ ’ಅಗ್ರಿ ವಾರ್ ರೂಂ‘ಗಳನ್ನು ಪ್ರಾರಂಭಿಸಿ ರೈತರಿಂದ ನೇರವಾಗಿ ₹20 ಕೋಟಿ ಮೌಲ್ಯದ 9 ಸಾವಿರ ಟನ್ ಹಣ್ಣು ಮತ್ತು ತರಕಾರಿಯನ್ನು ಖರೀದಿಸಿ ಗ್ರಾಹಕರಿಗೆ ಒದಗಿಸಲಾಯಿತು. ಈ ಮೂಲಕ ಯಾವುದೇ ರೀತಿಯ ಸಂಕಷ್ಟಗಳು ಎದುರಾದರೂ ಸರ್ಕಾರ ಸ್ಪಂದಿಸುತ್ತದೆ ಎನ್ನುವ ಆತ್ಮವಿಶ್ವಾಸವವನ್ನು ಅನ್ನದಾತರಲ್ಲಿ ಮೂಡಿಸುವ ಕಾರ್ಯ ಕೈಗೊಳ್ಳಲಾಯಿತು.
- ಇಲ್ಲಿಯವರೆಗೆ ಸ್ನಾತಕ ಪದವಿಗಳಿಗೆ ರೈತರ ಮಕ್ಕಳಿಗೆ ಶೇ 40 ರಷ್ಟು ಸೀಟುಗಳ ಮೀಸಲಾತಿಯನ್ನು ಕಲ್ಪಿಸಲಾಗಿತ್ತು. ಪ್ರಸ್ತುತ 2021-22ನೇ ಶೈಕ್ಷಣಿಕ ವರ್ಷದಿಂದ ಈ ಮೀಸಲಾತಿಯ ಮಿತಿಯನ್ನು ಶೇ 40 ರಿಂದ ಶೇ 50 ಕ್ಕೆ ಹೆಚ್ಚಿಸಲಾಗಿದೆ.

ಇದಲ್ಲದೆ ವಿಶ್ವವಿದ್ಯಾಲಯದ ಪ್ರತಿ ವಿಜ್ಞಾನಿಗಳು 15 ದಿವಸಗಳಿಗೊಮ್ಮೆ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ನೂತನ ತಾಂತ್ರಿಕತೆಗಳನ್ನು ನೇರವಾಗಿ ರೈತರಿಗೆ ತಿಳಿಸುವಂತೆ ಆದೇಶ ನೀಡಲಾಗಿದೆ.

- ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ವಸತಿ ನಿಲಯಗಳ ಕೊರತೆಯನ್ನು ಗಮನಿಸಿ ಆರ್.ಐ.ಡಿ.ಎಫ್. ಯೋಜನೆಯಡಿಯಲ್ಲಿ ನಾಲ್ಕು ವಿಶ್ವವಿದ್ಯಾಲಯಗಳಿಗೆ ಒಟ್ಟು 45 ಕೋಟಿ ರೂಪಾಯಿಗಳ ಅನುದಾನವನ್ನು ವಿದ್ಯಾರ್ಥಿಗಳಗೆ ಮೂಲ ಸೌಕರ್ಯಗಳನ್ನು ನಿರ್ಮಿಸಲು ಒದಗಿಸಲಾಗಿದೆ. ಈ ಎಲ್ಲಾ ಕಾರಣಗಳಿಂದ 2020 ನೇ ಸಾಲಿಗೆ ಕೃಷಿ ಅನುದಾನ ಪರಿಷತ್ ಕೈಗೊಂಡ ರಾಷ್ಟ್ರದ 75 ಕೃಷಿ ವಿಶ್ವವಿದ್ಯಾಲಯಗಳ ಪೈಕಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು 6 ನೇ ರ್‍ಯಾಂಕ್, ಧಾರವಾಡ ಕೃಷಿ ವಿಶ್ವವಿದ್ಯಾಲಯವು 17 ನೇ ರ್‍ಯಾಂಕ್, ರಾಯಚೂರು ಕೃಷಿ ವಿಶ್ವವಿದ್ಯಾಲಯವು 25ನೇ ರ್‍ಯಾಂಕ್ ಹಾಗೂ ಶಿವಮೊಗ್ಗ ಕೃಷಿ ಹಾಗೂ ತೋಟಗಾರಿಕೆ ವಿಶ್ವವಿದ್ಯಾಲಯವು 35ನೇ ರ್‍ಯಾಂಕ್ ಪಡೆದು ರಾಷ್ಟ್ರದಲ್ಲಿ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಮುಂಚೂಣಿಯಲ್ಲಿವೆ.
- ರಾಜ್ಯದ ಕೃಷಿ ವಿಶ್ವವಿದ್ಯಾಲಗಳ ಮೂಲಕ ರೈತರಿಗೆ ಅನುಕೂಲವಾಗುವ ತಾಂತ್ರಿಕತೆಗಳನ್ನು ಅಭಿವೃದ್ದಿಪಡಿಸುವ ಬಗ್ಗೆ ಪರಿಶೀಲಿಸಲು ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ತೋಟಗಾರಿಕಾ ಸಚಿವರ ಉಪಾಧ್ಯಕ್ಷತೆಯಲ್ಲಿ ಕೃಷಿ ಹಾಗೂ ಕೃಷಿಗೆ ಸಂಬಂಧಿಸಿದ ವಿಶ್ವವಿದ್ಯಾಲಯಗಳ ಕುಲಪತಿಗಳು, ಕೃಷಿ ಪಂಡಿತ ಪ್ರಶಸ್ತಿ ಪಡೆದ ರೈತರ ಉನ್ನತಾಧಿಕಾರಿಗಳ ಸಮಿತಿಯನ್ನು ರಚಿಸಿ, ಸರ್ಕಾರ ಆದೇಶ ಹೊರಡಿಸಿದೆ.



ಕೃಷಿ ಸಂಜೀವಿನಿಯ ಮಣ್ಣಿನ ಪರೀಕ್ಷಾ ವಾಹನಗಳು

ಕೃಷಿ ಸಂಜೀವಿನಿ

- 2021-22 ಮತ್ತು 2022-23ನೇ ಸಾಲಿನಲ್ಲಿ 164 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳ ಸ್ಥಾಪನೆಗೆ ₹ 41 ಕೋಟಿ ವೆಚ್ಚದಲ್ಲಿ ಅಗತ್ಯವಿರುವ ವಾಹನ ಮತ್ತು ಉಪಕರಣಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.
- ಕೀಟ , ರೋಗ ಮತ್ತು ಕಳೆಗಳ ಬಾಧೆ ಹಾಗೂ ಮಣ್ಣಿನ ಪೋಷಕಾಂಶ ಕೊರತೆ ಹಾಗು ಸಮರ್ಪಕ ನಿರ್ವಹಣೆಗೆ ರೈತರ ತಾಕುಗಳಲ್ಲಿಯೇ ಹತೋಟಿ ಕ್ರಮಗಳ ಕುರಿತು ಮಾರ್ಗೋಪಾಯಗಳನ್ನು ಒದಗಿಸಲು ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ ಕೃಷಿ ಸಂಜೀವಿನಿ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.
- ಸಕಾಲದಲ್ಲಿ ಬೆಳೆಯ ಎಲ್ಲಾ ಹಂತಗಳಲ್ಲಿ ಸರ್ವೇಕ್ಷಣೆಯನ್ನು ಕೈಗೊಂಡು ಕೀಟ, ರೋಗ, ಕಳೆಗಳ ನಿರ್ವಹಣಾ ಮಾರ್ಗೋಪಾಯಗಳನ್ನು ರೈತರಿಗೆ ತಿಳಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಪಿ.ಎಂ.– ಕಿಸಾನ್ ಕರ್ನಾಟಕ ಯೋಜನೆಯ ಹಣ ಬಿಡುಗಡೆ

- ‘ಪ್ರಧಾನಮಂತ್ರಿ ಕಿಸಾನ್ ಕರ್ನಾಟಕ‘ ಯೋಜನೆ ಅಡಿ 2021-22 ರ ಸಾಲಿನ ದ್ವಿತೀಯ ಕಂತಿನ ಆರ್ಥಿಕ ನೆರವು ವರ್ಗಾವಣೆಗೆ ₹1007.18 ಕೋಟಿ ಅನುದಾನ ಬಿಡುಗಡೆಗೆ ಸರ್ಕಾರ ಆದೇಶ ಹೊರಡಿಸಿದೆ. ರೈತರ ಖಾತೆಗಳಿಗೆ ಆರ್ಥಿಕ ನೆರವು ವರ್ಗಾವಣೆಯ ಪ್ರಕ್ರಿಯೆ ಪ್ರಗತಿಯಲ್ಲಿದೆ.
- ಪಿ.ಎಂ.ಕಿಸಾನ್ (PMKISAN) ಯೋಜನೆಯಡಿ ಶೇ 97ರಷ್ಟು ರೈತರ ಆಧಾರ್ ಜೋಡಣೆ ಮಾಡಿ ದೇಶಕ್ಕೆ ಮಾದರಿಯಾಗಿರುವುದಕ್ಕೆ ಕರ್ನಾಟಕ ರಾಜ್ಯಕ್ಕೆ ಭಾರತ ಸರ್ಕಾರದಿಂದ ರಾಷ್ಟ್ರೀಯ ಪುರಸ್ಕಾರ ದೊರೆತಿದೆ.

‘ಸೆಕೆಂಡರಿ ಅಗ್ರಿಕಲ್ಚರ್’ ನಿರ್ದೇಶನಾಲಯ

ರೈತರ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಕೃಷಿ ಸಚಿವ ಬಿ.ಸಿ.ಪಾಟೀಲ ಅವರೊಂದಿಗೆ ಸಮಿತಿಯಲ್ಲಿ ಚರ್ಚಿಸಿ ನೀಡಿದ ಭರವಸೆಯಂತೆ ‘ಸೆಕೆಂಡರಿ ಅಗ್ರಿಕಲ್ಚರ್’ ನಿರ್ದೇಶನಾಲಯ ಸ್ಥಾಪಿಸಿ ಆದೇಶ ಹೊರಡಿಸಿದೆ. ಸ್ಥಳೀಯವಾಗಿ ಲಭ್ಯವಿರುವ ಕೃಷಿ ಮತ್ತು ಇತರ ಜೈವಿಕ ಸಂಪನ್ಮೂಲಗಳ ಪ್ರಾಥಮಿಕ ಉತ್ಪನ್ನ ಮತ್ತು ಉಪ ಉತ್ಪನ್ನಗಳನ್ನು ಕಚ್ಚಾ ವಸ್ತುವಾಗಿ ಬಳಸಿಕೊಂಡು ಸಂಸ್ಕರಣೆ, ಪ್ಯಾಕಿಂಗ್ ಹಾಗೂ ಸೂಕ್ತ ಬ್ರ್ಯಾಂಡ್ ಮೂಲಕ ಮಾರುಕಟ್ಟೆ ಕಲ್ಪಿಸಿ ರೈತರ ಆದಾಯ ದ್ವಿಗುಣಗೊಳಿಸುವುದು ಸೆಕೆಂಡರಿ ಅಗ್ರಿಕಲ್ಚರ್‌ನ ಉದ್ದೇಶವಾಗಿದೆ.

‘ಆರ್‌ಐಡಿಎಫ್–27’ ಯೋಜನೆ ಅಡಿ ಕಾಮಗಾರಿಗಳು

- 2021-22ನೇ ಸಾಲಿನಲ್ಲಿ ಆರ್‌ಐಡಿಎಫ್–27 ಯೋಜನೆಯಡಿ ಕೃಷಿ ಇಲಾಖೆಯ 42 ಕಾಮಗಾರಿಗಳನ್ನು ₹21825.50 ಲಕ್ಷ ವೆಚ್ಚದಡಿ ರೈತರಿಗೆ ಅನುಕೂಲವಾಗಲು ಕೊಯ್ಲೋತ್ತರ ಬೆಳೆ ಸಂರಕ್ಷಣೆಗಾಗಿ 13 ಶೀಥಲ ಘಟಕಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಸಮಗ್ರ ಕೃಷಿ ಪದ್ಧತಿಯ ಹೆಚ್ಚಳಕ್ಕಾಗಿ 23 ಉತ್ಕೃಷ್ಟ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ.



ಶಿಗ್ಗಾವಿ ತಾಲ್ಲೂಕಿನ ಬಂಕಾಪುರದ ರೈತ ವೆಂಕಟಸಿಂಗ್ ಟೊಪ್ಪಣ್ಣವರ ತಮ್ಮ ಹೊಲದಲ್ಲಿನ ಸೋಯಾಬಿನ್ ಬೆಳೆ ಸಮೀಕ್ಷೆ ಮಾಡಿದ ದೃಶ್ಯ



ಜಲಾನಯನ ಇಲಾಖೆ

- **ಅಮೃತ ರೈತ ಉತ್ಪಾದಕ ಸಂಸ್ಥೆಗಳು:** ಮುಖ್ಯಮಂತ್ರಿ ಅವರು 750 ಅಮೃತ ರೈತ, ಮೀನುಗಾರರ, ನೇಕಾರರ ಉತ್ಪಾದಕರ ಸಂಸ್ಥೆಗಳನ್ನು 3 ವರ್ಷಗಳಲ್ಲಿ ರಚಿಸುವುದಾಗಿ ಘೋಷಿಸಿದ್ದರು. ಇದರ ಅನ್ವಯ ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ 70 ರೈತ ಉತ್ಪಾದಕರ ಸಂಸ್ಥೆಗಳ ನೊಂದಣಿ ಗುರಿಗೆ 65 ಅನ್ನು ಗುರುತಿಸಿ ಅನುಷ್ಠಾನ ಮಾಡಲಾಗುತ್ತಿದೆ.
- **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ- ಜಲಾನಯನ ಅಭಿವೃದ್ದಿ ಘಟಕ-2.0:** ಈ ಯೋಜನೆಯಡಿ, ಕರ್ನಾಟಕ ರಾಜ್ಯಕ್ಕೆ 5 ವರ್ಷಗಳ ಅವಧಿಯಲ್ಲಿ ರಾಜ್ಯದ 57 ತಾಲ್ಲೂಕುಗಳ 57 ಉಪ ಜಲಾನಯನಗಳಲ್ಲಿ ₹642.26 ಕೋಟಿ ವೆಚ್ಚದಲ್ಲಿ ಅನುಷ್ಠಾನ ಮಾಡಲು ಅನುಮೋದನೆ ದೊರೆತಿದೆ.

ಇದರಿಂದ 2.75 ಲಕ್ಷ ಹೆಕ್ಟೇರ್ ಮಳೆಯಾಶ್ರಿತ ಪ್ರದೇಶವನ್ನು ಉಪಚರಿಸುವುದರ ಮೂಲಕ ಮಳೆ ನೀರು ಕೊಯ್ಲು ಕೈಗೊಳ್ಳುವುದು, ಮಣ್ಣಿನ ತೇವಾಂಶ ಸಂರಕ್ಷಿಸುವುದು, ಪರ್ಯಾಯ ಬೆಳೆ ವ್ಯವಸ್ಥೆಗಳು, ಕೃಷಿ ಅರಣ್ಯ ಮತ್ತು ಖುಷ್ಕಿ ತೋಟಗಾರಿಕೆಯ ಮೂಲಕ ಹವಾಮಾನ ವೈಪರೀತ್ಯ ಮತ್ತು ಬರಗಾಲದ ಅಪಾಯಗಳನ್ನು ಎದುರಿಸುವುದು, ಅಂತರ್ಜಲ ಮಟ್ಟ ಹೆಚ್ಚಳ, ಆಸ್ತಿ ರಹಿತರಿಗೆ ಸ್ವ ಸಹಾಯ ಗುಂಪುಗಳನ್ನು ರಚಿಸಿ ಉತ್ತೇಜಿಸುವುದು, ರೈತ ಉತ್ಪಾದಕರ ಸಂಸ್ಥೆ (FPO)ಗಳನ್ನು ರಚಿಸುವುದು, ಅಂಗವಿಕಲರು ಮತ್ತು ಮಹಿಳೆಯರಿಗೆ ಅಭಿವೃದ್ಧಿಪಡಿಸಿದ ಭೂಮಿ, ನೀರು ಮತ್ತು ಸಂಪನ್ಮೂಲಗಳ ಹಂಚಿಕೆಯಲ್ಲಿ ಸಮಾನ ಅವಕಾಶ ಕಲ್ಪಿಸಲಾಗುವುದು

- **ಕೃಷಿ ಸುಸ್ಥಿರತೆಗೆ ಜಲಾನಯನ ಪ್ರದೇಶದ ಪುನಶ್ಚೇತನ (ಆರ್‌ಇಡಬ್ಲ್ಯುಎಆರ್‌ಡಿ):** ವಿಶ್ವಬ್ಯಾಂಕ್ ನೆರವಿನ ಆರ್‌ಇಡಬ್ಲ್ಯುಎಆರ್‌ಡಿ (ಕೃಷಿಯ ಸುಸ್ಥಿರತೆಗಾಗಿ ನವೀನ ಅಭಿವೃದ್ಧಿಯ ಮೂಲಕ ಜಲಾನಯನ ಪ್ರದೇಶಗಳನ್ನು ಪುನಶ್ಚೇತನಗೊಳಿಸುವುದು– ರಿವಾರ್ಡ್) ಯೋಜನೆಯಿಂದ ಕೃಷಿ ಕ್ಷೇತ್ರದಲ್ಲಿ ಹಲವು ಬದಲಾವಣೆಗಳಾಗುತ್ತಿವೆ.
- ಸುಜಲ-III ಯೋಜನೆ ಮಾದರಿಯಲ್ಲಿ ವಿಶ್ವಬ್ಯಾಂಕ್ ಅನುದಾನದ ನೆರವಿನ ಹೊಸ ‘ರಿವಾರ್ಡ್’ ಯೋಜನೆಯನ್ನು ರಾಜ್ಯದ 21 ಜಿಲ್ಲೆಗಳಲ್ಲಿ ಮುಂದಿನ 5 ವರ್ಷಗಳಲ್ಲಿ ₹600 ಕೋಟಿ ವೆಚ್ಚದಲ್ಲಿ ಯೋಜನೆ ಅನುಷ್ಠಾನ ಮಾಡಲಾಗುತ್ತದೆ (ರಾಜ್ಯದ ಪಾಲು- ಶೇ30 ಹಾಗೂ ವಿಶ್ವಬ್ಯಾಂಕ್ ನೆರವು- ಶೇ70 ರಂತೆ)



- ಕರ್ನಾಟಕ ರಾಜ್ಯವನ್ನು ಇತರೆ ರಾಜ್ಯಗಳಿಗೆ ತಾಂತ್ರಿಕ ಸಹಯೋಗ ನೀಡಲು ಮುಂಚೂಣಿ ರಾಜ್ಯವಾಗಿ ಗುರುತಿಸಿರುವುದು ಕರ್ನಾಟಕದ ಹೆಮ್ಮೆ.

9 ಎಕರೆ 38 ಗುಂಟೆ ಸರ್ಕಾರಿ ಜಾಗದ ಒತ್ತುವರಿ ತೆರವು

ಬೆಂಗಳೂರು: ನಗರದ ಐದು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ಒಟ್ಟು 9 ಎಕರೆ 38 ಗುಂಟೆ ಜಾಗವನ್ನು ಜಿಲ್ಲಾಡಳಿತ ಶನಿವಾರ ಮತ್ತೆ ಸರ್ಕಾರದ ವಶಕ್ಕೆ ಪಡೆದಿದೆ. ಇದರ ಮೌಲ್ಯ ₹ 13.52 ಕೋಟಿ ಎಂದು ಅಂದಾಜಿಸಲಾಗಿದೆ.

ನಗರ ಜಿಲ್ಲಾಡಳಿತದ ಅಧಿಕಾರಿಗಳು ಜಿಲ್ಲಾಧಿಕಾರಿ ಜೆ. ಮಂಜುನಾಥ್ ನೇತೃತ್ವದಲ್ಲಿ ತೆರವು ಕಾರ್ಯಾಚರಣೆ ಕೈಗೊಂಡರು. ಕೆರೆ, ಗೋಮಾಳ, ಸ್ಮಶಾನ, ರಾಜಕಾಲುವೆಗಳ ಒತ್ತುವರಿಯನ್ನು ತೆರವುಗೊಳಿಸಿ ಸರ್ಕಾರದ ಸ್ವಾಧೀನಕ್ಕೆ ಪಡೆದರು.

ಎಂಟು ಕೆರೆಗಳ ಜಾಗವನ್ನು ಕೆಲವರು ಒತ್ತುವರಿ ಮಾಡಿದ್ದರು. ಅವುಗಳನ್ನು ತೆರವುಗೊಳಿಸಲಾಯಿತು ಎಂದು ಜಿಲ್ಲಾಧಿಕಾರಿ ಜೆ.ಮಂಜುನಾಥ್ ತಿಳಿಸಿದ್ದಾರೆ.

ಯಲಹಂಕ ಮತ್ತು ಆನೇಕಲ್ ತಾಲ್ಲೂಕುಗಳಲ್ಲಿ ಒತ್ತುವರಿಯಾಗಿದ್ದ 33 ಗುಂಟೆ ಸರ್ಕಾರಿ ಗೋಮಾಳ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ 24 ಗುಂಟೆ ಗುಂಡು ತೋಪು ಮತ್ತು ಪೂರ್ವ ತಾಲ್ಲೂಕಿನಲ್ಲಿ 1 ಎಕರೆ ಸರ್ಕಾರಿ ಬೀಳು ಹಾಗೂ ಬೆಂಗಳೂರು ಪೂರ್ವ ಮತ್ತು ಆನೇಕಲ್ ತಾಲೂಕುಗಳಲ್ಲಿ 26 ಗುಂಟೆ ಸ್ಮಶಾನ ಜಾಗದಲ್ಲಿ ಒತ್ತುವರಿಯನ್ನು ಜೆಸಿಬಿ ಮೂಲಕ ತೆರವುಗೊಳಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ.

ದಕ್ಕಲಿಗರ ಬೆನ್ನಿಗೆ ಸರ್ಕಾರ ನಿಲ್ಲಲಿದೆ: ಸಚಿವ ಕೋಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಕ್ಕಲಿಗರ ಕುಂದುಕೊರತೆಗಳನ್ನು ಬಗೆಹರಿಸಲು ಒಂದು ವಾರದೊಳಗೆ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗುತ್ತದೆ. ಸರ್ಕಾರವು ಈ ಸಮುದಾಯದ ಬೆನ್ನಿಗೆ ಸದಾ ನಿಲ್ಲಲಿದೆ' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.



ಪರಿಶಿಷ್ಟ ಜಾತಿಗೆ ಸೇರಿದ ದಕ್ಕಲಿಗ ಸಮುದಾಯದ ಸಮಸ್ಯೆಗಳ ಕುರಿತು ಚರ್ಚಿಸಲು ಶನಿವಾರ ನಡೆದ ವಿಶೇಷ ಸಭೆಯಲ್ಲಿ ಅವರು ಮಾತನಾಡಿದರು.

'ದಕ್ಕಲಿಗ ಸಮುದಾಯಕ್ಕೆ ವಿಶೇಷ ವಸತಿ ಯೋಜನೆಯ ಅಡಿಯಲ್ಲಿ 400 ಮನೆಗಳನ್ನು ಮೀಸಲಿಡಲಾಗುತ್ತದೆ' ಎಂದು ಕೋಟ ಹೇಳಿದರು.

'ದಕ್ಕಲಿಗರ ಒಟ್ಟು 480 ಕುಟುಂಬಗಳು ರಾಜ್ಯದಲ್ಲಿ ನೆಲೆಸಿವೆ. ಈ ಪೈಕಿ ಶೇ 80ರಷ್ಟು ಕುಟುಂಬಗಳು ಗುಡಿಸಲು ಹಾಗೂ ಟೆಂಟ್‌ಗಳಲ್ಲೇ ವಾಸಿಸುತ್ತಿವೆ. ಅವರಿಗೆ ಈವರೆಗೂ ವಾಸಯೋಗ್ಯ ಮನೆಗಳೇ ಲಭಿಸಿಲ್ಲ. ಹಲವರ ಬಳಿ ಜಾತಿ ಪ್ರಮಾಣ ಪತ್ರವೂ ಇಲ್ಲ. ಕೃಷಿ ಜಮೀನು ಇಲ್ಲದಿರುವುದರಿಂದ ಕೂಲಿ ಕೆಲಸಗಾರರಾಗಿಯೇ ಬದುಕು ಸಾಗಿಸುತ್ತಿದ್ದಾರೆ' ಎಂದು ದಕ್ಕಲಿಗ ಸಮುದಾಯದ ಪ್ರಮುಖರು ಸಚಿವರಿಗೆ ಮನವರಿಕೆ ಮಾಡಿಕೊಟ್ಟರು.

ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್, ಸಾಮರಸ್ಯ ವೇದಿಕೆಯ ವಾದಿರಾಜ್, ದಕ್ಕಲಿಗ ಸಮಾಜದ ಶಾಂತರಾಜು, ಮರಿಸ್ವಾಮಿ, ಪರಶುರಾಮ್, ಜಾನಕಲ್ ರಾಜಣ್ಣ, ರೇಣುಕಮ್ಮ, ಗೋವಿಂದಸ್ವಾಮಿ, ನಾಗರಾಜು ಇದ್ದರು.

ಸಂಕ್ಷಿಪ್ತ ಸುದ್ದಿ

ಪಾದಯಾತ್ರೆಗೆ ಶೀಘ್ರ ಮರುಚಾಲನೆ: ಡಿ.ಕೆ.ಸುರೇಶ್

ರಾಮನಗರ: ರಾಜ್ಯದಲ್ಲಿ ಕೋವಿಡ್ ಕಡಿಮೆ ಆಗುತ್ತಿದೆ ಎಂದು ಸರ್ಕಾರವೇ ಒಪ್ಪಿಕೊಂಡಿದೆ. ಹೀಗಾಗಿ ಪಕ್ಷದ ನಾಯಕರ ಜತೆ ಮಾತನಾಡಿ ಮೇಕೆದಾಟು ಪಾದಯಾತ್ರೆಗೆ ಶೀಘ್ರದಲ್ಲೇ ಮರು ಚಾಲನೆ ನೀಡಲಾಗುವುದು ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ.ಸುರೇಶ್ ಹೇಳಿದರು.

ಇಲ್ಲಿನ ಬಸವನಪುರದಲ್ಲಿ ಶನಿವಾರ ಪತ್ರಕರ್ತರ ಜತೆ ಅವರು ಮಾತನಾಡಿದರು. 'ಕೋವಿಡ್ ಹೆಚ್ಚುತ್ತಿದೆ ಎನ್ನುವ ಕಾರಣಕ್ಕೆ ಪಾದಯಾತ್ರೆ ನಿಲ್ಲಿಸಿದ್ದೆವು. ಈಗ ಪರಿಸ್ಥಿತಿ ತಿಳಿಯಾಗುತ್ತಿದ್ದು, ಫೆಬ್ರುವರಿ 20ರ ನಂತರ ಎರಡನೇ ಹಂತದ ಪಾದಯಾತ್ರೆ ಆರಂಭ ಆಗಲಿದೆ' ಎಂದರು.

'ಶಾಸಕರ ನಿಧಿ ಬಳಕೆ ಮಾರ್ಗಸೂಚಿ ಪರಿಷ್ಕರಣೆ'

ಚಿತ್ರದುರ್ಗ: ಶಾಸಕರ ನಿಧಿಯನ್ನು ಕಾಲಮಿತಿಯಲ್ಲಿ ಬಳಕೆ ಮಾಡುವ ಹಾಗೂ ಹೊಣೆಗಾರಿಕೆ ನಿಗದಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಮಾರ್ಗಸೂಚಿ ಬದಲಾವಣೆ ಮಾಡಲಿದೆ ಎಂದು ಯೋಜನೆ ಮತ್ತು ಸಾಂಖ್ಯಿಕ ಸಚಿವ ಎನ್.ಮುನಿರತ್ನ ತಿಳಿಸಿದರು.

ಜಿಲ್ಲಾ ಪಂಚಾಯಿತಿಯಲ್ಲಿ ಶನಿವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, 'ಶಾಸಕರ ನಿಧಿ ಬಳಕೆಗೆ ಸಂಬಂಧಿಸಿ ಸಾಕಷ್ಟು ತಕರಾರುಗಳು ಬರುತ್ತಿವೆ. ನಿಗದಿತ ಆರ್ಥಿಕ ವರ್ಷದಲ್ಲಿ ಅನುದಾನ ಬಳಕೆ ಆಗದಿರುವ ಬಗ್ಗೆ ಅಸಮಾಧಾನವಿದೆ. ರಾಜ್ಯಕ್ಕೆ ಅನ್ವಯವಾಗುವ ರೀತಿಯಲ್ಲಿ ಮಾರ್ಗಸೂಚಿ ಬದಲಾವಣೆ ಮಾಡಲು ಚಿಂತನೆ ನಡೆಸಲಾಗಿದೆ' ಎಂದು ಹೇಳಿದರು.

15 ಸಚಿವರ ವಿರುದ್ಧ ದೂರು ಕೊಟ್ಟ ರೇಣುಕಾಚಾರ್ಯ

ಬೆಂಗಳೂರು: 15ಕ್ಕೂ ಹೆಚ್ಚು ಸಚಿವರು ಬಿಜೆಪಿ ಶಾಸಕರ ಅಹವಾಲುಗಳಿಗೆ ಸ್ಪಂದಿಸುತ್ತಿಲ್ಲ. ಶಾಸಕರ ದೂರವಾಣಿ ಕರೆಗಳನ್ನೂ ಸ್ವೀಕರಿಸುವುದಿಲ್ಲ ಎಂದು ದೂರಿ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಅವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರನ್ನು ಭೇಟಿ ಮಾಡಿ ಲಿಖಿತ ದೂರು ಸಲ್ಲಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Agricultural Land

Ramanagar

SALE 1 Acre 10 Guntas Ramangaram 10km National Highway Helding Mango Trees 32 Lakhs Acres: 9845169300

Commercial Land

Devanahalli

COMMERCIAL CONVERTED LAND 180X185 attached to 6-Lane NH opp to Devanahalli DC office with ready sanction plans Can start immediate Construction for Sale, Build to Suit, JV. Serious Parties call owner 9845778851 Brokers Excuse

Out-Station

GRANITE QUARRY 8 ACRE, 30 Years Leased, SALE 5.75cr, LAND with LICENSE, Koppal District. 9980577227.

Vishweshwariah Layout

FOR SALE, 80x100, D.C. Converted Commercial Plot @ Manganahalli NPKL Layout, Connecting Road & 20x30 Sites also available. Mobile: 9845780996

Commerical

Airport Road

'INTERNATIONAL AIRPORT' Road opp JAKKUR, Commercial 60X80 North East Corner site for sale Contact. 9945079777

Indiranagar

INDRA NAGAR sale 40x60 Very Prime Commercial site excellent location call 9844001942 Brokers Excuse

Intl Airport Road

COMMERCIAL PLOT sale 7500/ 10,500/ 22,000 sqft, east facing, Airport road, near Yelahanka, buyers only. 9686699154 (No Brokers).

Jayanagar

SALE 80X120 Commercial BDA Plot, Jayanagar 3rd Block, Genuine Buyers Please Call Ramesh: 9844104958

Flat

Bommasandra

LOOKING FOR BUILDERS/ INVESTORS For Bulk Booking in Eletronic City Bommsandra, 80% Project Completed in Prime Location Surrounded in 600 Companies & Metro Station with RERA & BMRDA Approved, A Katha with 1/ 2/ 3 BHK Apartment with Assured Profit. Contact: 9108910278/ 9741832215

Basavanagudi

DUPLEX FLAT For Sale In Tata Silk Farm, Thyagarajanagar, Bengaluru. Contact : 8971660799.

Hesaraghatta

SALE 2/3 BHK Janapriya Greenwood Chikkabanavara Bangalore TMC A Katha 3500 Sqft Negotiable Saturday: 9448453768 Sunday: 9164010869/ 9448453768

Jalahalli

LUXURY FLAT for sale at Vaishnavi ARS Gardenia. Newly built 3 BHK flat in a posh locality with lots of greenery and all club house amenities. 200 meters from jalahalli Metro station. Call: 9880722522/ 9740713449

J P Nagar

'SOBHA TULIP'- close to Sarakki Lake 3 BHK- Sale, Built 1900 sft, higher floor West facing, Semi-furnished @ 1.50 Crore. Sherrys- 9880595454/ 9845200577.

Kanakapura Road

3-BHK FLAT Sale:- 1575 Sq.ft, Fully Furnished 68,00,000/- Off Kanakpura Road, Konankunte, Near Junior Delhi Public School- 9611144096/ 9343722162.

Malleshwaram

"2&3BHK FLATS for sale at Malleshwaram Link Road, Ready to Occupy for more details Contact: 9901556699/ 9902333355"

"2 AND 3 BHK Flats for sale at Malleshwaram Link Road for more details Contact: 9901556699/ 9902333355"

Nagarabhavi

NAGARABHAVI FULLY FURNISHED 2 and 3 BHK FLATS for SALE READY TO MOVE Contact: 8277571927, 9902200646

Rajajinagar

'PHOENIX ONE BANGALORE WEST'- near Iskcon Temple High-end 3BHK for sale,2390 sq.ft, top floor, Ready to move-in @ 4.10 Crores. Call now: 9880595454/ 9845200577.

Uttarahalli

2 BHK Flat with car parking for sale near Shaneshwara Temple, Chikkalasandra Main Road, Only Veg Contact: 9844394418 (Brokers Excuse)

FLATS FOR Sale In VV Nagar, Near Isro Layout, Bengaluru. Contact : 8971660799.

Vijayanagar

SALE 2 BHK Apartment on 2nd Floor NHCS Layout Vijayanagar Marenahalli Contact Gangadhar: 9632824856

Farm House/ Land/ Resorts

Kanakapura Road

OWN A Managed Farmland Kanakapura, Bangalore with Temple, Grown Trees, Compound wall & Clubhouse: 7411203963

House

BTM Layout

BTM 2ND Stage North Facing Semi Commercial 60x90 (old house) Clear Titles Contact Reddy: 9880226644.

EXCELLENT COMMERCIAL 50x80 North (old house) dollars Layout Near vega City Mall Suraj Estates: 9845232711.

Basavanagudi

SALE 40X65 East with Old House Ashoknagar, Near NR Colony Buyers Please Call Ramesh: 9844104958

Jayanagar

40X54 SITE With Old HOUSE SALE, Jayanagar 8th Block, Near R.V. Metro Station. 40,000/- PSqft. Brokers Excuse. OWNER: 9449115237, 080-22442063.

SALE 40X60 East Facing NAL Layout Jayanagar 4th T Block 4 BHK Duplex House on 40feet Road Excellent Location 9844134068, 9066399102

SALE 40X40 South West Corner Excellent Location 5th Block Jayanagar 60feet Road: 9611844667 8123515830

JAYANAGAR 9TH block 30x50, West, old house- 20,000/-, 3rd Block 40x50, West -23,000/- residential- 9845144365.

SALE 30X50 Jayanagar 4th T Block NAL Layout With old House Excellent Location 9066399102 9844134068

SALE: JAYANAGAR- 1st Block 42 Squares Building on 1800 Sft Plot. Ground, 1st and 2nd Floors. East facing. Price 6.3 Crores negotiable. Contact: 98862-73736/ 97423-44983

Kengeri

HOUSE FOR Sale 25x40,BDA West Facing,25 Square,1BHK,& 4BHK,House at Kengeri Satellite town Near Metro Station Mysore Road. Rs.1.60cr Negotiable Contact Nagalinga: 7019009272, 9743378744 Shivakumar. 9845875555

Kumaraswamy Layout

NEW BUILDING for sale, BDA Kumarswamy layout. 25x40 GF 1 BHK, First and Second 2 BHK 3rd Floor 3 BHK Duplex with lift Contact: 9035279845 Price- 2.70CR

Koramangala

FOR SALE Koramangala 3rd Block 3750 sft plot with decent 4BR duplex house. Good location. Genuine buyers only call Rajender 9886111960.

KORAMANGALA SALE: Opp BDA Complex 40x60, Ground + 2 Floors, 5 Bedroom House. David 9845855663.

Malleshwaram

MALLESWARAM. CORNER property for sale with new 3 floor building. 7.5 crores. Semi-furnished new 3 bedroom Duplex 1323 sft. Brokers excuse. Contact 6363161053

Mysore

VASANTHNAGAR , 40x60 MUDA New Building Three Floors, South, Fourteen Rooms, Attach Bathroom's, Kitchen, Parking, Boar, Solar, Rs. 160 Lakhs, 9739760786, 9740085853.

RMV

AGS LAYOUT Parallel New BEL-Road West-South Corner Old-House 1861 Sqft 17500/-Sqft Negotiable. 'Abhilasha Consultants':- 9480565758

Industrial & Factory

Airport Road

SALE, SADAHALLI Main Road, 2 acres 12 guntas. Industrial Converted. West facing. 21 Crore. SADANANDA: 9035767333

General

FOR SALE 4.14 Acres Industrial Land At Kiadb Industrial Area Kadakola Mysore 9448554644

Magadi Road

SALE INDUSTRIAL N/E CORNER CONVERTED SITE 20664 SFT With 11800 SFT AC SHED +3 Floors RCC BUILDING AS WHERE IS CONDITION AVAILABLE FOR SALE AT NEAR TAVARAKERE MAGADI ROAD Contact: 8884104147

Tumkur Road

SALE 150 Acres Agriculture Land near Dabaspet. Rs. 45 lakhs to 1.25 cr/ acre. 9141326819

Residential/ Commercial

HRBR Layout

2400 SFT, BDA site with old house, ready for immediate sale in Kalyananagar 8546834506

Sites

Vijayanagar

30X40 BDA EF Plot Sale Rs. 15500 sft Negotiable Vyalikavalu Vijayanagar Call: 9916826976

Vishweshwariah Layout

"50X78 SOUTH West Corner Site at Byyanna-Byamma Layout Mallathalli, Conversion BBMP A-katha for sale. 9880031654"

SALE 30X40 BDA Site South Facing at Sir M Vishveshwaraiah Layout 1st Block Rs. 72 Lakhs, Jai Shankar: 9448276188/ 9900026027

"VISHVESWARAIAH 2ND Block 30x40 West facing Allotty Site sale near Double Road, Good location. 9845268611"

"BDA AUCTIONED South-East Corner-Site measuring 40x60-at SMV-Layout 1st-Block for-sale Rs.10500/- P.Sft slightly negotiable, direct Owner- 9845717586"

AVAILABLE BDA Vishveswaraya Layout 2nd Block 30x40. North Facing 6th Block 20x30 South Facing Full Development Place: 9481703468

"2580 SQFT W/S Corner 3rd Block, 40X60 6th Block Vishweshwaraiah Layout BDA Sites Sale- 9845143579"

BDA, VISHWESHWARAIAH Layout, 1st Block, 30x40, West Facing, Good Location, Near By Kengeri. Contact: 6364646603

BDA, VISHWESHWARAIAH Layout, 8th Block, 30x40, East Facing, Good Location, Near Deapa Complex. Contact: 9902956166

VISHVESHWARAIAH 5TH Block 40x60 East 40 feet Road, 40x60 West 8th Block, Immediate Registration. 9448432633

SITE FOR SALE, Visvesvaraya Layout, 3rd Block, 40x60 West Face, Contact: 9980433004

JOB OPPORTUNITIES

Engg/ Production Technical

45 YEAR OLD BANGALORE ENGINEERING SALES-COMPANY, Fraser Town are dealing with multiple imported products like Fuel. Oil Transfer and Adblue Pumps, Dispensers and Meters. Propellor Shafts, Railway Brake Cables, Slewing Rings and Spare Parts needs TECHNICAL SALES OFFICER, 40 to 45 years. To be technically and commercially experienced with ability to meet Senior OEM officials and Dealers, make presentations, close business, generate new business, prepare targets. Should know Word, Excel, Power Point. Report to Sales Manager. Job involves Traveling across India. Salary Rs.19,000 to 25,000 plus 2-Wheeler allowance. Apply with details to- officestaffblr@gmail.com

WANTED DIPLOMA or BE in electronics and communication, freshers and 2 years experienced for Poornaprajna Electronics, near glass factory, Kanakapura road. Salary 15K-25K Contact 8880888071.

DIPLOMA IN MECHANICAL, Experience: not above 3 to 5 years.'VINUMAC', 205A, Peenya 3rd phase, Bangalore-58. Contact: 080-28391959.28394512 admin@vinumac.com

FRESHER'S/ EXPERIENCE. BE Civil/ Diploma for Property Valuation for all over Bangalore. 7259810579, pavanak.1970@gmail.com

PRODUCTION/QC SUPERVISORS required for plastic Moulding industry at Bommasandra. Mail CV: accounts@sanraajhoses.com

Hospital & Medical Jobs

REQUIRED MBBS Doctor associate to start clinic cook town Bangalore Whats App Dr Shahid 9844666600

General

ELCITA

ELECTRONICS CITY INDUSTRIAL TOWNSHIP AUTHORITY
No. 7 (P), West Phase, Electronics City, Bangalore : 560 100
Website : www.elcita.in Phone : 080-4660 2222

ELCITA invites applications from suitable candidates for the following positions

Sustainability Engineer (2 positions)

To support the activities of the Sustainability team related to the Environmental, Social, & Governance (ESG) framework and other sustainability-related activities in the Estate including ESH and public health.

Qualifications: BE in Civil Engineering/ Environmental/ Chemical Engineering, or related field. Preferably a Master's degree in environmental engineering. Minimum of one year of related experience. Proficient in English and Kannada.

Data Management Executive (1 position)

To implement and improve data management including data accumulation, inventory, data entry, release of dashboards, etc on sustainability such as Waste, Water, Energy, Mobility etc

Qualifications: Minimum of two years of relevant experience with B Com/BBA. Proficiency in MS Office/Excel, English and Kannada.

For details refer to: : www.elcita.in
Applications along with CV and supporting documents must reach within 15 days after publication
email id : office.elcita@elcita.in

WALK IN interview (1)HR admin Qualification any degree Experience 10-15years Salary 25000/-. (2)Marketing Executives For Petroleum Products Qualification any degree Experience 5-10years Salary 30000/-. (3)Apartment Maintenance Supervisor Qualification diploma- in civil Experience 5-10years Salary 25000/- Call:7338084555 9880727889 080-25207889 glprojects7889@gmail.com

Teachers/ Professors

SANSKRIT TEACHERS needed for Chitrakoota CBSE School in Nagarbhavi, Kengeri Ring Road, with high salary. Immediately or for the next academic year. Call: 7829647333 WALK-IN WELCOME.

'PUTTANNA PUBLIC SCHOOL'Andrahalli,Magadi Road,Bangalore-91. #9845295961, 080-23245377.REQUIRED Experienced: PRINCIPAL, TEACHERS all subjects Pre-Primary,Primary,High School.fluency must.Best Salary Available.

Graphic Designers

GRAPHIC DESIGNER with 2 years Experience with knowledge of Coreldraw, Photoshop. Vasan Publications, Cottonpet, 9448889270/ vasanpublications @gmail.com

Wanted

WANTED COMPUTER Operator for DTP/ Online Sale/ Social Media, RR Nagar Retired/ Part Time Contact: 9886730639

Part-Time Jobs

WORK FROM Home, Earn 30-50K per month. Age: 32+, PUC and above. Malleshwaram. 7899493370

Multiple Vacancy

URGENTLY REQUIRED
For Garment Exporter in Bangalore.

- **ACCOUNTS MANAGER** — CA's / CA (Inter), having 10+ years of exp in accounting, banking, export / Import bills,GST, Income Tax and Company Law.
- **ACCOUNTS EXECUTIVE** — PG / CA (Inter) with 5+ years of exp. in handling GST and Exports.
- **ACCOUNTS ASSISTANT** — Graduate with minimum 2 years of accounting exp
- **FACTORY MANAGER** — 10+ Years with complete knowledge of handling a factory with 1000 people.
- **PRODUCTION MANAGER / APM** — 10+ Years in Woven & Knit garment manufacturer and capable of managing Capacity and Resource.
- **FLOOR IN-CHARGE** — 5+ Years in woven and knit garment manufacturing.

Email: apply33533@gmail.com
Mobile: 9367333533

MATRIMONIAL

Brides Wanted

Hindu

WANTED
Female live in partner without dependents for senior citizen in Bangalore.
Contact: kchandra03@gmail.com

English

HANDSOME PUNJABI 33yr 6' 40L+ seeks alliance from tall educated girl of reputed families: bride480@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Grooms Wanted

Christian

WANTED DOCTOR GROOM
Doctor parents want doctor groom for fair, beautiful, accomplished Tamil Roman Catholic doctor from Bangalore.
Contact: 90088 99030

Matrimonial Bureaus

ವೈವಾಹಿಕ
ಕನ್ನಡ ಸ್ಮಾರ್ತ ಬ್ರಾಹ್ಮಣ ಸಮುದಾಯದ ವಧು-ವರರ ಅಂತರ್ಜಾಲ ತಾಣ
http://www.hoysalakarnatakabrahmins.com.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಸುಮ ಗೋಪಾಲಕೃಷ್ಣ
ದೂರವಾಣಿ: 9886908152

USHODHAYA MATRIMONIAL (Estd: 1998)
FOR HIGH CLASS FIRST/ SECOND/ MARRIAGE PROPOSALS, INDIA/ ABROAD, in all age groups
9611919477
9886884291

AUTOMOTIVE

Four Wheelers Selling

General Motors/ Chevrolet

SKODA SUPERB 2011 end Elegance TSI MT top end with Sunroof, New Pirelli Tyres, Showroom condition, done 42000 km. 2nd owner Maroon Color. Rs 8.50 Lac. Call: Owner- 98454-96007

Honda

WATER DAMAGED HONDA JAZZ 1.2 VX CVTIVTEC/ 2019 KA-01 MS-8401 For Sale with RC-Last Date 06.02.2022. Call: 9844048926

BUSINESS

Business to Business

Finance

WE ARRANGE Mortgage, House Purchase, Construction, Site Purchase and Mortgage Loans from Banks. Contact: 9353705002

Business Offers

Distributors

'UNIQUE BUSINESS Opportunity'. All under one-roof Construction Products'. Appointing. State Stockiests & DISTRICT-WISE DISTRIBUTORS for the following. Home Automation - Touch Screen Switches.Bath cp fittings, Wires&Cables, Decorative paints.Ceiling Fans & Tower Fans.7993775414 / 6305656871 8688805414 www.thrivikramimpex.com

Finance

APERIO MULTIPURPOSE Loan avail from Rs.8Cr -500Cr @ 3%-6.5% P.A Ct 7200418844 Mail: aperiofunds@gmail.com

FINANCE AGAINST Land & Building Properties Industries Schools Hospitals Projects &NRIFunds 7358729820

PUBLIC NOTICE

PUBLIC NOTICE

Our client **DR. MOONA SUMALATHA** D/o Mr. Shanthkumar Moona is the sole and absolute owner of the Agricultural land bearing Survey No.2, measuring 2 acres 37 guntas situated at Mylappanahalli Village, Hesaraghatta Hobli, Bangalore North Taluk consisting of farm house and Cottages named as **"MISS SERENDIPITY FARMS".**

As per the instructions of Our client we issue this Public Notice to notify the Public that the property aforementioned is the residence of our client and not Home Stay or any kind of recreational activities are not allowed in the premises and if any one claims to have arranged bookings with any third party for stay or recreational activities will be illegal, invalid and without the consent of our client. In the event of any one sufferig any financial loss due to the same shall be at their cost, risk and consequences and our client will not be held responsible for any such act. In spite of the notice and warning if anybody enters the property, our client will resist the same and initiate appropriate legal proceedings against the trespassers both in civil and criminal Acts before the Court of Law.

C.P. SAJEEV & JAISRI S. KRISHNAN,
Advocates
No. 34 & 35, 1st Floor, 8th Main, 13th Cross, Malleswaram, Bangalore-03
Ph. No. 9845200930 & 9880748335

PUBLIC NOTICE

Public Notice-1
C.N. Kumar car KA51D7926, in date 09/10/2018.
If not collected the vehicle by or within 15 days of this notice. The vehicle will be disposed off.

Public Notice-2
Mr. Anand car KA51P9480, in date 01/09/2019.
If not collected the vehicle by or within 15 days of this notice. The vehicle will be disposed off.

Surakshaa Car Care Pvt Ltd
Contact: Mr. Bharath Reddy : 9449865603

PERSONAL

Change of Name

I, RITU HANSRAJ SHARMA (Passport No. Z2378481) W/o. Alok Sharma Residing at #144, Sobha Morzaria Grandeur, 4/1, Bannerghatta Road, Near Dairy Circle, Suddaguntepalya, Dharmaram College, Bengaluru- 560029 Have Changed My Name to RITU SHARMA vide Affidavit Dated: 28.01.2022 Before Notary B.M. Chandrashekar, Bangalore.

I, CHANNASANDRA NAGARAJU DINESH resident of Old No.396, New No.12, Opposite Thirumala Bekary, New Channasandra, Kadugodi Post, Bengaluru-560067 have changed my name to CHANNASANDRA NAGARAJAIAH DINESH affidavit dated 28.01.2022 noraty Veena.J, Bengaluru-67.

I, IHA VASHISHT W/O MANOJ PATHAK, D/O Late VENKATESH SHARMA, R/@ #202, Divine Nest, 5th cross, Kodihalli, Masjid Street, Bangalore 560008. Have changed my name to IHA PATHAK vide affidavit Dated:18/11/2019 before notary A R Muneer Ahmed Bangalore

ತಾಂತ್ರಿಕ ವರದಿ ಪಡೆಯಲು ಸಚಿವ ಸಂಪುಟ ನಿರ್ದೇಶನ

ಬಸವೇಶ್ವರನಗರ ಮೇಲ್ಸೇತುವೆ ಕಾಮಗಾರಿಗೆ ಟೆಂಡರ್?

● ಮಂಜುನಾಥ ಹೆಬ್ಬಾರ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಹೆಚ್ಚುವರಿ ಮೇಲ್ಸೇತುವೆ ನಿರ್ಮಾಣ ಕಾಮಗಾರಿಯನ್ನು ಯಾರಿಗೆ ವಹಿಸಬೇಕು ಎಂಬ ಬಗ್ಗೆ ನಗರಾಭಿವೃದ್ಧಿ ಇಲಾಖೆಯು ತಾಂತ್ರಿಕ ವರದಿ ಪಡೆದು ಕೆಟಿಪಿಪಿ ಕಾಯ್ದೆಯನ್ನು ಅನುಸರಿಸಿ ಸೂಕ್ತ ನಿರ್ಣಯ ಕೈಗೊಳ್ಳಬೇಕು ಎಂದು ಸಚಿವ ಸಂಪುಟ ನಿರ್ದೇಶನ ನೀಡಿದೆ.

ಹೆಚ್ಚುವರಿ ಮೇಲ್ಸೇತುವೆ ನಿರ್ಮಿಸಲು ಅನುಮೋದನೆ ನೀಡಿರುವ ಸಚಿವ ಸಂಪುಟ, ಪರಿಷ್ಕೃತ ಅಂದಾಜು ಮೊತ್ತ ₹150.17 ಕೋಟಿಗೆ ಒಪ್ಪಿಗೆ ನೀಡಿದೆ.

ಟೆಂಡರ್ ಕರೆಯದೇ ಅದೇ ಗುತ್ತಿಗೆದಾರರಿಗೆ ಕಾಮಗಾರಿ ವಹಿಸಿದರೆ ತಪ್ಪು ಸಂದೇಶ ಹೋಗುತ್ತದೆ. ಟೆಂಡರ್ ಕರೆದೇ ಕಾಮಗಾರಿ ನಡೆಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಂಪುಟ ಸಭೆಯಲ್ಲಿ ಪ್ರತಿಪಾದಿಸಿದರು. ಇದಕ್ಕೆ ಕಂದಾಯ ಸಚಿವ ಆರ್. ಅಶೋಕ ಸೇರಿದಂತೆ ಬೆಂಗಳೂರಿನ ಕೆಲವು ಸಚಿವರು ಧ್ವನಿಗೂಡಿಸಿದರು. ಹೀಗಾಗಿ, ತಾಂತ್ರಿಕ ವರದಿ ಪಡೆದೇ ಮುಂದುವರಿಯಲು ತೀರ್ಮಾನಿಸಲಾಯಿತು ಎಂದು ನಗರದ ಸಚಿವರೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಟೆಂಡರ್ ಕರೆದೇ ಈ ಕಾಮಗಾರಿ ನಡೆಸಬೇಕು ಎಂದು ನಗರಾಭಿವೃದ್ಧಿ ಇಲಾಖೆಯ ತಾಂತ್ರಿಕ ಕೋಶವು ಈ ಹಿಂದೆಯೇ ವರದಿ ಸಲ್ಲಿಸಿತ್ತು. ಸಾಮಾನ್ಯವಾಗಿ ತಾಂತ್ರಿಕ ವರದಿಯನ್ನು ತಾಂತ್ರಿಕ ಕೋಶದಲ್ಲೇ ಪಡೆಯಲಾಗುತ್ತದೆ. ತಾಂತ್ರಿಕ ಕೋಶ ಮತ್ತೆ ನಿಲುವು ಬದಲಿಸುವ ಸಾಧ್ಯತೆ ಕಡಿಮೆ ಎಂದು ಬಿಬಿಎಂಪಿಯ ಹಿರಿಯ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

ಹೆಚ್ಚುವರಿ ಕಾಮಗಾರಿಗಳ ನೆಪದಲ್ಲಿ ಮೂಲ ಗುತ್ತಿಗೆ ಮೊತ್ತಕ್ಕಿಂತ ಅನೇಕ ಪಟ್ಟು ಹೆಚ್ಚು ಮೊತ್ತದ ಕಾಮಗಾರಿಯನ್ನು ಒಬ್ಬರೇ ಗುತ್ತಿಗೆದಾರರಿಗೆ (ಎಂ.ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ) ವಹಿಸಲು ಕೆಟಿಪಿಪಿ ಕಾಯ್ದೆಯ 4ಜಿ ಸೆಕ್ಷನ್ ಅಡಿ ವಿನಾಯಿತಿ ನೀಡಬೇಕು ಹಾಗೂ ರಾಜ್ಯ ಸರ್ಕಾರವೇ ಅನುದಾನ ನೀಡಬೇಕು ಎಂದು ನಗರಾಭಿವೃದ್ಧಿ ಇಲಾಖೆಯು ಹಣಕಾಸು ಇಲಾಖೆಗೆ ಪ್ರಸ್ತಾವ ಸಲ್ಲಿಸಿತ್ತು. 4 ಜಿ ಸೆಕ್ಷನ್ ಅಡಿಯಲ್ಲಿ ವಿನಾಯಿತಿ ನೀಡಲು ಹಣಕಾಸು ಇಲಾಖೆ ಒಪ್ಪಿರಲಿಲ್ಲ.

ಬಿಬಿಎಂಪಿ ಅನುದಾನ ಬಳಕೆ?: ಹಣಕಾಸು ಇಲಾಖೆಯು, 'ಕಾಮಗಾರಿಗೆ ಅಗತ್ಯವಿರುವ ಹೆಚ್ಚುವರಿ ಅನುದಾನವನ್ನು ಬಿಬಿಎಂಪಿಯು ಸ್ವಂತ ಸಂಪನ್ಮೂಲದಿಂದ ಭರಿಸಬೇಕು ಅಥವಾ ಇತ್ತೀಚೆಗೆ ಅನುಮೋದನೆಗೊಂಡಿರುವ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿ ಕಾಮಗಾರಿ ಸೇರಿಸಲು ಕ್ರಮ ವಹಿಸಬೇಕು' ಎಂದು ಸೂಚಿಸಿತ್ತು.

ನಗರಾಭಿವೃದ್ಧಿ ಇಲಾಖೆ ಕಳುಹಿಸಿರುವ ಪ್ರಸ್ತಾವನೆಯಲ್ಲಿರುವ ಡಿ (11) ಅಂಶಕ್ಕೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಬಿಬಿಎಂಪಿ ಅನುದಾನದಿಂದಲೇ ಹೆಚ್ಚುವರಿ ಕಾಮಗಾರಿ ನಡೆಸಬೇಕು ಎಂಬ ಅಂಶ ಪ್ರಸ್ತಾವನೆಯಲ್ಲಿದೆ. ಹೀಗಾಗಿ, ಹೆಚ್ಚುವರಿ ಕಾಮಗಾರಿಗೆ ಬಿಬಿಎಂಪಿಯೇ ಹಣ ಹೊಂದಿಸಬೇಕಾಗುತ್ತದೆ. ಪಾಲಿಕೆಯು ಗುತ್ತಿಗೆದಾರರಿಗೆ ₹2 ಸಾವಿರ ಕೋಟಿಯಷ್ಟು ಬಾಕಿ ಉಳಿಸಿಕೊಂಡಿದೆ. ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ಬಿಬಿಎಂಪಿ ಮೇಲೆ ಮತ್ತೊಂದು ಹೊರೆ ಬಿದ್ದಿದೆ ಎಂದು ಅಧಿಕಾರಿಯೊಬ್ಬರು ಹೇಳಿದರು.

ಪಶ್ಚಿಮ ಕಾರ್ಡ್ ರಸ್ತೆಗೆ ರಾಜಾಜಿನಗರದಲ್ಲಿ – ಮಂಜುನಾಥನಗರ ಮುಖ್ಯರಸ್ತೆ ಕೂಡುವಲ್ಲಿ ದ್ವಿಪಥ ಸಂಚಾರದ ಮೇಲ್ಸೇತುವೆ, ಶಿವನಗರದ 8ನೇ ಮತ್ತು 1ನೇ ಮುಖ್ಯ ರಸ್ತೆಗಳು ಕೂಡುವಲ್ಲಿ ದ್ವಿಮುಖ ಸಂಚಾರದ ಇಂಟಿಗ್ರೇಟೆಡ್ ಅಂಡರ್ ಪಾಸ್ ಮತ್ತು ಬಸವೇಶ್ವರ ನಗರದ ಮುಖ್ಯರಸ್ತೆ ಕೂಡುವಲ್ಲಿ ಏಕಮುಖ ಸಂಚಾರದ ಮೇಲ್ಸೇತುವೆ ನಿರ್ಮಾಣ ಕಾಮಗಾರಿಗಳ ಪ್ಯಾಕೇಜ್‌ನ ಗುತ್ತಿಗೆಯನ್ನು ಎಂ.ವೆಂಕಟ ರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ನೀಡಲಾಗಿದೆ. ಒಟ್ಟು ₹ 89.86 ಕೋಟಿ ವೆಚ್ಚದ ಈ ಪ್ಯಾಕೇಜ್‌ಗೆ 2015ರ ಫೆ.11ರಂದು ಅನುಮೋದನೆ ನೀಡಲಾಗಿತ್ತು.

ಮಂಜುನಾಥನಗರದ ಮುಖ್ಯರಸ್ತೆ ಕೂಡುವಲ್ಲಿನ ಮೇಲ್ಸೇತುವೆ 2018ರ ಆ. 27ರಂದು ಲೋಕಾರ್ಪಣೆಗೊಂಡಿದೆ. ಶಿವನಗರ 8ನೇ ಮತ್ತು 1ನೇ ಮುಖ್ಯ ರಸ್ತೆ ಕೂಡುವಲ್ಲಿ ಇಂಟಿಗ್ರೇಟೆಡ್ ಅಂಡರ್‌ಪಾಸ್ ಬದಲಿಗೆ ಮೇಲ್ಸೇತುವೆಯನ್ನೇ ನಿರ್ಮಿಸಲಾಗಿದ್ದು, 2021ರ ಅ. 4ರಂದು ವಾಹನ ಸಂಚಾರಕ್ಕೆ ಮುಕ್ತಗೊಂಡಿದೆ. ಬಸವೇಶ್ವರನಗರ ಮುಖ್ಯರಸ್ತೆ ಕೂಡುವಲ್ಲಿನ ಮೇಲ್ಸೇತುವೆ ಗಡುವು ಮುಗಿದು ನಾಲ್ಕು ವರ್ಷಗಳಾದರೂ ಪೂರ್ಣಗೊಂಡಿಲ್ಲ.

ಶಿವನಗರ ಮುಖ್ಯರಸ್ತೆಗಳು ಕೂಡುವಲ್ಲಿನ ಮೇಲ್ಸೇತುವೆಯ ಉದ್ಘಾಟನೆ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚಿಸಿದ ವಸತಿ ಸಚಿವ ವಿ.ಸೋಮಣ್ಣ ಹಾಗೂ ರಾಜಾಜಿನಗರ ಶಾಸಕ ಎಸ್. ಸುರೇಶ್ ಕುಮಾರ್, ಬಸವೇಶ್ವರನಗರದ ಮುಖ್ಯರಸ್ತೆ ಕೂಡುವಲ್ಲಿಯೂ ದ್ವಿಮುಖ ಸಂಚಾರದ ಮೇಲ್ಸೇತುವೆ ನಿರ್ಮಿಸುವಂತೆ ಕೋರಿಕೆ ಸಲ್ಲಿಸಿದ್ದರು. ಈ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿದ ಮುಖ್ಯಮಂತ್ರಿಯವರು, ಬಿಬಿಎಂಪಿ ಅಧಿಕಾರಿಗಳಿಗೆ ಮೌಖಿಕ ಆದೇಶವನ್ನೂ ನೀಡಿದ್ದರು.



ಪ್ರತಿಭಟನೆ ಅತಿಥಿ ಉಪನ್ಯಾಸಕರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿ ಎಲ್ಲರನ್ನು ಸೇವೆಯಲ್ಲಿ ಮುಂದುವರೆಸುವಂತೆ ಒತ್ತಾಯಿಸಿ 'ಕರ್ನಾಟಕ ರಾಜ್ಯ ಅತಿಥಿ ಉಪನ್ಯಾಸಕರ ಸಂಘ'ದ ಸದಸ್ಯರು ನಗರದ ಮೌರ್ಯ ಹೋಟೆಲ್ ಬಳಿ ಇರುವ ಗಾಂಧಿ ಪ್ರತಿಮೆ ಮುಂಭಾಗ ಶನಿವಾರ ಪ್ರತಿಭಟನೆ ನಡೆಸಿದರು- ಪ್ರಜಾವಾಣಿ ಚಿತ್ರ

'ದ್ವೇಷದ ಮಾತು ಹಿಂಸಾತ್ಮಕವಾದರೆ ಅಪಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಸಹನೆಯ, ದ್ವೇಷದ ಮಾತುಗಳು ಬಹಿರಂಗವಾಗಿ ಹಿಂಸೆ, ಕೊಲೆಗೆ ಕರೆ ನೀಡುವ ಹಂತಕ್ಕೆ ಬಂದಿದ್ದು, ಜವಾಬ್ದಾರಿ ಸ್ಥಾನದಲ್ಲಿರುವವರು ಈ ರೀತಿಯ ಕರೆ ಕೊಡುವುದು ಬಹಳ ಗಂಭೀರ ವಿಷಯ' ಎಂದು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಎ. ನಾರಾಯಣ ಆತಂಕ ವ್ಯಕ್ತಪಡಿಸಿದರು.

ಗೌರಿ ಲಂಕೇಶ್ ಅವರ 60ನೇ ಜನ್ಮದಿನ ಅಂಗವಾಗಿ ಗೌರಿ ಸ್ಮಾರಕ ಟ್ರಸ್ಟ್ ಮತ್ತು ಸಿಟಿಜನ್ ಫಾರ್ ಜಸ್ಟೀಸ್ ಆ್ಯಂಡ್ ಪೀಸ್ ಸಂಸ್ಥೆ ಜಂಟಿಯಾಗಿ ಶನಿವಾರ ಹಮ್ಮಿಕೊಂಡಿದ್ದ 'ಹೇಟ್ ಆ್ಯಸ್ ಸ್ಟೇಟ್ ಯೋಜನೆ' ವಿಷಯದ ಆನ್‌ಲೈನ್ ಚರ್ಚೆಯಲ್ಲಿ ಅವರು ಮಾತನಾಡಿದರು.

'ಇಂಥ ಗಂಭೀರ ಸ್ಥಿತಿಗೆ ತಲುಪಿರುವ ಹಂತದಲ್ಲಿ ಸಮಷ್ಠಿ ಪ್ರಜ್ಞೆ ಜಾಗೃತಗೊಂಡು ಪ್ರತಿರೋಧ ವ್ಯಕ್ತಪಡಿಸಬಹುದು. ಅದು ಸಂಭವಿಸದೇ ಇದ್ದರೆ, ದ್ವೇಷದ ಮಾತುಗಳು ಇನ್ನಷ್ಟು ಹಿಂಸಾತ್ಮಕ ಹಂತಕ್ಕೆ ಹೋಗಬಹುದು. ಆಗ ಅದು ಬಹಳ ಕೆಟ್ಟ ಸ್ವರೂಪ ಪಡೆದುಕೊಳ್ಳಬಹುದು' ಎಂದೂ ಆತಂಕ ವ್ಯಕ್ತಪಡಿಸಿದರು.



ಎ.ನಾರಾಯಣ

'ಹೇಟ್ ಪದವನ್ನು ದ್ವೇಷ ಎಂದು ಭಾಷಾಂತರಿಸಬಹುದು. ಆದರೆ, ಆ ಪದದ ತೀವ್ರತೆ ಇವತ್ತಿನ ವಿದ್ಯಮಾನಗಳನ್ನು ಹಿಡಿದಿಡುವುದಿಲ್ಲ. ಸದ್ಯ ತೀರಾ ಗಂಭೀರವಾದ ಪರಿಸ್ಥಿತಿಯನ್ನು ದೇಶ ಎದುರಿಸುತ್ತಿದೆ. ಈ ಕರಾಳ ಪ್ರವೃತ್ತಿ ಮಾತಿನ ರೂಪದಲ್ಲಿ ನಮ್ಮ ಮುಂದಿದೆ. ಸ್ಟೇಟ್ ಪದಕ್ಕೆ ರಾಜ್ಯ ಎಂದು ಅರ್ಥೈಸಿಕೊಳ್ಳುವುದಕ್ಕಿಂತಲೂ, ಇಡೀ ವ್ಯವಸ್ಥೆ ಎಂದು ಕಲ್ಪಿಸಿಕೊಳ್ಳುವುದು ಸೂಕ್ತ' ಎಂದರು.

'ಅಂದರೆ, ಸರ್ಕಾರದ ಯೋಜನೆಯಾಗಿ ದ್ವೇಷ, ಇಡೀ ವ್ಯವಸ್ಥೆಯ ಭಾಗವಾಗಿ ದ್ವೇಷ ಬದಲಾಗಿದೆ. ಅದಕ್ಕಿಂತಲೂ ಈಗ ರಾಜಕೀಯದ ಯೋಜನೆಯಾಗಿ, ಭಾವನೆಯಾಗಿ ದ್ವೇಷ ಎಂಬ ಸ್ಥಿತಿ ಇದೆ. ಈ ದೇಶದ ರಾಜಕಾರಣ, ದ್ವೇಷದ ರಾಜಕಾರಣ ಆಗಿ ಬದಲಾಗಿದೆ. ಇದಕ್ಕೆ ಸಮಷ್ಠಿ ಮೌನವೇ ಕಾರಣ. ರಾಜಕೀಯ ದ್ವೇಷವನ್ನು ಬಂಡವಾಳವಾಗಿ ಬಳಸಿಕೊಂಡು ಅಧಿಕಾರಕ್ಕೆ ಬಂದ ಸರ್ಕಾರ ಕೂಡಾ ದ್ವೇಷವನ್ನು ಒಂದು ಯೋಜನೆಯಾಗಿ ಮುಂದುವರಿಸುವ ಅನಿವಾರ್ಯತೆಗೆ ಸಿಲುಕುತ್ತದೆ' ಎಂದೂ ಅಭಿಪ್ರಾಯಪಟ್ಟರು.

ಮಾನವ ಹಕ್ಕುಗಳ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್, ದ್ವೇಷದ ರಾಜಕೀಯದಿಂದ ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಯಲ್ಲಿನ ಪರಿಣಾಮದ ಬಗ್ಗೆ ಮಾತನಾಡಿದರು.

'ಗೌರಿ ಲಂಕೇಶ್ ಅವರು ದ್ವೇಷಕ್ಕೆ ಗುರಿಯಾದರು. ಈಗ ಎಲ್ಲರೂ ಜಾಗೃತರಾಗಬೇಕಿದೆ. ಮೌನ ಮುರಿಯಬೇಕಿದೆ. ಇಡೀ ವ್ಯವಸ್ಥೆಯನ್ನು ಎದುರಿಸುವ ಛಾತಿ ಬೆಳೆಸಿಕೊಳ್ಳಬೇಕಿದೆ. ಕೇವಲ ಮುಸ್ಲಿಂ ಎಂದಲ್ಲ, ಇಡೀ ವ್ಯವಸ್ಥೆಯ ಸಬಲೀಕರಣದ ಅಗತ್ಯವಿದೆ' ಎಂದರು.

ಗೌರಿ ಸ್ಮಾರಕ ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಗಣೇಶ್ ದೇವಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪತ್ರಕರ್ತರಾದ ಸಬಾ ನಖ್ವಿ, ಆರ್‌ಜೆ ಸಯೆಮಾ, ಇಸ್ಮತ್ ಅರಾ, ಅರ್ಫಾ ಖಾನುಂ ಮತ್ತು ಕಾನೂನು ವಿದ್ಯಾರ್ಥಿ ನೂರ್ ಮಹ್ವಿಶ್ ಚರ್ಚೆಯಲ್ಲಿ ಇದ್ದರು.

ರಾಜ್ಯದಾದ್ಯಂತ 'ಗ್ರಾಮ ಒನ್' ಶೀಘ್ರ: ಬೊಮ್ಮಾಯಿ

ಬೆಂಗಳೂರು: ಫೆಬ್ರವರಿ ಅಂತ್ಯದೊಳಗೆ 'ಗ್ರಾಮ ಒನ್' ಯೋಜನೆಯನ್ನು ರಾಜ್ಯದಾದ್ಯಂತ ವಿಸ್ತರಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಇ-ಆಡಳಿತ, ಆರ್‌ಡಿಪಿಆರ್, ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ಎಲ್ಲ ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪತ್ರ ಬರೆದಿದ್ದಾರೆ.

ಗ್ರಾಮ ಒನ್ ನಿರ್ವಾಹಕರು, ತಹಶೀಲ್ದಾರರು ಮತ್ತು ಜಿಲ್ಲಾಧಿಕಾರಿಗಳ ಜೊತೆ ವಾರಕ್ಕೊಮ್ಮೆ ಈ ಯೋಜನೆಯ ಪರಿಶೀಲನೆ ನಡೆಸಲಾಗುವುದು. ಮುಂದಿನ ಎರಡು ತಿಂಗಳು ಈ ಯೋಜನೆಗೆ ಸಂಬಂಧಿಸಿದಂತೆ ಪ್ರತಿವಾರ ಇ-ಆಡಳಿತ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸಭೆ ಆಯೋಜಿಸಬೇಕು ಎಂದೂ ಮುಖ್ಯಮಂತ್ರಿ ತಿಳಿಸಿದ್ದಾರೆ.

ಶೀಘ್ರ ವಿಲೇವಾರಿ: 'ಗ್ರಾಮ ಒನ್ ಯೋಜನೆಯಡಿ ಸ್ವೀಕರಿಸಿದ ಅರ್ಜಿಗಳ ಶೀಘ್ರ ವಿಲೇವಾರಿ ಮಾಡಬೇಕು. ತಿರಸ್ಕರಿಸಿದರೆ ಕಾರಣಗಳನ್ನು ಎಲ್ಲ ಇಲಾಖೆಗಳು ನೀಡಬೇಕು' ಎಂದು ಮುಖ್ಯಮಂತ್ರಿ ಸೂಚಿಸಿದ್ದಾರೆ.

ಜೈಲಿಗೆ ಹೈಕೋರ್ಟ್ ನ್ಯಾಯಮೂರ್ತಿಗಳ ದಿಢೀರ್ ಭೇಟಿ

'ಎಲ್ಲವೂ ಸ್ವಚ್ಛವಾಗಿದೆ–ಸಂತೃಪ್ತವಾಗಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಪ್ಪನ ಅಗ್ರಹಾರ ಕೇಂದ್ರಿಯ ಕಾರಾಗೃಹದಲ್ಲಿ ರೌಡಿ ಶೀಟರ್ ಕೈದಿಗಳಿಗೆ ರಾಜಾತಿಥ್ಯ ನೀಡಲಾಗುತ್ತಿದೆ' ಎಂಬ ಮಾಧ್ಯಮ ವರದಿಗಳ ಹಿನ್ನೆಲೆಯಲ್ಲಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯ ನಿರ್ವಾಹಕ ಅಧ್ಯಕ್ಷರೂ ಆದ ಹೈಕೋರ್ಟ್ ನ್ಯಾಯಮೂರ್ತಿ ಬಿ.ವೀರಪ್ಪ ಹಾಗೂ ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ಅವರು ಶನಿವಾರ ಜೈಲಿಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು.

ರಿಜಿಸ್ಟ್ರಾರ್ ಜನರಲ್ ಶಿವಶಂಕರೇಗೌಡ, ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸುದರ್ಶನ ಶೆಟ್ಟಿ ಅವರೊಂದಿಗೆ, ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೂ ಜೈಲಿನ ಎಲ್ಲೆಡೆ ಸುತ್ತಾಟ ನಡೆಸಿದರು. ಬ್ಯಾರಕ್‌ಗಳು, ಸೆಲ್‌ಗಳು, ಅಡುಗೆ ಮನೆ, ಚಿಕಿತ್ಸಾ ಕೇಂದ್ರಗಳೂ ಸೇರಿದಂತೆ ಮಹಿಳಾ ಕೈದಿಗಳಿದ್ದ ಸ್ಥಳಗಳನ್ನು ಕೂಲಂಕಷವಾಗಿ ಪರಿಶೀಲಿಸಿದರು.

ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ನ್ಯಾಯಮೂರ್ತಿ ಬಿ.ವೀರಪ್ಪ, 'ಕೈದಿಗಳ ಐಷಾರಾಮಿ ಜೀವನಕ್ಕೆ ಜೈಲು ಸಿಬ್ಬಂದಿಯೇ ಅನುವು ಮಾಡಿಕೊಟ್ಟಿದ್ದಾರೆ ಎಂಬ ವಿಡಿಯೊಗಳು ಮಾಧ್ಯಮಗಳಲ್ಲಿ ಬಿತ್ತರಗೊಂಡಿದ್ದವು. ಈ ಹಿನ್ನೆಲೆಯಲ್ಲಿ ದಿಢೀರ್ ಭೇಟಿ ನೀಡಿ ಪರಿಶೀಲಿಸಿದೆವು. ಆದರೆ, ಅಂತಹುದ್ದೇನೂ ಕಂಡು ಬರಲಿಲ್ಲ. ಎಲ್ಲವೂ ಸ್ವಚ್ಛವಾಗಿತ್ತು' ಎಂದು ವಿವರಿಸಿದರು.

'ಕೈದಿಗಳ ಕಷ್ಟ ಸುಖ ವಿಚಾರಿಸಿದೆವು. ಯಾವುದೇ ಆಕ್ಷೇಪಣೆ ಕೇಳಿ ಬರಲಿಲ್ಲ. ಅಂತೆಯೇ ಮೇಲ್ನೋಟಕ್ಕೆ ಅಲ್ಲಿ ನಮಗೆ ಯಾವುದೇ ರೀತಿಯ ವ್ಯತ್ಯಾಸಗಳೂ ಕಂಡು ಬರಲಿಲ್ಲ' ಎಂದು ಅವರು ಹೇಳಿದರು.



ಜೈಲಿನ ಊಟದ ಗುಣಮಟ್ಟ ಪರಿಶೀಲಿಸಿದ ನ್ಯಾಯಮೂರ್ತಿ ಬಿ.ವೀರಪ್ಪ

ನೆರವು: 'ಯಾವ ಕೈದಿಗಳಿಗೆ ವಕೀಲರನ್ನು ನೇಮಿಸಿಕೊಂಡು ತಮ್ಮ ಪ್ರಕರಣಗಳನ್ನು ಕೋರ್ಟ್‌ನಲ್ಲಿ ನಡೆಸಲು ಸಾಧ್ಯವಿಲ್ಲವೊ ಅಂತಹವರಿಗೆ ವಿಚಾರಣಾ ಕೋರ್ಟ್‌ನಿಂದ ಸುಪ್ರೀಂ ಕೋರ್ಟ್‌ವರೆಗೂ ವಕೀಲರನ್ನು ನೇಮಕ ಮಾಡಿಕೊಳ್ಳಲು ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ನೆರವು ನೀಡಲಾಗುವುದು' ಎಂದು ಕೈದಿಗಳಿಗೆ ತಿಳಿಸಿದ್ದಾಗಿ ವೀರಪ್ಪ ವಿವರಿಸಿದರು.

'ಕೃಷ್ಣ ಜೈಲಿನಲ್ಲಿ ಹುಟ್ಟಿದ್ದು. ಇಂತಹ ಸ್ಥಳದಲ್ಲಿರುವ ನೀವು ನಿಮ್ಮ ಕಷ್ಟದ ದಿನಗಳನ್ನು ಮುಗಿಸಿ ಹೊರಬನ್ನಿ. ಹೊರಜಗತ್ತಿನಲ್ಲಿ ನಿಮಗೂ ಅವಕಾಶ ಇದೆ. ನಿಮ್ಮ ಹಕ್ಕುಗಳನ್ನು ಪಡೆದುಕೊಳ್ಳಿ' ಎಂದು ಕೈದಿಗಳನ್ನು ಹುರಿದುಂಬಿಸಿದ್ದಾಗಿ ಹೇಳಿದರು.

'ಕೈದಿಗಳಲ್ಲಿ ಯಾರೆಲ್ಲಾ 7–8 ವರ್ಷಗಳನ್ನು ಶಿಕ್ಷೆ ಪೂರೈಸಿದ್ದಾರೊ, ಅಂತಹವರ ಬಿಡುಗಡೆಗೆ ಆದ್ಯತಾ ಅನುಸಾರ ಕಾನೂನು ಪ್ರಕ್ರಿಯೆ ಕೈಗೊಳ್ಳಲಾಗುವುದು. ಈ ಕುರಿತ ಪಟ್ಟಿ ಸಿದ್ಧಪಡಿಸಿ ಕೊಡುವಂತೆ ಸೂಚಿಸಲಾಗಿದೆ' ಎಂದರು.

> **'ತಪ್ಪು ಕಂಡು ಬಂದಲ್ಲಿ ತಕ್ಕ ಶಾಸ್ತಿ'**
>
> ಪರಪ್ಪನ ಅಗ್ರಹಾರ ಜೈಲಿನಲ್ಲಿ ಕೈದಿಗಳು ರಾಜಾತಿಥ್ಯ ಪಡೆಯುವ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆಯಲ್ಲಾ ಎಂಬ ಪತ್ರಕರ್ತರ ಪ್ರಶ್ನೆಗೆ ವೀರಪ್ಪ, 'ಯಾವುದೇ ತಪ್ಪು ಕಂಡು ಬಂದಲ್ಲಿ ತಕ್ಕ ಶಾಸ್ತಿ ಮಾಡಲಾಗುವುದು' ಎಂದು ಎಚ್ಚರಿಸಿದರು.

'ಭ್ರಷ್ಟಾಚಾರವೇ ಬಿಜೆಪಿ ಸರ್ಕಾರದ ಸಾಧನೆ'

ಬೆಂಗಳೂರು: 'ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿರುವ ಆರು ತಿಂಗಳು ಸೇರಿ, ರಾಜ್ಯದಲ್ಲಿ ಅಧಿಕಾರದಲ್ಲಿರುವ ಎರಡೂವರೆ ವರ್ಷಗಳ ಬಿಜೆಪಿ ಸರ್ಕಾರದ ಸಾಧನೆ ಭ್ರಷ್ಟಾಚಾರ ಮತ್ತು ವೈಫಲ್ಯಗಳು ಮಾತ್ರ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, 'ಯಡಿಯೂರಪ್ಪ ಬದಲಾಗಿ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾರೆ ಹೊರತು ಸರ್ಕಾರ ಬದಲಾಗಿಲ್ಲ, ಭ್ರಷ್ಟಾಚಾರ ನಿಂತಿಲ್ಲ' ಎಂದರು.

ಬಿಜೆಪಿ ಸರ್ಕಾರದ ಕಾರ್ಯವೈಖರಿಯನ್ನು ಅಂಕಿಅಂಶಗಳ ಸಹಿತ ಬಿಚ್ಚಿಟ್ಟ ಸಿದ್ದರಾಮಯ್ಯ, 'ಅಧಿಕಾರಕ್ಕೆ ಬಂದರೆ ಐದು ವರ್ಷಗಳಲ್ಲಿ ನೀರಾವರಿ ಉದ್ದೇಶಕ್ಕಾಗಿ ₹ 1.5 ಲಕ್ಷ ಕೋಟಿ ಖರ್ಚು ಮಾಡುವುದಾಗಿ ಪ್ರಣಾಳಿಕೆಯಲ್ಲಿ ಬಿಜೆಪಿ ಭರವಸೆ ನೀಡಿತ್ತು. ಅಂದರೆ, ವರ್ಷಕ್ಕೆ ಕನಿಷ್ಠ ₹ 30 ಸಾವಿರ ಕೋಟಿ ಖರ್ಚು ಮಾಡಬೇಕು. ಆದರೆ, ಈ ವರ್ಷ ಸರ್ಕಾರ ಖರ್ಚು ಮಾಡಿರುವುದು ₹ 6,300 ಕೋಟಿ ಮಾತ್ರ' ಎಂದು ದೂರಿದರು.

'ರಾಜ್ಯ ಸರ್ಕಾರದ ಸಾಧನೆ ಪುಸ್ತಕದಲ್ಲಿ ಭರವಸೆಗಳೇ ಜಾಸ್ತಿ ಇವೆ. ಅಮೃತ ಯೋಜನೆಯಡಿ 25 ಜಿಲ್ಲೆಗಳ ಜಿಲ್ಲಾಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುತ್ತೇವೆ, 750 ಶಾಲೆಗಳಿಗೆ ತಲಾ ₹ 10 ಲಕ್ಷ ಹಣ ಖರ್ಚು ಮಾಡುತ್ತೇವೆ, ಐದು ಲಕ್ಷ ಮನೆ ನಿರ್ಮಿಸುತ್ತೇವೆ, ಅಮೃತ ಗ್ರಾಮಗಳನ್ನು ಮಾಡುತ್ತೇವೆ ಎಂಬ ಭರವಸೆ ನೀಡಿದ್ದಾರೆ. ಅದರಲ್ಲಿ ಮುಖ್ಯವಾಗಿ ಹಳೆಯ ಯೋಜನೆಗಳಿಗೆ ಹೊಸ ಹೆಸರು ನೀಡಲಾಗಿದೆ. ನಮ್ಮ ಸರ್ಕಾರದ ಅವಧಿಯಲ್ಲಿ ಆರಂಭಿಸಿದ್ದ ಗ್ರಾಮೀಣ ಸೇವಾ ಕೇಂದ್ರಗಳನ್ನು ಈಗ ಗ್ರಾಮ ಒನ್ ಎಂದು ಹೆಸರು ಬದಲಿಸಿದ್ದಾರೆ. ಇದು ಸಾಧನೆಯೇ' ಎಂದು ಪ್ರಶ್ನಿಸಿದರು.

'ಎಸ್.ಸಿ.ಪಿ, ಟಿ.ಎಸ್.ಪಿ ಯೋಜನೆಗೆ ಹಣ ಕಡಿಮೆಯಾಗಿದೆ ಏಕೆ? ಗಂಗಾ ಕಲ್ಯಾಣ ಯೋಜನೆಗೂ ಹಣ ಕಡಿಮೆ ಇಟ್ಟಿದ್ದಾರೆ ಇದರಿಂದ ನಾಡಿನ ದಲಿತರಿಗೆ ಅನ್ಯಾಯವಾಗುವುದಿಲ್ಲವೇ. ಇದೇನಾ ಭವಿಷ್ಯಕ್ಕಾಗಿ ಭರವಸೆಯ ಹೆಜ್ಜೆಗಳು' ಎಂದೂ ಪ್ರಶ್ನಿಸಿದರು.

ಅಯೋಧ್ಯೆಯಲ್ಲಿ ಶಂಕರಾಚಾರ್ಯರ ಮಂದಿರ: ಪ್ರಸ್ತಾವನೆ

ನವದೆಹಲಿ: ಮೈಸೂರು ಜಿಲ್ಲೆಯ ಕೃಷ್ಣರಾಜನಗರದ ಯಡತೊರೆಯ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠದ ಶ್ರೀ ಶಂಕರಭಾರತೀ ಸ್ವಾಮೀಜಿ ನೇತೃತ್ವದ ನಿಯೋಗವು ಶನಿವಾರ ಇಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಚರ್ಚಿಸಿತು.

ಅಯೋಧ್ಯೆಯ ರಾಮಜನ್ಮ ಭೂಮಿ ಪ್ರದೇಶದ ಬಳಿ ಆದಿ ಶಂಕರಾಚಾರ್ಯರ ಮಂದಿರ ನಿರ್ಮಾಣದ ಅಗತ್ಯವನ್ನು ಪ್ರಧಾನಿ ಜೊತೆ ಚರ್ಚಿಸಲಾಯಿತು ಎಂದು ಶ್ರೀ ಶಂಕರಭಾರತೀ ಸ್ವಾಮೀಜಿ ಅವರು ಭೇಟಿ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

ಅಲ್ಲದೆ, ಅಯೋಧ್ಯೆಯಲ್ಲಿ ಅದ್ವೈತ ಮತ್ತು ಭಾರತೀಯ ತತ್ವಶಾಸ್ತ್ರ ಕುರಿತ ಅಧ್ಯಯನ ಪೀಠ ಹಾಗೂ ಸಂಶೋಧನಾ ಸಂಸ್ಥೆ ಸ್ಥಾಪಿಸುವ ಇಂಗಿತ ವ್ಯಕ್ತಪಡಿಸಲಾಯಿತು. ಈ ಸಂಬಂಧ ಅಯೋಧ್ಯೆಯ ಸರಯೂ ನದಿ ದಂಡೆಯಲ್ಲಿ 15 ಎಕರೆ ಜಮೀನನ್ನು ಮಂಜೂರು ಮಾಡುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಅವರು ಹೇಳಿದರು.

ಸೋಂಕು ಪತ್ತೆ ದರ ಶೇ 18.89 ● ನಾಳೆಯಿಂದ ಶಾಲೆಗಳ ಪುನರಾರಂಭ

ಕೋವಿಡ್ ಹರಡದಂತೆ ಬಿಬಿಎಂಪಿ ಮುನ್ನೆಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಹರಡುವುದನ್ನು ನಿಯಂತ್ರಿಸುವ ಉದ್ದೇಶದಿಂದ ನಗರದ ಶಾಲೆಗಳಿಗೆ ರಜೆ ನೀಡಿದ್ದ ಸರ್ಕಾರ, ಸೋಮವಾರದಿಂದ ಅವುಗಳನ್ನು ಪುನರಾರಂಭಿಸಲು ನಿರ್ಧರಿಸಿದೆ. ವಿದ್ಯಾರ್ಥಿಗಳನ್ನು ಮತ್ತೆ ಬರ ಮಾಡಿಕೊಳ್ಳಲು ಬಿಬಿಎಂಪಿ ಶಾಲೆಗಳೂ ಸಜ್ಜಾಗಿವೆ.


ಶಾಲಾ–ಕಾಲೇಜುಗಳನ್ನು ಮುಚ್ಚುವ ನಿರ್ಧಾರವನ್ನು ಜ.4ರಂದು ಸರ್ಕಾರ ಕೈಗೊಂಡಿತ್ತು. ಅಂದು ಕೋವಿಡ್ ಸೋಂಕು ದೃಢಪಟ್ಟವರ ಸಂಖ್ಯೆ 3,048 ಇತ್ತು. ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದ ಸೋಂಕಿತರ ಸಂಖ್ಯೆಯನ್ನು ನಿಯಂತ್ರಿಸಲು ಮತ್ತು ಕೋವಿಡ್ ಲಸಿಕೆ ಪಡೆಯದಿರುವ ಕಾರಣ ಮಕ್ಕಳು ತೊಂದರೆಗೆ ಸಿಲುಕುವ ಅಪಾಯವನ್ನು ತಡೆಯುವ ಉದ್ದೇಶದಿಂದ ಶಾಲೆಗಳನ್ನು ಬಂದ್ ಮಾಡುವ ನಿರ್ಧಾರಕ್ಕೆ ಸರ್ಕಾರ ಬಂದಿತ್ತು.

ಸದ್ಯ ಬೆಂಗಳೂರಿನಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾಗುವ ದೈನಂದಿನ ಪ್ರಮಾಣ 16 ಸಾವಿರಕ್ಕೂ ಹೆಚ್ಚಿದೆ. ಶನಿವಾರ 16,586 ಜನರಿಗೆ ಸೋಂಕು ದೃಢಪಟ್ಟಿದೆ. ಸೋಂಕು ಪತ್ತೆ ದರ ಶೇ 18.89ರಷ್ಟಿದೆ. ಈ ನಡುವೆಯೂ ಶಾಲೆಗಳನ್ನು ತೆರೆಯಲಾಗುತ್ತಿದೆ. ಶಾಲೆಗಳಲ್ಲಿ ಸೋಂಕು ನಿವಾರಕ ದ್ರಾವಣ ಸಿಂಪರಣೆ ಮಾಡುವ ಮೂಲಕ ಸೋಂಕು ಹರಡುವಿಕೆ ತಡೆಯಲು ಬಿಬಿಎಂಪಿ ಸಿದ್ಧತೆ ಮಾಡಿಕೊಂಡಿದೆ.

ಸುಳ್ಳು ವರದಿ– ಪ್ರಯಾಣಿಕರ ಆಕ್ರೋಶ (ದೇವನಹಳ್ಳಿ ವರದಿ): ಕೋವಿಡ್ ಪರೀಕ್ಷೆ ಕುರಿತು ಸುಳ್ಳು ವರದಿ ನೀಡಲಾಗುತ್ತಿದೆ ಎಂದು ಆರೋಪಿಸಿ ಪ್ರಯಾಣಿಕರು ಶನಿವಾರ ಸಂಜೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಿಬ್ಬಂದಿ ಜೊತೆ ಗಲಾಟೆ ನಡೆಸಿದರು.

ಪರಿಸ್ಥಿತಿ ನಿಭಾಯಿಸಲು ವಿಮಾನ ನಿಲ್ದಾಣದ ಸಿಬ್ಬಂದಿ ಪರದಾಡಬೇಕಾಯಿತು. ಸಿಟ್ಟಿಗೆದ್ದ ಪ್ರಯಾಣಿಕರನ್ನು ನಿಯಂತ್ರಿಸಲು ಕೇಂದ್ರ ಕೈಗಾರಿಕಾ ರಕ್ಷಣಾ ಪಡೆ (ಸಿಐಎಸ್‌ಎಫ್)ಯನ್ನು ಸ್ಥಳಕ್ಕೆ ಕರೆಸಲಾಯಿತು.

ಐಸಿಎಂಆರ್, ಬೇರೆ ಆಸ್ಪತ್ರೆ ಮತ್ತು ಪ್ರಯೋಗಾಲಯಗಳಲ್ಲಿ ಕೋವಿಡ್ ಪರೀಕ್ಷೆ ವರದಿ ನೆಗೆಟಿವ್ ಇದ್ದರೂ ಕೂಡ, ವಿಮಾನ ನಿಲ್ದಾಣದ ಆರಿಗಾ ಲ್ಯಾಬ್ ಕೇವಲ ಪಾಸಿಟಿವ್ ವರದಿ ನೀಡುತ್ತಿದೆ. ಇಂಥ ವರದಿ ನೀಡಿದ ಕಾರಣ ವಿಮಾನ ತಪ್ಪಿಸಿಕೊಳ್ಳಬೇಕಾಯಿತು ಎಂದು ಅಂತರರಾಷ್ಟ್ರೀಯ ವಿಮಾನ ಪ್ರಯಾಣಿಕರು ಗಲಾಟೆ ಮಾಡಿದರು.




ಕೋವಿಡ್: ಮೃತರ ಸಂಖ್ಯೆ 70ಕ್ಕೆ ಏರಿಕೆ


ಬೆಂಗಳೂರು: ರಾಜ್ಯದಲ್ಲಿ ಕೋವಿಡ್‌ನಿಂದ ಮೃತಪಡುವವರ ಸಂಖ್ಯೆ ಹೆಚ್ಚಳವಾಗಿದ್ದು, ಸೋಂಕಿತರಲ್ಲಿ 70 ಮಂದಿ ಮೃತಪಟ್ಟಿರುವುದು ಶನಿವಾರ ದೃಢಪಟ್ಟಿದೆ.

ಏಳು ತಿಂಗಳಲ್ಲಿ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಮರಣ ಪ್ರಕರಣಗಳು ಇವಾಗಿವೆ. ಒಂದು ದಿನದ ಅವಧಿಯಲ್ಲಿ 1.72 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 33,337 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕು ದೃಢ ಪ್ರಮಾಣ ಶೇ 19.37 ರಷ್ಟಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 37.57 ಲಕ್ಷಕ್ಕೆ ಏರಿಕೆಯಾಗಿದೆ.

ನಾಲ್ಕು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ನಾಲ್ಕು ಅಂಕಿ, 25 ಜಿಲ್ಲೆಗಳಲ್ಲಿ ಮೂರು ಅಂಕಿಯಲ್ಲಿದೆ. ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆಕಂಡಿದ್ದು, 16,586 ಮಂದಿ ಸೋಂಕಿತರಾಗಿದ್ದಾರೆ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ 46,050 ಮಂದಿ ಸೇರಿದಂತೆ ರಾಜ್ಯದಲ್ಲಿ 69,902 ಮಂದಿ ಚೇತರಿಸಿಕೊಂಡಿದ್ದಾರೆ.

ಕೊರೊನಾ ಸೋಂಕಿತರಲ್ಲಿ ಬೆಂಗಳೂರಿನಲ್ಲಿ 13 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 0.20ಕ್ಕೆ ಏರಿಕೆಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,874ಕ್ಕೆ ತಲುಪಿದೆ.





ಮತದಾರರ ಮನಗೆಲ್ಲಬೇಕು: ಸಚಿವ ಗೋಪಾಲಯ್ಯ

'ಬಿಬಿಎಂಪಿ ಚುನಾವಣೆಗೆ ಸಜ್ಜಾಗಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಏಪ್ರಿಲ್ ಕೊನೆಯ ಅಥವಾ ಮೇ ಮೊದಲ ವಾರ ಬಿಬಿಎಂಪಿ ಚುನಾವಣೆ ನಡೆಯುವ ಸಾಧ್ಯತೆ ಇದೆ. ಇದಕ್ಕಾಗಿ ಈಗಿನಿಂದಲೇ ಸಿದ್ಧತೆ ಆರಂಭಿಸಬೇಕು. ವಾರ್ಡ್ ಮಟ್ಟದಲ್ಲಿ ನಿರಂತರ ಸಭೆಗಳನ್ನು ನಡೆಸುವ ಮೂಲಕ ಮತದಾರರ ಮನಗೆಲ್ಲಬೇಕು' ಎಂದು ಸಚಿವ ಕೆ.ಗೋಪಾಲಯ್ಯ ಅವರು ಕಾರ್ಯಕರ್ತರಿಗೆ ತಿಳಿಸಿದರು.

ಬಿಬಿಎಂಪಿ ಚುನಾವಣೆ ಸಂಬಂಧ ಚರ್ಚಿಸುವ ಸಲುವಾಗಿ ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ನಾಗಪುರ ವಾರ್ಡ್‌ನಲ್ಲಿ ನಡೆದ ಸಭೆಯಲ್ಲಿ ಅವರು ಶನಿವಾರ ಮಾತನಾಡಿದರು.

'ಕ್ಷೇತ್ರದ 7 ವಾರ್ಡ್‌ಗಳ ಅಭಿವೃದ್ಧಿ ಕಾಮಗಾರಿಗಳ ಪಟ್ಟಿ ತಯಾರಿಸಲಾಗಿದ್ದು, ಮುಖ್ಯಮಂತ್ರಿ ಬಳಿ ಅನುದಾನ ಕೋರಿದ್ದೇನೆ. ಮುಂದಿನ ಕೆಲ ದಿನಗಳಲ್ಲಿ ಅನುದಾನ ಬಿಡುಗಡೆಯಾಗಲಿದೆ. ಪಕ್ಷದ ಸಂಘಟನೆ ಕುರಿತು ನಿರಂತರ ಸಭೆಗಳನ್ನು ನಡೆಸಲಾಗುತ್ತದೆ. ಚುನಾವಣೆಯಲ್ಲಿ ಎಲ್ಲರಿಗೂ ಟಿಕೆಟ್ ಸಿಗುವುದಿಲ್ಲ. ಈ ವಿಷಯದಲ್ಲಿ ಪಕ್ಷದ ತೀರ್ಮಾನವೇ ಅಂತಿಮ. ಅಂತಹ ಸಂದರ್ಭದಲ್ಲಿ ಅಭ್ಯರ್ಥಿಗಳು ಪಕ್ಷಕ್ಕಾಗಿ ತ್ಯಾಗ ಮಾಡಬೇಕು' ಎಂದು ತಿಳಿಸಿದರು.

'ಬಿಬಿಎಂಪಿ ಚುನಾವಣೆಯು ರಾಜ್ಯ ವಿಧಾನಸಭೆ ಚುನಾವಣೆಗೆ ದಿಕ್ಸೂಚಿಯಾಗಿದೆ. ಹೀಗಾಗಿ ಕ್ಷೇತ್ರದ ಒಂಬತ್ತು ವಾರ್ಡ್‌ಗಳಲ್ಲೂ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು. ಜನರ ಜೊತೆ ನಿರಂತರ ಸಂಪರ್ಕದಲ್ಲಿದ್ದುಕೊಂಡು ಅವರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡಬೇಕು' ಎಂದು ಹೇಳಿದರು.



ಸಚಿವ ಗೋಪಾಲಯ್ಯ ಹಾಗೂ ರಾಜ್ಯ ಬಿಜೆಪಿ ಹಿಂದುಳಿದ ವರ್ಗ ಘಟಕದ ಅಧ್ಯಕ್ಷ ನೆ.ಲ.ನರೇಂದ್ರಬಾಬು ಸಭೆಯಲ್ಲಿ ಭಾಗವಹಿಸಿದ್ದರು. ಬಿಜೆಪಿ ಉತ್ತರ ಜಿಲ್ಲಾ ಅಧ್ಯಕ್ಷ ನಾರಾಯಣ ಗೌಡ, ಮಂಡಲದ ಅಧ್ಯಕ್ಷ ರಾಘವೇಂದ್ರ ಶೆಟ್ಟಿ, ಮುಖಂಡರಾದ ರಾಜೇಂದ್ರಕುಮಾರ್, ಮಹದೇವ್ ಇದ್ದರು.

ನಿವೃತ್ತ ಪ್ರಾಧ್ಯಾಪಕ ರಾಜೇಂದ್ರ ಚೆನ್ನಿ ಕಳವಳ

'ಸರ್ವಾಧಿಕಾರ ಸರ್ಕಾರದಿಂದ ಜಾತ್ಯತೀತ ವ್ಯವಸ್ಥೆಗೆ ಧಕ್ಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಇಂದು ಚುನಾಯಿತ ಸರ್ವಾಧಿಕಾರ ಸರ್ಕಾರ ಇದೆ. ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ವಿರೋಧಿ ಸರ್ಕಾರ ಇದಾಗಿದೆ ಎನ್ನುವುದರಲ್ಲಿ ಯಾವುದೇ ಅನುಮಾನ ಇಲ್ಲ' ಎಂದು ನಿವೃತ್ತ ಪ್ರಾಧ್ಯಾಪಕ ಪ್ರೊ. ರಾಜೇಂದ್ರ ಚೆನ್ನಿ ಹೇಳಿದರು.

ಭಾರತ ಕಮ್ಯುನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ- ದಕ್ಷಿಣ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಸಮಿತಿಗಳು ಶನಿವಾರ ಆಯೋಜಿಸಿದ್ದ 'ಸಂವಿಧಾನದ ಜಾತ್ಯತೀತ ಮೌಲ್ಯಗಳು ಮತ್ತು ಧರ್ಮನಿರಪೇಕ್ಷತೆ' ಕುರಿತ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ದೇಶದಲ್ಲಿರುವ ಇಂದಿನ ಸರ್ವಾಧಿಕಾರದ ಆಡಳಿತವು ಹಿಂಸೆಗೆ ಅನುಮತಿ ನೀಡುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.



ಪ್ರೊ.ರಾಜೇಂದ್ರ ಚೆನ್ನಿ

'ಹಿಂಸೆಗೆ ಅನುಮತಿ ನೀಡುವ ಮೂಲಕ ಜನರ ಜೀವನಶೈಲಿ ಮತ್ತು ಬಹುತ್ವ ಸಂಸ್ಕೃತಿಯನ್ನು ನಾಶ ಮಾಡುವ ಪ್ರಯತ್ನ ನಡೆದಿದೆ. ನಿರಂತರವಾಗಿ ಸಾಮಾಜಿಕ ಜಾಲತಾಣಗ, ಳು ಪ್ರಚಾರ ಮಾಧ್ಯಮಗಳನ್ನು ಬಳಸಿಕೊಂಡು ನಾಗರಿಕ ಸಮಾಜವನ್ನು ಸಂಪೂರ್ಣವಾಗಿ ಕೋಮುವಾದದತ್ತ ತಿರುಗಿಸುವ ಪ್ರಯತ್ನಗಳು ನಡೆದಿವೆ' ಎಂದರು

'ಸಚಿವ ಸುನೀಲ್ ಕುಮಾರ್ ಅವರು ಕರ್ನಾಟಕದಲ್ಲಿ ಹಿಂದುತ್ವ ರಾಜ್ಯ ಇದೆ. ಇಲ್ಲಿನ ಆಡಳಿತವು ಹಿಂದುತ್ವ ಅನುಸಾರ ನಡೆಯುತ್ತದೆ. ಹೀಗಾಗಿ ಮತಾಂತರ ನಿಷೇಧದಂತಹ ಕಾಯ್ದೆಗಳು ಜಾರಿಯಾಗುತ್ತವೆ ಎಂದು ಹೇಳಿಕೆ ನೀಡಿದ್ದಾರೆ. ಆದರೆ, ಸಚಿವರು ಸಂವಿಧಾನ ನಿಷೇಧಿಸಿರುವುದನ್ನೇ ಘಂಟಾಘೋಷವಾಗಿ ಮುಕ್ತವಾಗಿ ಹೇಳುತ್ತಿದ್ದಾರೆ. ನಾವು ಯಾವ ಸನ್ನಿವೇಶದಲ್ಲಿದ್ದೇವೆ ಎನ್ನುವುದಕ್ಕೆ ಇದೊಂದು ಉದಾಹರಣೆ' ಎಂದು ತಿಳಿಸಿದರು.

'ಜಾತ್ಯತೀತ ವ್ಯವಸ್ಥೆಯನ್ನೇ ನಮ್ಮ ಶತ್ರು ಎಂದು ಪರಿಗಣಿಸುವ ಸ್ಥಿತಿ ಸೃಷ್ಟಿಯಾಗಿದೆ. ಅಸಮಾನತೆ ಮತ್ತು ಪುರೋಹಿತಶಾಹಿ ವ್ಯವಸ್ಥೆಯನ್ನೇ ಬಲಪಡಿಸಲಾಗುತ್ತಿದೆ. ಜಾತ್ಯತೀತ ವ್ಯವಸ್ಥೆಯನ್ನು ನಾಶ ಮಾಡಿ ಬಂಡವಾಳಶಾಹಿ ಶಕ್ತಿಗಳು ಅಧಿಕಾರಕ್ಕೆ ಬರುತ್ತಿವೆ. ಇಂತಹ ವ್ಯವಸ್ಥೆಯನ್ನು ದಲಿತರು ಸೇರಿದಂತೆ ಯಾವುದೇ ಸಂಘಟನೆಗಳು ಪ್ರಬಲವಾಗಿ ವಿರೋಧಿಸುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಟೋಯಿಂಗ್ ವಿಚಾರವಾಗಿ ಗಲಾಟೆ: ಮಹಿಳೆ ಬಂಧಿಸಿದ ಪೊಲೀಸರು

ಪೊಲೀಸ್‌ಗೆ ಕಲ್ಲೇಟು: ಅಂಗವಿಕಲೆಗೆ ಒದ್ದ 'ಎಎಸ್‌ಐ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೋಯಿಂಗ್ ವಿಚಾರವಾಗಿ ಅಂಗವಿಕಲ ಮಹಿಳೆ ಹಾಗೂ ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ನಡುವೆ ಗಲಾಟೆ ಆಗಿದ್ದು, ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ವಾಹನವನ್ನು ಟೋಯಿಂಗ್ ಮಾಡಿದ್ದನ್ನು ಪ್ರಶ್ನಿಸಿದ್ದ ಮಹಿಳೆ, ಕರ್ತವ್ಯ ನಿರತ ಎಎಸ್‌ಐ ತಲೆಗೆ ಕಲ್ಲಿನಿಂದ ಹೊಡೆದಿದ್ದರು. ಸಿಟ್ಟಾದ ಎಎಸ್‌ಐ, ನಡು ರಸ್ತೆಯಲ್ಲಿ ಮಹಿಳೆಯನ್ನು ಅಟ್ಟಾಡಿಸಿ ಹಿಡಿದು ಬೂಟುಗಾಲಿನಿಂದ ಒದ್ದಿದ್ದಾರೆ. ಬಿಡಿಸಲು ಹೋದ ಸ್ಥಳೀಯರ ವಿರುದ್ಧವೂ ಎಎಸ್‌ಐ ಹರಿಹಾಯ್ದಿದ್ದಾರೆ. ಈ ದೃಶ್ಯ ವಿಡಿಯೊದಲ್ಲಿದೆ.

ವಿಡಿಯೊ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸ್ ಅಧಿಕಾರಿಯೊಬ್ಬರು, 'ಹಲಸೂರು ಗೇಟ್ ಸಂಚಾರ ಠಾಣೆ ಎಎಸ್‌ಐ ನಾರಾಯಣ ಹಾಗೂ ಸಿಬ್ಬಂದಿ, ಜ.24ರಂದು ಸಂಜೆ ಟೋಯಿಂಗ್ ವಾಹನದ ಕರ್ತವ್ಯದಲ್ಲಿದ್ದರು. ನೋ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿದ್ದ ವಾಹನವನ್ನು ಟೋಯಿಂಗ್ ಮಾಡಿದ್ದರು. ಅದನ್ನು ಪ್ರಶ್ನಿಸಿದ್ದ ಮಹಿಳೆ, ಎಎಸ್‌ಐಗೆ ಕಲ್ಲಿನಿಂದ ಹೊಡೆದಿದ್ದರು' ಎಂದರು.

'ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಮಹಿಳೆಯನ್ನು ಎಎಸ್‌ಐ ಹಾಗೂ ಇತರರು ಹಿಡಿದಿದ್ದರು. ನಂತರ, ಎಸ್.ಜೆ.ಪಾರ್ಕ್ ಪೊಲೀಸರ ವಶಕ್ಕೆ ಒಪ್ಪಿಸಿದ್ದರು' ಎಂದೂ ಹೇಳಿದರು.

'ಘಟನೆ ಬಗ್ಗೆ ಎಎಸ್‌ಐ ಅವರು ದೂರು ನೀಡಿದ್ದರು. ಅದರನ್ವಯ ಪ್ರಕರಣ ದಾಖಲಿಸಿಕೊಂಡಿದ್ದ ಎಸ್.ಜೆ.ಪಾರ್ಕ್ ಪೊಲೀಸರು, ಮಹಿಳೆಯನ್ನು ವಶಕ್ಕೆ ಪಡೆದು ಕಾನೂನು ಕ್ರಮ ಜರುಗಿಸಿದ್ದಾರೆ' ಎಂದೂ ತಿಳಿಸಿದರು.


ಎಎಸ್‌ಐ ವರ್ತನೆಗೆ ಆಕ್ರೋಶ: ವಿಡಿಯೊ ಹಂಚಿಕೊಂಡಿರುವ ಸಾರ್ವಜನಿಕರು, 'ಎಎಸ್‌ಐ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

'ಅಂಗವಿಕಲ ಮಹಿಳೆಯನ್ನು ನಡುರಸ್ತೆಯಲ್ಲಿ ಅಮಾನವೀಯವಾಗಿ ನಡೆಸಿಕೊಳ್ಳಲಾಗಿದೆ. ಮಹಿಳೆ ತಪ್ಪು ಮಾಡಿದ್ದರೆ, ಮಹಿಳಾ ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಸಿ ಅವರನ್ನು ವಶಕ್ಕೆ ಪಡೆಯಬಹುದಿತ್ತು. ಅದನ್ನು ಬಿಟ್ಟು ಎಎಸ್‌ಐ ಅವರೇ ಮಹಿಳೆಯನ್ನು ಹಿಡಿದು ಎಳೆದಾಡಿ ಬೂಟುಗಾಲಿನಿಂದ ಒದ್ದಿರುವುದು ಖಂಡನೀಯ' ಎಂದೂ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಮಹಿಳೆ ಗೌರವಕ್ಕೆ ಧಕ್ಕೆ ತರುವ ರೀತಿಯಲ್ಲಿ ವರ್ತಿಸಿದ್ದ ಎಎಸ್‌ಐ ಹಾಗೂ ಇತರರು, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ತಪ್ಪಿತಸ್ಥ ಪೊಲೀಸರನ್ನು ಕೂಡಲೇ ಅಮಾನತು ಮಾಡಬೇಕು. ತನಿಖೆ ನಡೆಸಿ, ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು' ಎಂದೂ ಒತ್ತಾಯಿಸಿದ್ದಾರೆ.

ನರಗುಂದ ಹತ್ಯೆ ಘಟನೆ ಆಕಸ್ಮಿಕ: ಮುತಾಲಿಕ್

ಪ್ರಜಾವಾಣಿ ವಾರ್ತೆ


ಪ್ರಮೋದ್ ಮುತಾಲಿಕ್

ಗದಗ: 'ನರಗುಂದದಲ್ಲಿ ನಡೆದ ಹತ್ಯೆ ಘಟನೆ ಆಕಸ್ಮಿಕ. ಕೆಲವು ಮುಸ್ಲಿಂ ಕಿಡಿಗೇಡಿಗಳು ಹಿಂದೂ ದೇವರನ್ನು ಅವಮಾನಿಸುವುದು, ಹಿಂದೂ ಯುವತಿಯರನ್ನು ಚುಡಾಯಿಸುವುದು, ಲವ್ ಜಿಹಾದ್‌ನಲ್ಲಿ ತೊಡಗಿಕೊಳ್ಳುವುದು, ಆಕಳು ಕಳ್ಳತನವನ್ನು ನಿರಂತರವಾಗಿ ಮಾಡಿಕೊಂಡು ಬಂದಿದ್ದಾರೆ. ಇವುಗಳನ್ನು ನಿಲ್ಲಿಸಿದ್ದರೆ, ಈ ಘಟನೆ ನಡೆಯುತ್ತಿರಲಿಲ್ಲ' ಎಂದು ಶ್ರೀರಾಮಸೇನೆ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ ಮುತಾಲಿಕ್ ಹೇಳಿದರು.

ನರಗುಂದ ಕೊಲೆ ಪ್ರಕರಣದಲ್ಲಿ ಬಂಧಿತರಾಗಿರುವ ನಾಲ್ವರು ಆರೋಪಿಗಳನ್ನು ಶನಿವಾರ ಬೆಟಗೇರಿಯಲ್ಲಿರುವ ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ ಭೇಟಿ ಮಾಡಿ ಬಳಿಕ, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

'ಹೊಡೆದಾಟದಲ್ಲಿ ಆಕಸ್ಮಿಕವಾಗಿ ಕೊಲೆಯಾಗಿದೆ. ಅದು ಆಗಬಾರದಿತ್ತು. ಈಗಾಗಲೇ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಆಧರಿಸಿ ಪೊಲೀಸರು ತಪ್ಪಿತಸ್ಥರನ್ನು ಬಂಧಿಸಿದ್ದಾರೆ. ಇನ್ನು ಮುಂದೆ ಯಾರನ್ನಾದರೂ ಬಂಧಿಸಿದರೆ ನರಗುಂದ ಹೊತ್ತಿ ಉರಿಯುತ್ತದೆ' ಎಂದು ಅವರು ಎಚ್ಚರಿಸಿದರು.

'ಕಾಂಗ್ರೆಸ್ ಐ ಅಂದರೆ ಕಾಂಗ್ರೆಸ್ ಇಸ್ಲಾಂ ಅಂತಾಗಿದೆ. ಕಾಂಗ್ರೆಸ್ ಇರುವುದೇ ಮುಸ್ಲಿಮರಿಗಾಗಿ. ಆದ್ದರಿಂದ, ಕಾಂಗ್ರೆಸ್‌ನಲ್ಲಿರುವ ಹಿಂದೂಗಳು ಈ ಬಗ್ಗೆ ಗಂಭೀರವಾಗಿ ಯೋಚಿಸಬೇಕು' ಎಂದು ಹೇಳಿದರು.

'ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ಅವರು ಹಿಂದೂಗಳನ್ನು ಖಂಡಿಸುವ ಪ್ರಕ್ರಿಯೆ ನಿಲ್ಲಿಸಬೇಕು. ಜತೆಗೆ ಈ ಹಿಂದೆ ನಡೆದ ಘಟನೆಗಳ ಬಗ್ಗೆಯೂ ಅವರು ಖಂಡಿಸಬೇಕಿತ್ತು. ಸಿದ್ದರಾಮಯ್ಯ ಕೇವಲ ಮುಸ್ಲಿಮರಿಗಷ್ಟೇ ವಿರೋಧ ಪಕ್ಷದ ನಾಯಕರಾಗಿಲ್ಲ' ಎಂದು ಕಿಡಿಕಾರಿದರು.

ಮುಸ್ಲಿಂ ಯುವಕನ ಹತ್ಯೆ– ಬಹುತ್ವ ಕರ್ನಾಟಕ ಸತ್ಯಶೋಧನಾ ತಂಡ ಆರೋಪ

ತಿಕ್ಕಾಟಕ್ಕೆ ದ್ವೇಷ ಭಾಷಣವೇ ಕಾರಣ

• ಕೆ.ಎಂ.ಸತೀಶ್ ಬೆಳ್ಳಕ್ಕಿ



ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೆ ನಾಲ್ವರನ್ನು ಬಂಧಿಸಲಾಗಿದೆ. ಘಟನೆ ನಡೆಯಲು ಪೊಲೀಸರ ನಿರ್ಲಕ್ಷ್ಯ ಕಾರಣ ಎಂಬುದು ಹೇಳಿಕೆ ನೀಡುವವರ ವೈಯಕ್ತಿಕ ಅಭಿಪ್ರಾಯ.

ಶಿವಪ್ರಕಾಶ್ ದೇವರಾಜು, ಎಸ್‌ಪಿ

ಗದಗ: ನಾಲ್ಕು ವರ್ಷಗಳ ಹಿಂದೆ ನರಗುಂದ ಗುಡ್ಡದಲ್ಲಿ ಬಾವುಟ ಹಾರಿಸುವುದಕ್ಕೆ ಸಂಬಂಧಿಸಿದಂತೆ ನಡೆದ ಘರ್ಷಣೆಯಲ್ಲಿ ಹೊತ್ತಿಕೊಂಡ ಕಿಡಿ, ಜ.17ರಂದು ನಡೆದ ಮುಸ್ಲಿಂ ಯುವಕನ ಹತ್ಯೆವರೆಗೂ ವ್ಯಾಪಿಸಿದೆ. ಈ ಅವಧಿಯ ನಡುವೆ ಹಿಂದೂ ಮತ್ತು ಮುಸ್ಲಿಂ ಸಮುದಾಯದ ನಡುವೆ ಸಾಕಷ್ಟು ಹೊಡೆದಾಟ ಬಡಿದಾಟಗಳು ನಡೆದಿವೆ. ಆದರೆ, ಪೊಲೀಸರು ಎರಡೂ ಕಡೆಯವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸದ ಕಾರಣದಿಂದಲೇ ಪರಿಸ್ಥಿತಿ ಕೊಲೆ ನಡೆಯುವ ಹಂತಕ್ಕೆ ಹೋಯಿತು ಎಂದು ಬಹುತ್ವ ಕರ್ನಾಟಕ ಸತ್ಯಶೋಧನಾ ತಂಡ ಆರೋಪಿಸಿದೆ.

ಸದ್ಯ ಗದಗ ಜಿಲ್ಲೆಯ ನರಗುಂದ ಪಟ್ಟಣದ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತೆ ಇದೆ. ಘಟನೆ ಸಂಬಂಧ ಪೊಲೀಸರು ಈಗಾಗಲೇ ನಾಲ್ಕು ಮಂದಿಯನ್ನು ಬಂಧಿಸಿದ್ದಾರೆ. ಈ ನಡುವೆ, 'ಇನ್ನು ಮುಂದೆ ಯಾರನ್ನಾದರೂ ಬಂಧಿಸಿದರೆ ನರಗುಂದ ಹೊತ್ತಿ ಉರಿಯುತ್ತದೆ' ಎಂದು ಶ್ರೀರಾಮಸೇನೆ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ ಮುತಾಲಿಕ್ ಮತ್ತೊಮ್ಮೆ ಪ್ರಚೋದನಕಾರಿ ಹೇಳಿಕೆ ನೀಡಿರುವುದು ಪಟ್ಟಣದ ಜನತೆಯಲ್ಲಿ ಭೀತಿ ಮೂಡಿಸಿದೆ.

ಜ.17ರಂದು ನರಗುಂದದಲ್ಲಿ ಹತ್ಯೆಯಾದ ಸಮೀರ್ ಪ್ರಕರಣಕ್ಕೂ ಹಿಂದಿನಿಂದಲೇ ಹಿಂದೂ ಮತ್ತು ಮುಸ್ಲಿಮರ ನಡುವೆ ಸಂಘರ್ಷಗಳು ನಡೆಯುತ್ತ ಬಂದಿವೆ. ಐತಿಹಾಸಿಕ ನರಗುಂದ ಗುಡ್ಡ ಹಾಗೂ ಪಟ್ಟಣದ ಲೋದಿಗಲ್ಲಿಯಲ್ಲಿ ತಮ್ಮ ತಮ್ಮ ಧರ್ಮದ ಧ್ವಜಗಳನ್ನು ಹಾರಿಸುವ ಸಂಬಂಧ ತಿಕ್ಕಾಟಗಳು ನಡೆದಿವೆ. ನಂತರವೂ ಹಿಂಸಾತ್ಮಕ ಘಟನೆಗಳು ನಡೆದಿದ್ದು, ಅನೇಕ ಪ್ರಕರಣಗಳು ಪೊಲೀಸ್ ಠಾಣೆ ಮೆಟ್ಟಿಲು ಹತ್ತಿಲ್ಲ. ಸಂಧಾನದ ಮೂಲಕ ಇತ್ಯರ್ಥವಾಗಿವೆ.

'2021ರ ನ.17ರಂದು ನಡೆದ ಸಣ್ಣ ಘಟನೆ ಎರಡೂ ಸಮುದಾಯದ ನಡುವಿನ ದ್ವೇಷದ ಕೆಂಡಕ್ಕೆ ಬೀಸಣಿಗೆ ಆಯಿತು. ಅಲ್ಲಿಂದ ಜ.17 ರವರೆಗೆ ಪ್ರತಿ 15–20 ದಿನಗಳಿಗೊಮ್ಮೆ ಸಣ್ಣಪುಟ್ಟ ಘರ್ಷಣೆಗಳು ನಡೆಯುತ್ತಿದ್ದವು. ಎರಡೂ ಕಡೆಯವರಿಂದ ರ‍್ಯಾಲಿ, ಪ್ರತಿಭಟನೆಗಳು ನಡೆಯುತ್ತಿದ್ದವು. ಮೌಲಾನಾ ಆಜಾದ್ ಶಾಲೆ, ಸಿದ್ದೇಶ್ವರ ಕಾಲೇಜಿನ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆದಿತ್ತು. ಈ ಘಟನೆ ಸಂಬಂಧ ಪೊಲೀಸರು ಯಾರನ್ನೂ ಬಂಧಿಸಿಲ್ಲ. ಕಾಲೇಜಿನ ವಿದ್ಯಾರ್ಥಿಯೊಬ್ಬ ಬ್ಯಾಗ್‌ನಲ್ಲಿ ಚೂರಿ ಇಟ್ಟುಕೊಂಡಿದ್ದ ಎಂದು ಆರೋಪಿಸಿ ಹಲ್ಲೆ ಮಾಡಿದ್ದರು. ಪ್ರಾಂಶುಪಾಲರ ಎದುರಿನಲ್ಲೇ ಈ ಘಟನೆ ನಡೆದಿದ್ದರೂ ಪ್ರಕರಣ ದಾಖಲಾಗಿಲ್ಲ' ಎನ್ನುತ್ತಾರೆ ಸತ್ಯಶೋಧನಾ ತಂಡದ ಶಬ್ಬೀರ್ ಅಹ್ಮದ್.

'ಜ.14ರಂದು ನಡೆದ ಘಟನೆಗೆ ಸಂಬಂಧಿಸಿದಂತೆ ಬಜರಂಗ ದಳದ ಮುಖಂಡ ಸಂಜು ನಲವಡೆ ಅವರನ್ನು ಪೊಲೀಸರು ಬಂಧಿಸಿದ್ದರೆ, ಸಮೀರ್ ಹತ್ಯೆ ನಡೆಯುತ್ತಿರಲಿಲ್ಲ. ಸಂಜು ಅವರು ದ್ವೇಷ ಭಾಷಣ ಮಾಡಿದರೂ, ಅವರ ವಿರುದ್ಧ ಪ್ರಕರಣ ದಾಖಲಿಸಲಿಲ್ಲ. ಮುಚ್ಚಳಿಕೆ ಬರೆಸಿಕೊಂಡು ಎಚ್ಚರಿಕೆ ನೀಡಲಿಲ್ಲ' ಎಂದು ಅವರು ದೂರಿದ್ದಾರೆ.

'ಗದಗ ಜಿಲ್ಲಾ ಎಸ್‌ಪಿ ಶಿವಪ್ರಕಾಶ್ ದೇವರಾಜು ಅವರ ಹೇಳಿಕೆ ಆಧರಿಸಿ ಬಹುತ್ವ ಕರ್ನಾಟಕ ಸತ್ಯಶೋಧನಾ ತಂಡ ನರಗುಂದಕ್ಕೆ ಭೇಟಿ ನೀಡಿ ಸ್ಥಳೀಯರು, ಪೊಲೀಸರಿಂದ ವಿವರ ಕಲೆ ಹಾಕಿದೆ. ಸಂತ್ರಸ್ತ ಕುಟುಂಬಗಳು ಭಯದಲ್ಲಿವೆ. ತಮ್ಮದೇ ಕ್ಷೇತ್ರದಲ್ಲಿ ಕೊಲೆ ಆಗಿದ್ದರೂ ಸಚಿವ ಸಿ.ಸಿ.ಪಾಟೀಲ ಅವರು ಸೌಜನ್ಯಕ್ಕಾದರೂ ಭೇಟಿ ನೀಡಿಲ್ಲ. ತಹಶೀಲ್ದಾರ್, ಜಿಲ್ಲಾಧಿಕಾರಿ ಕೂಡ ಕುಟುಂಬದವರಿಗೆ ಸಾಂತ್ವನ ಹೇಳಿಲ್ಲ. ಹತ್ಯೆ ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲರನ್ನೂ ಪೊಲೀಸರು ಬಂಧಿಸಬೇಕು. ದ್ವೇಷ ಭಾಷಣ, ಸೌಹಾರ್ದ ಕದಡುವ ಪ್ರಚೋದನಕಾರಿ ಹೇಳಿಕೆ ನೀಡುವವರಿಗೆ ಚುರುಕು ಮುಟ್ಟಿಸಬೇಕು' ಎಂದು ಅವರು ಆಗ್ರಹಿಸಿದರು.

ಸುದ್ದಿ 2 ನಿಮಿಷ


ಆರ್ಯ ಈಡಿಗ ಸಂಸ್ಥಾನ: ವಿಖ್ಯಾತಾನಂದ ಸ್ವಾಮೀಜಿ ನೂತನ ಪೀಠಾಧಿಪತಿ

ಮಾಗಡಿ: ತಾಲ್ಲೂಕಿನ ಸೋಲೂರಿನಲ್ಲಿರುವ ಆರ್ಯ ಈಡಿಗ ಮಹಾ ಸಂಸ್ಥಾನದ ನಾರಾಯಣ ಗುರು ಮಠದ ರೇಣುಕಾ ಪೀಠದ ಪೀಠಾಧಿಪತಿಯಾಗಿ ವಿಖ್ಯಾತಾನಂದ ಸ್ವಾಮೀಜಿ ಆಯ್ಕೆಯಾಗಿದ್ದಾರೆ. ಅವರ ಪೀಠಾರೋಹಣ ಕಾರ್ಯಕ್ರಮವು ಫೆಬ್ರುವರಿ 2ರಂದು ಸಂಸ್ಥಾನದಲ್ಲಿ ಸರಳವಾಗಿ ನೆರವೇರಲಿದೆ.

ಪೀಠವನ್ನು ಮುನ್ನಡೆಸಲು ಶ್ರೀಗಳು ಬೇಕು ಎನ್ನುವುದು ಬಹುದಿನಗಳ ಬೇಡಿಕೆ ಆಗಿತ್ತು. ಇದೀಗ ಆ ಸ್ಥಾನವನ್ನು ವಿಖ್ಯಾತಾನಂದ ಸ್ವಾಮೀಜಿ ತುಂಬುತ್ತಿದ್ದಾರೆ. ಫೆ. 2ರಂದು ಸಂಸ್ಥಾನದ ಆವರಣದಲ್ಲಿ ಸರಳವಾಗಿ ಕಾರ್ಯಕ್ರಮವು ನಡೆಯಲಿದೆ ಎಂದು ಆರ್ಯ ಈಡಿಗ ಸಂಸ್ಥಾನದ ವ್ಯವಸ್ಥಾಪಕ ಧರ್ಮದರ್ಶಿ ಎಂ. ತಿಮ್ಮೇಗೌಡ ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಸಂಸ್ಥಾನದ ಕಾರ್ಯನಿರ್ವಾಹಕ ಧರ್ಮದರ್ಶಿ ಜೆ.ಪಿ. ಸುಧಾಕರ್ ಮಾತನಾಡಿ, ಕೋವಿಡ್ ಕಾರಣಕ್ಕೆ ಪಟ್ಟಾಭಿಷೇಕವನ್ನು ಸರಳ ಹಾಗೂ ಸಂಪ್ರದಾಯಕ್ಕೆ ಸೀಮಿತ ಚೌಕಟ್ಟಿನಲ್ಲಿ ಆಚರಣೆ ಮಾಡುತ್ತಿದ್ದೇವೆ. ಸೋಂಕು ಸಂಪೂರ್ಣ ಹತೋಟಿಗೆ ಬಂದ ಬಳಿಕ ದೊಡ್ಡ ಸಮಾವೇಶ ಮಾಡಿ ಸ್ವಾಮೀಜಿಗೆ ಗೌರವ ಸಮರ್ಪಣೆ ಮಾಡುತ್ತೇವೆ ಎಂದರು.

ನಾರಾಯಣ ಗುರು ಮಠದ ಪೂರ್ವನಿಯೋಜಿತ ಪೀಠಾಧಿಪತಿ ವಿಖ್ಯಾತಾನಂದ ಸ್ವಾಮೀಜಿ ಇದ್ದರು.



ಪರಿಶಿಷ್ಟ ಪಂಗಡಗಳ ಪಟ್ಟಿಗೆ ಪರಿವಾರ, ತಳವಾರ ಸೇರ್ಪಡೆ

ಬೆಂಗಳೂರು: ಹಿಂದುಳಿದ ವರ್ಗಗಳ ಪ್ರವರ್ಗ–1ರಲ್ಲಿದ್ದ ಪರಿವಾರ ಮತ್ತು ತಳವಾರ ಸಮುದಾಯಗಳನ್ನು ಪರಿಶಿಷ್ಟ ಪಂಗಡಗಳ (ಎಸ್‌.ಟಿ) ಪಟ್ಟಿಗೆ ಸೇರಿಸಿ ಸಮಾಜ ಕಲ್ಯಾಣ ಇಲಾಖೆ ಶನಿವಾರ ಆದೇಶ ಹೊರಡಿಸಿದೆ.

ಈ ಎರಡೂ ಸಮುದಾಯಗಳ ಜನರಿಗೆ ಪರಿಶಿಷ್ಟ ಪಂಗಡಗಳ ಅಡಿಯಲ್ಲಿ ಜಾತಿ ಪ್ರಮಾಣಪತ್ರ ವಿತರಿಸುವಂತೆ ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರರಿಗೆ ಆದೇಶದಲ್ಲಿ ನಿರ್ದೇಶನ ನೀಡಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಸಮುದಾಯದ ಜನರನ್ನು ಮಾತ್ರ ಈ ಹಿಂದೆ ಎಸ್‌.ಟಿ ಪಟ್ಟಿಗೆ ಸೇರಿಸಲಾಗಿತ್ತು.

ಬೆಳಗಾವಿ ಮತ್ತು ಧಾರವಾಡ ಜಿಲ್ಲೆಯಲ್ಲಿರುವ ಸಿದ್ದಿ ಸಮುದಾಯದ ಜನರಿಗೂ ಎಸ್‌.ಟಿ ಅಡಿಯಲ್ಲಿ ಜಾತಿ ಪ್ರಮಾಣಪತ್ರ ನೀಡುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ಅತ್ಯಾಚಾರ ಆರೋಪ: ಸರ್ಕಾರಿ ಉದ್ಯೋಗಿ ಜಾಮೀನು ಅರ್ಜಿ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಉದ್ಯೋಗಿ ಎಂಬ ಕಾರಣಕ್ಕೆ ಜಾಮೀನು ನೀಡಲಾಗದು' ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಅತ್ಯಾಚಾರ ಆರೋಪ ಪ್ರಕರಣದಲ್ಲಿ ಜೈಲು ಸೇರಿರುವ ಬೆಸ್ಕಾಂ ಉದ್ಯೋಗಿಯೊಬ್ಬರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ.

ಈ ಕುರಿತಂತೆ ಆರೋಪಿ ಎಚ್.ಎನ್ ಶ್ರೀನಿವಾಸ ಮೂರ್ತಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಅರ್ಜಿದಾರರ ವಿರುದ್ಧ ಅತ್ಯಾಚಾರದಂತಹ ಗಂಭೀರ ಸ್ವರೂಪದ ಆರೋಪವಿದೆ. ಸಿಆರ್‌ಪಿಸಿ ಕಲಂ 164ರ ಅಡಿ ಸಂತ್ರಸ್ತೆ ನೀಡಿರುವ ಹೇಳಿಕೆ ಹಾಗೂ ವೈದ್ಯಕೀಯ ಸಾಕ್ಷ್ಯ ಗಮನಿಸಿದರೆ ಆರೋಪಿ ಅತ್ಯಾಚಾರ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಅಂತೆಯೇ ಆರೋಪಿಯು, ಸಂತ್ರಸ್ತೆಗೆ ಘಟನೆ ಬಗ್ಗೆ ಯಾರಿಗೂ ಹೇಳದಂತೆ ಹೆದರಿಸಿರುವುದು ಮತ್ತು ಜೀವ ಬೆದರಿಕೆ ಒಡ್ಡಿರುವ ಆರೋಪವೂ ಇರುವ ಕಾರಣ ಜಾಮೀನು ನೀಡಲಾಗದು' ಎಂದು ಅರ್ಜಿ ತಿರಸ್ಕಾರಕ್ಕೆ ಕಾರಣ ನೀಡಿದೆ.

ವಿಚಾರಣೆ ಸಂದರ್ಭದಲ್ಲಿ ಅರ್ಜಿದಾರರ ಪರ ವಕೀಲರು, 'ಸಂತ್ರಸ್ತೆ ನೀಡಿರುವ ದೂರಿನಲ್ಲಿ ಹುರುಳಿಲ್ಲ. ಸರ್ಕಾರಿ ಉದ್ಯೋಗಿ ಎಂಬ ಕಾರಣಕ್ಕೆ ಸುಳ್ಳು ದೂರು ದಾಖಲಿಸಲಾಗಿದೆ. ಅರ್ಜಿದಾರರು 2021ರ ನವೆಂಬರ್ 14ರಿಂದ ನ್ಯಾಯಾಂಗ ಬಂಧನದಲ್ಲಿದ್ದಾರೆ. ಆದ್ದರಿಂದ, ಜಾಮೀನು ಮಂಜೂರು ಮಾಡಬೇಕು' ಎಂದು ಕೋರಿದ್ದರು. ಈ ಮನವಿಗೆ ಪ್ರಾಸಿಕ್ಯೂಷನ್ ಆಕ್ಷೇಪ ವ್ಯಕ್ತಪಡಿಸಿತ್ತು.

ಆರೋಪವೇನು?: '2021ರ ಸೆ. 14ರಂದು ಆರೋಪಿ ಶ್ರೀನಿವಾಸ್ ಮೂರ್ತಿ ನನ್ನನ್ನು ಹೋಮ್ ಸ್ಟೇ ಯೊಂದಕ್ಕೆ ಕರೆದೊಯ್ದು ನನ್ನ ಇಚ್ಛೆಗೆ ವಿರುದ್ಧವಾಗಿ ಲೈಂಗಿಕ ಸಂಪರ್ಕ ಬೆಳೆಸಿದ್ದ. ನನಗೆ ಬೇರೆ ಯುವಕನೊಂದಿಗೆ ಮದುವೆ ನಿಶ್ಚಯವಾಗಿದೆ ಎಂದರೂ ಬಿಟ್ಟಿರಲಿಲ್ಲ. ಲೈಂಗಿಕ ಸಂಪರ್ಕದ ಬಳಿಕ ನನ್ನನ್ನು ಮದುವೆಯಾಗುವುದಾಗಿ ಭರವಸೆ ನೀಡಿದ್ದ. ಈ ವಿಷಯವನ್ನು ಯಾರಿಗಾದರೂ ತಿಳಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದ' ಎಂದು ಆರೋಪಿಸಿ ಸಂತ್ರಸ್ತೆಯು ಬೆಂಗಳೂರಿನ ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಆರೋಪಿಯು ಕೆಪಿಟಿಸಿಎಲ್ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ)ಆಗಿದ್ದಾರೆ.

ಊರಿನಲ್ಲಿಲ್ಲದಿದ್ದರೂ ಜಾತಿನಿಂದನೆ ಪ್ರಕರಣ ದಾಖಲು– ಹೊರಟ್ಟಿ ಬೇಸರ

ಪೊಲೀಸರು ಸತ್ಯಾಸತ್ಯತೆ ಪರಿಗಣಿಸಿಲ್ಲ

ಧಾರವಾಡ: 'ಜಾತಿನಿಂದನೆ ಪ್ರಕರಣ ದಾಖಲಿಸುವಾಗ ಸತ್ಯಾಸತ್ಯತೆ ಪರಿಶೀಲಿಸಿಲ್ಲ. ಪೊಲೀಸರ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಬೇಸರ ವ್ಯಕ್ತಪಡಿಸಿದರು.

ಮುಗದದಲ್ಲಿರುವ ಸರ್ವೋದಯ ಶಿಕ್ಷಣ ಟ್ರಸ್ಟ್‌ಗೆ ಸೇರಿದ ಶಾಲೆಯಲ್ಲಿ ಜ.25ರಂದು ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, '1996ರಿಂದ ಸರ್ವೋದಯ ಶಿಕ್ಷಣ ಟ್ರಸ್ಟ್ ಅಧ್ಯಕ್ಷನಾಗಿದ್ದೇನೆ. ಶಾಲೆಯ ಪ್ರಾಂಶುಪಾಲರ ಕೊಠಡಿಯಲ್ಲಿ ನನ್ನ ಭಾವಚಿತ್ರ ಹಾಕಿದ್ದಾರೆ. ಅಲ್ಲಿಗೆ ಭೇಟಿ ನೀಡಿದ ವಾಲ್ಮೀಕಿ ಸಮಾಜದ ಕೆಲವರು ದಾಂದಲೆ ನಡೆಸಿ, ಫೋಟೊ ಕಿತ್ತು ತುಳಿದಿದ್ದಾರೆ. ಇದನ್ನು ಪ್ರಶ್ನಿಸಿದ ಶಿಕ್ಷಕರು ಹಾಗೂ ಶಾಲಾ ಸಿಬ್ಬಂದಿ ಮೇಲೆಯೇ ಹಲ್ಲೆ ನಡೆಸಿದ್ದಾರೆ' ಎಂದು ವಿವರಿಸಿದರು.

'ಶಿಕ್ಷಕರ ಮೇಲೆ ಹಲ್ಲೆ ನಡೆಸಿದ್ದು ಕಂಡ ವಿದ್ಯಾರ್ಥಿಗಳು ಬಂದವರ ಕಾರಿನ ಗಾಜು ಒಡೆದಿದ್ದಾರೆ ಎಂಬ ಮಾಹಿತಿ ಶಾಲೆಯಿಂದ ಬಂದ ತಕ್ಷಣ ನಾನೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಕರೆ ಮಾಡಿ ಭದ್ರತೆ ಒದಗಿಸಲು ತಿಳಿಸಿದೆ. ಆದರೆ, ಈ ಕುರಿತು ಪ್ರಾಂಶುಪಾಲರ ದೂರು, ಗ್ರಾಮೀಣ ಠಾಣೆಯಲ್ಲಿ ದಾಖಲಿಸಿಲ್ಲ. ಇದರ ಹಿಂದೆ ಸಂಚಿದೆ' ಎಂದು ಅನುಮಾನಿಸಿದರು.

'ನನ್ನ ವಿರುದ್ಧ ರಾತ್ರಿ 11.30ಕ್ಕೆ ಪ್ರಕರಣ ದಾಖಲಾಗಿದ್ದರೂ, ಮಧ್ಯರಾತ್ರಿ 3ಕ್ಕೆ ಕರೆ ಮಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪಿ.ಕೃಷ್ಣಕಾಂತ್, ತಮ್ಮ ವಿರುದ್ಧ ಪ್ರಕರಣ ದಾಖಲಾಗಿದೆ. ತಮ್ಮ ಮಾರ್ಗದರ್ಶನ ಅಗತ್ಯ ಎಂದರು. ಸಭಾಪತಿಯಾಗಿ ನನ್ನ ಪರಿಸ್ಥಿತಿಯೇ ಹೀಗಾದರೆ, ಇನ್ನು ಇಂಥ ವಿಷಯದಲ್ಲಿ ಸಾಮಾನ್ಯರ ಪಾಡೇನು? ಸ್ಥಳದಲ್ಲಿ ನಾನಿಲ್ಲದಿದ್ದರೂ ಪ್ರಕರಣ ದಾಖಲಾಗಿದೆ' ಎಂದರು.

ಈ ಬಗ್ಗೆ ಪ್ರತಿಕ್ರಿಯೆಗೆ ಯತ್ನಿಸಿದಾಗ ಎಸ್‌ಪಿ ಕೃಷ್ಣಕಾಂತ್ ಕರೆ ಸ್ವೀಕರಿಸಲಿಲ್ಲ.

ತಹಶೀಲ್ದಾರ್ ವಿರುದ್ಧ ಪ್ರಕರಣ

ಬೀದರ್: ತಮ್ಮ ಕಚೇರಿಯಲ್ಲಿ ಶುಕ್ರವಾರ ಹಲ್ಲೆಗೊಳಗಾದ ಹುಮನಾಬಾದ್ ತಹಶೀಲ್ದಾರ್ ಪ್ರದೀಪ್ ಹಿರೇಮಠ ವಿರುದ್ಧ ಪ್ರತಿಭಟನಕಾರರು ಪ್ರತಿದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

'ತಹಶೀಲ್ದಾರ್ ಪ್ರದೀಪ್ ಹಾಗೂ 25 ಸಿಬ್ಬಂದಿ ನಮ್ಮನ್ನು ಜಾತಿಯಿಂದ ನಿಂದಿಸಿ ಹಲ್ಲೆ ಮಾಡಿದ್ದಾರೆ' ಎಂದು ಬಿಎಸ್‌ಪಿ ಜಿಲ್ಲಾ ಘಟಕದ ಕಾರ್ಯದರ್ಶಿ ರಾಜಕುಮಾರ ಮಾರುತಿ ಶಿಂಧೆ ದೂರು ನೀಡಿದ್ದು, ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯನ್ವಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ತಹಶೀಲ್ದಾರ್ ಪ್ರದೀಪ್ ಅವರು ಮೊದಲ ಆರೋಪಿ ಯಾಗಿದ್ದು, ಅವರ ಕಚೇರಿಯ 25 ಸಿಬ್ಬಂದಿ (ಹೆಸರು ನಮೂದಿಸಿಲ್ಲ) 2ನೇ ಆರೋಪಿಗಳನ್ನಾಗಿ ಮಾಡಲಾಗಿದೆ.

ತಹಶೀಲ್ದಾರ್ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಬಿಎಸ್‌ಪಿ ರಾಜ್ಯ ಘಟಕದ ಕಾರ್ಯದರ್ಶಿ ಅಂಕುಶ್ ಗೋಖಲೆ, ಇತರ ಐವರಿಗೆ ಹುಮನಾಬಾದ್ ನ್ಯಾಯಾಲಯ 14 ದಿನ ನ್ಯಾಯಾಂಗ ಬಂಧನ ವಿಧಿಸಿದೆ.

ಅಂಬೇಡ್ಕರ್ ಭಾವಚಿತ್ರ ತೆರವು: ಅಹವಾಲು ಸಲ್ಲಿಕೆ

ಪ್ರಜಾವಾಣಿ ವಾರ್ತೆ

ರಾಯಚೂರು: 'ಗಣರಾಜ್ಯೋತ್ಸವದಂದು ನಡೆದ ಘಟನೆಗೆ ಸಂಬಂಧಿಸಿದಂತೆ ನ್ಯಾಯಾಧೀಶ ಮಲ್ಲಿಕಾರ್ಜುನಗೌಡ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಹೈಕೋರ್ಟ್ ನ್ಯಾಯಮೂರ್ತಿ ಸಚಿನ್ ಮಗ್ದುಮ್ ಅವರಿಗೆ ಅಹವಾಲು ಸಲ್ಲಿಸಲಾಯಿತು' ಎಂದು ವಕೀಲ ಕರುಣಾಕರ ಕಟ್ಟಿ 'ಪ್ರಜಾವಾಣಿ'ಗೆ ತಿಳಿಸಿದರು.

'ರಾಯಚೂರು ಜಿಲ್ಲಾ ಆಡಳಿತಾತ್ಮಕ ನ್ಯಾಯಮೂರ್ತಿ ಸಚಿನ್ ಮಗ್ದುಮ್ ಅವರು ಶನಿವಾರ ಇಲ್ಲಿಗೆ ಬಂದಿದ್ದರು. 10 ಜನ ವಕೀಲರು ಅವರನ್ನು ಭೇಟಿಯಾಗಿ ಎಲ್ಲ ನ್ಯಾಯಾಲಯಗಳಲ್ಲಿ ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರ ಅಳವಡಿಸಲು ಹೈಕೋರ್ಟ್‌ನಿಂದ ಆದೇಶ ನೀಡುವಂತೆ ಕೋರಿದೆವು. ಅದನ್ನು ಹೈಕೋರ್ಟ್ ಸಮಿತಿಗೆ ಸಲ್ಲಿಸುವುದಾಗಿ ಅವರು ತಿಳಿಸಿದ್ದಾರೆ' ಎಂದರು.

'ಗಣರಾಜ್ಯೋತ್ಸವ ಘಟನೆಗೆ ಸಂಬಂಧಿಸಿ ಜಿಲ್ಲಾ ಆಡಳಿತಾತ್ಮಕ ನ್ಯಾಯಮೂರ್ತಿ ಕೇಳಿದ ಪ್ರಶ್ನೆಗಳಿಗೆ ವಕೀಲರ ಸಂಘದ ಇಬ್ಬರು ಪದಾಧಿಕಾರಿಗಳು ಮೌಖಿಕವಾಗಿ ವಿವರಿಸಿದ್ದಾರೆ' ಎಂದು ರಾಯಚೂರು ಜಿಲ್ಲಾ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ತಿಳಿಸಿದರು. 'ನ್ಯಾ.ಸಚಿನ್ ಮಗ್ದುಮ್ ಅವರು ಜಿಲ್ಲಾ ನ್ಯಾಯಾಂಗ ಆಡಳಿತಕ್ಕೆ ಸಂಬಂಧಿಸಿದಂತೆ ಪರಿಶೀಲನೆ ಸಭೆ ನಡೆಸಿದರು' ಎಂದು ಮೂಲ ತಿಳಿಸಿವೆ.

'ಹೈಕೋರ್ಟ್ ತನಿಖೆ ನಡೆಸಲಿ'

ಮೈಸೂರು: 'ರಾಯಚೂರು ಜಿಲ್ಲಾ ನ್ಯಾಯಾಲಯದಲ್ಲಿ ಗಣರಾಜ್ಯೋತ್ಸವ ವೇಳೆ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ತೆರವು ಮಾಡಿದ ಘಟನೆಗೆ ಸಂಬಂಧಿಸಿದಂತೆ ಹೈಕೋರ್ಟ್ ಸಮಗ್ರ ತನಿಖೆ ನಡೆಸಬೇಕು' ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ಒತ್ತಾಯಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳೇ ಸ್ವಯಂ ಪ್ರೇರಣೆಯಿಂದ ತನಿಖೆ ನಡೆಸಿ, ಕ್ರಮ ತೆಗೆದುಕೊಳ್ಳಬೇಕು. ಮುಂದೆ ಇಂತಹ ಘಟನೆ ಆಗದಂತೆ ಎಚ್ಚರ ವಹಿಸಬೇಕಿದೆ. ಈ ಸಂಬಂಧ ಕಾನೂನು ಸಚಿವರಿಗೆ ಪತ್ರ ಬರೆಯುತ್ತೇನೆ' ಎಂದರು.

ನಿರ್ಬಂಧ ಭಾಗಶಃ ತೆರವು

ಒಂದನೇ ಪುಟದಿಂದ

ಮಹಾರಾಷ್ಟ್ರ, ಕೇರಳ ಮತ್ತು ಗೋವಾ ಗಡಿಯಲ್ಲಿ ಕಟ್ಟೆಚ್ಚರ ಮುಂದುವರಿಸಲು ಹೊಸ ಮಾರ್ಗಸೂಚಿಯಲ್ಲಿ ನಿರ್ದೇಶನ ನೀಡಲಾಗಿದೆ.

ಸಭೆಯ ಬಳಿಕ ಪತ್ರಕರ್ತರ ಜತೆ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ, 'ರಾಜ್ಯದಲ್ಲಿ ಈಗ 4.02 ಲಕ್ಷ ಸಕ್ರಿಯ ಕೋವಿಡ್ ಪ್ರಕರಣಗಳಿವೆ. ಅವರಲ್ಲಿ 14 ವರ್ಷದೊಳಗಿನ ಸೋಂಕಿತರ ಸಂಖ್ಯೆ 22,318 (ಶೇ 5.5) ಇದೆ. ಆಸ್ಪತ್ರೆಗೆ ದಾಖಲಾಗುತ್ತಿರುವ ಮಕ್ಕಳ ಪ್ರಮಾಣ ಶೇ 1.8ರಷ್ಟು ಮಾತ್ರ ಇದೆ. ಮರಣ ಪ್ರಮಾಣ ಶೇ 0.03 ಮಾತ್ರ ದಾಖಲಾಗಿದೆ' ಎಂದು ವಿವರ ನೀಡಿದರು.

ಕೋವಿಡ್ ದೃಢಪ್ರಮಾಣ ದರ ಶೇ 33ಕ್ಕೆ ತಲುಪಿತ್ತು. ಈಗ ಅದು ಶೇ 20.9ಕ್ಕೆ ಕುಸಿದಿದೆ. ಸೋಂಕಿತರಲ್ಲಿ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ತೀರಾ ಕಡಿಮೆ ಇರುವುದರಿಂದ ಬಿಗಿಯಾದ ನಿರ್ಬಂಧಗಳ ಅಗತ್ಯವಿಲ್ಲ ಎಂಬ ಸಲಹೆ ವ್ಯಕ್ತವಾಗಿದೆ. ತಜ್ಞರ ಸಮಿತಿಯ ಅಭಿಪ್ರಾಯವನ್ನೂ ಪಡೆದು ನಿರ್ಬಂಧಗಳನ್ನು ತೆರವು ಮಾಡುವ ಮತ್ತು ಸಡಿಲಿಸುವ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಯಾವುದಕ್ಕೆಲ್ಲ ಸಂಪೂರ್ಣ ನಿರ್ಬಂಧ ತೆರವು?

- ಸರ್ಕಾರಿ ಕಚೇರಿಗಳಿಗೆ ಎಲ್ಲ ನೌಕರರೂ ಹಾಜರಾಗುವುದು ಕಡ್ಡಾಯ.
- ಹೋಟೆಲ್, ಬಾರ್ ಮತ್ತು ರೆಸ್ಟೋರೆಂಟ್, ಪಬ್, ಕ್ಲಬ್‌ಗಳಲ್ಲಿ ಪೂರ್ಣ ನಿರ್ಬಂಧ ತೆರವು
- ಸಾರ್ವಜನಿಕ ಸಾರಿಗೆಯಲ್ಲಿ ಪೂರ್ಣ ಸಾಮರ್ಥ್ಯದ ಸೀಟುಗಳ ಭರ್ತಿಗೆ ಅವಕಾಶ

ಯಾವುದಕ್ಕೆಲ್ಲ ನಿರ್ಬಂಧ?

- ಚಿತ್ರಮಂದಿರ, ಮಲ್ಟಿಪ್ಲೆಕ್ಸ್, ರಂಗಮಂದಿರ, ಸಭಾಭವನಗಳಲ್ಲಿ ಶೇ 50ರಷ್ಟು ಸೀಟು ಭರ್ತಿಗೆ ಅವಕಾಶ
- ಮದುವೆ ಸಮಾರಂಭಗಳಿಗೆ ತೆರೆದ ಸ್ಥಳದಲ್ಲಿ 300 ಜನರಿಗೆ ಮತ್ತು ಒಳಾಂಗಣದಲ್ಲಿ 200 ಜನರಿಗೆ ಅವಕಾಶ
- ದೇವಾಲಯಗಳಲ್ಲಿ ದರ್ಶನ ಮತ್ತು ಸೇವೆಗೆ ಅವಕಾಶ, ಒಮ್ಮೆಗೆ 50 ಜನರಿಗೆ ಮಾತ್ರ
- ರ‍್ಯಾಲಿ, ಧರಣಿ, ಸಮಾವೇಶ, ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಕಾರ್ಯಕ್ರಮಗಳಿಗೆ ನಿರ್ಬಂಧ
- ಕ್ರೀಡಾ ಸಂಕೀರ್ಣ, ಸ್ಟೇಡಿಯಂ, ಈಜುಕೊಳ ಮತ್ತು ಜಿಮ್‌ಗಳಲ್ಲಿ ಶೇ 50ರಷ್ಟು ಮಂದಿಗೆ ಮಾತ್ರ ಅವಕಾಶ

ಜ.31ರಿಂದ ರಾಜ್ಯದ ಯಾವುದೇ ಭಾಗದಲ್ಲೂ ರಾತ್ರಿ ಕರ್ಫ್ಯೂ ಇರುವುದಿಲ್ಲ. ಹೋಟೆಲ್, ಪಬ್, ಕ್ಲಬ್, ಬಾರ್– ರೆಸ್ಟೋರೆಂಟ್ ಗಳಲ್ಲಿ ವಹಿವಾಟು ನಡೆಸಲು ಮುಕ್ತವಾದ ಅವಕಾಶ ನೀಡಲಾಗುವುದು. ಎಲ್ಲ ಬಗೆಯ ಸಾರ್ವಜನಿಕ ಸಾರಿಗೆಗಳಲ್ಲಿ ಸಾಮರ್ಥ್ಯದ ಸಂಪೂರ್ಣ ಪ್ರಮಾಣದಲ್ಲಿ ಪ್ರಯಾಣಿಕರಿಗೆ ಅವಕಾಶ ನೀಡಲು ಸಮ್ಮತಿಸಲಾಗಿದೆ ಎಂದು ಅವರು ತಿಳಿಸಿದರು.

ರಾಜ್ಯದ ಎಲ್ಲ ಆಸ್ಪತ್ರೆಗಳಲ್ಲಿ ಎಲ್ಲ ಬಗೆಯ ಹಾಸಿಗೆಗಳಲ್ಲಿ ಶೇ 10ರಷ್ಟನ್ನು ಕೋವಿಡ್ ರೋಗಿಗಳ ಚಿಕಿತ್ಸೆಗೆ ಕಾಯ್ದಿರಿಸುವಂತೆಯೂ ಆದೇಶ ಹೊರಡಿಸಲಾಗಿದೆ.

ಸೋಮವಾರದಿಂದ ತರಗತಿ

'ಬೆಂಗಳೂರು ನಗರದ ವ್ಯಾಪ್ತಿಯಲ್ಲಿ 1ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ಸೋಮವಾರದಿಂದ ಭೌತಿಕ ತರಗತಿಗಳನ್ನು ನಡೆಸಲಾಗುವುದು. ಇತರ ಜಿಲ್ಲೆಗಳಲ್ಲಿ ಇರುವಂತೆಯೇ ಕೋವಿಡ್ ನಿಯಂತ್ರಣ ಮಾರ್ಗಸೂಚಿ ಪಾಲಿಸಿಕೊಂಡು ತರಗತಿಗಳನ್ನು ನಡೆಸಲಾಗುವುದು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

'ಕೋವಿಡ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುವ ಶಾಲೆಗಳನ್ನು ಮಾತ್ರ ಮುಚ್ಚಲಾಗುವುದು. ಸೋಂಕು ಕಡಿಮೆಯಾದ ಬಳಿಕ ಅಂತಹ ಶಾಲೆಗಳಲ್ಲಿ ಮತ್ತೆ ತರಗತಿಗಳನ್ನು ಆರಂಭಿಸಲಾಗುವುದು' ಎಂದರು.

ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಡಾ. ಸುದರ್ಶನ್ ಮತ್ತು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಸಂಸದ ಪ್ರತಾಪಸಿಂಹ ಹಟ: ರಾಮದಾಸ್, ನಾಗೇಂದ್ರ ವಿರೋಧ

ಅಡುಗೆ ಅನಿಲ ಪೈಪ್‌ಲೈನ್–ಬಿಜೆಪಿಯಲ್ಲಿ ಕಚ್ಚಾಟ!

ಪ್ರಜಾವಾಣಿ ವಾರ್ತೆ


ಮೈಸೂರಿನ ರಿಂಗ್ ರಸ್ತೆ ಬಳಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿ

ಮೈಸೂರು: ನಗರದಲ್ಲಿ ಮನೆಗಳಿಗೆ ಅಡುಗೆ ಅನಿಲ ಪೂರೈಸುವ ಪೈಪ್‌ಲೈನ್ ಅಳವಡಿಕೆ ವಿಚಾರವಾಗಿ ಆಡಳಿತಾರೂಢ ಬಿಜೆಪಿಯಲ್ಲಿ ಕಚ್ಚಾಟ ತಾರಕಕ್ಕೇರಿದೆ.

ಕಾಮಗಾರಿ ಮೈಸೂರು ರಿಂಗ್ ರಸ್ತೆ ಬಳಿ ಈಗಾಗಲೇ ಆರಂಭವಾಗಿದೆ. ಯೋಜನೆ ಅನುಷ್ಠಾನಕ್ಕೆ ಬಿಜೆಪಿ ಸಂಸದ ಪ್ರತಾಪಸಿಂಹ ಹಟ ತೊಟ್ಟಿದ್ದರೆ, ಇದೇ ಪಕ್ಷದ ಶಾಸಕರಾದ ಎಸ್.ಎ.ರಾಮದಾಸ್ ಹಾಗೂ ಎಲ್.ನಾಗೇಂದ್ರ ವಿರೋಧಿಸುತ್ತಿದ್ದಾರೆ. ನಗರದೊಳಗೆ ಯೋಜನೆ ಅನುಷ್ಠಾನಕ್ಕೆ ಅನುಮತಿ ಪಡೆಯಲು ಕರೆದಿದ್ದ ಪಾಲಿಕೆ ಸಭೆಯಿಂದ ಆಡಳಿತ ಪಕ್ಷವಾದ ಬಿಜೆಪಿ ಕಾರ್ಪೊರೇಟರ್‌ಗಳೇ ದೂರ ಉಳಿದಿದ್ದರು.

ಇದು ಪ್ರತಾಪಸಿಂಹ ಅವರನ್ನು ಕೆರಳಿಸಿದ್ದು, ಬಹಿರಂಗವಾಗಿಯೇ ತಮ್ಮ ಪಕ್ಷದ ಶಾಸಕರು, ಪಾಲಿಕೆ ಸದಸ್ಯರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಅದಕ್ಕೆ ಶಾಸಕರು ತಿರುಗೇಟು ನೀಡಿದ್ದಾರೆ.

ಯೋಜನೆ ಅನುಷ್ಠಾನದಿಂದ ಹಾಳಾದ ರಸ್ತೆ ದುರಸ್ತಿಗೆ ಬಿಡುಗಡೆಯಾಗುವ ಹಣ ಹಾಗೂ ಕಮಿಷನ್ ವಿಚಾರವೇ ಪರಸ್ಪರ ತಿಕ್ಕಾಟಕ್ಕೆ ಕಾರಣವಾಗಿದೆ ಎಂದು ಮೂಲಗಳು ತಿಳಿಸಿವೆ.

ಆದರೆ, ಕಮಿಷನ್ ವಿಚಾರವನ್ನು ಮೂವರು ಜನಪ್ರತಿನಿಧಿಗಳೂ ಅಲ್ಲಗಳೆದಿದ್ದಾರೆ. ಬದಲಾಗಿ ರಸ್ತೆ ಹಾಳಾಗಿ, ದೂಳು ಏಳಲಿದ್ದು, ದುರಸ್ತಿಗೆ ನೀಡುವ ಹಣ ಸಾಕಾಗುವುದಿಲ್ಲ ಎಂಬುದು ಶಾಸಕರ ವಾದ.

'ಪೈಪ್‌ಲೈನ್ ಅಳವಡಿಸಲು ರಸ್ತೆ ಅಗೆಯುವುದಕ್ಕೆ ವಿರೋಧವಿದೆ ಎಂದಾದರೆ, ಮೊಬೈಲ್ ಕಂಪನಿಗಳ ಕೇಬಲ್ ಅಳವಡಿಸಲು ಎಲ್ಲ ರಸ್ತೆಗಳನ್ನೂ ಅಗೆಯಲಾಗಿತ್ತು. ಆಗ ವಿರೋಧ ವ್ಯಕ್ತಪಡಿಸಿಲ್ಲ ಏಕೆ? ಖಾಸಗಿ ಕಂಪನಿಗಳು ಪಾಲಿಕೆ ಸದಸ್ಯರನ್ನು ವೈಯಕ್ತಿಕವಾಗಿ ಮಾತನಾಡಿಸಿಕೊಂಡು ಹೋಗಿದ್ದರೇ' ಎಂದು ಪ್ರತಾಪಸಿಂಹ ಪ್ರಶ್ನಿಸಿದ್ದಾರೆ.

'ರಸ್ತೆ ಅಗೆದ 24 ಗಂಟೆಗಳಲ್ಲಿ ಸರಿಪಡಿಸಲಾಗುತ್ತದೆ. ಪ್ರತಿ ಮೀಟರ್‌ಗೆ ₹ 2,000 ನೀಡುವುದಲ್ಲದೆ, ಕಂಪನಿಯೇ ದುರಸ್ತಿ ಮಾಡುತ್ತದೆ' ಎಂದಿದ್ದಾರೆ.

ಇದಕ್ಕೆ ತಿರುಗೇಟು ನೀಡಿರುವ ನಾಗೇಂದ್ರ, 'ಏಜೆನ್ಸಿಯವರು ಪಾಲಿಕೆ ಸದಸ್ಯರು, ಅಧಿಕಾರಿಗಳೊಂದಿಗೆ ಚರ್ಚಿಸಿ ಅನುಮತಿ ಪಡೆಯಬೇಕು. ಪ್ರತಾಪಸಿಂಹ ಅವರಿಗೆ ಏಕೆ ಆಸಕ್ತಿ? ಗುತ್ತಿಗೆದಾರರ ಪರವಾಗಿ ಏಕೆ ಹೋರಾಟ ಮಾಡುತ್ತಿದ್ದಾರೆ? ಏಜೆನ್ಸಿಯವರು ಕೊಡುವ ಹಣ ದುರಸ್ತಿಗೆ ಸಾಕಾಗುವುದಿಲ್ಲ. ಜನರಿಗೆ ತೊಂದರೆ ಉಂಟು ಮಾಡುವ ಕಾಮಗಾರಿಗೆ ನಾನು ಬಿಡುವುದಿಲ್ಲ' ಎಂದಿದ್ದಾರೆ.

ಅನುಕೂಲವೇನು?: 'ಈಗ ಒಂದು ಅಡುಗೆ ಅನಿಲ ಸಿಲಿಂಡರ್ ಬೆಲೆ ₹ 904 ಇದೆ. ಪೈಪ್‌ಲೈನ್ ಮೂಲಕ ಮನೆಗೆ ಪೂರೈಕೆಯಾದರೆ ಇಷ್ಟೇ ಪ್ರಮಾಣದ ಅಡುಗೆ ಅನಿಲ ₹ 500 ರಿಂದ ₹ 550ಕ್ಕೆ ಲಭ್ಯವಾಗಲಿದೆ. ಅಂದರೆ ₹ 400 ಉಳಿತಾಯವಾಗಲಿದೆ' ಎಂಬುದು ಸಂಸದ ಪ್ರತಾಪ ಸಿಂಹ ಅವರ ಸಮರ್ಥನೆ.

ಶಾಸಕರ ವಿರೋಧವೇಕೆ?

ಯಾರೊಂದಿಗೂ ಚರ್ಚಿಸದೆ, ಏಕಾಏಕಿ ಯೋಜನೆ ಜಾರಿಗೆ ಪ್ರತಾಪಸಿಂಹ ಆಸಕ್ತಿ ವಹಿಸಿರುವುದು ಶಾಸಕರ ಕೋಪಕ್ಕೆ ಕಾರಣ. ಅಲ್ಲದೇ, ಪಾಲಿಕೆಯಿಂದ ಅನುಮತಿ ಪಡೆಯಲು ಗುತ್ತಿಗೆದಾರರ ಪರ ವಕಾಲತ್ತು ವಹಿಸಿದ್ದಾರೆ ಎಂಬುದು ಆರೋಪ. ರಸ್ತೆ ಅಭಿವೃದ್ಧಿಗೆ ಈಗಾಗಲೇ ಕೋಟ್ಯಂತರ ರೂಪಾಯಿ ವ್ಯಯಿಸಿದ್ದು, ಪೈಪ್‌ಲೈನ್ ಅಳವಡಿಸಲು ಮತ್ತೆ ನೆಲ ಅಗೆಯಬೇಕಾಗಿರುವುದರಿಂದ ರಸ್ತೆ ಹಾಳಾಗಲಿದೆ ಎಂಬ ವಾದವನ್ನೂ ಮುಂದಿಡುತ್ತಾರೆ.

'ತಾವೇ ಜಾರಿಗೆ ತಂದ ಯೋಜನೆ ಎಂದು ಹೇಳಿಕೊಂಡು ತಿರುಗಾಡುತ್ತಾರೆ' ಎಂದು ಶಾಸಕರು ದೂರಿದ್ದಾರೆ.

ಏನಿದು ಯೋಜನೆ?

ಪೈಪ್‌ಲೈನ್ ಮೂಲಕ ಮನೆಗಳಿಗೆ ನೈಸರ್ಗಿಕ ಅಡುಗೆ ಅನಿಲ (ಪಿಎನ್‌ಜಿ) ಪೂರೈಸುವ ಯೋಜನೆ ಇದಾಗಿದ್ದು, ಎಜಿ ಅಂಡ್ ಪಿ ಪ್ರಥಮ್ ಕಂಪನಿಗೆ ಗುತ್ತಿಗೆ ನೀಡಲಾಗಿದೆ. ಮೊದಲ ಹಂತದಲ್ಲಿ ಮೈಸೂರು ನಗರದ 40 ಸಾವಿರ ಮನೆಗಳಿಗೆ ಸಂಪರ್ಕ ಕಲ್ಪಿಸುವ ಗುರಿ ಇದೆ. ಹೆಬ್ಬಾಳದಲ್ಲಿ ಪಿಎನ್‌ಜಿ ಸಂಗ್ರಹ ಘಟಕ ಸ್ಥಾಪಿಸಲಾಗುತ್ತಿದೆ.



ತಿನ್ನುವುದಿಲ್ಲ, ತಿನ್ನಲು ಬಿಡುವುದಿಲ್ಲ ಎಂಬುದು ಪ್ರಧಾನಿ ಮೋದಿ ಘೋಷಣೆ. ಹೀಗಾಗಿ, ಇಲ್ಲಿ ಯಾವುದೇ ಕಮಿಷನ್ ವ್ಯವಹಾರ ಇಲ್ಲ

ಪ್ರತಾಪಸಿಂಹ, ಬಿಜೆಪಿ ಸಂಸದ



ಕಮಿಷನ್ ಯಾವನಿಗೆ ಬೇಕು? ಗುತ್ತಿಗೆದಾರ ಯಾರೆಂದೇ ಗೊತ್ತಿಲ್ಲ. ಯೋಜನೆ ಮಾಹಿತಿಯನ್ನೇ ನೀಡಿಲ್ಲ. ರಸ್ತೆ ಹಾಳು ಮಾಡಿ ಜನರಿಗೆ ದ್ರೋಹ ಬಗೆಯುತ್ತಿದ್ದಾರೆ

ಎಲ್.ನಾಗೇಂದ್ರ, ಬಿಜೆಪಿ ಶಾಸಕ



ಪೈಪ್‌ಲೈನ್ ಅಳವಡಿಕೆಯಿಂದ ರಸ್ತೆಗಳು ಹಾಳಾಗುತ್ತವೆ. ಹೀಗಾಗಿ, ಅನುಮತಿ ಕೊಡಬಾರದು. ಪಾಲಿಕೆ ಆಯುಕ್ತರಿಗೆ ಪತ್ರ ಕೂಡ ಬರೆದಿದ್ದೇನೆ

ಎಸ್.ಎ.ರಾಮದಾಸ್, ಬಿಜೆಪಿ ಶಾಸಕ

2,430 ಬ್ಯಾಕ್‌ಲಾಗ್ ಹುದ್ದೆ: ಮೂರು ತಿಂಗಳಲ್ಲಿ ಭರ್ತಿ

ಒಂದನೇ ಪುಟದಿಂದ

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಮೂಲಕ ನಡೆಯಬೇಕಿರುವ ನೇಮಕಾತಿ ಪ್ರಕ್ರಿಯೆಗಳಿಗೂ ವಾರದೊಳಗೆ ಅಧಿಸೂಚನೆ ಹೊರಡಿಸಬೇಕು.

ಆರು ತಿಂಗಳೊಳಗೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿ ಆಯ್ಕೆಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಅದಕ್ಕೆ ಪೂರಕವಾಗಿ ಕೆಪಿಎಸ್‌ಸಿಗೆ ಆಯಾ ಇಲಾಖೆಗಳು ಕೋರಿಕೆ ಸಲ್ಲಿಸಬೇಕು ಎಂದು ಸಮಿತಿ ನಿರ್ದೇಶನ ನೀಡಿತು.

ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ, ಎಸ್. ಅಂಗಾರ ಮತ್ತು ಪ್ರಭು ಚವ್ಹಾಣ ಸಭೆಯಲ್ಲಿದ್ದರು. ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಸೇರಿದಂತೆ ಇಲಾಖಾ ಮುಖ್ಯಸ್ಥರೂ ಪಾಲ್ಗೊಂಡಿದ್ದರು.

ಶಾಸಕ ಸಿ.ಟಿ. ರವಿಗೆ ಪಿತೃವಿಯೋಗ


ಸಿ.ಇ. ತಿಮ್ಮೇಗೌಡ

ಚಿಕ್ಕಮಗಳೂರು: ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯ ದರ್ಶಿಯೂ ಆಗಿರುವ ಶಾಸಕ ಸಿ.ಟಿ. ರವಿ ಅವರ ತಂದೆ ಸಿ.ಇ. ತಿಮ್ಮೇಗೌಡ (92) ಶನಿವಾರ ಬೆಂಗಳೂರಿನಲ್ಲಿ ನಿಧನ ರಾದರು.

ತಿಮ್ಮೇಗೌಡ ಅವರು ಚಿಕ್ಕಮಗಳೂರು ತಾಲ್ಲೂಕಿನ ಚಿಕ್ಕಮಾಗರವಳ್ಳಿ ಗ್ರಾಮದವರು. ಕೃಷಿಯಲ್ಲಿ ತೊಡಗಿಕೊಂಡಿದ್ದರು. ಅವರಿಗೆ ಪತ್ನಿ ಹೊನ್ನಮ್ಮ, ಪುತ್ರರಾದ ಸಿ.ಟಿ. ರಘು, ಸಿ.ಟಿ. ರವಿ, ಪುತ್ರಿಯರಾದ ರೇಣುಕಾ, ರೇವತಿ, ರೋಹಿಣಿ ಇದ್ದಾರೆ.

ಆಲ್ದೂರು ಸಮೀಪದ ತೋಟದ ಮನೆಯಲ್ಲಿ ಭಾನುವಾರ ಬೆಳಿಗ್ಗೆ 6ರಿಂದ 11.30ರವರೆಗೆ ಪಾರ್ಥಿವ ಶರೀರದ ದರ್ಶನಕ್ಕೆ ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ. ತೋಟದಲ್ಲಿ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜನವರಿ 30, 2022

ಶ್ರೀಪ್ಲವನಾಮ ಸಂವತ್ಸರ ಉತ್ತರಾಯಣ–ಹೇಮಂತ ಋತು ಮಕರ ಮಾಸದ 16ನೇ ದಿನ
ತಿಥಿ: (ಪೌಷ ಕೃಷ್ಣ) ತ್ರಯೋದಶಿ ಗಂ. 17-29 **ನಕ್ಷತ್ರ:** ಪೂರ್ವಾಷಾಢಾ ಗಂ. 24-23 **ಯೋಗ:** ಹರ್ಷಣ ಗಂ. 14-15, **ಕರಣ:** ಗರಜೆ ಗಂ. 07-29. **ರಾಹುಕಾಲ:** ಸಾಯಂಕಾಲ 04:30–06:00 **ಸೂರ್ಯೋದಯ:** 07-01 **ಸೂರ್ಯಾಸ್ತ:** 06-27
ಮುಸ್ಲಿಂ ದಿನಾಂಕ: 26 ಜುಮಾದುಸ್ಸಾನಿ
ದಿನ ವಿಶೇಷ: ಮೇರು ತ್ರಯೋದಶಿ (ಜೈನ್), ರತಾಂತಿ ಕಾಳಿಕಾ ಪೂಜೆ, ಹುತಾತ್ಮರ ದಿನ
ಅದೃಷ್ಟ ಸಂಖ್ಯೆ: 8, 15

ಮೇಷ: ಗುಪ್ತಚರ ದಳ ಮಂದಿಗೆ ಕಾರ್ಯಭಾರಗಳು ಹೆಚ್ಚಲಿದೆ. ಸಮಸ್ಯೆಗಳನ್ನು ಶೀಘ್ರ ಬಗೆ ಹರಿಸಿಕೊಳ್ಳಲು ಪ್ರಯತ್ನಿಸುವಿರಿ. ಕೆಲವು ದಿನಗಳಿಂದಿದ್ದ ಸಹೋದರರೊಂದಿಗಿನ ಮನಸ್ತಾಪ ಮುಕ್ತವಾದ ಮಾತುಕತೆಯಿಂದಾಗಿ ದೂರಾಗುವುದು.

ವೃಷಭ: ನಿಮ್ಮ ಮಗನ ಇಂದಿನ ಅನಿರೀಕ್ಷಿತ ಬದಲಾವಣೆ ನಿಮಗೆ ಅಚ್ಚರಿ ತರುತ್ತದೆ. ಬಂಧುಗಳ ಸಹಕಾರ ಮನೋಭಾವ ನೆಮ್ಮದಿ ತರುತ್ತದೆ. ಭಯಭೀತಿಯಿಂದ ಹೊರಬರುವಿರಿ. ಚಿತ್ರ ನಿರ್ಮಾಪಕರಿಗೆ ಹೊಸ ಹುರುಪು.

ಮಿಥುನ: ಬಯಸಿದ ಕೆಲಸಗಳನ್ನು ನೀವು ಇಂದು ತ್ವರಿತವಾಗಿ ಮಾಡಿ ಮುಗಿಸುತ್ತೀರಿ. ಆಟೋಮೊಬೈಲ್ಸ್ ಸಂಬಂಧಿತ ಕೆಲಸಗಾರರಿಗೆ ಹರ್ಷದಾಯಕ ದಿನ. ನಿಮ್ಮ ದೈಹಿಕ ಶ್ರಮವೇ ಈ ದಿನದ ಯಶಸ್ಸಿನ ಗುಟ್ಟಾಗಿರುವುದು.

ಕರ್ಕಾಟಕ: ಭೂವ್ಯವಹಾರ ಪೂರ್ಣಗೊಂಡು ಹಣ ಕೈ ಸೇರುತ್ತದೆ. ಜೀವನದಲ್ಲಿ ಹೊಸ ಅಧ್ಯಾಯ ಸೃಷ್ಟಿಯಾಗುತ್ತದೆ. ಆಸಕ್ತಿಕರ ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡರೆ ಹೊಸ ಯೋಜನೆಗಳಿಗೆ ಸಹಕಾರಿಯಾಗಲಿದೆ.

ಸಿಂಹ: ವೈಯಕ್ತಿಕ ಮತ್ತು ವ್ಯಾವಹಾರಿಕವಾಗಿ ಬಾಕಿ ಇರುವ ಕೆಲಸ ಈ ದಿನದಲ್ಲಿ ಪೂರ್ತಿಗೊಳಿಸುವಿರಿ. ಸಂಗೀತ ಅಥವಾ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವಿರಿ. ರಾಜಕಾರಣಿಗಳ ಮಾತಿನ ಪ್ರಭಾವದಿಂದ ನಿಮ್ಮ ಕೆಲಸ ನೆರವೇರುತ್ತದೆ.

ಕನ್ಯಾ: ಆತ್ಮವಿಶ್ವಾಸದಿಂದಾಗಿ ಕೆಲಸ ಕಾರ್ಯಗಳಲ್ಲಿ ಉತ್ತಮ ಯಶಸ್ಸು ಹೊಂದುವಿರಿ. ಎದುರಾಳಿಗೆ ಪರಿಣಾಮಕಾರಿಯಾಗುವ ನಿರ್ಧಾರಗಳು ತೆಗೆದುಕೊಳ್ಳಿ. ರಫ್ತು ವ್ಯಾಪಾರಗಳು ಮಾಡುವವರಿಗೆ ಸಂಪರ್ಕದಲ್ಲಿ ಅಡೆತಡೆ.

ತುಲಾ: ಸಂಸಾರದ ಜವಾಬ್ದಾರಿ ಸುಗಮವಾಗಿ ನಿಭಾಯಿಸುವಿರಿ. ಸಹನೆಯಿಂದ ಆಡಿದ ಮಾತುಗಳಿಗೆ ಗೌರವ. ಮಕ್ಕಳ ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳುವುದು ಈ ದಿನ ನಿಮಗೆ ಕಷ್ಟವಾದರೂ ಅನಿವಾರ್ಯವಾಗಿ ನೆಡೆದುಕೊಳ್ಳಿರಿ.

ವೃಶ್ಚಿಕ: ಸಮಯವನ್ನು ವ್ಯವಸ್ಥಿತ ರೀತಿಯಲ್ಲಿ ವಿಭಾಗಿಸಿ, ಸಮಯೋಚಿತವಾಗಿ ಕೆಲಸ ನಿರ್ವಹಿಸಿ. ಈ ದಿನ ಯಾವುದೇ ರೀತಿಯ ವ್ಯಾವಹಾರಿಕ ಜವಾಬ್ದಾರಿವಹಿಸಿಕೊಳ್ಳಬೇಡಿ. ಮಗಳಿಗೆ ಅನುರೂಪ ವರ ದೊರೆತು ನೆಮ್ಮದಿ ಇರುವುದು.

ಧನು: ವೃತ್ತಿರಂಗದಲ್ಲಿ ಬೆಳವಣಿಗೆ ಕಂಡುಬಂದು ಮಹತ್ವದ ಕೆಲಸಗಳು ಕಾರ್ಯರೂಪ ಪಡೆಯುವುವು. ಕೆಟ್ಟ ಜನರ ದೃಷ್ಟಿದೋಷಕ್ಕೂ ಒಳಗಾಗುವಿರಿ. ಕಠಿಣ ಕೆಲಸವೊಂದಕ್ಕೆ ಕೈ ಹಾಕುವ ಮನಸ್ಸಾಗಲಿದೆ, ಯೋಚಿಸಿ ನಿರ್ಧರಿಸಿ.

ಮಕರ: ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ಒಳ್ಳೆಯ ಆದಾಯವು ದೊರೆಯುತ್ತದೆ. ಕೃಷಿಕರಿಗೆ ಕೆಲಸದಲ್ಲಿ ಬಿಡುವಿಲ್ಲದಂತೆ ಆಗುವುದು. ನಿಮ್ಮ ಕಠಿಣ ನಿರ್ಧಾರದಿಂದ ನಿಮ್ಮ ಹಿಂದಿನ ಕೆಲಸಕಾರ್ಯಗಳೆಲ್ಲವು ಪೂರ್ಣಗೊಳ್ಳಲಿದೆ.

ಕುಂಭ: ಕುಟುಂಬದ ಸದಸ್ಯರಿಂದ ಒಂದು ಶುಭ ಸುದ್ದಿಯನ್ನು ಕೇಳುವಿರಿ. ಈ ಹಿಂದಿನ ದಿನಗಳಲ್ಲಿ ವಿಪರೀತ ಕೆಲಸಗಳಿಂದ ದೇಹಾಲಸ್ಯ ತೋರಿ ಈ ದಿನ ವಿಶ್ರಾಂತಿಯ ಬದುಕನ್ನು ಬಯಸುವಿರಿ. ಕಾಫಿ ಬೆಳೆಗಾರರಿಗೆ ಲಾಭ ಸಿಗುವುದು.

ಮೀನ: ತಾಯಿ ಆರೋಗ್ಯ ಸುಧಾರಿಸಿ ಆಸ್ಪತ್ರೆಯಿಂದ ಮನೆಗೆ ಬರುವರು. ಭವಿಷ್ಯದ ಭದ್ರತೆಗೆ ಕುರಿತಾದ ನಿಮ್ಮ ಕಾಳಜಿಯಿಂದ ಕುಟುಂಬಕ್ಕೆ ಸಂತೃಪ್ತಿ. ನಿಮ್ಮ ಮನೋಭಿಲಾಷೆಯಂತೆ ನಿಶ್ಚಯಿಸಿದ ಕಾರ್ಯ ಸಾಗುವುದು.

ಅಮಿತ್ ಶಾ, ಯೋಗಿ, ಸ್ಮೃತಿ ಇರಾನಿ ಪ್ರಚಾರ: 2013ರ ಮುಜಫ್ಫರ್‌ನಗರ ಗಲಭೆಯ ಉಲ್ಲೇಖ

ಜಾಟ್ ಸಿಟ್ಟು: ಧ್ರುವೀಕರಣ ನೆಚ್ಚಿದ ಬಿಜೆಪಿ

• ಸಂಜಯ ಪಾಂಡೆ

ಲಖನೌ: ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ರಾಜಕೀಯವಾಗಿ ಅತ್ಯಂತ ಪ್ರಭಾವಿಯಾಗಿರುವ 'ಜಾಟ್' ಸಮುದಾಯ ಮತ್ತು ರೈತರ ಆಕ್ರೋಶದಿಂದ ಆಗಲಿರುವ ಹಾನಿ ಸರಿಪಡಿಸಲು ಬಿಜೆಪಿ ಇನ್ನಿಲ್ಲದ ಪ್ರಯತ್ನ ನಡೆಸುತ್ತಿದೆ. ಫೆಬ್ರುವರಿ 10ರಂದು ಮೊದಲ ಹಂತದಲ್ಲಿ ಮತದಾನ ನಡೆಯಲಿರುವ ಈ ಪ್ರದೇಶದಲ್ಲಿ ಬಿಜೆಪಿಯ ಹಿರಿಯ ಮುಖಂಡರೆಲ್ಲ ಮನೆಮನೆ ಪ್ರಚಾರ ನಡೆಸುತ್ತಿದ್ದಾರೆ. ಮತದಾರರ ಜತೆಗೆ ಸಂವಾದ ನಡೆಸುತ್ತಿದ್ದಾರೆ. ಎಲ್ಲೆಡೆಯೂ 'ಹಿಂದುತ್ವ' ಕಾರ್ಯಸೂಚಿಯನ್ನು ಮುಂದಕ್ಕೆ ತರಲು ಯತ್ನಿಸಲಾಗುತ್ತಿದೆ. ಕೋಮು ಧ್ರುವೀಕರಣದ ಯತ್ನ ಎದ್ದು ಕಾಣುತ್ತಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಉಪ ಮುಖ್ಯಮಂತ್ರಿ ದಿನೇಶ್ ಶರ್ಮಾ ಮತ್ತು ಕೇಂದ್ರ ಸಚಿವೆ ಸ್ಮೃತಿ ಇರಾನಿ ಈ ಪ್ರದೇಶದ ವಿವಿಧ ಭಾಗಗಳಲ್ಲಿ ಶನಿವಾರ ಪ್ರಚಾರ ನಡೆಸಿದ್ದಾರೆ.

ಶರ್ಮಾ ಅವರನ್ನು ಬಿಟ್ಟು ಉಳಿದ ಮೂವರು ನಾಯಕರು 2013ರ ಮುಜಫ್ಫರ್‌ನಗರ ಕೋಮು ಗಲಭೆಯನ್ನು ತಮ್ಮ ಪ್ರಚಾರದಲ್ಲಿ ಉಲ್ಲೇಖಿಸಿದ್ದಾರೆ. ಸಮಾಜವಾದಿ ಪಕ್ಷವು (ಎಸ್‌ಪಿ) ಅಧಿಕಾರಕ್ಕೆ ಬಂದರೆ ಕೋಮು ಗಲಭೆ ನಡೆಯಲಿದೆ ಎಂಬ ಎಚ್ಚರಿಕೆಯನ್ನು ಈ ನಾಯಕರು ನೀಡಿದ್ದಾರೆ.

ಈ ಪ್ರದೇಶದಲ್ಲಿ 2013ರಲ್ಲಿ ಕೋಮುಗಲಭೆಗೆ ಕಾರಣವಾದ ಇಬ್ಬರು ಜಾಟ್ ಯುವಕರ ಹತ್ಯೆಯನ್ನೂ ಬಿಜೆಪಿ ಮುಖಂಡರು ನೆನಪಿಸುತ್ತಿದ್ದಾರೆ.

'ಮುಜಫ್ಫರ್‌ನಗರದಲ್ಲಿ 2013ರಲ್ಲಿ ನಡೆದ ಕೋಮು ಗಲಭೆಯನ್ನು ನೀವು ಮರೆತಿದ್ದೀರಾ' ಎಂದು ಅಮಿತ್ ಶಾ ಪ್ರಶ್ನಿಸಿದ್ದಾರೆ. ಸಂತ್ರಸ್ತರನ್ನು ಗಲಭೆಕೋರರೆಂದೂ ಗಲಭೆಕೋರರನ್ನು ಸಂತ್ರಸ್ತರೆಂದೂ ಪರಿಗಣಿಸಲಾಗಿತ್ತು ಎಂದು ಮಜಫ್ಫರ್‌ನಗರದಲ್ಲಿ ಶಾ ಆರೋಪಿಸಿದ್ದಾರೆ.

ಸ್ಮೃತಿ ಇರಾನಿ ಅವರು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿದ್ದಾರೆ. 2013ರ ಮುಜಫ್ಫರ್‌ನಗರ ಗಲಭೆಯಲ್ಲಿ ಮೃತರಾದ ಸಚಿನ್ ಮತ್ತು ಗೌರವ್ ಸೋದರರ ತ್ಯಾಗವನ್ನು ನೀವು ಮರೆಯಲು ಸಾಧ್ಯವೇ ಎಂದು ಅವರು ಮೀರತ್‌ನಲ್ಲಿ ಪ್ರಶ್ನಿಸಿದ್ದಾರೆ (ತಮ್ಮ ಸಹೋದರಿಯನ್ನು ಚುಡಾಯಿಸುವುದನ್ನು ತಡೆಯಲು ಯತ್ನಿಸಿದಾಗ ಇವರ ಮೇಲೆ ಹಲ್ಲೆ ಮಾಡಿ ಹತ್ಯೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ).

'ಸಹೋದರಿಯನ್ನು ರಕ್ಷಿಸುವ ಪ್ರಯತ್ನದಲ್ಲಿ ಈ ಸಹೋದರರು ಪ್ರಾಣ ತೆತ್ತರು. ಅವರು ತ್ಯಾಗವನ್ನು ನೀವು ಮರೆಯಲೇಬಾರದು' ಎಂದು ಮೀರತ್‌ನಲ್ಲಿ ಮತದಾರರ ಜತೆಗಿನ ಸಂವಾದದಲ್ಲಿ ಸ್ಮೃತಿ ಹೇಳಿದ್ದಾರೆ.

ಗಾಜಿಯಾಬಾದ್ ಮತ್ತು ಬಾಗ್‌ಪತ್‌ನಲ್ಲಿ ಪ್ರಚಾರ ನಡೆಸಿದ ಯೋಗಿ ಆದಿತ್ಯನಾಥ ಅವರು ಕೋಮು ಗಲಭೆಯನ್ನು ಉಲ್ಲೇಖಿಸಿದ್ದಲ್ಲದೆ, ಎಸ್‌ಪಿ–ಆರ್‌ಎಲ್‌ಡಿ ಮೈತ್ರಿಕೂಟಕ್ಕೆ ಮತ ಹಾಕದಂತೆ ಜನರಿಗೆ ಎಚ್ಚರಿಕೆ ನೀಡಿದರು.

'ನಾವು ನಿಮಗೆ ಗಲಭೆಮುಕ್ತ ರಾಜ್ಯವನ್ನು ಕೊಟ್ಟಿದ್ದೇವೆ. ಕಾಶಿ ಮತ್ತು ಮಥುರಾದಂತಹ ಹಿಂದೂ ಧಾರ್ಮಿಕ ಕೇಂದ್ರಗಳನ್ನು ನಾವು ನವೀಕರಿಸಿದ್ದೇವೆ. ಅವರು ಕಬರ್‌ಸ್ತಾನಗಳನ್ನು (ಸ್ಮಶಾನ) ಕಟ್ಟಿದ್ದಾರೆ. 2013ರ ಗಲಭೆ ನಿಮಗೆ ನೆನಪಿಲ್ಲವೇ' ಎಂದು ಸಂವಾದದಲ್ಲಿ ಯೋಗಿ ಅವರು ಪ್ರಶ್ನಿಸಿದ್ದಾರೆ.

ಬಿಜೆಪಿಯು ಹಿಂದುತ್ವವನ್ನು ಹೆಚ್ಚು ಆಕ್ರಮಣಕಾರಿಯಾಗಿಯೇ ಮುಂದಕ್ಕೆ ತಂದಿದೆ. ಜಾಟ್ ಸಮುದಾಯದ ಸಿಟ್ಟು ಚುನಾವಣೆಯ ಮೇಲೆ ಪರಿಣಾಮ ಬೀರಲಿದೆ ಎಂಬ ಭಾವನೆ ಬಿಜೆಪಿಯಲ್ಲಿ ಇದೆ. ಸಮುದಾಯದ ಮನವೊಲಿಸುವ ಯತ್ನ ಫಲ ಕೊಟ್ಟಿಲ್ಲ ಎಂಬುದನ್ನು ಇದು ಸಮರ್ಥಿಸುತ್ತದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಜಾಟ್ ಪ್ರಾಬಲ್ಯದ ಪ್ರದೇಶದಲ್ಲಿ 2017ರ ಚುನಾವಣಾ ಫಲಿತಾಂಶದ ಪುನರಾವರ್ತನೆಯು ಕೋಮು ಧ್ರುವೀಕರಣದಿಂದ ಮಾತ್ರ ಸಾಧ್ಯ ಎಂಬುದು ಬಿಜೆಪಿಯ ನಂಬಿಕೆ. ಹಾಗಾಗಿಯೇ, ಹಿಂದುತ್ವವನ್ನು ಆಕ್ರಮಣಕಾರಿಯಾಗಿ ಪ್ರತಿಪಾದಿಸಲಾಗುತ್ತಿದೆ ಎಂದು ಲಖನೌದ ರಾಜಕೀಯ ವಿಶ್ಲೇಷಕರೊಬ್ಬರು ಹೇಳಿದ್ದಾರೆ.

ಬಿಜೆಪಿಯ ಇಷ್ಟೊಂದು ನಾಯಕರು ಈ ಪ್ರದೇಶಕ್ಕೆ ಲಗ್ಗೆ ಇಟ್ಟಿರುವುದು ಗಮನಿಸಿದರೆ, ಪರಿಸ್ಥಿತಿಯ ಸಂಪೂರ್ಣ ಅರಿವು ಅವರಿಗೆ ಆಗಿದೆ ಅನಿಸುತ್ತದೆ ಎಂದು ಎಸ್‌ಪಿ ಮುಖಂಡರು ಹೇಳಿದ್ದಾರೆ. 'ಬಿಜೆಪಿ ಸೋಲು ಒಪ್ಪಿಕೊಂಡಂತೆ ಕಾಣಿಸುತ್ತಿದೆ. ಹಾಗಾಗಿಯೇ ಆ ಪಕ್ಷವು ಹಿಂದುತ್ವ ಮತ್ತು ಧ್ರುವೀಕರಣದ ಮೊರೆ ಹೋಗಿದೆ' ಎಂದು ಎಸ್‌ಪಿ ಮುಖಂಡರೊಬ್ಬರು ಹೇಳಿದ್ದಾರೆ.


ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮುಜಫ್ಫರ್‌ನಗರದಲ್ಲಿ ಶನಿವಾರ ಚುನಾವಣಾ ಪ್ರಚಾರ ನಡೆಸಿದರು. ಭಾರಿ ಸಂಖ್ಯೆಯಲ್ಲಿ ಜನ ಸೇರಿದ್ದರೂ ಕೋವಿಡ್ ತಡೆ ಮಾರ್ಗಸೂಚಿ ಅನುಸರಿಸಿರಲಿಲ್ಲ ಎಂಬ ಆರೋಪ ಕೇಳಿ ಬಂದಿದೆ ಪಿಟಿಐ ಚಿತ್ರ

ಹಿಂದೂ–ಮುಸ್ಲಿಂ ಧ್ರುವೀಕರಣದಿಂದ ಲಾಭ ಆಗದು: ರಾಕೇಶ್ ಟಿಕಾಯತ್

ಲಖನೌ (ಪಿಟಿಐ): ರೈತರ ಅಭಿವೃದ್ಧಿ ಬಗ್ಗೆ ಮಾತನಾಡುವವರಿಗೆ ಮಾತ್ರ ಉತ್ತರ ಪ್ರದೇಶದ ಮತದಾರರು ಮತ ಹಾಕಲಿದ್ದಾರೆ. ಧಾರ್ಮಿಕ ಧ್ರುವೀಕರಣದಲ್ಲಿ ತೊಡಗಿರುವವರಿಗೆ ಅದರಿಂದ ಯಾವುದೇ ಪ್ರಯೋಜನ ಆಗದು ಎಂದು ಭಾರತೀಯ ಕಿಸಾನ್ ಯೂನಿಯನ್ ನಾಯಕ ರಾಕೇಶ್ ಟಿಕಾಯತ್ ಶನಿವಾರ ಹೇಳಿದ್ದಾರೆ.

ಉತ್ತರ ಪ್ರದೇಶದಲ್ಲಿ ರೈತರ ಉತ್ಪನ್ನಗಳಿಗೆ ಅತ್ಯಂತ ಕಡಿಮೆ ಬೆಲೆ ಸಿಗುತ್ತಿದೆ. ಆದರೆ, ವಿದ್ಯುತ್ ಶುಲ್ಕವಾಗಿ ಭಾರಿ ಮೊತ್ತ ಪಾವತಿಸಬೇಕಿದೆ. ಹೀಗಾಗಿ ರೈತರು ಸಂಕಷ್ಟದಲ್ಲಿದ್ದಾರೆ ಎಂದು ಅವರು ಹೇಳಿದ್ದಾರೆ.

'ರೈತರು, ನಿರುದ್ಯೋಗಿ ಯುವ ಜನರು ಮತ್ತು ಮಧ್ಯಮ ವರ್ಗವನ್ನು ಬಾಧಿಸುತ್ತಿರುವ ಹಣದುಬ್ಬರವೇ ಚುನಾವಣೆಯ ವಿಷಯ. ಜಿನ್ನಾ ಮತ್ತು ಪಾಕಿಸ್ತಾನದ ಬಗ್ಗೆ ನಿರಂತರವಾಗಿ ಹೇಳಿಕೆಗಳನ್ನು ನೀಡುವ ಮೂಲಕ ಹಿಂದೂ–ಮುಸ್ಲಿಂ ಧ್ರುವೀಕರಣದ ಪ್ರಯತ್ನ ನಡೆಯುತ್ತಿದೆ. ಆದರೆ, ಧ್ರುವೀಕರಣದ ಯತ್ನ ನಡೆಸುತ್ತಿರುವವರಿಗೆ ಅದರ ಲಾಭ ದೊರೆಯದು' ಎಂದು ಟಿಕಾಯತ್ ಅವರು ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಧ್ರುವೀಕರಣ ನಡೆಸುತ್ತಿರುವ ಪಕ್ಷ ಅಥವಾ ವ್ಯಕ್ತಿಯ ಹೆಸರನ್ನು ಅವರು ಹೇಳಿಲ್ಲ.


ಕೋಮು ಧ್ರುವೀಕರಣ ಮಾಡದವರಿಗೆ, ಪಾಕಿಸ್ತಾನ ಮತ್ತು ಜಿನ್ನಾ ಬಗ್ಗೆ ಮಾತನಾಡದೆ ಜನರ ಸಮಸ್ಯೆಗಳ ಬಗ್ಗೆ ಮಾತನಾಡುವವರಿಗೆ ಜನರು ಮತ ಹಾಕುತ್ತಾರೆ ಎಂಬುದು ನನ್ನ ಭಾವನೆ
ರಾಕೇಶ್ ಟಿಕಾಯತ್, ರೈತರ ನಾಯಕ

ಸಮಾಜವಾದಿ ಪಕ್ಷ ಮತ್ತು ಅದರ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಪಾಕಿಸ್ತಾನದ ಬೆಂಬಲಿಗರು ಮತ್ತು ಜಿನ್ನಾ ಆರಾಧಕರು ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಇತ್ತೀಚೆಗೆ ಟೀಕಿಸಿದ್ದರು. ಪಾಕಿಸ್ತಾನ ಮತ್ತು ಅದರ ಸ್ಥಾಪಕ ಮೊಹಮ್ಮದ್ ಅಲಿ ಜಿನ್ನಾ ಬಗ್ಗೆ ಅಖಿಲೇಶ್ ನೀಡಿದ್ದ ಹೇಳಿಕೆಯನ್ನು ಇರಿಸಿಕೊಂಡು ಯೋಗಿ ಅವರು ವಾಗ್ದಾಳಿ ನಡೆಸಿದ್ದರು.

ಬಿಜೆಪಿಯ ವಿರುದ್ಧ ಪ್ರಚಾರ ನಡೆಸುವ ಯಾವುದೇ ಯೋಜನೆ ಇಲ್ಲ ಎಂದು ಟಿಕಾಯತ್ ಸ್ಪಷ್ಟಪಡಿಸಿದ್ದಾರೆ. ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ದೆಹಲಿಯ ಗಡಿಗಳಲ್ಲಿ ಒಂದು ವರ್ಷ ನಡೆದ ಪ್ರತಿಭಟನೆಯ ಮುಂಚೂಣಿಯಲ್ಲಿ ಟಿಕಾಯತ್ ಇದ್ದರು.

'ನಾನು ರಾಜಕಾರಣಿ ಅಲ್ಲ. ರಾಜಕಾರಣದಿಂದ ದೂರವೇ ಇರುತ್ತೇನೆ. ನಾನು ರೈತರ ವಿಷಯಗಳ ಬಗ್ಗೆ ಮಾತ್ರ ಮಾತನಾಡುತ್ತೇನೆ. ನಾಯಕರನ್ನು ಪ್ರಶ್ನಿಸಿ ಎಂದು ಜನರನ್ನು ಕೋರುತ್ತಿದ್ದೇನೆ. ರೈತರ ವಿಷಯಗಳ ಬಗ್ಗೆ ಮಾತನಾಡುವುದನ್ನು ಮುಂದುವರಿಸುತ್ತೇನೆ' ಎಂದು ಅವರು ಹೇಳಿದ್ದಾರೆ.

ಉತ್ತರ ಪ್ರದೇಶದಲ್ಲಿ ಯಾವ ಪಕ್ಷ ಗೆಲ್ಲಬಹುದು ಎಂಬ ಭವಿಷ್ಯ ನುಡಿಯಲು ಅವರು ನಿರಾಕರಿಸಿದ್ದಾರೆ. ಈಗಿನ ಸರ್ಕಾರದ ಬಗ್ಗೆ ರೈತರಲ್ಲಿ ಒಳ್ಳೆಯ ಭಾವನೆ ಇಲ್ಲ. ಅದು ಫಲಿತಾಂಶದಲ್ಲಿ ಕಾಣಿಸಲಿದೆ ಎಂದಷ್ಟೇ ಅವರು ಹೇಳಿದ್ದಾರೆ.

ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಚಟುವಟಿಕೆಗಳ ಬಗ್ಗೆ ಜನರು ಎಚ್ಚರದಿಂದ ಇರಬೇಕು. ಏಕೆಂದರೆ, ಈ ಅಧಿಕಾರಿಗಳು ಅಧಿಕಾರದಲ್ಲಿ ಇರುವ ಪಕ್ಷಕ್ಕೆ ಅನುಕೂಲಕರವಾಗಿ ನಡೆದುಕೊಳ್ಳಬಹುದು ಎಂಬ ಎಚ್ಚರಿಕೆಯನ್ನೂ ಅವರು ನೀಡಿದ್ದಾರೆ.

ಗೋವಾ: 3 ಕ್ಷೇತ್ರಗಳಲ್ಲಿ ಶಾ ಸಭೆ ಇಂದು

ಪಣಜಿ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಗೋವಾಕ್ಕೆ ಭಾನುವಾರ ಭೇಟಿ ನೀಡಲಿದ್ದಾರೆ. ಈ ವೇಳೆ ಗೋವಾದ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಸಾರ್ವಜನಿಕ ಸಭೆ ನಡೆಸಲಿದ್ದಾರೆ.

ಪೊಂಡಾ, ಸಾನ್ವೋರ್ಡೆಮ್ ಮತ್ತು ವಾಸ್ಕೊ ವಿಧಾನಸಭಾ ಕ್ಷೇತ್ರಗಳಲ್ಲಿ ಅವರು ಒಳಾಂಗಣ ಸಭೆ ನಡೆಸಲಿದ್ದಾರೆ. ಭಾನುವಾರ ಸಂಜೆ 4:30ಕ್ಕೆ ಪೊಂಡಾದಲ್ಲಿ, 6:30ಕ್ಕೆ ಸಾನ್ವೋರ್ಡೆಮ್‌ನಲ್ಲಿ ಮತ್ತು ರಾತ್ರಿ 8 ಗಂಟೆಗೆ ವಾಸ್ಕೊದಲ್ಲಿ ಸಭೆಗಳು ಆಯೋಜನೆ ಆಗಿವೆ ಎಂದು ಗೋವಾ ಬಿಜೆಪಿ ಅಧ್ಯಕ್ಷ ಸದಾನಂದ್ ಶೇಟ್ ತಾನವಾಡೆ ತಿಳಿಸಿದ್ದಾರೆ.

ಈ ಎಲ್ಲಾ ಸಭೆಗಳೂ ಒಳಾಂಗಣದಲ್ಲೇ ನಡೆಯಲಿವೆ. ಶೇ 50ರಷ್ಟು ಆಸನಗಳನ್ನು ಮಾತ್ರ ಭರ್ತಿ ಮಾಡಲಾಗುವುದು. ಕೋವಿಡ್–19ಗೆ ಸಂಬಂಧಿಸಿದ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ವಾಸ್ಕೊದಲ್ಲಿ ನಡೆಯುವ ರ‍್ಯಾಲಿಯ ನೇರ ಪ್ರಸಾರವನ್ನು ಇತರ 10 ಕ್ಷೇತ್ರಗಳಲ್ಲಿ ಮಾಡಲಾಗುವುದು ಎಂದು ಹೇಳಿದ್ದಾರೆ.

ಚುನಾವಣೆ ದಿನಾಂಕ ಘೋಷಣೆ ಆದ ಬಳಿಕ ಇದೇ ಮೊದಲ ಬಾರಿಗೆ ಬಿಜೆಪಿಯ ತಾರಾ ಪ್ರಚಾರಕರೊಬ್ಬರು ಗೋವಾಕ್ಕೆ ಬಂದು ಸಭೆ ನಡೆಸಲಿದ್ದಾರೆ. ಗೋವಾ ವಿಧಾನಸಭೆಯ ಎಲ್ಲ 40 ಕ್ಷೇತ್ರಗಳಲ್ಲೂ ಅಭ್ಯರ್ಥಿಗಳನ್ನು ಬಿಜೆಪಿ ಕಣಕ್ಕಿಳಿಸಿದೆ. ಪೊಂಡಾ, ಸಾನ್ವೋರ್ಡೆಮ್ ಮತ್ತು ವಾಸ್ಕೊ ಕ್ಷೇತ್ರಗಳಲ್ಲಿ ಕ್ರಮವಾಗಿ ರವಿ ನಾಯ್ಕ್, ಗಣೇಶ್ ಗಾಂವ್ಕರ್ ಮತ್ತು ದಾಜಿ ಸಲ್ಕಾರ್ ಅವರು ಬಿಜೆಪಿಯಿಂದ ಸ್ಪರ್ಧಿಸುತ್ತಿದ್ದಾರೆ.

ಪಂಜಾಬ್ ವಿಧಾನಸಭೆ ಚುನಾವಣೆ: ಅಮೃತಸರ ಪೂರ್ವ ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಕೆ

ಅಮರಿಂದರ್, ಮಜಿಥಿಯಾಗೆ ಸಿಧು ಸವಾಲು

ಅಮೃತಸರ (ಪಿಟಿಐ): ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಅಮೃತಸರ ಪೂರ್ವ ಕ್ಷೇತ್ರದಿಂದ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರು ಶನಿವಾರ ನಾಮಪತ್ರ ಸಲ್ಲಿಸಿದರು. ಅಧಿಕೃತವಾಗಿ ಕಣಕ್ಕೆ ಧುಮುಕಿರುವ ಅವರು, ಮಾಜಿ ಮುಖ್ಯಮಂತ್ರಿ ಕ್ಯಾಪ್ಟನ್ ಅಮರಿಂದರ್ ಸಿಂಗ್ ಹಾಗೂ ಶಿರೋಮಣಿ ಅಕಾಲಿದಳದ ಬಿಕ್ರಂ ಸಿಂಗ್ ಮಜಿಥಿಯಾ ಅವರಿಗೆ ಸವಾಲೆಸೆದಿದ್ದಾರೆ.

'ಅಮೃತಸರಕ್ಕೆ ಬನ್ನಿ' ಎಂದು ಅಮರಿಂದರ್‌ಗೆ ಬಹಿರಂಗ ಆಹ್ವಾನ ನೀಡಿದ್ದಾರೆ. ಅಮರಿಂದರ್ ಸಿಂಗ್ ಅವರು ಪಟಿಯಾಲ ಕ್ಷೇತ್ರ ಬಿಟ್ಟು, ತಮ್ಮ ವಿರುದ್ಧ ಅಮೃತಸರದಿಂದ ಕಣಕ್ಕಿಳಿಯುವಂತೆ ಸಿಧು ಆಹ್ವಾನಿಸಿದ್ದಾರೆ. ಸಿಧು ಅವರು ಗೆಲ್ಲಲು ಬಿಡುವುದಿಲ್ಲ ಎಂದಿದ್ದ ಅಮರಿಂದರ್ ಸಿಂಗ್‌ಗೆ ಸಿಧು ಈ ಸವಾಲು ನೀಡಿದ್ದಾರೆ.

ಕಾಂಗ್ರೆಸ್‌ನ ಹಿರಿಯ ನಾಯಕರಾಗಿದ್ದ ಅಮರಿಂದರ್ ಅವರು ಬದಲಾದ ರಾಜಕೀಯ ಸನ್ನಿವೇಶದಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ, ಪಕ್ಷ ತೊರೆದಿದ್ದರು. ಪಂಜಾಬ್ ಲೋಕ ಕಾಂಗ್ರೆಸ್ ಪಕ್ಷ ಪಟ್ಟಿರುವ ಅವರು, ಬಿಜೆಪಿ ಜೊತೆ ಚುನಾವಣಾ ಪೂರ್ವ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಈ ಬಾರಿ ಅವರು ಪಟಿಯಾಲ ನಗರ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ.

ಸಿಧು ಸ್ಪರ್ಧಿಸಿರುವ ಅಮೃತಸರ ಪೂರ್ವ ಕ್ಷೇತ್ರದಿಂದ ಶಿರೋಮಣಿ ಅಕಾಲಿದಳದ ಬಿಕ್ರಂ ಸಿಂಗ್ ಮಜಿಥಿಯಾ ಅವರು ಕಣಕ್ಕಿಳಿದಿದ್ದಾರೆ. ಜೊತೆಗೆ ಮಜಿಥಾ ಕ್ಷೇತ್ರದಿಂದಲೂ ಮಜಿಥಿಯಾ ಸ್ಪರ್ಧಿಸುತ್ತಿದ್ದಾರೆ.

ಎರಡು ಕ್ಷೇತ್ರಗಳಲ್ಲಿ ಕಣಕ್ಕಿಳಿಯಲು ನಿರ್ಧರಿಸಿರುವ ಅಕಾಲಿ ದಳದ ನಾಯಕನಿಗೆ ಸವಾಲು ಹಾಕಿರುವ ಸಿಧು, 'ನಿಮಗೆ ತಾಕತ್ತಿದ್ದರೆ, ಜನರ ಮೇಲೆ ವಿಶ್ವಾಸವಿದ್ದರೆ, ಮಜಿಥ ಕ್ಷೇತ್ರವನ್ನು ಬಿಟ್ಟು, ಒಂದೇ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಿ' ಎಂದು ಹೇಳಿದ್ದಾರೆ.

ಕೆಟ್ಟ ಆಟವನ್ನು ಆಡಲು ಅವರಿಲ್ಲಿ (ಅಕಾಲಿದಳ) ಬಂದಿದ್ದಾರೆ. ಅವರು ಇಲ್ಲಿ ಯಶಸ್ವಿಯಾಗಲಾರರು. ಧರ್ಮ ಎಲ್ಲಿರುತ್ತದೋ ಅಲ್ಲಿ ಜಯ ಇರುತ್ತದೆ
ನವಜೋತ್ ಸಿಂಗ್ ಸಿಧು, ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷ

ಅಕಾಲಿಗಳು ರಾಜ್ಯವನ್ನು ಲೂಟಿ ಮಾಡಿದ್ದಾರೆ ಎಂದು ಸಿಧು ಆರೋಪಿಸಿದ್ದಾರೆ. ಸುಳ್ಳು ಪ್ರಕರಣಗಳನ್ನು ದಾಖಲಿಸಿ ಜನರನ್ನು ಹಿಂಸಿಸುವುದರಲ್ಲೇ ನಿರತರಾಗಿರುವ ಅಕಾಲಿಗಳಿಂದ ರಾಜ್ಯದ ಅಭಿವೃದ್ಧಿಯನ್ನು ನಿರೀಕ್ಷಿಸುವುದು ಹೇಗೆ ಸಾಧ್ಯ ಎಂದು ಸಿಧು ಪ್ರಶ್ನಿಸಿದ್ದಾರೆ.

ಭಗವಂತ ಮಾನ್ ಉಮೇದುವಾರಿಕೆ


ಭಗವಂತ ಮಾನ್

ಪಂಜಾಬ್‌ನಲ್ಲಿ ಎಎಪಿಯ ಮುಖ್ಯಮಂತ್ರಿ ಅಭ್ಯರ್ಥಿ ಭಗವಂತ ಮಾನ್ ಅವರು ಧುರಿ ಕ್ಷೇತ್ರದಿಂದ ಶನಿವಾರ ನಾಮಪತ್ರ ಸಲ್ಲಿಸಿದರು. ಕ್ಷೇತ್ರದ ಜನರು ತಮ್ಮನ್ನು ಭಾರಿ ಅಂತರದಿಂದ ಆಯ್ಕೆ ಮಾಡಲಿದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಉಮೇದುವಾರಿಕೆ ಸಲ್ಲಿಸುವ ವೇಳೆ ಮಾನ್ ಜೊತೆ ಅವರ ತಾಯಿ ಇದ್ದರು.

ಧುರಿ ವಿಧಾನಸಭಾ ಕ್ಷೇತ್ರದಲ್ಲಿ ಇತಿಹಾಸ ಬರೆಯುವ ಸಮಯ ಬಂದಿದ್ದು, ಜನರು ಬದಲಾವಣೆ ಬಯಸಿದ್ದಾರೆ ಎಂದು ಅವರು ಹೇಳಿದರು. ಧುರಿ ಕ್ಷೇತ್ರವನ್ನು ಮಾದರಿ ವಿಧಾನಸಭಾ ಕ್ಷೇತ್ರವನ್ನಾಗಿಸುವ ಭರವಸೆಯನ್ನು ಅವರು ನೀಡಿದ್ದಾರೆ. ಮಾನ್ ಅವರು ಸಂಗ್ರೂರ್ ಲೋಕಸಭಾ ಕ್ಷೇತ್ರದಿಂದ ಎರಡು ಬಾರಿ ಸಂಸದರಾಗಿ ಆಯ್ಕೆಯಾಗಿದ್ದಾರೆ. ಭ್ರಷ್ಟಾಚಾರ, ನಿರುದ್ಯೋಗ, ಮಾಫಿಯಾರಾಜ್, ಹಣದುಬ್ಬರ ವಿಚಾರಗಳು ಪಂಜಾಬ್ ವಿಧಾನಸಭಾ ಚುನಾವಣೆಯ ಪ್ರಮುಖ ವಿಷಯಗಳು ಎಂದಿದ್ದಾರೆ.

ಕ್ಷೇತ್ರದಿಂದ ನಾಪತ್ತೆಯಾಗುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಧುರಿಯಲ್ಲೇ ಉಳಿದುಕೊಂಡು ಹಳ್ಳಿಗಳಿಗೆ ಸಂಚರಿಸುವ ವಾಗ್ದಾನ ನೀಡಿದರು. ಧುರಿ ಕ್ಷೇತ್ರದ ಹಾಲಿ ಶಾಸಕ ಕಾಂಗ್ರೆಸ್‌ನ ದಲ್ವೀರ್ ಸಿಂಗ್ ಗೋಲ್ಡಿ ಅವರು ಪುನರಾಯ್ಕೆ ಬಯಸಿದ್ದಾರೆ. ಶಿರೋಮಣಿ ಅಕಾಲಿದಳವು ಸಂಗ್ರೂರ್‌ನ ಪ್ರಕಾಶ್ ಚಾಂದ್ ಗರ್ಗ್ ಅವರನ್ನು ಕಣಕ್ಕಿಳಿಸಿದೆ.


ನಾಮಪತ್ರ ಸಲ್ಲಿಸಿ ಹೊರಬಂದ ಸಿಧು ಅವರು ಸುದ್ದಿಗಾರರ ಜತೆ ಮಾತನಾಡಿದರು–ಪಿಟಿಐ ಚಿತ್ರ

ಸಿಧು ಆಸ್ತಿ ₹44.63 ಕೋಟಿ

ಚಂಡೀಗಡ: ಎರಡು ಎಸ್‌ಯುವಿಗಳು, ₹44 ಲಕ್ಷ ಮೌಲ್ಯದ ಕೈಗಡಿಯಾರಗಳು, ₹35 ಕೋಟಿ ಮೌಲ್ಯದ ವಸತಿ ನಿವೇಶನಗಳು ಸಿಧು ಅವರು ಘೋಷಿಸಿದ ಆಸ್ತಿ ಪ್ರಮಾಣಪತ್ರದಲ್ಲಿ ಸೇರಿವೆ.

ಪತ್ನಿ ಹಾಗೂ ಮಾಜಿ ಶಾಸಕಿ ನವಜೋತ್ ಕೌರ್ ಅವರ ಹೆಸರಿನಲ್ಲಿರುವ ₹3.28 ಕೋಟಿ ಹಾಗೂ ತಮ್ಮ ಹೆಸರಿನಲ್ಲಿರುವ ₹41.35 ಕೋಟಿ ಸೇರಿದಂತೆ ಒಟ್ಟು ₹44.63 ಕೋಟಿ ಮೌಲ್ಯದ ಆಸ್ತಿಯನ್ನು ಅವರು ಘೋಷಿಸಿದ್ದಾರೆ. ₹1.19 ಕೋಟಿ ಬೆಲೆಬಾಳುವ ಎರಡು ಟೊಯೊಟಾ ಲ್ಯಾಂಡ್ ಕ್ರೂಸರ್, ₹11.43 ಲಕ್ಷ ಬೆಲೆಯ ಒಂದು ಟೊಯೊಟಾ ಫಾರ್ಚೂನರ್, ₹30 ಲಕ್ಷ ಬೆಲೆಯ ಚಿನ್ನಾಭರಣಗಳು ಅವರಲ್ಲಿ ಇವೆ.

2016–17ರಲ್ಲಿದ್ದ ₹94.18 ಲಕ್ಷ ವಾರ್ಷಿಕ ಆದಾಯವು 2020–21ರ ಸಾಲಿನಲ್ಲಿ ₹22.58 ಲಕ್ಷಕ್ಕೆ ಇಳಿಕೆಯಾಗಿದೆ ಎಂಬ ಅಂಶವು ಪ್ರಮಾಣಪತ್ರದಲ್ಲಿದೆ.

ಮತಗಟ್ಟೆ ಸಮೀಕ್ಷೆಗೆ ನಿಷೇಧ

ಲಖನೌ (ಪಿಟಿಐ): ಉತ್ತರ ಪ್ರದೇಶದಲ್ಲಿ ಎಲ್ಲ ರೀತಿಯ ಮತಗಟ್ಟೆ ಸಮೀಕ್ಷೆಗಳನ್ನು ಫೆ. 10ರ ಬೆಳಿಗ್ಗೆ 7ರಿಂದ ಮಾರ್ಚ್ 7ರ ಸಂಜೆ 6.30ರವರೆಗೆ ನಿಷೇಧಿಸಿ ಚುನಾವಣಾ ಆಯೋಗವು ಶನಿವಾರ ಆದೇಶ ಹೊರಡಿಸಿದೆ.

ಮತಗಟ್ಟೆ ಸಮೀಕ್ಷೆ ನಡೆಸುವುದು, ಅದನ್ನು ಮುದ್ರಣ ಅಥವಾ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಪ್ರಕಟಿಸುವುದು ಮತ್ತು ಅದಕ್ಕೆ ಪ್ರಚಾರ ನೀಡುವುದನ್ನು ನಿಷೇಧಿಸಲಾಗಿದೆ ಎಂದು ಆದೇಶದಲ್ಲಿ ಹೇಳಲಾಗಿದೆ.

ಪಂಜಾಬ್: ವೀಕ್ಷಕರ ನೇಮಿಸಿದ ಕಾಂಗ್ರೆಸ್

ನವದೆಹಲಿ (ಪಿಟಿಐ): ಪಂಜಾಬ್ ವಿಧಾನಸಭಾ ಚುನಾವಣೆಗಾಗಿ ರಾಜ್ಯದ ವಿವಿಧ ಪ್ರದೇಶಗಳಿಗೆ ವೀಕ್ಷಕರನ್ನು ಕಾಂಗ್ರೆಸ್ ಪಕ್ಷವು ಶನಿವಾರ ನೇಮಿಸಿದೆ.

ಮಾಲ್ವಾ ಪ್ರದೇಶಕ್ಕೆ ಇಬ್ಬರು ವೀಕ್ಷಕರನ್ನು ನೇಮಿಸಲಾಗಿದೆ. ರಾಜ್ಯದ ಒಟ್ಟು 117 ವಿಧಾನಸಭಾ ಕ್ಷೇತ್ರಗಳ ಪೈಕಿ 69 ಕ್ಷೇತ್ರಗಳು ಈ ಪ್ರದೇಶದಲ್ಲಿ ಇವೆ. ಮಜ್ಹಾ ಮತ್ತು ದೋಆಬಾ ಪ್ರದೇಶಗಳಿಗೆ ತಲಾ ಒಬ್ಬರು ವೀಕ್ಷಕರನ್ನು ನೇಮಿಸಲಾಗಿದೆ.

ಸಂಜಯ್ ನಿರುಪಮ್ ಮತ್ತು ಅರ್ಜುನ್ ಮೋದ್ವಾಡಿಯಾ ಅವರನ್ನು ಮಾಲ್ವಾ ಪ್ರದೇಶದ ವೀಕ್ಷಕರಾಗಿ ನೇಮಿಸಲಾಗಿದೆ. ಮಜ್ಹಾ ಪ್ರದೇಶಕ್ಕೆ ಉತ್ತಮ ಕುಮಾರ್ ರೆಡ್ಡಿ ಮತ್ತು ದೋಆಬಾ ಪ್ರದೇಶಕ್ಕೆ ಸುಖವಿಂದರ್ ಸಿಂಗ್ ಸುಖು ಅವರನ್ನು ನೇಮಿಸಲಾಗಿದೆ ಎಂದು ಕಾಂಗ್ರೆಸ್ ಪಕ್ಷದ ಪ್ರಕಟಣೆ ತಿಳಿಸಿದೆ.

ಪೆಗಾಸಸ್ ಬೇಹುಗಾರಿಕೆ: ವಿರೋಧ ಪಕ್ಷಗಳು, ಬಿಜೆಪಿಯ ಸುಬ್ರಮಣಿಯನ್ ಸ್ವಾಮಿ ಆಕ್ರೋಶ

'ಸುಪ್ರೀಂ, ಸಂಸತ್ತನ್ನು ತಪ್ಪುದಾರಿಗೆಳೆದ ಸರ್ಕಾರ'

ಪ್ರಜಾವಾಣಿ ವಾರ್ತೆ

ನವದೆಹಲಿ: ಇಸ್ರೇಲ್‌ನ ಬೇಹುಗಾರಿಕೆ ಕುತಂತ್ರಾಂಶ ಪೆಗಾಸಸ್ ಅನ್ನು ಭಾರತ ಖರೀದಿಸಿದೆ ಎಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ವರದಿಯನ್ನು ಇಟ್ಟುಕೊಂಡು ಸರ್ಕಾರದ ಮೇಲೆ ಪ್ರತಿಪಕ್ಷಗಳು ಮುಗಿಬಿದ್ದಿವೆ. ಕಾಂಗ್ರೆಸ್ ಇದನ್ನು 'ಪ್ರಜಾಪ್ರಭುತ್ವದ ಲಜ್ಜೆಗೆಟ್ಟ ಅಪಹರಣ' ಮತ್ತು 'ದೇಶದ್ರೋಹದ ಕೃತ್ಯ' ಎಂದು ಕರೆದಿದೆ. ಸರ್ಕಾರವು ಸಂಸತ್ತನ್ನು ವಂಚಿಸಿರುವುದಲ್ಲದೇ, ಸುಪ್ರೀಂ ಕೋರ್ಟನ್ನೂ ದಾರಿ ತಪ್ಪಿಸಿದೆ ಎಂದು ಆರೋಪಿಸಲಾಗಿದೆ.

ಪ್ರತಿಪಕ್ಷ ಮಾತ್ರವಲ್ಲದೇ, ಬಿಜೆಪಿ ರಾಜ್ಯಸಭಾ ಸದಸ್ಯ ಸುಬ್ರಮಣಿಯನ್ ಸ್ವಾಮಿ ಅವರಿಂದಲೂ ಕೇಂದ್ರ ಸರ್ಕಾರವು ಟೀಕೆಗೆ ಗುರಿಯಾಗಿದೆ. 'ಸರ್ಕಾರವು ಸುಪ್ರೀಂಕೋರ್ಟ್ ಮತ್ತು ಸಂಸತ್ತಿನ ದಾರಿತಪ್ಪಿಸಿದೆ' ಎಂದು ವರದಿ ಸೂಚ್ಯವಾಗಿ ಹೇಳಿದೆ ಎಂದಿರುವ ಅವರು, ಇದು ಮತ್ತೊಂದು 'ವಾಟರ್‌ಗೇಟ್' ಹಗರಣವೇ ಎಂದು ಪ್ರಶ್ನಿಸಿದ್ದಾರೆ.

'ನಮ್ಮ ಸರ್ಕಾರವು ಕೋರ್ಟ್ ಮತ್ತು ಸಂಸತ್ತನ್ನು ತಪ್ಪುದಾರಿಗೆಳೆಯಿತು ಎಂದು ಈ ವರದಿ ಸೂಚಿಸುತ್ತದೆ. ಇಸ್ರೇಲಿ ಎನ್‌ಎಸ್‌ಒ ಕಂಪನಿಯ ಪೆಗಾಸಸ್ ಕುತಂತ್ರಾಂಶಕ್ಕೆ ಜನರ ತೆರಿಗೆ ಹಣದ ₹300 ಕೋಟಿ ನೀಡಿ ಸರ್ಕಾರವು ಚಂದಾದಾರಿಕೆ ಪಡೆದಿದೆ ಎಂಬ ಪತ್ರಿಕೆಯ ವರದಿಯು ಸುಳ್ಳು ಎಂದು ಕೇಂದ್ರದ ನರೇಂದ್ರ ಮೋದಿ ಸರ್ಕಾರ ಹೇಳಬೇಕು' ಎಂದು ಸ್ವಾಮಿ ಆಗ್ರಹಿಸಿದ್ದಾರೆ.

ಪ್ರಜಾಪ್ರಭುತ್ವ ಸಂಸ್ಥೆಗಳು, ರಾಜಕೀಯ ನಾಯಕರು ಹಾಗೂ ಜನರ ಮೇಲೆ ಗೂಢಚರ್ಯೆ ನಡೆಸಲು ಕೇಂದ್ರ ಸರ್ಕಾರವು ಕುತಂತ್ರಾಂಶ ಖರೀದಿಸಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ. 'ದೂರವಾಣಿ ಕದ್ದಾಲಿಕೆ ಮೂಲಕ ಸರ್ಕಾರಿ ಅಧಿಕಾರಿಗಳು, ಪ್ರತಿಪಕ್ಷ ನಾಯಕರು, ಸೇನಾಧಿಕಾರಿಗಳು, ನ್ಯಾಯಾಂಗದವರ ಮೇಲೆ ಸರ್ಕಾರ ಕಣ್ಣಿಟ್ಟಿತ್ತು. ಮೋದಿ ಸರ್ಕಾರವು ದೇಶದ್ರೋಹ ಎಸಗಿದೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ತೃಣಮೂಲ ಕಾಂಗ್ರೆಸ್ ಪಕ್ಷವು ಇದನ್ನು ಕೇಂದ್ರ ಸರ್ಕಾರಿ ಪ್ರಾಯೋಜಿತ ಗೂಢಚರ್ಯೆ ಎಂದು ಕರೆದಿದ್ದು, ಸರ್ಕಾರವು ಭಾರತೀಯರ ಹಕ್ಕುಗಳನ್ನು ಕಸಿದುಕೊಳ್ಳುತ್ತಿದೆ ಎಂದು ಆರೋಪಿಸಿದೆ. '2017ರಲ್ಲಿ ಇಸ್ರೇಲ್ ಜೊತೆಗಿನ ₹15,000 ಕೋಟಿ ಮೊತ್ತದ ಒಪ್ಪಂದದಲ್ಲಿ ಪೆಗಾಸಸ್ ಕುತಂತ್ರಾಂಶ ಖರೀದಿಯೇ ಕೇಂದ್ರಬಿಂದುವಾಗಿದೆ ಎಂದು ವರದಿಗಳು ತೋರಿಸಿದ ನಂತರ ನರೇಂದ್ರ ಮೋದಿಯವರ ಚಿಕ್ಕ ರಹಸ್ಯ ಬಯಲಾಗಿದೆ. ನಾಚಿಕೆಯಾಗಬೇಕು' ಎಂದು ಪಕ್ಷ ಟ್ವೀಟ್ ಮಾಡಿದೆ.

ಭಾರತದ ಪ್ರಜಾಪ್ರಭುತ್ವವನ್ನು ನಾಶ ಮಾಡಲು ಸಾರ್ವಜನಿಕರ ಹಣದಿಂದ ಪೆಗಾಸಸ್ ಖರೀದಿಸಲಾಗಿದೆ ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಆರೋಪಿಸಿದ್ದಾರೆ. ಈ ಸೈಬರ್ ಅಸ್ತ್ರವನ್ನು ಏಕೆ ಖರೀದಿಸಲಾಯಿತು, ಅದರ ಬಳಕೆಗೆ ಅನುಮತಿ ನೀಡಿದವರು ಯಾರು, ಗುರಿಪಡಿಸುವ ವ್ಯಕ್ತಿಗಳನ್ನು ಹೇಗೆ ಆಯ್ಕೆ ಮಾಡಲಾಗಿದೆ ಮತ್ತು ಈ ವರದಿಗಳನ್ನು ಯಾರು ಪಡೆದರು ಎಂಬುದನ್ನು ಸರ್ಕಾರ ಪ್ರಮಾಣಪತ್ರದಲ್ಲಿ ವಿವರಿಸಬೇಕು ಎಂದು ಯೆಚೂರಿ ಆಗ್ರಹಿಸಿದ್ದಾರೆ.

ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ, ಪೆಗಾಸಸ್ ಕುತಂತ್ರಾಂಶ ಬಳಸಿಕೊಂಡು ಅಕ್ರಮ ಮತ್ತು ಅಸಾಂವಿಧಾನಿಕ ಬೇಹುಗಾರಿಕೆಯನ್ನು ಕೇಂದ್ರ ಸರ್ಕಾರವೇ ಮಾಡುತ್ತಿದೆ ಎಂಬ ಕಾಂಗ್ರೆಸ್‌ನ ದೀರ್ಘಕಾಲದ ಆಪಾದನೆಗೆ ಪತ್ರಿಕಾ ವರದಿಯು ಪುಷ್ಟಿ ನೀಡಿದೆ ಎಂದು ಅವರು ಹೇಳಿದ್ದಾರೆ.

ಪೆಗಾಸಸ್ ವರದಿಗಳು ಆಧಾರರಹಿತ ಎಂದು ಮಾಹಿತಿ ಮತ್ತು ತಂತ್ರಜ್ಞಾನ ಸಚಿವ ಅಶ್ವನಿ ವೈಷ್ಣವ್ ಸಂಸತ್ತಿಗೆ ತಿಳಿಸಿದ್ದರು. ಈ ಹೇಳಿಕೆಯ ಮೂಲಕ ಸರ್ಕಾರವು ಸಂಸತ್ತನ್ನು ವಂಚಿಸಿದೆ ಎಂದು ಸುರ್ಜೇವಾಲಾ ಆರೋಪಿಸಿದ್ದಾರೆ.


ಪೆಗಾಸಸ್ ವಿಷಯದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ದೆಹಲಿಯಲ್ಲಿ ಪ್ರತಿಭಟನೆ ನಡೆಸಿದ ಯುವಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ ಬಿ.ವಿ. ಅವರನ್ನು ಪೊಲೀಸರು ಶನಿವಾರ ಕರೆದೊಯ್ದರು–ಪಿಟಿಐ ಚಿತ್ರ


ಚುನಾವಣಾ ಆಯೋಗ, ರಾಜಕೀಯ ನಾಯಕರು, ಸುಪ್ರೀಂ, ತನಿಖಾಧಿಕಾರಿಗಳ ಮೇಲೆ ಬೇಹುಗಾರಿಕೆ ನಡೆಸುವುದು ಪ್ರಜಾಪ್ರಭುತ್ವದ ವಿಧ್ವಂಸಕ ಕೆಲಸ.
ಸೀತಾರಾಂ ಯೆಚೂರಿ, ಸಿಪಿಎಂ ಪ್ರಧಾನ ಕಾರ್ಯದರ್ಶಿ


ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಶತ್ರುವಿನಂತೆ ಏಕೆ ವರ್ತಿಸಿದರು ಮತ್ತು ಭಾರತೀಯ ನಾಗರಿಕರ ವಿರುದ್ಧ ಈ ಅಸ್ತ್ರವನ್ನು ಏಕೆ ಬಳಸಿದರು
ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆಯ ಪ್ರತಿಪಕ್ಷ ನಾಯಕ


ಸರ್ಕಾರವು ಸಾರ್ವಜನಿಕ ಹಣವನ್ನು ಬೇಹುಗಾರಿಕೆಗೆ ಬಳಸಿದೆ ಎಂಬುದು ಈಗ ಸ್ಪಷ್ಟವಾಗಿದೆ. ಬೇಹುಗಾರಿಕೆ ಮೂಲಕ ಪ್ರಜಾಪ್ರಭುತ್ವವನ್ನು ಅಪಹರಿಸಿದೆ.
ರಣದೀಪ್ ಸುರ್ಜೇವಾಲಾ, ಕಾಂಗ್ರೆಸ್ ಮುಖ್ಯ ವಕ್ತಾರ

ಭಾರತ ಪೆಗಾಸಸ್ ಖರೀದಿಸಿದೆ: ನ್ಯೂಯಾರ್ಕ್ ಟೈಮ್ಸ್ ವರದಿ

ಒಂದನೇ ಪುಟದಿಂದ

ಇದು ಭಾರತದಲ್ಲಿ ಮಾತ್ರವಲ್ಲದೆ, ಜಾಗತಿಕ ಮಟ್ಟದಲ್ಲಿ ಸಂಚಲನ ಸೃಷ್ಟಿಸಿತ್ತು. ನಾಯಕರು ಮತ್ತು ಜನರ ಖಾಸಗಿತನದ ಉಲ್ಲಂಘನೆಯ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು.

'ಬ್ಯಾಟಲ್ ಫಾರ್ ದ ವರ್ಲ್ಡ್ಸ್ ಮೋಸ್ಟ್ ಪವರ್‌ಫುಲ್ ಸೈಬರ್‌ವೆಪನ್' ಎಂಬ ಹೆಸರಿನಲ್ಲಿ ದ ನ್ಯೂಯಾರ್ಕ್ ಟೈಮ್ಸ್ ವರದಿಯನ್ನು ಪ್ರಕಟಿಸಿದೆ. 'ಇಸ್ರೇಲ್‌ನ ಎನ್‌ಎಸ್‌ಒ ಗ್ರೂಪ್ ಎಂಬ ಕಂಪನಿಯು ಜಗತ್ತಿನ ವಿವಿಧ ಗುಪ್ತಚರ ಸಂಸ್ಥೆಗಳಿಗೆ ಬೇಹುಗಾರಿಕೆ ಸಾಫ್ಟ್‌ವೇರ್ ಅನ್ನು ಚಂದಾದಾರಿಕೆ ಆಧಾರದಲ್ಲಿ ಸುಮಾರು ಒಂದು ದಶಕದಿಂದ ಮಾರಾಟ ಮಾಡುತ್ತಿದೆ. ಯಾವುದೇ ಖಾಸಗಿ ಕಂಪನಿ, ಯಾವುದೇ ದೇಶದ ಗುಪ್ತಚರ ಸಂಸ್ಥೆಗೆ ಸಾಧ್ಯವಿಲ್ಲದ ಕೆಲಸವನ್ನು ಈ ಕುತಂತ್ರಾಂಶವು ಮಾಡಬಲ್ಲುದು. ಐಫೋನ್ ಅಥವಾ ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್ ಮೂಲಕ ನಡೆಯುವ ಯಾವುದೇ ರೀತಿಯ ಗೂಢಲಿಪಿಯ ಸಂವಹನಗಳನ್ನು ಕೂಡ ನಿರಂತರವಾಗಿ ಮತ್ತು ವಿಶ್ವಾಸಾರ್ಹವಾಗಿ ತಿಳಿಸುತ್ತದೆ' ಎಂದು ಎನ್‌ಎಸ್‌ಒ ಕಂಪನಿಯು ಹೇಳುತ್ತಿದೆ ಎಂಬ ವಿಷಯ ಎನ್‌ವೈಟಿ ವರದಿಯಲ್ಲಿ ಇದೆ.

ಪ್ರಧಾನಿ ನರೇಂದ್ರ ಮೋದಿ ಅವರು 2017ರ ಜುಲೈನಲ್ಲಿ ಇಸ್ರೇಲ್‌ಗೆ ನೀಡಿದ್ದ ಭೇಟಿಯ ಬಗ್ಗೆಯೂ ಟಿಎನ್‌ವೈ ವರದಿಯಲ್ಲಿ ಉಲ್ಲೇಖ ಇದೆ. ಇಸ್ರೇಲ್‌ಗೆ ಭಾರತದ ಪ್ರಧಾನಿಯ ಮೊದಲ ಭೇಟಿ ಅದಾಗಿತ್ತು. ಆ ಭೇಟಿಯು ಅತ್ಯಂತ ಸೌಹಾರ್ದಯುತವಾಗಿತ್ತು ಮತ್ತು ಭಾರತವು ಪ್ಯಾಲೆಸ್ಟೀನ್‌ಗೆ ಸಂಬಂಧಿಸಿ ತನ್ನ ನಿಲುವನ್ನೇ ಬದಲಿಸಿಕೊಂಡಿತು ಎಂದು ವರದಿಯಲ್ಲಿ ಹೇಳಲಾಗಿದೆ.

'ಆ ಸೌಹಾರ್ದಕ್ಕೆ ಕಾರಣ ಇದೆ. ಪೆಗಾಸಸ್ ಕುತಂತ್ರಾಂಶ ಮತ್ತು ಕ್ಷಿಪಣಿ ವ್ಯವಸ್ಥೆ ಒಳಗೊಂಡಂತೆ ಸುಮಾರು ₹ 15,000 ಕೋಟಿ ಮೌಲ್ಯದ ರಕ್ಷಣಾ ಖರೀದಿ ಒಪ್ಪಂದಕ್ಕೆ ಎರಡೂ ದೇಶಗಳು ಸಹಿ ಹಾಕಿದ್ದವು. 2019ರ ಜೂನ್‌ನಲ್ಲಿ, ಪ್ಯಾಲೆಸ್ಟೀನ್ ಮಾನವ ಹಕ್ಕು ಸಂಘಟನೆಯೊಂದಕ್ಕೆ ವೀಕ್ಷಕ ಸ್ಥಾನಮಾನ ನಿರಾಕರಿಸುವುದಕ್ಕಾಗಿ ವಿಶ್ವ ಸಂಸ್ಥೆಯಲ್ಲಿ ಭಾರತವು ಇಸ್ರೇಲ್ ಪರವಾಗಿ ಮತ ಹಾಕಿತು. ಭಾರತವು ಇಸ್ರೇಲ್ ಪರವಾದ ನಿಲುವು ತಳೆದದ್ದು ಅದೇ ಮೊದಲು' ಎಂದೂ ವರದಿಯಲ್ಲಿ ಹೇಳಲಾಗಿದೆ.

ದ ನ್ಯೂಯಾರ್ಕ್ ಟೈಮ್ಸ್ ವರದಿಗೆ ಸಂಬಂಧಿಸಿ ಪ್ರತಿಕ್ರಿಯೆಗಾಗಿ ಸರ್ಕಾರವನ್ನು ಪಿಟಿಐ ಸಂಪರ್ಕಿಸಿದೆ. ಆದರೆ, ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ ರಾಜಕೀಯ ಪಕ್ಷಗಳ ವಿವಿಧ ನಾಯಕರು, ನ್ಯಾಯಮೂರ್ತಿಗಳು, ಪತ್ರಕರ್ತರು ಮತ್ತು ಇತರರ ಮೇಲೆ ಸರ್ಕಾರವು ಬೇಹುಗಾರಿಕೆ ನಡೆಸಿದೆ ಎಂಬ ವಿಚಾರವು ಕಳೆದ ವರ್ಷ ಭಾರಿ ಸದ್ದು ಮಾಡಿತ್ತು. ಆದರೆ, ಯಾವುದೇ ವ್ಯಕ್ತಿಯ ಮೇಲೆ ಬೇಹುಗಾರಿಕೆ ನಡೆಸಿದ ಆರೋಪವನ್ನು ಸರ್ಕಾರವು ತಳ್ಳಿ ಹಾಕಿತ್ತು. ಇಂತಹ ಆರೋಪಕ್ಕೆ ಆಧಾರ ಇಲ್ಲ ಮತ್ತು ಅದು ಸತ್ಯಕ್ಕೆ ದೂರ ಎಂದು ಸರ್ಕಾರ ಹೇಳಿತ್ತು. ಸುಪ್ರೀಂ ಕೋರ್ಟ್ ಮತ್ತು ಸಂಸತ್ತಿಗೆ ಇದೇ ಮಾಹಿತಿಯನ್ನು ಸರ್ಕಾರ ನೀಡಿತ್ತು.

ಪೆಗಾಸಸ್ ಕುತಂತ್ರಾಂಶವನ್ನು ಸರ್ಕಾರವು ಬಳಸಿದೆಯೇ ಎಂಬುದರ ತನಿಖೆಗೆ ಮೂವರು ಪರಿಣತರ ಸ್ವತಂತ್ರ ಸಮಿತಿಯನ್ನು ಸುಪ್ರೀಂ ಕೋರ್ಟ್ ಕಳೆದ ಅಕ್ಟೋಬರ್‌ನಲ್ಲಿ ರಚಿಸಿತ್ತು. ರಾಷ್ಟ್ರೀಯ ಭದ್ರತೆಯ ನೆಪದಲ್ಲಿ ಸರ್ಕಾರವು ಪ್ರತಿ ಬಾರಿಯೂ ಮುಕ್ತ ಅವಕಾಶ ಪಡೆದುಕೊಳ್ಳುವಂತಿಲ್ಲ ಎಂದು ಕೋರ್ಟ್ ಹೇಳಿತ್ತು. ಇಂತಹ ಸನ್ನಿವೇಶದಲ್ಲಿ ಸುಪ್ರೀಂ ಕೋರ್ಟ್ ಮೂಕಪ್ರೇಕ್ಷಕ ಆಗಿರುವುದು ಸಾಧ್ಯವಿಲ್ಲ ಎಂದೂ ಹೇಳಿತ್ತು.

ಅಮೆರಿಕ, ಮೆಕ್ಸಿಕೊ, ಸೌದಿ ಅರೇಬಿಯಾ, ಪನಾಮಾ ಸೇರಿದಂತೆ ಹಲವು ದೇಶಗಳು ಪೆಗಾಸಸ್ ಕುತಂತ್ರಾಂಶವನ್ನು ಬಳಸಿವೆ ಎನ್ನಲಾಗಿದೆ.

ಮೆಕ್ಸಿಕೊ ಮತ್ತು ಪನಾಮಾದಂತಹ ದೇಶಗಳು ಇಸ್ರೇಲ್ ಬಗೆಗಿನ ನಿಲುವನ್ನು ಪೆಗಾಸಸ್ ಲಭ್ಯವಾದ ಬಳಿಕ ಬದಲಿಸಿಕೊಂಡಿವೆ. ವಿಶ್ವಸಂಸ್ಥೆಯಲ್ಲಿ ಇಸ್ರೇಲ್ ಪರವಾಗಿ ಮತ ಹಾಕಿವೆ' ಎಂದು ದ ನ್ಯೂಯಾರ್ಕ್ ಟೈಮ್ಸ್ ವರದಿ ಹೇಳಿದೆ.

ಕಬಡ್ಡಿ: ಡೆಲ್ಲಿಗೆ ಭರ್ಜರಿ ಜಯ

ಬೆಂಗಳೂರು: ರೇಡಿಂಗ್‌ನಲ್ಲೂ ಟ್ಯಾಕ್ಲಿಂಗ್‌ನಲ್ಲೂ ಅತ್ಯಮೋಘ ಆಟ ಪ್ರದರ್ಶಿಸಿದ ದಬಂಗ್ ಡೆಲ್ಲಿ ತಂಡ ಪ್ರೊ ಕಬಡ್ಡಿ ಲೀಗ್‌ನ ಶನಿವಾರದ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ವೈಟ್‌ಫೀಲ್ಡ್‌ನ ಹೋಟೆಲ್ ಶೆರಟಾನ್ ಗ್ರ್ಯಾಂಡ್ ಆವರಣದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಡೆಲ್ಲಿ 41–22ರಲ್ಲಿ ಮಣಿಸಿತು. ಈ ಮೂಲಕ ಪಾಯಿಂಟ್ ಪಟ್ಟಿಯ ಅಗ್ರಸ್ಥಾನಕ್ಕೇರಿತು. ಬೆಂಗಳೂರು ಬುಲ್ಸ್ ಎರಡನೇ ಸ್ಥಾನಕ್ಕೆ ಕುಸಿಯಿತು.

ಡಿಫೆಂಡರ್‌ಗಳಾದ ಮಂಜಿತ್ ಚಿಲ್ಲಾರ್ ಮತ್ತು ಕೃಷನ್ ಅವರು ಡೆಲ್ಲಿಗಾಗಿ 'ಹೈ ಫೈವ್' ಸಾಧನೆ ಮಾಡಿದರು. ರೇಡಿಂಗ್‌ನಲ್ಲಿ ವಿಜಯ್ ಮತ್ತು ನೀರಜ್ ಉತ್ತಮ ಸಾಮರ್ಥ್ಯ ಮೆರೆದರು.ಡೆಲ್ಲಿಯ ಸಂದೀಪ್ ನರ್ವಾಲ್ ಮತ್ತು ಮಂಜಿತ್ ಆತ್ಮವಿಶ್ವಾಸದಿಂದ ಆಡಿದರು. ವಿಜಯ್ ಹಿಂದಿನ ಪಂದ್ಯಗಳಂತೆ ಈ ಪಂದ್ಯದಲ್ಲೂ ರೇಡಿಂಗ್‌ನಲ್ಲಿ ಮಿಂಚಿದರು. ಏಳನೇ ನಿಮಿಷದಲ್ಲಿ ಸೂಪರ್ ರೇಡ್ ಮಾಡಿ ಮೂರು ಪಾಯಿಂಟ್ ತಂದರು. ರಾಕೇಶ್ ನರ್ವಾಲ್ ಸೂಪರ್ ಟ್ಯಾಕಲ್ ಮೂಲಕ ಗುಜರಾತ್ ಪಾಳಯದಲ್ಲಿ ಮಿಂಚಿದರೂ 11ನೇ ನಿಮಿಷದಲ್ಲಿ ಆಲ್‌ಔಟ್ ಆಗುವುದನ್ನು ತಪ್ಪಿಸಲು ಸಾಧ್ಯವಾಗಲಿಲ್ಲ.

ಮೊದಲಾರ್ಧದ ಮುಕ್ತಾಯಕ್ಕೆ ಡೆಲ್ಲಿ 22–11ರ ಮುನ್ನಡೆ ಸಾಧಿಸಿತು. ನಂತರವೂ ತಂಡ ಆಧಿಪತ್ಯ ಮುಂದುವರಿಸಿತು. ವಿಜಯ್ 8 ಪಾಯಿಂಟ್ಸ್, ಸಂದೀಪ್ ನರ್ವಾಲ್ ಮತ್ತು ಅಶು ಮಲಿಕ್ ತಲಾ ಆರು, ಮಂಜಿತ್ ಚಿಲ್ಲರ್ ಮತ್ತು ಕೃಷನ್ ತಲಾ ಐದು ಪಾಯಿಂಟ್ ಗಳಿಸಿದರು.

ಇಂದಿನ ಪಂದ್ಯ (ರಾತ್ರಿ)
- ಪಟ್ನಾ ಪೈರೇಟ್ಸ್ – ಜೈಪುರ ಪಿಂಕ್ ಪ್ಯಾಂಥರ್ಸ್ 7.30
- ತಮಿಳ್ ತಲೈವಾಸ್– ಬೆಂಗಳೂರು ಬುಲ್ಸ್ 8.30
- ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಪ್ರಶಸ್ತಿಯೊಂದಿಗೆ ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ –ಎಎಫ್‌ಪಿ ಚಿತ್ರ

ಆಸ್ಟ್ರೇಲಿಯನ್ ಓಪನ್ ಟೆನಿಸ್: ಕಾಲಿನ್ಸ್ ರನ್ನರ್ ಅಪ್

ಆ್ಯಶ್ಲಿ ಬಾರ್ಟಿ ಚಾಂಪಿಯನ್

ಮೆಲ್ಬರ್ನ್ (ಎಎಫ್‌ಪಿ): ಬಲಶಾಲಿ ಹೊಡೆತ ಮತ್ತು ತಂತ್ರಶಾಲಿ ಆಟದ ಮೂಲಕ ಎದುರಾಳಿಯನ್ನು ಮಣಿಸಿದ ಆ್ಯಶ್ಲಿ ಬಾರ್ಟಿ, ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ರಾಡ್ ಲೇವರ್ ಅರೆನಾದಲ್ಲಿ ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ ಅಮೆರಿಕದ ಡ್ಯಾನಿಯಲ್ ಕಾಲಿನ್ಸ್ ವಿರುದ್ಧ ಬಾರ್ಟಿ 6-3, 7-6 (7/2)ರಲ್ಲಿ ಜಯ ಗಳಿಸಿದರು. ಈ ಮೂಲಕ 44 ವರ್ಷಗಳ ನಂತರ ಟೂರ್ನಿಯ ಪ್ರಶಸ್ತಿ ಗೆದ್ದ ಮೊದಲ ಸ್ಥಳೀಯ ಟೆನಿಸ್ ಪಟು ಎನಿಸಿಕೊಂಡರು.

ಮೊದಲ ಶ್ರೇಯಾಂಕದ ಬಾರ್ಟಿ ಮೊದಲ ಸೆಟ್‌ನಲ್ಲಿ ಸುಲಭ ಜಯ ಸಾಧಿಸಿದ್ದರು. ಎರಡನೇ ಸೆಟ್‌ನಲ್ಲಿ ಒಂದು ಹಂತದಲ್ಲಿ 1–5ರ ಹಿನ್ನಡೆಯಲ್ಲಿದ್ದರು. ಅಲ್ಲಿಂದ ಚೇತರಿಸಿಕೊಂಡು ಅಮೋಘ ಆಟದ ಮೂಲಕ ತವರಿನ ಪ್ರೇಕ್ಷಕರಿಗೆ ಮುದ ನೀಡಿದರು. ಈ ಸೆಟ್ ಟೈ ಬ್ರೇಕರ್‌ಗೆ ಸಾಗಿತು. ಎದೆಗುಂದದ ಬಾರ್ಟಿ 27ನೇ ಶ್ರೇಯಾಂಕಿತೆಗೆ ಕೇವಲ ಎರಡು ಪಾಯಿಂಟ್ ಬಿಟ್ಟುಕೊಟ್ಟು ಪ್ರಶಸ್ತಿ ಮುಡಿಗೇರಿಸಿಕೊಂಡರು.

25 ವರ್ಷದ ಬಾರ್ಟಿ ಅವರಿಗೆ ಇದು ಮೂರನೇ ಗ್ರ್ಯಾನ್‌ಸ್ಲಾಂ ಪ್ರಶಸ್ತಿ. 2019ರ ಫ್ರೆಂಚ್ ಓಪನ್ ಮತ್ತು ಕಳೆದ ಬಾರಿ ವಿಂಬಲ್ಡನ್‌ನಲ್ಲಿ ಚಾಂಪಿಯನ್ ಆಗಿದ್ದರು. ಆವೆಮಣ್ಣು ಮತ್ತು ಹಸಿರು ಅಂಗಣಗಳೆರಡರಲ್ಲೂ ಗೆದ್ದ ಅಪರೂಪದ ಸಾಧನೆ ಮಾಡಿದ್ದಾರೆ.

28 ವರ್ಷದ ಕಾಲಿನ್ಸ್ ಎದುರು ಬಲವಾದ ಹೊಡೆಗಳೊಂದಿಗೆ ಮಿಂಚಿದ ಬಾರ್ಟಿ ಮಿಂಚಿನ ಸರ್ವ್‌ಗಳ ಮೂಲಕ ಎದುರಾಳಿಯನ್ನು ಗೊಂದಲಕ್ಕೆ ಈಡುಮಾಡಿದರು. ಅವರ ಫೋರ್‌ಹ್ಯಾಂಡ್ ಹೊಡೆತಗಳು ಕಣ್ಣಿಗೆ ಆನಂದವುಂಟು ಮಾಡಿದವು.

ಆರಂಭದಲ್ಲಿ ಉಭಯ ಆಟಗಾರ್ತಿಯರು ಅವಕಾಶಗಳನ್ನು ಸೃಷ್ಟಿಸಿಕೊಂಡರು. ಸರ್ವಿಸ್ ಗೇಮ್‌ಗಳ ಮೂಲಕ ಪಾಯಿಂಟ್ ಕಲೆ ಹಾಕಿದರು. ಕಾಲಿನ್ಸ್ ನೆಲಮಟ್ಟದ ಹೊಡೆತಗಳಿಗೆ ಮೊರೆ ಹೋದರು. ಆದರೆ ಇದರಿಂದ ನಷ್ಟವೇ ಆಯಿತು. ಆದರೂ 2–2ರಲ್ಲಿ ಸಮಬಲ ಸಾಧಿಸಲು ಯಶಸ್ವಿಯಾದರು. ಈ ಹಂತದಲ್ಲಿ ಏಸ್ ಸಿಡಿಸಿದ ಬಾರ್ಟಿ ಮುನ್ನಡೆ ಸಾಧಿಸಿದರು. ನಂತರ ಎದುರಾಳಿಯನ್ನು ಒತ್ತಡಕ್ಕೆ ಸಿಲುಕಿಸಿ 4–2ರಲ್ಲಿ ಮುನ್ನುಗ್ಗಿದರು. 32 ನಿಮಿಷಗಳಲ್ಲಿ ಕೊನೆಗೊಂಡ ಮೊದಲ ಸೆಟ್ ಗೆದ್ದು ಸಂಭ್ರಮಿಸಿದರು.


ಎರಡನೇ ಸೆಟ್‌ನ ಆರಂಭದಲ್ಲಿ ಕಾಲಿನ್ಸ್ ತಿರುಗೇಟು ನೀಡಿದರು. ಬಾರ್ಟಿ ಅವರ ಸರ್ವ್ ಮುರಿದು 2–0 ಮುನ್ನಡೆ ಗಳಿಸಿದರು. ಮತ್ತು ಆಧಿಪತ್ಯ ಮುಂದುವರಿಸಿ ಮುನ್ನಡೆಯನ್ನು 5–1ಕ್ಕೆ ಹಿಗ್ಗಿಸಿದರು. ಆದರೆ ಸತತ ಮೂರು ಗೇಮ್‌ಗಳನ್ನು ಗೆದ್ದುಕೊಂಡ ಬಾರ್ಟಿ ನಂತರ ಹಿಡಿತ ಬಿಗಿಗೊಳಿಸಿದರು.

ಮೆಡ್ವೆಡೆವ್, ರಫೆಲ್ ನಡಾಲ್ ಯಾರು ಗೆಲ್ಲುವರು ಫೈನಲ್?

ಮೆಲ್ಬರ್ನ್ (ಎಎಫ್‌ಪಿ):21 ಗ್ರ್ಯಾನ್ ಸ್ಲಾಂ ಪ್ರಶಸ್ತಿಗಳ ದಾಖಲೆಯ ಬೆನ್ನುಹತ್ತಿರುವ ರಫೆಲ್ ನಡಾಲ್ ಎದುರು ಒಂದೇ ಪಂದ್ಯ ಬಾಕಿ ಇದೆ. ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಗೆದ್ದರೆ ಅವರು 'ಬಿಗ್ ತ್ರಿ' ಪೈಕಿ ಇಬ್ಬರಾದ ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಮತ್ತು ಸರ್ಬಿಯಾದ ನೊವಾಕ್ ಜೊಕೊವಿಚ್ ಅವರನ್ನು ಹಿಂದಿಕ್ಕಿ ಟೆನಿಸ್ ಅಂಗಣದ ರಾಜ ಎನಿಸಿಕೊಳ್ಳಲಿದ್ದಾರೆ.

ಎಲ್ಲ ಗ್ರ್ಯಾನ್ ಸ್ಲಾಂ ಪ್ರಶಸ್ತಿಗಳನ್ನು ಕನಿಷ್ಠ ಎರಡು ಬಾರಿ ಗೆದ್ದ ಸಾಧನೆಗೆ ಪಾತ್ರರಾಗುವುದಕ್ಕೂ ಆಸ್ಟ್ರೇಲಿಯನ್ ಓಪನ್ ಟೂರ್ನಿಯ ಪ್ರಶಸ್ತಿ ಅವರಿಗೆ ಅಗತ್ಯ. ಇದೆಲ್ಲವನ್ನು ಸಾಧಿಸಲು ಅವರು ಡ್ಯಾನಿಲ್ ಮೆಡ್ವೆಡೆವ್ ಅವರ ಸವಾಲು ಮೀರಿ ನಿಲ್ಲಬೇಕು.

21 ಪ್ರಶಸ್ತಿಗಳ ದಾಖಲೆಯ ಕನಸಿನೊಂದಿಗೆ ಕಳೆದ ಬಾರಿ ಅಮೆರಿಕ ಓಪನ್ ಟೂರ್ನಿಯ ಫೈನಲ್‌ನಲ್ಲಿ ಕಣಕ್ಕೆ ಇಳಿದಿದ್ದ ಜೊಕೊವಿಚ್ ಅವರ ಆಸೆಗೆ ಮೆಡ್ವೆಡೆವ್ ತಣ್ಣೀರು ಸುರಿದಿದ್ದರು. ಆಸ್ಟ್ರೇಲಿಯನ್ ಓಪನ್‌ನಲ್ಲೂ ಅವರು ಇಂಥದೇ ಫಲಿತಾಂಶವನ್ನು ಪುನರಾವರ್ತನೆ ಮಾಡುವರೇ ಅಥವಾ ರಫೆಲ್ ಗೆದ್ದು ಬೀಗುವರೇ ಎಂಬುದು ಟೆನಿಸ್ ಲೋಕದ ಕುತೂಹಲ.

ರಫೆಲ್ ನಡಾಲ್, ಡ್ಯಾನಿಲ್ ಮೆಡ್ವೆಡೆವ್ –ಎಎಫ್‌ಪಿ ಚಿತ್ರ

	ದೇಶ	ವಯಸ್ಸು	ರ‍್ಯಾಂಕಿಂಗ್	ಶ್ರೇಯಾಂಕ	ಮುಖಾಮುಖಿ ಪಂದ್ಯ 4
ರಫೆಲ್ ನಡಾಲ್	ಸ್ಪೇನ್	35	5	6	ಗೆಲುವು 3
ಡ್ಯಾನಿಲ್ ಮೆಡ್ವೆಡೆವ್	ರಷ್ಯಾ	25	2	2	ಗೆಲುವು 1

ಪಂದ್ಯ ಆರಂಭ: ಮಧ್ಯಾಹ್ನ 2.00 (ಭಾರತೀಯ ಕಾಲಮಾನ)
ಸ್ಥಳ: ರಾಡ್ ಲೇವರ್ ಅರೆನಾ, ನೇರ ಪ್ರಸಾರ: ಸೋನಿ ನೆಟ್‌ವರ್ಕ್

ಐಎಸ್‌ಎಲ್ : ಕೇರಳ ಎದುರಾಳಿ

ಬಿಎಫ್‌ಸಿಗೆ ಗೆಲುವಿನ ತವಕ

ವಾಸ್ಕೊ (ಪಿಟಿಐ): ಸತತ ಏಳು ಪಂದ್ಯಗಳಲ್ಲಿ ಅಜೇಯವಾಗಿರುವ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಭಾನುವಾರ ಕೇರಳ ಬ್ಲಾಸ್ಟರ್ಸ್ ಸವಾಲು ಎದುರಿಸಲಿದೆ.

ಕಳೆದ ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿ ಎದುರು 3–0ಯಿಂದ ಜಯಿಸಿದ್ದ ಸುನಿಲ್ ಚೆಟ್ರಿ ನಾಯಕತ್ವದ ಬೆಂಗಳೂರು ತಂಡವು ಈ ಪಂದ್ಯದಲ್ಲಿಯೂ ಅದೇ ಲಯ ಮುಂದುವರಿಸುವ ಛಲ ಹೊಂದಿದೆ.

ಸುನಿಲ್ ಚೆಟ್ರಿ ಅವರು ಲಯಕ್ಕೆ ಮರಳಿದ್ದು ತಂಡದ ಬಲ ಹೆಚ್ಚಿಸಿದೆ. ಈ ಆವೃತ್ತಿಯ ಮೊದಲ 11 ಪಂದ್ಯಗಳಲ್ಲಿ ಒಂದೂ ಗೋಲು ಗಳಿಸದಿದ್ದ ಅವರು, ಕಳೆದ ಎರಡು ಹಣಾಹಣಿಗಳಲ್ಲಿ ಎರಡು ಗೋಲುಗಳನ್ನು ಅಸಿಸ್ಟ್ ಮಾಡಿದ್ದರು. ಉದಾಂತ ಸಿಂಗ್ ಕೂಡ ಉತ್ತಮ ಸಾಮರ್ಥ್ಯ ತೋರುತ್ತಿದ್ದಾರೆ.

13 ಪಂದ್ಯಗಳನ್ನು ಆಡಿರುವ ಬೆಂಗಳೂರು 17 ಪಾಯಿಂಟ್ಸ್ ಗಳಿಸಿದ್ದು ಪಾಯಿಂಟ್ಸ್ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿದೆ.

ಕೇರಳ ಈ ಆವೃತ್ತಿಯಲ್ಲಿ ತನ್ನ ಕೊನೆಯ ಪಂದ್ಯವನ್ನು ಒಡಿಶಾ ಎದುರು ಆಡಿತ್ತು. ಆ ಪಂದ್ಯದಲ್ಲಿ 2–0ಯಿಂದ ಜಯಿಸಿತ್ತು. ಕೋವಿಡ್ ಕಾರಣದಿಂದ ಆ ತಂಡವು ಆಡಬೇಕಿದ್ದ ಎರಡು ಪಂದ್ಯಗಳು ಮುಂದೂಡಿಕೆಯಾಗಿದ್ದವು.

ಸತತ 10 ಪಂದ್ಯಗಳಲ್ಲಿ ಕೇರಳ ಬ್ಲಾಸ್ಟರ್ಸ್ ಸೋತಿಲ್ಲ. 11 ಪಂದ್ಯಗಳಿಂದ 20 ಪಾಯಿಂಟ್ಸ್ ಕಲೆಹಾಕಿರುವ ತಂಡವು ಸದ್ಯ ಪಾಯಿಂಟ್ಸ್ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಕ್ರಿಕೆಟ್: ಸೆಮಿಫೈನಲ್‌ಗೆ ಭಾರತ

ಕೂಲಿಜ್: ಎಡಗೈ ವೇಗಿ ರವಿಕುಮಾರ್ (14ಕ್ಕೆ 3) ಅವರ ಅಮೋಘ ಬೌಲಿಂಗ್ ಹಾಗೂ ಅಂಗರಿಕ್ಷ್ ರಘುವಂಶಿ (44) ಅವರ ಸೊಗಸಾದ ಬ್ಯಾಟಿಂಗ್ ಬಲದಿಂದ ಭಾರತ ತಂಡವು ಹಾಲಿ ಚಾಂಪಿಯನ್ ಬಾಂಗ್ಲಾದೇಶ ತಂಡವನ್ನು ಮಣಿಸಿ 19 ವರ್ಷದೊಳಗಿನವರ ಏಕದಿನ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ತಲುಪಿತು. ಶನಿವಾರ ನಡೆದ ಎಂಟರಘಟ್ಟದ ಪಂದ್ಯದಲ್ಲಿ ಐದು ವಿಕೆಟ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಭಾರತ ತಂಡವು ಬಾಂಗ್ಲಾವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. 38ನೇ ಓವರ್‌ನಲ್ಲಿ 111 ರನ್‌ಗಳಿಗೆ ಕಟ್ಟಿಹಾಕಿತು. ಬಾಂಗ್ಲಾ ಪರ ಮೆಹರಾಬ್ (30), ಐಕ್ ಮೊಲ್ಲಾ (17) ಅಲ್ಪ ಪ್ರತಿರೋಧ ತೋರಿದರು.

ಭಾರತದ ಪರ ಸ್ಪಿನ್ನರ್ ವಿಕಿ ಓಸ್ವಾಲ್ (25ಕ್ಕೆ 2) ಕೂಡ ಮಿಂಚಿದರು. ಭಾರತ 5 ವಿಕೆಟ್ ಕಳೆದುಕೊಂಡು ಗೆಲುವಿನ ಗುರಿ ತಲುಪಿತು. ಶೇಖ್ ರಶೀದ್ (26) ಮತ್ತು ಯಶ್ ಧುಳ್ (ಔಟಾಗದೆ 20) ಕಾಣಿಕೆ ನೀಡಿದರು.

ಆಸ್ಟ್ರೇಲಿಯಾ ತಂಡವು ಶುಕ್ರವಾರ ಪಾಕಿಸ್ತಾನವನ್ನು ಮಣಿಸಿ ನಾಲ್ಕರ ಘಟ್ಟ ತಲುಪಿತ್ತು.

ಸಂಕ್ಷಿಪ್ತ ಸ್ಕೋರ್: ಬಾಂಗ್ಲಾದೇಶ: 37.1 ಓವರ್‌ಗಳಲ್ಲಿ 111 (ಮೆಹರಾಬ್ 30, ಐಕ್ ಮೊಲ್ಲಾ 17, ಮತ್ತು ಅಶ್ಫಿಕುರ್ ಜಮಾನ್ 16; ರವಿಕುಮಾರ್ 14ಕ್ಕೆ 3, ವಿಕಿ ಓಸ್ವಾಲ್ 25ಕ್ಕೆ 2; ಅಂಗಕ್ರಿಶ್ ರಘುವಂಶಿ 4ಕ್ಕೆ 1). ಭಾರತ 30.5 ಓವರ್‌ಗಳಲ್ಲಿ 5ಕ್ಕೆ 117 (ಅಂಗರಿಕ್ಷ್ ರಘುವಂಶಿ 44, ಶೇಖ್ ರಶೀದ್ 26, ಯಶ್ ಧುಳ್ ಔಟಾಗದೆ 20, ಕೌಶಲ್ ತಾಂಬೆ ಔಟಾಗದೆ 11; ರಿಪನ್ ಮಂಡಲ್ 31ಕ್ಕೆ 4), ಫಲಿತಾಂಶ: ಭಾರತಕ್ಕೆ ಐದು ವಿಕೆಟ್‌ಗಳ ಜಯ, ಸೆಮಿಫೈನಲ್ ಪ್ರವೇಶ.

ಭಾರತ್‌ಪೆ: ರಜೆ ಮೇಲೆ ತೆರಳಿದ ಸ್ಥಾಪಕನ ಪತ್ನಿ

ನವದೆಹಲಿ (ಪಿಟಿಐ): ಭಾರತ್‌ಪೆ ಕಂಪನಿಯು ತನ್ನ ಆಂತರಿಕ ಪ್ರಕ್ರಿಯೆ ಮತ್ತು ವ್ಯವಸ್ಥೆಯ ಬಗ್ಗೆ ಸ್ವತಂತ್ರ ಲೆಕ್ಕಪರಿಶೋಧನೆ ಆರಂಭಿಸಿದ ಬೆನ್ನಲ್ಲೇ ಕಂಪನಿಯ ಸ್ಥಾಪಕ ಅಶ್ನೀರ್ ಗ್ರೋವರ್ ಅವರ ಪತ್ನಿಯೂ ರಜೆ ಮೇಲೆ ತೆರಳಿದ್ದಾರೆ.

ಅಶ್ನೀರ್ ಗ್ರೋವರ್ ರಜೆಯ ಮೇಲೆ ಹೋದ ಒಂದು ವಾರದ ನಂತರ ಅವರ ಪತ್ನಿ ಮಾಧುರಿ ಜೈನ್ ಗ್ರೋವರ್ ಅವರು ಸಹ ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಈ ಕುರಿತು ಕಂಪನಿಯು ಯಾವುದೇ ಪ್ರತಿಕ್ರಿಯೆ ನೀಡಿಲ್ಲ

ಕಂಪನಿಯ ಹೆಡ್ ಆಫ್ ಕಂಟ್ರೋಲ್ ಆಗಿರುವ ಮಾಧುರಿ ಅವರು ರಜೆ ಮೇಲೆ ಹೋಗಿದ್ದಾರೆ. ಸ್ವತಂತ್ರ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುವುದರಿಂದ ಕಂಪನಿಯ ಆಡಳಿತಕ್ಕೆ ಸಂಬಂಧಿಸಿದ ಸಮಸ್ಯೆಗಳು ಹೊರಬರಬಹುದು ಎಂದು ಮೂಲಗಳು ಹೇಳಿವೆ.

ನೈಕಾ ಕಂಪನಿ ಐಪಿಒ ಸಮಯದಲ್ಲಿ ಷೇರು ಪಡೆದುಕೊಳ್ಳಲು ಸಾಧ್ಯವಾಗದ್ದಕ್ಕೆ ಗ್ರೋವರ್ ಅವರು ಕೋಟಕ್ ಮಹೀಂದ್ರಾ ಬ್ಯಾಂಕ್ ಉದ್ಯೋಗಿಯನ್ನು ನಿಂದಿಸಿರುವ ಮತ್ತು ಬೆದರಿಕೆಯ ಹೇಳಿಕೆ ಇರುವ ಆಡಿಯೊ ಇದೇ ತಿಂಗಳ ಆರಂಭದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಕಾಣಿಸಿಕೊಂಡಿತ್ತು. ಆದರೆ ಅದನ್ನು ನಕಲಿ ಎಂದು ಗ್ರೋವರ್ ಹೇಳಿದ್ದರು. ನೈಕಾ ಕಂಪನಿಯ ಐಪಿಒ ಸಂದರ್ಭದಲ್ಲಿ ಷೇರು ಖರೀದಿಗಾಗಿ ಹಣಕಾಸಿನ ನೆರವು ನೀಡಲು ವಿಫಲವಾಗಿರುವುದಕ್ಕೆ ಕೋಟಕ್ ಬ್ಯಾಂಕ್‌ಗೆ ಗ್ರೋವರ್ ಮತ್ತು ಅವರ ಪತ್ನಿ ಮಾಧುರಿ ಅವರು 2021ರ ಅಕ್ಟೋಬರ್‌ನಲ್ಲಿಯೇ ನೋಟಿಸ್ ಕಳುಹಿಸಿದ್ದರು ಎನ್ನುವುದು ಈಗ ತಿಳಿದುಬಂದಿದೆ ಎಂದು ಮೂಲಗಳು ತಿಳಿಸಿವೆ. ಮಾರ್ಚ್ ಅಂತ್ಯದವರೆಗೆ ರಜೆ ತೆಗೆದುಕೊಳ್ಳುವುದಾಗಿ ಗ್ರೋವರ್ ಅವರು ಜನವರಿ 19ರಂದು ಹೇಳಿದ್ದರು. ಈ ಎಲ್ಲಾ ಬೆಳವಣಿಗೆಗಳನ್ನು ಗಮನದಲ್ಲಿ ಇಟ್ಟುಕೊಂಡು ಗ್ರೋವರ್ ವಿರುದ್ಧ ಕಾನೂನಾತ್ಮಕ ಕ್ರಮ ತೆಗೆದುಕೊಳ್ಳುವುದಾಗಿ ಕಂಪನಿಯು ಜನವರಿ 9ರಂದು ಹೇಳಿತ್ತು.

ಕರಗಿತು ₹ 8.58 ಲಕ್ಷ ಕೋಟಿ ಸಂಪತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕ ಮತ್ತು ದೇಶಿ ವಿದ್ಯಮಾನಗಳಿಗೆ ಒಳಗಾಗಿ ದೇಶದ ಷೇರುಪೇಟೆಗಳ ವಾರದ ವಹಿವಾಟು ನಕಾರಾತ್ಮಕವಾಗಿ ಅಂತ್ಯವಾಗಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ವಾರದ ವಹಿವಾಟಿನಲ್ಲಿ 1,836 ಅಂಶಗಳಷ್ಟು ಇಳಿಕೆ ಕಂಡಿದೆ. ಇದರಿಂದಾಗಿ ಮಾರುಕಟ್ಟೆ ಬಂಡವಾಳ ಮೌಲ್ಯ ₹ 8.58 ಲಕ್ಷ ಕೋಟಿಗಳಷ್ಟು ಕರಗಿದ್ದು, ₹ 261.07 ಲಕ್ಷ ಕೋಟಿಗಳಿಗೆ ಇಳಿಕೆ ಆಗಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 515 ಅಂಶ ಇಳಿಕೆ ಆಗಿದೆ.

ವಿದೇಶಿ ಬಂಡವಾಳ ಹೊರಹರಿವು ಮುಂದುವರಿದಿರುವುದು ಷೇರುಪೇಟೆಗಳಲ್ಲಿ ಸೂಚ್ಯಂಕಗಳ ಇಳಿಕೆಗೆ ಪ್ರಮುಖ ಕಾರಣ ಆಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ವಾರದ ವಹಿವಾಟಿನಲ್ಲಿ ಷೇರುಪೇಟೆಯಿಂದ ₹ 17,111 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹450

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1260 (1245)
ಸೂರ್ಯಕಾಂತಿ (ರಿಫೈನ್ಡ್)	₹1285 (1275)
ಪಾಮೋಲಿನ್	₹1219 (1212)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1800-2200
ಮಧ್ಯಮ	₹1200-1800
ಸಣ್ಣ	₹500-1200

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	480
ಅಡಿಕೆ	
ಕಾರ್ಕಳ	
ಹೊಸತು	40000-45000
ಹಳತು	46000-53000
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	21799-29099
ಚಾಲಿ	47199-47799
ಕೋಕ	20689-28312
ಹೊಸಚಾಲಿ	33699-39899
ಕೆಂಪುಗೋಟು	32089-34019
ರಾಶಿ	43899-47509
ತಟ್ಟಿಬೆಟ್ಟೆ	38899-45009
ಶಿರಸಿ	
ಬೆಟ್ಟೆ	32496-44809
ಬಿಳಿಗೋಟು	22099-35099
ಚಾಲಿ	33819-41039
ರಾಶಿ	41399-47811
ರಾಮನಗರ ರೇಷ್ಮೆ	
ಮಿಶ್ರತಳಿ	400-758
ದ್ವಿತಳಿ	355-950

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ: ಮುದ್ರೆಮನೆ	ಹಾಸನ: ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15600	---	15750	--- ಸೆಂಟ್ಸ್
ಎಸಿ	7310	---	7200	
ಆರ್‌ಪಿ	7200	---	7300	ಲಂಡನ್
ಆರ್‌ಸಿ	4000	---	3950	--- ಡಾಲರ್ಸ್

ಮುಂಬೈ ಧಾರಣೆ

ಶೇಂಗಾ 29-1-2022

ಜಾವಾ 70/80(ಹೊಸ)	11200-11250
ಜಾವಾ 80/90(ಹೊಸ)	10900-10950
ದಪ್ಪ ಮಧ್ಯಪ್ರದೇಶ(ಹೊಸ)	9800-9850
ದಪ್ಪ ಗುಜರಾತ್(ಹೊಸ)	8650-8700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಸೋಯಾ ಕಚ್ಚಾ	1212 (1210)
ಪಾಮ್ ವಾರದ ಡೆಲಿವರಿ	1217 (1210)
ಸೂರ್ಯಕಾಂತಿ ಎಣ್ಣೆ ಕಚ್ಚಾ	1215 (1220)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,900 (47,700)
ಬೆಳ್ಳಿ ಕೆ.ಜಿ	61,000 (61,200)

ಆವರಣದಲ್ಲಿ ಹಿಂದಿ ದಿನದ ಧಾರಣೆ

ಗರ್ಭಿಣಿಯರ ನೇಮಕದ ಸುತ್ತೋಲೆ ಹಿಂಪಡೆದ ಎಸ್‌ಬಿಐ

ನವದೆಹಲಿ (ಪಿಟಿಐ): ವಿವಿಧ ವಲಯಗಳಿಂದ ಟೀಕೆಗಳು ವ್ಯಕ್ತವಾಗಿರುವುದರಿಂದ ಗರ್ಭಿಣಿಯರ ನೇಮಕಾತಿಗೆ ಸಂಬಂಧಿಸಿದ ಸುತ್ತೋಲೆಯನ್ನು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಶನಿವಾರ ಹಿಂದಕ್ಕೆ ಪಡೆದಿದೆ.

ನೇಮಕಾತಿಗೆ ಸಂಬಂಧಿಸಿದ ಫಿಟ್‌ನೆಸ್ ಮಾನದಂಡಗಳನ್ನು ಎಸ್‌ಬಿಐ ಈಚೆಗೆ ಪರಿಷ್ಕರಿಸಿತ್ತು. ಅದರಲ್ಲಿ ಗರ್ಭಿಣಿ ಅಭ್ಯರ್ಥಿಗಳ ನೇಮಕಕ್ಕೆ ಸಂಬಂಧಿಸಿದ ಮಾನದಂಡಗಳೂ ಇವೆ. ಅದರಂತೆ, ಮೂರು ತಿಂಗಳಿಗಿಂತ ಮೇಲ್ಪಟ್ಟ ಗರ್ಭಿಣಿ ಅಭ್ಯರ್ಥಿಯನ್ನು 'ತಾತ್ಕಾಲಿಕವಾಗಿ ಅನರ್ಹ' ಎಂದು ಪರಿಗಣಿಸಲಾಗುತ್ತದೆ ಹಾಗೂ ಹೆರಿಗೆ ಆದ ನಂತರ ನಾಲ್ಕು ತಿಂಗಳ ಒಳಗಾಗಿ ಬ್ಯಾಂಕ್‌ಗೆ ಸೇರಬಹುದು ಎಂದು ಹೇಳಲಾಗಿದೆ.

ಬ್ಯಾಂಕ್‌ನ ಈ ಹೊಸ ನಿಯಮಕ್ಕೆ ಸಂಬಂಧಿಸಿದಂತೆ ಕಾರ್ಮಿಕರ ಒಕ್ಕೂಟಗಳು ಮತ್ತು ದೆಹಲಿ ಮಹಿಳಾ ಆಯೋಗ ಸೇರಿದಂತೆ ವಿವಿಧ ಕಡೆಗಳಿಂದ ತೀವ್ರ ಟೀಕೆಗಳು ವ್ಯಕ್ತವಾಗಿವೆ. ಸಾರ್ವಜನಿಕ ಭಾವನೆಗಳನ್ನು ಗಮನದಲ್ಲಿಟ್ಟುಕೊಂಡು, ಗರ್ಭಿಣಿಯರ ನೇಮಕಾತಿಗೆ ಸಂಬಂಧಿಸಿದಂತೆ ಪರಿಷ್ಕೃತ ಸೂಚನೆಗಳನ್ನು ಸ್ಥಗಿತಗೊಳಿಸಲು ಮತ್ತು ಈ ವಿಷಯದಲ್ಲಿ ಹಿಂದಿನ ಸೂಚನೆಗಳನ್ನು ಮುಂದುವರಿಸಲು ನಿರ್ಧರಿಸಲಾಗಿದೆ ಎಂದು ಎಸ್‌ಬಿಐ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಗ್ಲಾನ್ಸಾ, ಅರ್ಬನ್ ಕ್ರೂಸರ್: 1 ಲಕ್ಷಕ್ಕೂ ಅಧಿಕ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೊಯೋಟ ಗ್ಲಾನ್ಸಾ ಮತ್ತು ಅರ್ಬನ್ ಕ್ರೂಸರ್ ಮಾದರಿಗಳ ಒಟ್ಟಾರೆ ಸಗಟು ಮಾರಾಟವು 1 ಲಕ್ಷವನ್ನು ದಾಟಿದೆ ಎಂದು ಕಂಪನಿಯು ಶನಿವಾರ ತಿಳಿಸಿದೆ.

ಗ್ಲಾನ್ಸಾ ಮತ್ತು ಕ್ರೂಸರ್ ಅನ್ನು ಕ್ರಮವಾಗಿ 2019ರ ಜೂನ್ ಮತ್ತು 2020ರ ಸೆಪ್ಟೆಂಬರ್‌ನಲ್ಲಿ ಬಿಡುಗಡೆ ಮಾಡಿದ್ದು, ಎರಡು ವಾಹನಗಳಿಗೂ ಗ್ರಾಹಕರಿಂದ ಉತ್ತಮ ಬೇಡಿಕೆ ಬಂದಿದೆ. ಗ್ಲಾನ್ಸಾ ಮಾರಾಟವು 65 ಸಾವಿರ ದಾಟಿದ್ದರೆ, ಕ್ರೂಸರ್ ಮಾರಾಟವು 35 ಸಾವಿರವನ್ನು ದಾಟಿದೆ. ಈ ಮೂಲಕ ಹೊಸ ಮೈಲಿಗಲ್ಲು ಸೃಷ್ಟಿಯಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಎರಡು ಮತ್ತು ಮೂರನೇ ಶ್ರೇಣಿಯ ಮಾರುಕಟ್ಟೆಗಳಿಂದ ಈ ವಾಹನಗಳಿಗೆ ಬೇಡಿಕೆ ಬಂದಿದೆ. ಮೌಲ್ಯವರ್ಧಿತ ಸೇವಾ ಕೊಡುಗೆಗಳಿಂದಾಗಿ ಈ ಮಾರಾಟವು ಸಾಧ್ಯವಾಗಿದೆ ಎಂದು ಹೇಳಿದೆ.

‘ಕೋವಿಡ್: ಸ್ಥಿರತೆ ಕಂಡುಬಂದರೂ ಅಪಾಯ ಇದೆ’

ನವದೆಹಲಿ (ಪಿಟಿಐ): ದೇಶದ ಕೆಲ ನಗರಗಳು ಅಥವಾ ರಾಜ್ಯಗಳಲ್ಲಿ ಕೋವಿಡ್–19 ಪ್ರಕರಣಗಳಲ್ಲಿ ಸ್ಥಿರತೆ ಕಂಡುಬರುತ್ತಿದೆ. ಆದರೂ, ಸೋಂಕು ಪ್ರಸರಣದ ಅಪಾಯ ಇದ್ದೇ ಇದೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ಹಿರಿಯ ಅಧಿಕಾರಿ ಡಾ.ಪೂನಮ್ ಖೇತ್ರಪಾಲ್ ಸಿಂಗ್ ಹೇಳಿದ್ದಾರೆ.

‘ಸೋಂಕು ಪ್ರಸರಣಕ್ಕೆ ಕಡಿವಾಣ ಹಾಕುವುದು ಹಾಗೂ ಸ್ಥಳೀಯ ಸ್ಥಿತಿಗೆ ಅನುಗುಣವಾದ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಗಮನ ನೀಡುವುದು ಮುಖ್ಯ’ ಎಂದು ಅವರು ಹೇಳಿದ್ದಾರೆ. ಡಾ.ಪೂನಮ್ ಅವರು ವಿಶ್ವ ಆರೋಗ್ಯ ಸಂಸ್ಥೆಯ ಆಗ್ನೇಯ ಏಷ್ಯಾ ಪ್ರಾದೇಶಿಕ ನಿರ್ದೇಶಕಿಯಾಗಿದ್ದಾರೆ. ಅವರು ಪಿಟಿಐ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಕೋವಿಡ್ ಪಿಡುಗಿನ ಸ್ಥಿತಿಗತಿ ಕುರಿತು ಮಾತನಾಡಿದ್ದಾರೆ.

2.35 ಲಕ್ಷ ಹೊಸ ಪ್ರಕರಣ

ನವದೆಹಲಿ (ಪಿಟಿಐ): ಶನಿವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ 24 ಗಂಟೆಗಳ ಅವಧಿಯಲ್ಲಿ ದೇಶದಲ್ಲಿ ಹೊಸದಾಗಿ 2,35,532 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, 871 ಮಂದಿ ಸಾವಿಗೀಡಾಗಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ದೇಶದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 20,04,333ಕ್ಕೆ ಏರಿದೆ. ದೈನಂದಿನ ಪಾಸಿಟಿವಿಟಿ ದರ ಶೇಕಡ 13.39ರಷ್ಟಿದೆ. ತೆಲಂಗಾಣದಲ್ಲಿ ಮಂಗಳವಾರದಿಂದ ಶಾಲಾ–ಕಾಲೇಜುಗಳು ಪುನರಾರಂಭವಾಗಲಿವೆ. ಪುಣೆಯಲ್ಲಿ ಮಂಗಳವಾರದಿಂದ ಶಾಲೆಗಳನ್ನು ಪುನರಾರಂಭಿಸಲು ನಿರ್ಧರಿಸಲಾಗಿದೆ.

ಟಿಇಟಿ ಅಕ್ರಮ: ಐಎಎಸ್ ಅಧಿಕಾರಿ ಬಂಧನ

ಪುಣೆ (ಪಿಟಿಐ): ಮಹಾರಾಷ್ಟ್ರದಲ್ಲಿ 2020ನೇ ಸಾಲಿನ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿನ (ಟಿಇಟಿ) ಅಕ್ರಮಕ್ಕೆ ಸಂಬಂಧಿಸಿದಂತೆ ಐಎಎಸ್ ಅಧಿಕಾರಿ ಸುಶೀಲ್ ಖೋಡ್‌ವೆಕರ್ ಅವರನ್ನು ಠಾಣೆ ಜಿಲ್ಲೆಯಲ್ಲಿ ಪೊಲೀಸರು ಬಂಧಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ 13ಕ್ಕೆ ಏರಿದೆ.

ಪೊಲೀಸರ ಪ್ರಕಾರ, ಟಿಇಟಿ–2020 ಪರೀಕ್ಷೆಯಲ್ಲಿ ಹಣಕ್ಕಾಗಿ ಸುಮಾರು 7,800 ಅಭ್ಯರ್ಥಿಗಳ ಅಂಕಗಳನ್ನು ತಿರುಚಲಾಗಿತ್ತು. ಬಂಧಿತ ಐಎಎಸ್ ಅಧಿಕಾರಿಯನ್ನು ಕೋರ್ಟ್‌ಗೆ ಹಾಜರುಪಡಿಸಲಾಗುವುದು ಎಂದು ಪುಣೆಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಗಡೀಪಾರು ಆದೇಶ ಅಪರೂಪಕ್ಕೆ ಬಳಸಬೇಕು’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಗಡೀಪಾರು ವಿಶೇಷವಾದ ಕ್ರಮ. ಅಪರೂಪಕ್ಕೆ ಬಳಸಬೇಕು. ಸಕ್ಷಮ ಪ್ರಾಧಿಕಾರದ ವಾದ ತೃಪ್ತಿಕರವಾಗಿದ್ದಲ್ಲಿ ಗರಿಷ್ಠ ಎರಡು ವರ್ಷ ಜಾರಿಗೊಳಿಸಬಹುದು. ಇಲ್ಲದಿದ್ದರೆ ಮುಕ್ತವಾಗಿ ಸಂಚರಿಸುವ ವ್ಯಕ್ತಿಯ ಮೂಲಭೂತ ಹಕ್ಕಿಗೆ ನಿರ್ಬಂಧ ಹೇರಿದಂತಾಗುತ್ತದೆ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಅಭಯ್ ಎಸ್. ಓಕಾ ಅವರಿದ್ದ ಪೀಠವು, ಗಡೀಪಾರು ವಿಶೇಷ ಕ್ರಮ. ಅಪರೂಪಕ್ಕೆ ಬಳಸಬೇಕು ಎಂಬುದರಲ್ಲಿ ಯಾವುದೇ ಅನುಮಾನ ಬೇಡ ಎಂದಿತು. ಗಡೀಪಾರು ಕ್ರಮ ವ್ಯಕ್ತಿಯು ದೇಶದಾದ್ಯಂತ ಸಂಚರಿಸುವ ಮೂಲಭೂತ ಹಕ್ಕಿಗೆ ಚ್ಯುತಿ ತರಲಿದೆ. ಇಂಥ ಆದೇಶವು ಜಾರಿಯಲ್ಲಿರುವ ಅವಧಿಯಲ್ಲಿ ವ್ಯಕ್ತಿ ತನ್ನದೇ ಮನೆಯಲ್ಲಿ ಪತ್ನಿ, ಮಕ್ಕಳ ಜೊತೆಗೆ ವಾಸವಿರುವುದನ್ನು ತಡೆಯಲಿದೆ ಎಂದು ಪೀಠವು ಅಭಿಪ್ರಾಯಪಟ್ಟಿತು.

ಜಲ್ನಾ ಜಿಲ್ಲೆಯ ದೀಪಕ್ ಎಂಬುವರ ವಿರುದ್ಧ ಬಾಂಬೆ ಹೈಕೋರ್ಟ್ ಡಿಸೆಂಬರ್ 15, 2020ರಲ್ಲಿ ವಿಧಿಸಿದ್ದ ಗಡೀಪಾರು ಆದೇಶವನ್ನು ಪೀಠವು ವಜಾಮಾಡಿತು. ಕೌಟುಂಬಿಕ ವಿವಾದದ ಹಿನ್ನೆಲೆಯಲ್ಲಿ ಸಂಬಂಧದಲ್ಲಿ ಮಾವನಾದ, ಸ್ಥಳೀಯ ಶಾಸಕನ ಚಿತಾವಣೆಯಿಂದ ಈ ಕ್ರಮ ಜರುಗಿಸಲಾಗಿದೆ ಎಂದು ಅರ್ಜಿದಾರರು ವಾದಿಸಿದ್ದರು. ಮಹಾರಾಷ್ಟ್ರ ಪೊಲೀಸ್ ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ಎರಡು ವರ್ಷಕ್ಕೆ ಗಡೀಪಾರು ಮಾಡಲಾಗಿದೆ ಎಂದು ತಿಳಿಸಿದ್ದರು.

ನೇಮಕಾತಿ: ಸಿಐಡಿ ಪರಿಶೀಲನೆಗೆ ಆದೇಶ

ಪ್ರಜಾವಾಣಿ ವಾರ್ತೆ

ಶ್ರೀನಗರ: ಸರ್ಕಾರಿ ನೌಕರಿ ಪಡೆಯುವಲ್ಲಿ ‘ದೇಶವಿರೋಧಿ ಶಕ್ತಿ’ಗಳು ಕೆಲಸ ಮಾಡಿವೆ ಎಂಬ ವರದಿ ಹಿನ್ನೆಲೆಯಲ್ಲಿ 2018ರ ಮೇ ತಿಂಗಳ ನಂತರ ಕಾಶ್ಮೀರ ಕಣಿವೆಯಾದ್ಯಂತ ನೇಮಕಗೊಂಡ ಸರ್ಕಾರಿ ನೌಕರರ ಕುರಿತು ಪರಿಶೀಲನೆ ನಡೆಸಲು ಜಮ್ಮು ಮತ್ತು ಕಾಶ್ಮೀರ ಆಡಳಿತವು ನಿರ್ಧರಿಸಿದೆ.

ಕಾಶ್ಮೀರ ವಿಭಾಗೀಯ ಆಯುಕ್ತ ಪಾಂಡುರಂಗ ಪೊಲೆ ಅವರು, ಈ ಸಂಬಂಧ ಕಾಶ್ಮೀರದ ಹತ್ತು ಜಿಲ್ಲೆಗಳ ಜಿಲ್ಲಾಧಿಕಾರಿಗಳ ಸಭೆ ನಡೆಸಿ ಸರ್ಕಾರದ ನಿರ್ದೇಶನವನ್ನು ಪಾಲಿಸುವಂತೆ ಸೂಚನೆ ನೀಡಿದ್ದು, ನೇಮಕಗೊಂಡ ಉದ್ಯೋಗಿಗಳ ಕುರಿತು ಆದಷ್ಟು ಬೇಗ ಪರಿಶೀಲನೆ ನಡೆಸುವಂತೆ ಸೂಚಿಸಿದ್ದಾರೆ.

3ನೇ ಅಲೆ: ರಾಷ್ಟ್ರವ್ಯಾಪಿ ಮುಷ್ಕರ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರ ಜನವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ವಿವಿಧ ಕಾರ್ಮಿಕ ಸಂಘಟನೆಗಳು ಸಂಸತ್‌ನ ಬಜೆಟ್ ಅಧಿವೇಶನದ ವೇಳೆ ಆಯೋಜಿಸಲು ಉದ್ದೇಶಿಸಿದ್ದ ಎರಡು ದಿನಗಳ ರಾಷ್ಟ್ರವ್ಯಾಪಿ ಮುಷ್ಕರವನ್ನು ಕೋವಿಡ್ 3ನೇ ಅಲೆಯ ಹಿನ್ನೆಲೆಯಲ್ಲಿ ಮುಂದೂಡಲು ನಿರ್ಧರಿಸಲಾಗಿದೆ.

ಐಎನ್‌ಟಿಯುಸಿ, ಎಐಟಿಯುಸಿ, ಎಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಐಸಿಸಿಟಿಯು, ಎಲ್‌ಪಿಎಫ್ ಯುಟಿಯುಸಿ ಮತ್ತಿತರ 10ಕ್ಕೂ ಅಧಿಕ ಕಾರ್ಮಿಕ ಸಂಘಟನೆಗಳು ಫೆಬ್ರುವರಿ 23 ಮತ್ತು 24ರಂದು ಮುಷ್ಕರ ಹಮ್ಮಿಕೊಳ್ಳಲು ನಿರ್ಧರಿಸಿದ್ದವು. ಇದೀಗ ಮಾರ್ಚ್ 28 ಮತ್ತು 29ರಂದು ಮುಷ್ಕರ ನಡೆಸಲು ತೀರ್ಮಾನಿಸಲಾಗಿದೆ.

ಕುಲಾಂತರಿ ಆಹಾರ: ಕರಡು ನಿಯಮಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ರೂಪಿಸಿರುವ ಕುಲಾಂತರಿ ಆಹಾರ ಕುರಿತ ಕರಡು ನಿಯಮಗಳಿಗೆ ರಾಕೇಶ್ ಟಿಕಾಯತ್ ನೇತೃತ್ವದ ‘ಸಂಯುಕ್ತ ಕಿಸಾನ್ ಮೋರ್ಚಾ’ ಸಂಘಟನೆಯು ವಿರೋಧ ವ್ಯಕ್ತಪಡಿಸಿದೆ.

ಕುಲಾಂತರಿ ಆಹಾರವನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದು ಕೋರಿ ಶನಿವಾರ ಪ್ರಾಧಿಕಾರಕ್ಕೆ ಪತ್ರ ಬರೆದಿರುವ ಟಿಕಾಯತ್, ‘ನಮ್ಮ ಆಹಾರ ಹಾಗೂ ಕೃಷಿ ಪದ್ಧತಿಯಲ್ಲಿ ಕುಲಾಂತರಿ ತಂತ್ರಜ್ಞಾನವನ್ನು ಅಳವಡಿಸಲಿರುವ ಈ ಕರಡನ್ನು ಹಿಂದಕ್ಕೆ ಪಡೆಯಬೇಕು’ ಎಂದು ಕೋರಿದ್ದಾರೆ.

‘ಪ್ರಸ್ತಾವಿತ ನಿಯಮದ ಮೂಲಕ ದೇಶದೊಳಗೆ ಅಸುರಕ್ಷಿತವಾದ ಕುಲಾಂತರಿ ಆಹಾರವನ್ನು ಬಿಟ್ಟುಕೊಳ್ಳುವ ಪ್ರಯತ್ನ ನಡೆಸಲಾಗುತ್ತಿದೆ ಎಂಬುದನ್ನು ನಾವು ಕಂಡುಕೊಂಡಿದ್ದೇವೆ. ಹಾಗಾಗಿ, ಭಾರತದಲ್ಲಿ ಯಾವುದೇ ಕುಲಾಂತರಿ ಆಹಾರ ಬೆಳೆಗಳನ್ನು ಬೆಳೆಯಲು ಅನುಮತಿ ನೀಡಲಾಗದು’ ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.



ಏರ್ ಇಂಡಿಯಾ...

ಏರಿಳಿದು ಮತ್ತೆ ಏರುಮುಖಿಯಾಗಿ



ಜೆಆರ್‌ಡಿ ಟಾಟಾ ಅವರಿಂದ 'ಟಾಟಾ ಏರ್‌ಲೈನ್ಸ್' ಆಗಿ ಸ್ಥಾಪನೆಗೊಂಡು, ಭಾರತ ಸರ್ಕಾರದ ತೆಕ್ಕೆಗೆ ಜಾರಿದ್ದ ಮೋಡದ ಮೇಲಿನ ಮಹಾರಾಜ 'ಏರ್ ಇಂಡಿಯಾ' ಇದೀಗ ಮತ್ತೆ ಟಾಟಾ ಕಂಪನಿಯ ಅಂಗಳದಲ್ಲಿಯೇ 'ಲ್ಯಾಂಡ್' ಆಗಿದೆ. ಈ ಮಹಾರಾಜನ ಜತೆ ಗಗನಸಖಿಯಾಗಿ ಜಗತ್ತು ಸುತ್ತಿದ ಲೇಖಕಿಯ 40 ವರ್ಷಗಳ ಹಿಂದಿನ ಆ ವೈಭವದ ಒಂದು ಮಧುರ ಮೆಲುಕು ಇಲ್ಲಿದೆ...

ರೇಖಾ ಹೆಗಡೆ

ಮುಂಬೈಯ ಬಾಂದ್ರಾದಲ್ಲಿ ಸಂಜೆಯ ಸಣ್ಣ ಸುತ್ತಾಟಕ್ಕೆಂದು ಮನೆಯ ಬಾಗಿಲು ಹಾಕುವಾಗ ನನ್ನ ಚೆಕ್‌ಲಿಸ್ಟ್ ಓದುತ್ತೇನೆ. ಮಾಸ್ಕ್, ಮೊಬೈಲ್, ಪವರ್‌ಬ್ಯಾಂಕ್, ಇಯರ್‌ಫೋನ್, ಚಶ್ಮಾ, ಅಸ್ತಮಾ ಪಂಪ್, ಕಾರಿನ ಕೀ ಮತ್ತು ಪರ್ಸ್.

ನೆನಪು 40 ವರ್ಷಗಳ ಹಿಂದಕ್ಕೆ ಓಡುತ್ತದೆ. ಬದುಕು ಆಗ ತುಂಬ ಸರಳವಾಗಿತ್ತು. ಗಗನಸಖಿಯಾಗಿ ಲಂಡನ್‌ಗೆ ಡ್ಯೂಟಿಯ ಮೇಲೆ ಹೊರಡಲೆಂದು ಇದೇ ಬಾಂದ್ರಾದಿಂದ ಸಾಂತಾಕ್ರೂಸ್‌ಗೆ ಹೊರಡುವಾಗ ಈ ಚೆಕ್‌ಲಿಸ್ಟ್‌ನಲ್ಲಿದ್ದ ಯಾವುದೂ ಬೇಕಿರಲಿಲ್ಲ. ಆದರೆ ಏರ್ ಇಂಡಿಯಾ ನೀಡಿದ್ದ ಮಾರುದ್ದದ ಚೆಕ್‌ಲಿಸ್ಟ್ ಇತ್ತು. ಅದರ ಎಲ್ಲ ಐಟಮ್ಮನ್ನೂ ಟಿಕ್ ಮಾಡಿ ಸೂಟ್‌ಕೇಸ್ ತುಂಬಲು ಕನಿಷ್ಠ ನಾಲ್ಕು ಗಂಟೆ ಬೇಕಾಗುತ್ತಿತ್ತು. ಲಂಡನ್‌ಗೆ ಫ್ಲೈಟ್ ಯಾವಾಗಲೂ ಬೆಳಗಿನ ಜಾವ ಮೂರು ಗಂಟೆಗೆ. ಆದರೆ ಮನೆ ಎದುರು ರಾತ್ರಿ 12ಕ್ಕೇ ಏರ್ ಇಂಡಿಯಾ ಮಿನಿಬಸ್ ಬಂದಿರುತ್ತಿತ್ತು. ಆ ನೀರವ ರಾತ್ರಿಯಲ್ಲಿ ಬ್ಯೂಟಿ ಪಾರ್ಲರ್‌ನಿಂದ ಹೊರಟ ಮದುವಣಗಿತ್ತಿಯಂತೆ ಮನೆಯಿಂದ ಹೊರಬರಬೇಕು. ಸಿಲ್ಕ್ ಸೀರೆ, ನೆತ್ತಿಯ ಮೇಲೆ ಮೂರಂಗುಲ ತುರುಬು, ಮುಕ್ಕಾಲು ತೋಳಿನ ಬ್ಲೌಸ್, ಕಾಲಲ್ಲಿ ಎರಡಂಗುಲ ಹೈಹೀಲ್ಡ್.

ಹಾರಲು ಸಜ್ಜಾಗಿ ನಿಂತಿದ್ದ ವಿಮಾನದ ಪಾವಟಿಗೆಯನ್ನು ಏರುತ್ತೇನೆ. ಗಾಳಿಗೆ ಗರಿಗೆದರುವ ಸೆರಗನ್ನು ಬಿಗಿ ಹಿಡಿದು ಪ್ರಯಾಣಿಕರ ಸ್ವಾಗತಕ್ಕೆಂದು ವಿಮಾನಕ್ಕೆ ಬೆನ್ನುಹಾಕಿ ದ್ವಾರದಲ್ಲಿ ನಿಂತು ಸುತ್ತೆಲ್ಲ ನೋಡುತ್ತೇನೆ. ಸಾಂತಾಕ್ರೂಸ್‌ನಲ್ಲಿ ಆ ಸರಿರಾತ್ರಿಯಲ್ಲೂ ಝಗಮಗ ಸಂತೆ. ಅಮೆರಿಕದ ಪ್ಯಾನಾಮ್, ಜಪಾನ್ ಏರ್‌ಲೈನ್ಸ್, ಜರ್ಮನಿಯ ಲುಫ್ತಾನ್ಸಾ, ಬ್ರಿಟಿಷ್ ಏರ್‌ವೇಸ್, ಏರ್ ಫ್ರಾನ್ಸ್, ಸಿಂಗಪೂರ್ ಏರ್‌ಲೈನ್ಸ್. ನೀಲಿ, ಬಿಳಿ, ಬೂದು ತಿಮಿಂಗಿಲಗಳಂತೆ ನಿಂತ ಅವುಗಳ ಬಳಿ ಬಣ್ಣದ ಮೀನುಗಳಂತೆ ಚಲಿಸುವ ಬಾಬ್‌ಕಟ್, ಮಿನಿಸ್ಕರ್ಟ್ ಬೆಡಗಿಯರು. ಅವರು ಅಷ್ಟೊಂದು ಸ್ಮಾರ್ಟಾಗಿ ಸೂಟ್‌ಕೇಸ್ ಎಳೆದುಕೊಂಡು ಚುರುಕಾಗಿ ಟಾರ್ಮಾಕ್ ಮೇಲೆ ಹೆಜ್ಜೆ ಹಾಕುತ್ತಿರುವಾಗ ತುಸು ಅಸೂಯೆ ಆಗುತ್ತಿತ್ತು. ಕ್ಷಣಕ್ಷಣಕ್ಕೂ ಜಾರುವ ನಮ್ಮ ಈ ಸಿಲ್ಕ್ ಸೀರೆ, ಎತ್ತರದ ತುರುಬಿನ ವಹೀದಾ ರೆಹಮಾನ್ ವೇಷದ ರಗಳೆ ಅವರಿಗಿಲ್ಲವಲ್ಲ ಅಂತ. ಅವರಿಗೇನು, ಪ್ರಯಾಣ ಹೊರಡುವ ಅರ್ಧಗಂಟೆ ಮುನ್ನ ಹಾಸಿಗೆ ಬಿಟ್ಟೆದ್ದು ತಲೆಯನ್ನು ಕೊಡವಿ, ತುಟಿಗೆ ರಂಗು ಬಳಿದು ಶೂ ಮೆಟ್ಟಿದರೆ ಸಾಕು. ಆದರೆ ನಿಲ್ಲಿ! ಇಲ್ಲಿ ಸಾಂತಾಕ್ರೂಸ್‌ನ ಜೆಟ್ ಗಾತ್ರದ ಸೊಳ್ಳೆಗಳನ್ನು ಓಡಿಸಲು ಅವರ ಸಂಕಷ್ಟವನ್ನು ನೋಡಿ ಅವರಿಗೆ sorry ಹೇಳುತ್ತ, ನಮ್ಮ sareeಗೆ ಜೈ ಹೇಳುತ್ತೇನೆ.

ಏರ್ ಇಂಡಿಯಾ ವಿಮಾನ ಅಂದರೆ ಆಗೆಲ್ಲ ಹಾಗೇ. ಫ್ಲೈಯಿಂಗ್ ಪ್ಯಾಲೆಸ್... ಉಡ್ಡಾಣಕ್ಕೆ ಸಜ್ಜಾದ ಆ ಅರಮನೆಯ ಮೆಟ್ಟಿಲಲ್ಲಿ ಸ್ವತಃ ಮಹಾರಾಜನೇ ಸ್ವಾಗತಕಾರ. ತುಂಟ ನಗುವಿನ, ಗೇಣುದ್ದ ಮೀಸೆಯ ಆತನ ಅರೆಬಾಗಿ ನಮಿಸುವ ಭಂಗಿಯನ್ನು ನೋಡುತ್ತ ಒಳಗೆ ಕಾಲಿಟ್ಟರೆ ವೈಭವದ ಅರಮನೆ. ಹೆಜ್ಜೆ ಇಟ್ಟಲ್ಲಿ ರತ್ನಗಂಬಳಿ. ಚಿನ್ನದ ವರ್ಣದ ಮಂದ ಬೆಳಕು; ಮೆಲುದನಿಯ ಸಿತಾರ್, ಶ್ರೀಗಂಧದ ಪರಿಮಳ. ಕಿಟಕಿಗಳಿಗೆ ಸಿಲ್ಕ್ ಪರದೆ. ವಿಮಾನದೊಳಗಿನ ಸಾಗುದಾರಿಯ ಈ ತುದಿಯಿಂದ ಆ ತುದಿಯವರೆಗೆ 12 ರಾಜಕುವರಿಯರ ಸಾಲು. ಮುಖದಲ್ಲಿ ಮುಗುಳ್ನಗೆ, ಮುಗುಳುಬಿರಿದ ಕಮಲದ ಭಂಗಿಯಲ್ಲಿ ಕೈಜೋಡಿಸಿ ನಮಸ್ಕಾರ.

ನಾಲ್ಕು ಎಂಜಿನ್‌ಗಳ, ಮೂರಂತಸ್ತಿನ ನಮ್ಮ ಬೃಹದಾಕಾರದ ಬೋಯಿಂಗ್ 747 ಅರಮನೆ ನೆಲದ ಮೇಲೆ ನಿಂತಿದ್ದಾಗಲೇ ಐದು ಮಹಡಿಗಳಷ್ಟೆತ್ತರ. ಅದು ಐದು ಸಾವಿರ ಅಡಿ ಮೇಲೇರಿ ಯುರೋಪ್‌ನತ್ತ ಸಾಗುತ್ತಿದ್ದಂತೆ ನಸುಕಿನ ಸೂರ್ಯ ಎಳೆ ಮಗುವಿನಂತೆ ಸೆರಗ ಹಿಡಿದು ಬರುತ್ತಿದ್ದ. ಏಳೂವರೆ ಹೊತ್ತಿಗೆ ಏಳು ರಾಷ್ಟ್ರಗಳನ್ನು ದಾಟಿ ಏಷ್ಯಾ ಖಂಡದ ಅಂಚಿನ ಇಸ್ತಂಬೂಲ್‌ಗೆ ಬರುವ ಹೊತ್ತಿಗೆ ಕಾಫಿಯ ಘಮ, ಇಡ್ಲಿ ಸಾಂಬಾರ್, ಢೋಕ್ಲಾ, ವಡಾಪಾವ್, ಶುಂಠಿ ಚಹಾದ ಪರಿಮಳದೊಂದಿಗೆ ಇಡೀ ಭಾರತವೇ ಮೈಮುರಿದೇಳುತ್ತಿತ್ತು. 425 ಪ್ರಯಾಣಿಕರ ಛಪ್ಪನ್ನಾರು ಚಾಪಲ್ಯಗಳನ್ನು ತೀರಿಸಲು ನಾವು ಆಕಾಶ ಪಾತಾಳ ಒಂದು ಮಾಡಬೇಕಿತ್ತು.

ಯಾವ ದೇಶಕ್ಕೆ ಹೋದರೂ ಭಾರತವನ್ನು ಅಲ್ಲಿಗೆ ಕೊಂಡೊಯ್ಯುತ್ತ, ಯಾವ ದೇಶದಿಂದ ಹೊರಟರೂ ಅಲ್ಲಿ ಶತಮಾನದಿಂದ ಬೇರುಬಿಟ್ಟವರ ಹೊಸ ಪೀಳಿಗೆಯ ಅನಿವಾಸಿ ಪ್ರಯಾಣಿಕರಿಗೆ ಭಾರತದ ಮೊದಲ ಪರಿಚಯ ಮಾಡಿಕೊಡುತ್ತ ನಾವೆಲ್ಲ ಒಂಥರಾ ಸಂಚಾರಿ ರಾಯಭಾರಿಗಳೇ ಆಗಿದ್ದೆವು. ಪಶ್ಚಿಮದ ಅಂಚಿನ ಕೆನಡಾದಿಂದ ಹಿಡಿದು ಪೂರ್ವದ ಪರ್ತ್‌ವರೆಗೆ ಭಾರತೀಯ ಮೂಲದವರು ನೆಲೆಸಿರುವುದರಿಂದ ಅವರೆಲ್ಲರಿಗೂ ಏರ್ ಇಂಡಿಯಾ ಮೊದಲ ಆದ್ಯತೆಯ ಏರ್‌ಲೈನ್ಸ್ ಆಗಿತ್ತು.

ಇನ್ನು ಭಾರತಕ್ಕೆ ಮೊದಲ ಬಾರಿಗೆ ಹೊರಟ ವಿದೇಶಿ ಪ್ರವಾಸಿಗೆ ನಮ್ಮ ವಿಮಾನದ ಮೂಲಕವೇ ಭಾರತದ ಮೊದಲ ಪರಿಚಯ ಆಗಬೇಕಿತ್ತು. ಗಂಟಲನೋವಿಗೆ ಇಂಡಿಯನ್ ಮೆಡಿಸಿನ್ ಬೇಕೆಂದು ಕೇಳಿದವರಿಗೆ ಹನಿ-ಲೆಮನ್ ಕೊಡಲೆಂದು ಬಗ್ಗಿದಾಗ, ಪಕ್ಕದ ಸೀಟಿನ ಪುಟ್ಟ ಮಗುವೊಂದು ಸೆರಗ ಜಗ್ಗಿ 'ಎಮ್ಮೆ ಮೇಲೆ ಸವಾರಿ ಮಾಡೋದಾದ್ರೆ ಯಾವ ಊರಿಗೆ ಹೋಗಬೇಕು' ಎಂದು ಕೇಳಿದರೆ ಅದಕ್ಕೆ ನನ್ನ ಉತ್ತರ ಏನಿದ್ದೀತೆಂದು ಆಚೀಚಿನ ನಾಲ್ಕು ಸೀಟುಗಳಲ್ಲಿದ್ದವರೂ ಗಮನವಿಟ್ಟು ಕೇಳುತ್ತಿರುತ್ತಾರೆ (ನಮ್ಮ ಅಂಗಾಂಗಗಳನ್ನೆಲ್ಲ ಕಣ್ಣಲ್ಲಿ ಸವರುತ್ತಲೂ ಇರುತ್ತಾರೆ) ಎಂಬ ಅರಿವಿರಬೇಕು. ನಗುತ್ತಲೇ ಉತ್ತರ ಹೇಳಬೇಕು. 'ಐವರಿ (ಆನೆಯ ದಂತದ) ಹಲ್ಲು ಕಟ್ಟಿಸ್ಕೋಬೌದಾ?' ಎಂದು ಅಜ್ಜನೊಬ್ಬ ಕೇಳಿದರೆ, 'ಮೊಸಳೆ ಚರ್ಮದ ಢೋಲಕ್ ಎಲ್ಲಿ ಸಿಗುತ್ತದೆ?' ಎಂದು ಹಿಪ್ಪಿವೇಷದ ಯುವಕ ಕೇಳುತ್ತಾನೆ. ಭಾರತದ ಕುರಿತಂತೆ ನಾವಂತೂ ಹಾರಾಡುವ ವಿಶ್ವಕೋಶವೇ ಆಗಿರಬೇಕು.

ಏಳೆಂಟು ಗಂಟೆಗಳ ದೀರ್ಘ ಪಯಣದಲ್ಲಿ ಊಟ ತಿಂಡಿಯ ಸಮಾರಾಧನೆಯೇ ಏರ್ ಇಂಡಿಯಾದ ಬಹುದೊಡ್ಡ ಆಕರ್ಷಣೆ. ಮೊದಲ ಬಾರಿಗೆ ಭಾರತಕ್ಕೆ ಬರುವವರಿಗಂತೂ ಇಲ್ಲಿನ ವೆಜಿಟೇರಿಯನ್ ಊಟದ ಮೊದಲ ರುಚಿ ವಿಮಾನದಲ್ಲೇ ಆಗಿರಬೇಕು. ಅದೆಷ್ಟೊ ಬಾರಿ ತಾವು ತಂದಿದ್ದ ಊಟವನ್ನೂ ಬಿಟ್ಟು ನಾವು ಹಂಚುತ್ತಿರುವುದನ್ನೇ ಕೇಳುವುದೇನು, ನಾನ್‌ವೆಜ್ ಊಟವನ್ನೇ ಮುಂಗಡ ಬುಕಿಂಗ್ ಮಾಡಿದವರು ಆಲೂಭಿಂಡಿ-ದಾಲ್‌ಫ್ರೈ ಹಪ್ಪಳದ ಊಟ ಕೇಳುವುದೇನು, ಅದೆಷ್ಟೊ ಬಾರಿ ಪೈಲಟ್, ಕೋಪೈಲಟ್, ಪರ್ಸರ್‌ಗಳು ತಮ್ಮ ಪಾಲಿನ ವೆಜ್ ಊಟವನ್ನು ಪ್ರಯಾಣಿಕರಿಗೇ ಬಿಟ್ಟುಕೊಟ್ಟು ಬರೀ ಬ್ರೆಡ್ ಜಾಮ್ ತಿನ್ನುತ್ತಿದ್ದುದೂ ಉಂಟು. ಪೇಯದ್ದಂತೂ ಎಷ್ಟು ವೆರೈಟಿ ಇದ್ದರೂ ಸಾಲದು. ಗೋವನ್ ಫೆನ್ನಿ, ಮಹುವಾ ವೈನ್, ಟಿಬೆಟನ್ ರೈಸ್ ಶರ್ಬತ್...

ಮಾಸ್ಕೊ, ನ್ಯೂಯಾರ್ಕ್, ವ್ಯಾಂಕೊವರ್, ಒಸಾಕಾ ಮುಂತಾದ ನಗರಗಳಲ್ಲಿ ನಾವು ಇಳಿದುಕೊಳ್ಳುವ ಹೋಟೆಲ್‌ಗಳ ಲಾಂಜ್‌ನಲ್ಲಿ, ಈಜುಗೊಳದ ಬದಿಯಲ್ಲಿ, ಉದ್ಯಾನದಲ್ಲಿ ಓಡಾಡುವಾಗಲೂ ನಾವು ಭಾರತದ ಮ್ಯಾಜಿಕ್ ಬೊಂಬೆಗಳಂತಿರಬೇಕು. 'ಹಾಯ್ ಸ್ವೀಟೀ, ಈಸ್ ದಿಸ್ ವಾಟ್ ಯೂ ಕಾಲ್ ಸ್ಯಾರೀ...?' ಎಂಬಲ್ಲಿಂದ ಹಿಡಿದು, ಕಿಡ್ನಿ ಜೋಡಿಸುವ ಆಸ್ಪತ್ರೆಗಳವರೆಗೆ ಅವರು ಕೇಳಿದ್ದಕ್ಕೆಲ್ಲ ಉತ್ತರ ಹೇಳುತ್ತ ಹೋಗಬೇಕು.

ನಮ್ಮ ನಯ ನಾಜೂಕಿನ ಹಂಸದ ನಡಿಗೆಯೆಲ್ಲ ಯರ್‍ರಾಬಿರ್‍ರಿ ಕೆಂಬೂತದ್ದಾಗುವ ಪ್ರಸಂಗಗಳೂ ಆಗಾಗ ಬರುತ್ತಿದ್ದವು. ಕುವೈತ್ ಮೇಲೆ ಇರಾಕ್ ದಾಳಿ ನಡೆಸಿದಾಗ ಅಲ್ಲಿನ ಅದೆಷ್ಟೊ ಸಾವಿರ ಅನಿವಾಸಿ ಭಾರತೀಯರನ್ನೂ ತುರ್ತಾಗಿ ಎಬ್ಬಿಸಿ ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಬೇಕಿತ್ತು. ಎಲ್ಲ ರಾಷ್ಟ್ರಗಳಲ್ಲೂ ಡ್ಯೂಟಿ ಮಾಡುತ್ತಿದ್ದ ಏರ್ ಇಂಡಿಯಾದ ಎಲ್ಲ ವಿಮಾನಗಳೂ ಕುವೈತ್ ಕಡೆ ಸಾಗಿ ಬರಬೇಕು.

13ನೇ ಪುಟಕ್ಕೆ...

ಅರೆರೆ ಅರಾವಳಿ!




ಅರಾವಳಿ ಕಾಡಿನ ವಿಹಂಗಮ ನೋಟ

ಈ ಅರಾವಳಿಯ ಮುಂದೆ ಹಿಮಾಲಯವೂ ಒಂದು ಕೂಸಂತೆ. ಕಲ್ಬಂಡೆಗಳಿಂದ ಕೂಡಿದ ಬೆಟ್ಟಗಳು, ಮಳೆಗಾಲದಲ್ಲಷ್ಟೇ ಹರಿಯುವ ಹಳ್ಳಗಳು, ಘರ್ಜಿಸುವ ಹುಲಿಗಳು, ವಿಶಿಷ್ಟ ಬುಡಕಟ್ಟುಗಳು, ಬಾಯಲ್ಲಿ ನೀರೂರಿಸುವ ಸೀತಾಫಲ ಸೇರಿದಂತೆ ಬಗೆಬಗೆಯ ಹಣ್ಣುಗಳು... ಅರಾವಳಿ ಹೊಕ್ಕರೆ ಅದೆಂತಹ ವೈವಿಧ್ಯ!

ರಹಮತ್ ತರೀಕೆರೆ

ಹಿಮಾಲಯ, ಬಯಲುಸೀಮೆ ಹಾಗೂ ಪಶ್ಚಿಮಘಟ್ಟಗಳ ಕಾಡುಬೆಟ್ಟಗಳಲ್ಲಿ ಅಲೆದಾಡಿರುವ ನಾನು, ಅರಾವಳಿ ಕಾಡುಗಳನ್ನು ನೋಡಿರಲಿಲ್ಲ. 650 ಕಿ.ಮೀ.ನಷ್ಟು ನಿಡಿದಾದ ಈ ಕಾಡುಗಳು, ಗುಜರಾತಿನಿಂದ ಮೊದಲುಗೊಂಡು ರಾಜಸ್ಥಾನ, ಹರಿಯಾಣಗಳನ್ನು ಹಾದು ದೆಹಲಿಯ ಅಂಚಿನಲ್ಲಿ ಕೊನೆಗೊಳ್ಳುತ್ತವೆ. ಸಬರಮತಿ ಮೊದಲಾದ ಹೊಳೆಗಳಿಗೆ ಜನ್ಮನೀಡುವ ಅರಾವಳಿ, ಜಗತ್ತಿನ ಪ್ರಾಚೀನ ಗಿರಿಶ್ರೇಣಿಗಳಲ್ಲಿ ಒಂದು. ವಯಸ್ಸಿನಲ್ಲಿ ಇದರ ಮುಂದೆ ಹಿಮಾಲಯವೊಂದು ಕೂಸಂತೆ. ಅಬೂ ಪರ್ವತದಲ್ಲಿ ಮತ್ತು ದೆಹಲಿಯಲ್ಲಿ ಅರಾವಳಿಯ ಕಿಂಚಿತ್ ದರ್ಶನವಾಗಿತ್ತಾದರೂ ಅದರೊಳಗೆ ಹೊಕ್ಕಿರಲಿಲ್ಲ. ಈಚೆಗೆ ಉದಯಪುರ-ಜೋಧಪುರಗಳ ನಡುವಿನ ರಣಕಪುರ- ಕುಂಭಳಗಡ ಅಭಯಾರಣ್ಯದಲ್ಲಿ ಅಲೆದಾಟ ಸಾಧ್ಯವಾಯಿತು.

ಅರಾವಳಿಯ ಮುಖ್ಯ ಲಕ್ಷಣವೆಂದರೆ, ಕಲ್ಬಂಡೆಗಳಿಂದ ಕೂಡಿದ ಬೆಟ್ಟಗಳು, ನೆತ್ತಿಯಲ್ಲಿ ವಿರಳವೂ ಕಣಿವೆಯಲ್ಲಿ ದಟ್ಟವೂ ಆಗುವ ಕಾನನ, ಮಳೆಗಾಲದಲ್ಲಷ್ಟೇ ಹರಿವ ಹಳ್ಳಗಳು, ಬಿಸಿಲನ್ನು ತಡೆದು ಅಲ್ಪಮಳೆಯಲ್ಲೂ ಬದುಕಬಲ್ಲ ಸಸ್ಯಾವಳಿ. ನಾವು ಹೋದಾಗ ಚಳಿಗಾಲ ಕಾಲಿಟ್ಟಿತ್ತು. ಕೆಲವು ಮರಗಳು ಎಲೆಹಣ್ಣಾಗಿ ಅರಿಶಿಣ ಮಿಂದ ಮದುಮಕ್ಕಳಂತಾಗಿದ್ದರೆ, ಮತ್ತೆ ಕೆಲವು ಎಲೆಯುದುರಿಸಿ ನೀಲಾಕಾಶದಡಿ ಬತ್ತಲೆನಿಂತ ಆದಿವಾಸಿ ಮಕ್ಕಳಂತಿದ್ದವು. ಕವಳೆ, ನೆಲ್ಲಿ, ಬಾರೆ, ಬಿದಿರು, ಈಚಲು, ಬೇವು, ಅತ್ತಿ, ದಿಂಡುಗ, ಹಾಲೆ, ಮುತ್ತುಗ ಮೊದಲಾದ ಮರಗಿಡಗಳು, ನಮ್ಮ ಬಯಲುಸೀಮೆಯ ಜೋಗಿಮಟ್ಟಿ, ಸಂಡೂರು, ದರೋಜಿ, ಜರಿಮಲೆ ಕಾಡುಗಳನ್ನೇ ನೆನಪಿಸಿದವು.



ಅರಾವಳಿ ಕಾಡಿನ ಈ ಅಜ್ಜನ ಬದುಕು ಅಲ್ಲಿನ ನಿಸರ್ಗದಷ್ಟೇ ಸಹಜ, ನಿಷ್ಕಲ್ಮಶ...

ಅರಾವಳಿಯ ಕಾಡುಗಳು ಹಿಂದೊಮ್ಮೆ ಹುಲಿಗಳಿಗೆ ಖ್ಯಾತವಾಗಿದ್ದವು. ರಾಜಸ್ಥಾನದ ಅರಮನೆಗಳಲ್ಲಿ ರಾಜರು ಮತ್ತು ಬ್ರಿಟಿಷರು ಅಟ್ಟಣಿಗೆ ಕಟ್ಟಿಕೊಂಡು ಹುಲಿ ಬೇಟೆಯಾಡುತ್ತಿರುವ ವರ್ಣಚಿತ್ರಗಳಿವೆ. ಗುಡಿಗಳಲ್ಲೂ ಬೇಟೆಶಿಲ್ಪಗಳಿವೆ. ಈಗ ಅರಾವಳಿ ಕಾಡಿನ ರಣಥಂಬೂರ್‌ನಲ್ಲಿ ಮಾತ್ರ ಹುಲಿಗಳಿವೆ. ಉಳಿದಂತೆ ನಮ್ಮ ಚಾರಣಪಥದಲ್ಲಿ ಕರಡಿ, ಚಿರತೆ, ಸಾರಂಗ, ಹಂದಿ, ಮುಸಿಯ, ನೀಲಗಾಯಿ, ತೋಳ, ನವಿಲುಗಳಿದ್ದವು. ಅರಣ್ಯದಲ್ಲಿ ಎದ್ದು ಕಂಡಿದ್ದು ಕಾಡಿನಲ್ಲಿ ಬಿಳಿಯ ಕರವಸ್ತ್ರಗಳನ್ನು ಒಣಹಾಕಿದಂತೆ ಸೂರ್ಯರಶ್ಮಿಗೆ ಹೊಳೆಯುತ್ತಿದ್ದ ಸಹಸ್ರಾರು ಜೇಡರ ಬಲೆಗಳು. ಮಂಜಿನ ಗುಹೆಯೊಳಗೆ ತಪಕ್ಕೆ ಕೂತಂತಿರುವ ಜೇಡಗಳು, ಬಾಗಿ ನೋಡಹೋದರೆ ಪುಳಕ್ಕನೆ ಬಿಲದೊಳಗೆ ಅಡಗುತ್ತಿದ್ದವು. ಕಾಡೆಂದರೆ ಹುಲಿಸಿಂಹಗಳಿಂದ ಮಾತ್ರವಲ್ಲ, ನಮ್ಮಂತಹ ಕೀಟಗಳಿಂದಲೂ ರೂಪುಗೊಂಡಿದೆ ಎಂಬ ದಿಟವನ್ನು ಕಾಣಿಸಿದವು.

ನಮ್ಮ ಮಾರ್ಗದರ್ಶಿ ದಾವುರಾಂ, ಥೇಟು 'ಕರ್ವಾಲೊ' ಕಾದಂಬರಿಯ ಮಂದಣ್ಣ. ಭಿಲ್ ಸಮುದಾಯಕ್ಕೆ ಸೇರಿದವನು. ತೆಳ್ಳಗೆ, ಕುಳ್ಳಗೆ, ಕಪ್ಪಗಿದ್ದ ಈತ, ನೀರೊಳಗಿನ ಮೀನಂತೆ ಅಡವಿಯೊಳಗೆ ಸಂಚರಿಸಬಲ್ಲವನು. ಏಕಕಾಲದಲ್ಲಿ ಕಿವಿ, ಕಣ್ಣು, ನೆಲ, ಮುಗಿಲುಗಳನ್ನು ಚುರುಕಾಗಿ ನಿಟ್ಟಿಸುತ್ತಿದ್ದವನು. ಈತ ನಮಗೆ ಮಣ್ಣಹಾದಿಯಲ್ಲಿ ಹಾದುಹೋಗಿದ್ದ ಹಾವಿನ ಪಟ್ಟೆ ತೋರಿಸಿದ.

11ನೇ ಪುಟಕ್ಕೆ...

ಭುವಿಯ ಕಿಚ್ಚು ಮುಗಿಲ ಮಿಂಚು

ಎನ್.ಎಸ್. ಶಂಕರ್

ದಿವಂಗತ ಸಿದ್ಧಲಿಂಗಯ್ಯ ಅವರಿಗೆ ಇದೀಗ ಪದ್ಮಶ್ರೀ ಪುರಸ್ಕಾರ ಸಂದಿದೆ. ಮೆದು ಮಾತಿನ ವಾಮನಮೂರ್ತಿಯ ವಿಶಿಷ್ಟ ವ್ಯಕ್ತಿತ್ವದ ಅವಲೋಕನ ಇಲ್ಲಿದೆ



ರೋಷಾವೇಶದ ಹಾಡುಗಳ ಕವಿ ಸಿದ್ಧಲಿಂಗಯ್ಯನವರು ಮೆದು ಮಾತಿನ ವಾಮನಮೂರ್ತಿಯಾಗಿದ್ದವರು ಚಿತ್ರ:ಕೃಷ್ಣಕುಮಾರ್ ಪಿ.ಎಸ್.

ಸಿದ್ಧಲಿಂಗಯ್ಯನವರನ್ನು ನಾನು ಮುಖತಃ ಕಾಣುವ ಮುನ್ನವೇ ಅವರ ಹಾಡುಗಳನ್ನು ಕೇಳಿದ್ದೆ- ಬಹುಶಃ ಗೆಳೆಯ ಜನ್ನಿ (ಜನಾರ್ದನ್) ಕಂಠದಲ್ಲಿ. ಕೇಳಿದ ಕೂಡಲೇ ನನ್ನ ತಲೆಮಾರಿನ ಅಸಂಖ್ಯಾತ 'ಕ್ರಾಂತಿಪೀಡಿತ ಆತ್ಮಗಳ' ಹಾಗೆಯೇ ನಾನೂ ಆ ಹಾಡುಗಳ ಸಮ್ಮೋಹನಕ್ಕೆ ಒಳಗಾದೆ. 'ಗುಡಿಸಲುಗಳು ಗುಡುಗುತಿವೆ, ಬಂಗಲೆಗಳು ನಡುಗುತಿವೆ' ಎಂದರೆ, ಅಥವಾ 'ನಿನ್ನೆ ದಿನ ನನ್ನ ಜನ, ಬೆಟ್ಟದಂತೆ ಬಂದರು...' ಎಂದರೆ ನಾವೂ ಅಕ್ಷರಶಃ ರೋಮಾಂಚನದಿಂದ ನಡುಗುತ್ತಿದ್ದೆವು!

ಇಂಥ ರೋಮಾಂಚನದಲ್ಲಿ ಕಂಪಿಸುತ್ತಿದ್ದಾಗಲೇ ಯಾರೋ ಒಮ್ಮೆ ಕವಿಗಳನ್ನು ಮೊದಲ ಬಾರಿ ಪರಿಚಯ ಮಾಡಿಸಿದರು (ಯಾರು, ಯಾವ ಸಂದರ್ಭದಲ್ಲಿ- ಈಗ ನೆನಪಾಗುತ್ತಿಲ್ಲ. ಅಂತೂ 80ರ ದಶಕದ ಆರಂಭದಲ್ಲಿ). ಭೇಟಿ ಮಾಡಿದಾಗ, ನಿಜವಾಗಲೂ ಇವರೇ ಸಿದ್ಧಲಿಂಗಯ್ಯನವರಾ? ಅಥವಾ ನನ್ನ ಗೆಳೆಯರು ಯಾರನ್ನೋ ತೋರಿಸಿ ಕಥೆ ಕಟ್ಟಿ ಮಜಾ ತಗೋತಾ ಇದ್ದಾರಾ ಅನ್ನುವ ಗಾಢ ಅನುಮಾನ ಹುಟ್ಟಿತ್ತು! ಕವಿಗಳ ಆಕಾರ ಹಾಗಿತ್ತು. ಆ ಹಾಡುಗಳ ರೋಷಾವೇಶ, 'ಇಕ್ರಲಾ ವದೀರ್ಲಾ...' ಅನ್ನುವ ಕೆಚ್ಚನ್ನು ಕಂಡವರಿಗೆ ಸಿದ್ದಲಿಂಗಯ್ಯನವರ ನಿಜ ಸ್ವರೂಪ anti climax!

ಇದು ನನ್ನೊಬ್ಬನ ಅನುಭವವೂ ಅಲ್ಲ. ಸಿದ್ಧಲಿಂಗಯ್ಯ ಹಿಂದೊಮ್ಮೆ 'ದಲಿತರಿಗೆ ಪ್ರತ್ಯೇಕ ರಾಜ್ಯ ಕೊಡಿ' ಅಂತ ಆಗ್ರಹ ಮಾಡಿದಾಗ, ದೇವನೂರ ಮಹಾದೇವ ಕೂಡ 'ಯಾರಪ್ಪ ಈ ಮಹಾನುಭಾವ' ಅಂತ ಇವರನ್ನು ನೋಡಲು ಕಾದಿದ್ದರಂತೆ. ನೋಡಿ ಅವರಿಗೂ ಇದೇ ಬಗೆಯ ಅಚ್ಚರಿ ಉಂಟಾಗಿತ್ತಂತೆ! ಯಾಕೆಂದರೆ ನಮ್ಮ ಕಲ್ಪನೆಯಲ್ಲಿ ಸಿದ್ಧಲಿಂಗಯ್ಯ ಎಂದರೆ ಅವರ ಹಾಡಿನಲ್ಲಿ ಬರುವ 'ಕಪ್ಪು ಮುಖ ಬೆಳ್ಳಿ ಗಡ್ಡ ಉರಿಯುತಿರುವ ಕಣ್ಣುಗಳ' ಒಡೆಯನೇ ಆಗಿರಬೇಕಿತ್ತು. ಇಲ್ಲಿ ನೋಡಿದರೆ ತಿಳಿಹಾಸ್ಯದ ಮೆದು ಮಾತಿನ ವಾಮನಮೂರ್ತಿ!

ಸಿದ್ಧಲಿಂಗಯ್ಯನವರ ಬಾಹ್ಯ ಸ್ವರೂಪ ನೋಡಿ ಆಶ್ಚರ್ಯವಾಗುವುದಿರಲಿ, 'ಹೊಲೆಮಾದಿಗರ ಹಾಡು' ಸಂಕಲನದ ಹಾಡುಗಳನ್ನು ಅವರು ಬರೆದಿದ್ದು ಪಿಯುಸಿಯಲ್ಲಿದ್ದಾಗ (1970ರಲ್ಲಿ) ಎಂಬುದು ಇನ್ನೂ ಆಶ್ಚರ್ಯಕರವಾಗಿದೆ. ಆಗಿನ್ನೂ, 70ರ ದಶಕದ ತಳಮಳ ಸುಪ್ತವಾಗಿಯೇ ಇದ್ದು ಸ್ಫೋಟಿಸುವ ಗಳಿಗೆಗಾಗಿ ಕಾದಿತ್ತು. ನಾಡಿನ ಸಾಂಸ್ಕೃತಿಕ ಚಹರೆಯನ್ನು ಒಮ್ಮಿಂದೊಮ್ಮೆಲೇ ಬದಲಿಸಿದ ಕಲಮಲದ ಯಾವ ಸೊಲ್ಲೂ ಇರಲಿಲ್ಲ. ಅಂದರೆ ಸಮಾಜವಾದಿ ಯುವಜನ ಸಭಾ, ಜಾತಿವಿನಾಶ ಚಳವಳಿ, ಅಬ್ರಾಹ್ಮಣ ಬರಹಗಾರ ಕಲಾವಿದರ ಒಕ್ಕೂಟ, ಬೂಸಾ ಚಳವಳಿ- ಈ ಯಾವುದರ ಸೂಚನೆಯೂ ಇರಲಿಲ್ಲ. ದೇಶಕ್ಕೆ ಎಮರ್ಜೆನ್ಸಿಯ ಅನುಭವವೂ ಸಿಕ್ಕಿರಲಿಲ್ಲ. ಅಷ್ಟಾದರೂ, ಸಿದ್ದಲಿಂಗಯ್ಯ ಎಂಬ ಆ ಎಳೆ ತರುಣನ ಅಂತರಾತ್ಮದಲ್ಲಿ ಕ್ರಾಂತಿ ಭುಗಿಲೇಳಲು ಪ್ರೇರಣೆ ಸಿಕ್ಕಿದ್ದು ಎಲ್ಲಿಂದ? ಸ್ಮಶಾನದಲ್ಲಿ ಕೂತ ಈ ಪುಟ್ಟ ಆಕೃತಿ, ಕೆಂಡದುಂಡೆಗಳಂಥ ಹಾಡುಗಳನ್ನು ಬರೆದಿದ್ದು-ಕನ್ನಡದ ಇತಿಹಾಸವನ್ನೇ ಬದಲಿಸುವಂಥ ಕಾವ್ಯ ಕ್ರಾಂತಿ ಸಾಧಿಸಿದ್ದು ಹೇಗೆ?

ಅವರ ಆತ್ಮಕಥೆ 'ಊರುಕೇರಿ'ಯಲ್ಲಿ ಇದಕ್ಕೆ ಏನಾದರೂ ಸುಳಿವು ಸಿಕ್ಕೀತೇ ಎಂದು ನೋಡಿದರೆ ಅಲ್ಲಿ ಏನೂ ಇಲ್ಲ.

12ನೇ ಪುಟಕ್ಕೆ...

ವಿಭಿನ್ನ ಪ್ರಯೋಗದ ಪದ್ಮವ್ಯೂಹ

ಗೌರಿ ಚಂದ್ರಕೇಸರಿ

ರಂಗಭೂಮಿ

ಶಿವಮೊಗ್ಗದ ಮುಖಾಮುಖಿ ಥಿಯೇಟರ್ ಸಮುರಾಯ್ (ಎಸ್.ಟಿ.) ರಂಗತಂಡ ಮಂಜಮ್ಮ ಜೋಗತಿ ಅವರಿಗೆ ಗೌರವ ಅಭಿನಂದನೆ ಸಲ್ಲಿಕೆ ಕಾರ್ಯಕ್ರಮವನ್ನು ನಗರದ ಕುವೆಂಪು ರಂಗಮಂದಿರದಲ್ಲಿ ಆಯೋಜಿಸಿತ್ತು. ಈ ಸಂದರ್ಭದಲ್ಲಿ 'ಮಹಾಭಾರತ ಪದ್ಮವ್ಯೂಹ' ಎಂಬ ನಾಟಕವು ಪ್ರದರ್ಶನಗೊಂಡಿತು.

ಮಹಾಭಾರತದಲ್ಲಿ ಬರುವ ಅಭಿಮನ್ಯುವಿನ ಪ್ರಸಂಗವನ್ನು ವಿಭಿನ್ನ ಪರಿಕಲ್ಪನೆಯೊಂದಿಗೆ ಥಿಯೇಟರ್ ಸಮುರಾಯ್-ಪುರಪ್ಪೆಮನೆ ತಂಡದವರು ರಂಗದ ಮೇಲೆ ತಂದರು. ಕೌರವರು ಪಾಂಡವರ ಪರಸ್ಪರ ದ್ವೇಷ, ಅಸೂಯೆ, ಯುದ್ಧ, ಅಂತ್ಯದ ಕುರಿತಾಗಿ ಹಲವಾರು ರಂಗಪ್ರಯೋಗಗಳು ನಡೆದಿವೆ. ಆದರೆ ಥಿಯೇಟರ್ ಸಮುರಾಯ್ ತಂಡ ಆಡಿದ 'ಮಹಾಭಾರತ ಪದ್ಮವ್ಯೂಹ' ನಾಟಕವು ತುಂಬಾ ಭಿನ್ನವಾಗಿದೆ. ನಾಟಕದ ಸಂಪೂರ್ಣ ಸಂಭಾಷಣೆ ಆಡುಮಾತಿನಲ್ಲಿದ್ದ ಕಾರಣ ಮಕ್ಕಳಾದಿಯಾಗಿ ಎಲ್ಲರನ್ನೂ ಅದು ತಲುಪಿದೆ. ಅತ್ಯಂತ ಸರಳ ರಂಗಪರಿಕರ ಹಾಗೂ ವೇಷಭೂಷಣ ಅಳವಡಿಸಿಕೊಂಡು ಒಂದು ಅದ್ಭುತ ಪ್ರದರ್ಶನವನ್ನು ನೀಡುವಲ್ಲಿ ಈ ತಂಡ ಯಶಸ್ವಿಯಾಗಿದೆ.


> ಮಹಾಭಾರತದ ಕಥೆಗಳನ್ನು ತಮ್ಮದೇ ಶೈಲಿಯಲ್ಲಿ, ಅದ್ದೂರಿ ವೇದಿಕೆಯಲ್ಲಿ ರಾಜ ಪೋಷಾಕುಗಳೊಂದಿಗೆ ಹಲವಾರು ರಂಗತಂಡಗಳು ಪ್ರದರ್ಶಿಸಿವೆ. ಆದರೆ ಥಿಯೇಟರ್ ಸಮುರಾಯ್-ಪುರಪ್ಪೆಮನೆ ತಂಡದವರು ಪ್ರದರ್ಶಿಸಿದ ಅಭಿಮನ್ಯುವಿನ ಪ್ರಸಂಗ 'ಮಹಾಭಾರತ ಪದ್ಮವ್ಯೂಹ' ಹಲವು ರೀತಿಯಲ್ಲಿ ಭಿನ್ನವಾಗಿತ್ತು, ಆಕರ್ಷಕವಾಗಿತ್ತು...

ಕಾಡುಜನರ ಬೇಟೆ ನೃತ್ಯದೊಂದಿಗೆ ಆರಂಭಗೊಳ್ಳುವ ನಾಟಕ ಅವರ ಮುಖಂಡನೊಬ್ಬ ಬಾಲಕ ಅಭಿಮನ್ಯುವಿನ ಕತೆಯನ್ನು ಹೇಳುವುದರೊಂದಿಗೆ ಮಹಾಭಾರತದ ಕತೆ ತೆರೆದುಕೊಳ್ಳುತ್ತದೆ. ಕೃಷ್ಣನು ಹೇಳುವ ಚಕ್ರವ್ಯೂಹದ ರಚನೆ, ಅದರ ಭೇದಿಸುವಿಕೆಯ ಕುರಿತ ವಿವರಣೆಗೆ ಪ್ರತಿಸ್ಪಂದಿಸುವ ಗರ್ಭದಲ್ಲಿರುವ ಅಭಿಮನ್ಯುವಿನ ಚಿತ್ರಣವನ್ನು ಒಂದು ಬೊಂಬೆಯ ಮೂಲಕ ಕಟ್ಟಿಕೊಡುವಲ್ಲಿ ನಿರ್ದೇಶಕರ ಜಾಣ್ಮೆ ಎದ್ದು ಕಾಣುತ್ತದೆ. ನಂತರದ ಪಗಡೆಯಾಟದ ಸೋಲು, ಸಭೆಯಲ್ಲಿ ಪಾಂಚಾಲಿಗಾಗುವ ಅವಮಾನ ಮಹಾಭಾರತದ ಯುದ್ಧಕ್ಕೆ ಕಾರಣವಾಗುತ್ತದೆ. ಯುದ್ಧದ ವೀರಾವೇಷದ ದೃಶ್ಯಗಳಲ್ಲಿ ನಿರ್ದೇಶಕರು ಅಳವಡಿಸಿಕೊಂಡ ಪಟ್ಟುಗಳು ಕಳರಿಪಯಟ್ಟು ಕಲೆಯನ್ನು ನೆನಪಿಸಿದವು.

ಅಭಿಮನ್ಯು-ಉತ್ತರೆಯರ ಸರಸ-ಸಲ್ಲಾಪ, ಚಕ್ರವ್ಯೂಹವನ್ನು ಭೇದಿಸಲು ಹೊರಡುವ ಅಭಿಮನ್ಯುವನ್ನು ಗರ್ಭಿಣಿ ಉತ್ತರೆಯು ಹೋಗದಂತೆ ತಡೆಯುವ ದೃಶ್ಯಗಳು ಕಣ್ಣಿಗೆ ಕಟ್ಟುವಂತಿದ್ದವು. ಬಾಲಕ ಅಭಿಮನ್ಯು ಹತನಾದಾಗ ಸುಭದ್ರೆ, ಉತ್ತರೆಯರು ರೋದಿಸುವುದನ್ನು ಕಂಡಾಗ ಯುದ್ಧಗಳು ಅನಿವಾರ್ಯವೇ ಎಂಬ ಪ್ರಶ್ನೆ ಮೂಡುತ್ತದೆ. ಪಟ್ಟಕ್ಕಾಗಿ ಮೋಸ, ಕೊಲೆ ಅನಿವಾರ್ಯ ಎನ್ನುವ ಕೌರವರ ಅನಿಸಿಕೆ ಇಂದಿನ ವಾಸ್ತವಕ್ಕೆ ಹಿಡಿದ ಕನ್ನಡಿಯಾಗಿದೆ. ಮಾನವನ ಸ್ವಾರ್ಥ, ಅಧಿಕಾರಲಾಲಸೆಯ ಕಾರಣದಿಂದ ನಡೆಯುವ ಯುದ್ಧಗಳು ಎಷ್ಟೋ ಮಾತೆಯರ ಮಡಿಲನ್ನು ಬರಿದು ಮಾಡುತ್ತವೆ. ತಮ್ಮವರ ಬರುವಿಗಾಗಿ ಎದುರು ನೋಡುವ ಹೃದಯಗಳು ಬದುಕಿಡೀ ಬೇಯುತ್ತಲೇ ಇರುತ್ತವೆ ಎಂಬ ಸಂದೇಶವನ್ನು ಯುದ್ಧಗಳು ನೀಡುತ್ತಲೇ ಇವೆ. ದುರ್ಯೋಧನನ ಸಾವಿನೊಂದಿಗೆ ಯುದ್ಧ ಅಂತ್ಯವಾಗಿ, ಉತ್ತರೆಯ ಗರ್ಭದಿಂದ ಪರೀಕ್ಷಿತನ ಜನನವಾಗುವ ಮೂಲಕ ನಾಟಕ ಕೊನೆಗೊಳ್ಳುತ್ತದೆ.


ಕತೆಯ ಎಳೆ ಹಳತೇ ಆದರೂ ಆ ಭಾವನೆಯನ್ನು ಪ್ರೇಕ್ಷಕನಲ್ಲಿ ಸುಳಿಯಗೊಡದೇ ವಿಭಿನ್ನವಾಗಿ ರಂಗಕ್ಕಿಳಿಸಿದ ರೀತಿ ಎಲ್ಲರ ಮೆಚ್ಚುಗೆ ಗಳಿಸಿತು. ಯಾವುದೇ ಥಳುಕು ಬಳುಕಿನ ರಾಜ ಪೋಷಾಕುಗಳಿಲ್ಲದೇ ಎಲ್ಲ ಪಾತ್ರಗಳೂ ಕಾಡಿನ ಜನರ ವೇಷದಲ್ಲಿಯೇ ಮಹಾಭಾರತದ ಸನ್ನಿವೇಶಗಳನ್ನು ಕಟ್ಟಿಕೊಡುವಲ್ಲಿ ಗೆದ್ದಿತು. ಕಾಡು ಜನರ ನೆಲೆಗಟ್ಟಿನಲ್ಲಿಯೇ ಅಳವಡಿಸಿದ ಸಂಗೀತ, ನೃತ್ಯಗಳು ನಾಟಕಕ್ಕೆ ಮೆರುಗನ್ನು ತಂದುಕೊಟ್ಟವು. ನಾಟಕದುದ್ದಕ್ಕೂ ಬಳಕೆಯಾದ ರಂಗ ಪರಿಕರಗಳು ಸತೀಶ್ ಪುರಪ್ಪೆಮನೆ ಅವರ ಕೌಶಲವನ್ನು ಹೇಳುತ್ತಿದ್ದವು.

ಅದ್ಭುತವಾದ ಬೆಳಕಿನ ವಿನ್ಯಾಸ ನಾಟಕದ ಪ್ಲಸ್ ಪಾಯಿಂಟ್. ವಾಮನ ಮಾಸ್ತರರ 'ವೀರ ಅಭಿಮನ್ಯು'ವನ್ನು ಆಧಾರವಾಗಿಟ್ಟುಕೊಂಡು 'ಮಹಾಭಾರತ ಪದ್ಮವ್ಯೂಹ' ನಾಟಕವನ್ನು ಅಭಿನಯಿಸಲಾಯಿತು. ಸಾಲಿಯಾನ್ ಉಮೇಶ್ ನಾರಾಯಣ ಹಾಗೂ ರಘು ಪುರಪ್ಪೆಮನೆಯವರ ನಿರ್ದೇಶನದಲ್ಲಿ ಮೂಡಿಬಂದ ನಾಟಕ ನೆನಪಿನಲ್ಲಿ ಉಳಿಯುವಂತಿತ್ತು. ವಿಶೇಷವೆಂದರೆ ಕೇವಲ ಆರೇಳು ಜನ ನಟ ನಟಿಯರಿದ್ದ ಈ ತಂಡ ಕೌರವ, ಪಾಂಡವರ ಸಂಖ್ಯಾಬಲದ ಕೊರತೆ ಕಾಣದಂತೆ ತೂಗಿಸಿಕೊಂಡು ಹೋಯಿತು. ಮುಂಬರುವ ದಿನಗಳಲ್ಲಿ ತಮ್ಮ ಸದಸ್ಯರನ್ನು ಹೆಚ್ಚಿಸಿಕೊಂಡು ಇನ್ನೂ ಹೆಚ್ಚಿನ ರಂಗಪ್ರಯೋಗಗಳಲ್ಲಿ ತಂಡ ತೊಡಗಿಕೊಳ್ಳಲಿ ಎಂಬ ಹಾರೈಕೆ.


ರಾಜ ಪೋಷಾಕುಗಳಿಲ್ಲದೇ ಕಾಡುಜನರ ವೇಷದಲ್ಲೇ ಕಥೆ ಕಟ್ಟಿದ ಕಲಾವಿದರು


ಗರ್ಭದಲ್ಲಿರುವ ಅಭಿಮನ್ಯುವಿನ ಚಿತ್ರಣವನ್ನು ಒಂದು ಬೊಂಬೆಯ ಮೂಲಕ ಕಟ್ಟಿಕೊಟ್ಟ ಕಲಾವಿದರು

ಅರೆರೆ ಅರಾವಳಿ!


ಹುಲಿದೇವರ ಸನ್ನಿಧಿಯಲ್ಲಿ...


ಮೇವಾಡದ ದೊರೆಗಳ ಮೃಗಯಾವಿನೋದದ ಚಿತ್ರಬಿಂಬ

10ನೇ ಪುಟದಿಂದ...

ಮರದ ಬುಡದಲ್ಲಿ ಮಣ್ಣುಕೆದರಿ ಉಂಟಾದ ತಗ್ಗನ್ನು ನೀಲಗಾಯಿಯ ಮಲಗುದಾಣವೆಂದ; ಮರದ ತೊಗಟೆ ಕೆಂಪಾದೆಡೆಯನ್ನು ಬಾರಾಸಿಂಗ ಜಿಂಕೆಗಳು ಕೋಡು ತುರಿಸುತ್ತ ಗೈದ ಗಾಯವೆಂದು ಉಸುರಿದ; ಮುದಿಮರದ ಪೊಟರೆಯಲಿ ಧ್ಯಾನಸ್ಥ ಗೂಬೆಗಳ ದರ್ಶನ ಮಾಡಿಸಿದ; ಮುಸಿಯಗಳ ಚೀತ್ಕಾರ ಕೇಳಿ ಹತ್ತಿರದಲ್ಲೇ ಚಿರತೆಯಿದೆ ಎಂದು ಪಿಸುಗುಟ್ಟಿದ. ಕರಡಿಗಳ ಕೂಗನ್ನು ಕೇಳಿಸಿ, ಅವು ಕಾದಾಟಕ್ಕೆ ಇಲ್ಲವೇ ಬೇಟಕ್ಕೆ ಹಾಕುತ್ತಿರುವ ಪೀಠಿಕೆಯೆಂದು ವಿಶ್ಲೇಷಿಸಿದ; ತಾಯ್ಗರಡಿಯೊಂದು ಒಬ್ಬನ ಕಣ್ಣುಕಿತ್ತು, ಅವನ ಹೆಂಡತಿ ಜೀವಮಾನವಿಡೀ ಅವನನ್ನು ಸಾಕಬೇಕಾದ ಕತೆ ಹೇಳಿದ. 'ಯಾವ ಪ್ರಾಣಿಯೂ ತಾನಾಗಿ ಮೇಲೆಬೀಳದು. ನಾವು ಬಂಡಿಯಲ್ಲಿದ್ದರೂ ಸುಮ್ಮನಿರುತ್ತವೆ. ನಾವು ನೆಲದಲ್ಲಿದ್ದರೆ ಮಾತ್ರ ನಿಲ್ಲುವುದಿಲ್ಲ. ಶಬ್ದಮಾಡದೆ ಬಂದಿರಾದರೆ, ಕೆಲವಾದರೂ ಪ್ರಾಣಿಗಳು ಕಂಡಾವು' ಎಂದ. ಆದರೆ ಊರಸುದ್ದಿಯನ್ನು ಕಾಡಿಗೂ ತಂದು ಗಳಹುವ ಚಾರಣಿಗರ ವಟವಟದಿಂದ–ಒಂದು ಹಂದಿ ತನ್ನ ಮರಿಗಳ ಜತೆ ಪರಾರಿಯಾಗಿದ್ದು ಬಿಟ್ಟರೆ- ಹೆಚ್ಚಿನ ಪ್ರಾಣಿಗಳ ಮುಖಾಬಿಲೆ ಆಗಲಿಲ್ಲ.

ಅರಾವಳಿಯಲ್ಲಿ ರಾಜಸ್ಥಾನದ ಅರಣ್ಯ ಇಲಾಖೆಯು ಕಟ್ಟಿಸಿರುವ ಮಳೆನೀರು ಇಂಗಿಸುವ ಕಟ್ಟೆಗಳು ಯಥೇಚ್ಛವಾಗಿದ್ದವು. ಅವುಗಳನ್ನು ಕಾಣುತ್ತ, ನನಗೆ ಈ ಸೀಮೆಯ ಪಾರಂಪರಿಕ ಜಲಕೊಯಿಲಿನ ಪ್ರಯೋಗಗಳನ್ನು ಲೋಕಕ್ಕೆ ತಿಳಿಸಿದ, ಕಾಡಂಚಿನ ಜನರಿಗೆ ಇದರ ಮಹತ್ವವನ್ನೂ ಮನಗಾಣಿಸಿದ ರಾಜೇಂದ್ರ ಸಿಂಗರ ನೆನಪಾಯಿತು. ಅವರೊಮ್ಮೆ ಹಂಪಿಗೆ ಬಂದು ಉಪನ್ಯಾಸವನ್ನೂ ಕೊಟ್ಟಿದ್ದರು. ಸಿಂಧ್-ರಾಜಸ್ಥಾನಗಳೆಂದರೆ ಕುಡಿಯುವ ನೀರಿಗಾಗಿ ಪರದಾಡುವ ಮಹಿಳೆಯರೇ ನೆನಪಾಗುತ್ತಾರೆ. ಜಲದ ಅರಕೆಯೂ ಅದರೊಟ್ಟಿಗೆ ಮಹಿಳೆಯರಿಗಿರುವ ದೈನಿಕ ಸಂಬಂಧವೂ ಇಲ್ಲಿನ ಕಲೆಗಳಲ್ಲಿ ಸೈತ ಪ್ರತಿಬಿಂಬಿತವಾಗಿದೆ. ಉದಯಪುರದಲ್ಲಿ ನಾವು ವೀಕ್ಷಿಸಿದ ನೀರಬಿಂದಿಗೆ ಹೊತ್ತು ಮಾಡುವ ಒಂದು ಕುಣಿತಕ್ಕೆ ಹಿನ್ನೆಲೆಯಾಗಿ ಹಾಡಿದ ಹಾಡಿನಲ್ಲಿ, ಯಾರು ಹೆಚ್ಚು ಬಿಂದಿಗೆ ಹೊರುತ್ತಾರೆ ಎಂದು ಮಹಿಳೆಯರು ಮಾತಾಡಿಕೊಳ್ಳುವುದೇ ವಸ್ತುವಾಗಿತ್ತು. ಒಂದು ಪ್ರದೇಶದಲ್ಲಿರುವ ಕಡಲು, ಮರುಭೂಮಿ, ಬೆಟ್ಟ, ಬಯಲು, ಧಗೆ, ತಣ್ಪು ಮಳೆ-ಬಿಸಿಲುಗಳಿಗೂ, ಅಲ್ಲಿನ ಜನಜೀವನದ ಭಾಗವಾಗಿರುವ ಭಾಷೆ, ಸಾಹಿತ್ಯ, ಧರ್ಮ, ವಾಸ್ತುಶಿಲ್ಪ, ಶಿಲ್ಪ, ಚಿತ್ರಕಲೆ, ಹಾಡು-ಕುಣಿತ, ಅಡುಗೆ-ತೊಡುಗೆಗಳಿಗೂ ಗಾಢವಾದ ಒಳನಂಟಿರುತ್ತದೆ. ಪಶ್ಚಿಮ ಘಟ್ಟದಲ್ಲಿರುವ ಅರಮನೆ-ಬಸದಿ-ಗುಡಿಗಳ ಇಳಿಜಾರು ಚಾವಣಿಗೂ ಅಲ್ಲಿನ ಮಳೆಗೂ; ಹಿಮಾಲಯದ ಮನೆಗಳ ಚಪ್ಪಡಿಯ ಚಾವಣಿ, ಕಟ್ಟಿಗೆ ಗೋಡೆಗಳಿಗೂ ಅಲ್ಲಿನ ಹಿಮಪಾತ ಮತ್ತು ಥಂಡಿಗಳಿಗೂ ಹೀಗೇ ನಂಟಿದೆಯಷ್ಟೆ. ಅರಾವಳಿಯ ಚಾರಣವು ರಾಜಸ್ಥಾನದ ನಿಸರ್ಗ ಪರಿಸರದ ಜತೆಗೆ ಅಲ್ಲಿನ ಸಾಂಸ್ಕೃತಿಕ ಲೋಕದ ಮುಖಗಳನ್ನೂ ಕಾಣಿಸಿತು.


ಅರಾವಳಿ ಕಾಡಿನಲ್ಲಿ ಕಾಣಸಿಗುವ ಪ್ರತಿಯೊಂದೂ ಅಪೂರ್ವ ಕಲಾಕೃತಿಯೇ...
ಇದೋ ಎಲೆ ಉದುರಿಸಿಕೊಂಡು ನಿಂತ ಮರ

ವರ್ಷವಿಡೀ ಹರಿವ ಹೊಳೆಗಳ ನಾಡಿಂದ ಹೋದವರಿಗೆ, ಅರಾವಳಿಯ ಒಣಹಳ್ಳಗಳನ್ನು ನೋಡುತ್ತಿದ್ದರೆ –ನಾವು ಹೋದಾಗಲೂ ಮಳೆ ಕಮ್ಮಿ ಬಿದ್ದಿತ್ತು– ಮನ ಖಿನ್ನವಾಗುತ್ತದೆ. ನಮ್ಮ ಹೊಳೆಹಳ್ಳಗಳ ಮಹತ್ವವೂ ಮನವರಿಕೆಯಾಗುತ್ತದೆ. ಪಡುವಣ ಘಟ್ಟದ ಶೋಲಾ ಮತ್ತು ಹಿಮಾಲಯಗಳಿಗೆ ಇರುವಂತೆ, ಅರಾವಳಿ ಬೆಟ್ಟಗಳಿಗೆ ಜಲಸಂಚಯದ ಗುಣ ಕಡಿಮೆ. ನಾವೊಂದೆಡೆ ಒಣನದಿಯ ಪಾತ್ರದೊಳಗೆ ನಡೆಯಬೇಕಾಯಿತು. ಅಲ್ಲಲ್ಲಿ ಜಿನುಗುಧಾರೆಗಳಿಂದ ಮಡುಗಟ್ಟಿದ ಕೆಲವು ದೊಣೆಗಳನ್ನು ಬಿಟ್ಟರೆ, ಉರುಟು ಬಂಡೆಗಳಿಂದ ಕೂಡಿದ ಮಹಾ ಇಳಿಜಾರಿನ ಆ ನದಿಪಾತ್ರವು, ರುದ್ರರಮಣೀಯವೂ ಅಪಾಯಕರವೂ ಆಗಿತ್ತು. ದಾವುರಾಮನ ಪ್ರಕಾರ, ಅತ್ತೆಯೊಬ್ಬಳು ಸೊಸೆಯನ್ನು ಬೈಯುತ್ತ ಧುಮುಗುಡುತ್ತ ನಡೆದಳಂತೆ. ಅದುವೇ ಸದರಿ ಒಣಗಿದ ಹೊಳೆಯಾಯಿತಂತೆ (ಸಿನಿಮಾಗಳಿಂದ ಹಿಡಿದು ಜನಪದ ಕತೆಗಳತನಕ ಪಾಪದ ಅತ್ತೆಯೇ ವಿಲನ್!). ಅತ್ತೆಕಾಟ ತಡೆಯಲಾರದೆ ಮನೆಬಿಟ್ಟು ಅಳುತ್ತ ಹೋದ ಸೊಸೆಯ ಕಣ್ಣೀರು ಹರಿದು ಸದಾ ಜಲವಿರುವ ಬನಾಸ್ ಹೊಳೆಯಾಯಿತಂತೆ. ನಿಸರ್ಗದ ವಿದ್ಯಮಾನಗಳನ್ನು ಕೌಟುಂಬಿಕ ಸಂಬಂಧಗಳಿಗೆ ಸಮೀಕರಿಸುವುದು ಬುಡಕಟ್ಟು ಸಂಸ್ಕೃತಿಯ ಜಾಯಮಾನವಿರಬೇಕು.

ವಿಶೇಷವೆಂದರೆ, ನಮ್ಮ ಅರಣ್ಯ ಪ್ರವೇಶ ಮತ್ತು ನಿರ್ಗಮನದ ತಾಣಗಳಾದ ರಣಕಪುರ ಮತ್ತು ಘಾಣೇರಾವಗಳು ಪ್ರಾಚೀನವಾದ ಬಸದಿಗಳಿಗೂ ಖ್ಯಾತವಾಗಿದ್ದವು. ಅಮೃತಶಿಲೆಯಿಂದ ಗೇಯಲ್ಪಟ್ಟ ಇವು ಹಚ್ಚಗಿನ ವನಭಿತ್ತಿಯಲ್ಲಿ ಗುಡ್ಡೆಹಾಕಿಟ್ಟ ಹಿಮರಾಶಿಯಂತೆ, ಹಸಿರುಗಡಲಲ್ಲಿ ತೇಲುವ ಬಿಳಿಯ ಹಡಗುಗಳಂತೆ ಥಟ್ಟನೆ ಪ್ರತ್ಯಕ್ಷವಾದವು. ಇವು ಅರಾವಳಿಯನ್ನು ಭೇದಿಸಿಕೊಂಡು ಹೋಗುವ ವಣಿಕ ಪಥದಲ್ಲಿ ಚಲಿಸುತ್ತಿದ್ದ ವಣಿಕರಿಗೂ ಜೈನಮುನಿಗಳಿಗೂ ಆಶ್ರಯದಾಣಗಳಾಗಿ ಕೆಲಸ ಮಾಡಿರಬೇಕು. ಇವನ್ನು ಕಟ್ಟಿಸಿದವರೂ ವಣಿಕರೇ. ಇದೇ ಸೀಮೆಯ ಊರುಗಳ ಭೂಮಿಕೆಯಲ್ಲಿ ನಡೆಯುವ ನಮ್ಮ 'ವಡ್ಡಾರಾಧನೆ'ಯ ಕಥೆಗಳಲ್ಲಿ, ವಣಿಕರ ಕಾರವಾನಿನ ಜತೆ ಯಾತ್ರಿಕರು ಹೋಗುವ, ದರೋಡೆಕೋರರಿಗೆ ಬಲಿಯಾಗುವ ಸನ್ನಿವೇಶಗಳು ನನಗೆ ನೆನಪಾದವು. ಸೇನೆಯೂ ಸನ್ಯಾಸಿಗಳೂ ವಣಿಕರ ಕಾರವಾನುಗಳೂ ಸಂಚರಿಸುತ್ತಿದ್ದ ಅರಾವಳಿಯ ಕಲ್ಲುಹಾಸಿನ ಪ್ರಾಚೀನ ಪಥವು ನಮಗೆ ಅಲ್ಲಲ್ಲಿ ಎದುರುಗೊಳ್ಳುತ್ತಿತ್ತು. ಅದನ್ನೀಗ ಜೀಪ್ ಸಫಾರಿಗಾಗಿ ಮರಾಮತ್ತು ಮಾಡಲಾಗಿದೆ. ಮೇವಾಡದ ದೊರೆಗಳ ಮೃಗಯಾವಿನೋದಕ್ಕೆ ಕಟ್ಟಲಾದ ಅಟ್ಟಣಿಗೆ ಮತ್ತು ಭವನಗಳು, ಪ್ರಾಣಿಗಣತಿ ಮಾಡುವ ಪರಿಸರ ವಿಜ್ಞಾನಿಗಳ ಡೇರೆಗಳಾಗಿ ಬಳಕೆಯಾಗುತ್ತಿವೆ.

ಚಾರಣದುದ್ದಕ್ಕೂ ನೂರಾರು ಹಕ್ಕಿಗಳ ಕಲರವ ಆಲಿಸಿದೆವು. ಅವಕ್ಕೆ ಬೇಕಾದ ಬಾರೆ, ಅತ್ತಿ, ಸೀತಾಫಲ, ಆಲ, ಬಸಿರಿ, ನೆಲ್ಲಿಯ ಮರಗಳೂ ಅಲ್ಲಿದ್ದವು. ದಾವುರಾಂ ಹಾದಿಯುದ್ದಕ್ಕೂ ಸೀತಾಫಲಗಳನ್ನು ಕಿತ್ತುಕೊಟ್ಟು ನಮ್ಮ ಜೋಳಿಗೆಗಳನ್ನು ತುಂಬಿಸಿದನು. ಕಾಡಂಚಿನ ಊರುಗಳಲ್ಲೂ ಸೀತಾಫಲ ಮಾರುವ ಬುಡಕಟ್ಟು ಜನ ಸಾಲುಗಟ್ಟಿ ಕೂತಿದ್ದರು. ದೊಡ್ಡಬುಟ್ಟಿಗೆ ಐವತ್ತು ರೂಪಾಯಿ. ಸರ್ಕಾರ ಕಾಡುತ್ಪತ್ತಿಯ ಸಂಗ್ರಹವನ್ನು ನಿಷೇಧಿಸಿದೆ. ಆದರೂ ಜೇನಿಗಾಗಿ ಕಡಿದುರುಳಿಸಿದ ಮರಗಳು ಕಂಡವು. ತಿನ್ನುವ ಅಂಟಿಗಾಗಿ ಕಚ್ಚಹಾಕಿಸಿಕೊಂಡ ದಿಂಡುಗದ ಮರಗಳು ಗಾಯಾಳುಗಳಾಗಿದ್ದವು. ಇದೆಲ್ಲ ಅರಾವಳಿಯ ಜತೆ ಶತಮಾನಗಳಿಂದ ಬದುಕುತ್ತ ಬಂದವರು ಮಾಡುವ ಸಹಜಬಾಳ್ವೆಯ ಭಾಗವಾಗಿದ್ದವು.

ಅರಾವಳಿಯ ಮೇಲೆ ನಿಜವಾದ ಯುದ್ಧಸಾರಿದ ಸಂಗತಿಗಳು ಬೇರೆಯೇ ಇದ್ದವು. ಮರುಭೂಮಿಗೆ ಹಸಿರತೇಪೆ ಹಾಕಿದಂತಿರುವ ಅರಾವಳಿ ಕಾಡುಗಳು ಶ್ವಾಸಕೋಶಗಳೆಂದೇ ಸರ್ಕಾರ ಅವನ್ನು ಕಾಪಿಟ್ಟಿದೆ. ಆದರದು ವನ್ಯಜೀವಿಗಳ ಏಕಾಂತವನ್ನು ಕಸಿವ ಸಫಾರಿಯನ್ನೂ ನಡೆಸುತ್ತಿದೆ (ತೆರೆದ ಜೀಪುಗಳಲ್ಲಿ ಸಫಾರಿಗರು ಕೇಕೆ ಹಾಕಿಕೊಂಡು ಎದುರಾಗುತ್ತಿದ್ದರು). ಕಾಡಂಚಿನಲ್ಲಿ ರೆಸಾರ್ಟುಗಳಿಗೂ ಅಮೃತಶಿಲೆಯ ಕ್ವಾರಿಗಳಿಗೂ ಅನುಮತಿ ನೀಡಿದೆ. ಗಣಿಗಾರಿಕೆಯಿಂದ ಸಂಡೂರಿನ ಬೆಟ್ಟಗಳು ರಕ್ತಸಿಕ್ತವಾಗಿ ಕಾಣುವಂತೆ, ಅರಾವಳಿಯ ಬೆಟ್ಟಗಳು ಕಲ್ಲಗೆತದಿಂದ ಕೀವುಸೋರುವ ದೇಹದಂತೆ ಬಿಳಿಚಿಕೊಂಡಿದ್ದವು. ಜೋಧಪುರ-ಉದಯಪುರ ರಸ್ತೆಯ ಎರಡೂ ಬದಿ, ಅಮೃತಶಿಲೆಯ ನೂರಾರು ಉದ್ಯಮಗಳಿಂದ ಬಿಳೀದೂಳಿನ ಹೊಗೆ ಆಗಸಕ್ಕಡರಿತ್ತು.

ಅರಾವಳಿಯಲ್ಲಿ ಬುಡಕಟ್ಟು ಜನರ ಕೃಷಿ ಹಿಡುವಳಿಗಳೂ ಇವೆ. ಹಾದಿಯಲ್ಲಿ ಸಿಕ್ಕ ತನ್ನ ಮನೆಗೆ ದಾವುರಾಂ ಕರೆದೊಯ್ದು ಚಹಾ ಕುಡಿಸಿದನು. ದೊಡ್ಡಬೆಟ್ಟದಿಂದ ನೀರು ಜಿನುಗುವ ಕಣಿವೆಯಲ್ಲಿ ಅವನ ಜಮೀನಿತ್ತು. ಅದರೊಳಗೆ ವಯಸ್ಸಿನಿಂದ ಹಣ್ಣಾದ ಅವನಪ್ಪನಿದ್ದನು. ಸಾಸಿವೆಪೈರು ಗೇಣುದ್ದವಿತ್ತು. ದಾವುರಾಂ 'ಮೆಕ್ಕೆಜೋಳ ಹಾಕಿದರೆ ಹಂದಿಗಳು ಸತ್ಯಾನಾಸ್ ಮಾಡುತ್ತವೆ' ಎಂದು ಶಪಿಸಿದನು. ಅರಣ್ಯ ಇಲಾಖೆಯಲ್ಲಿರುವ ಆತನ ವನ್ಯಮೃಗ ಸಂರಕ್ಷಕ ಕರ್ತವ್ಯಪ್ರಜ್ಞೆಗೂ ಬೆಳೆ ರಕ್ಷಿಸುವ ರೈತಾಪಿಪ್ರಜ್ಞೆಗೂ ಸಂಘರ್ಷ ನಡೆಯುತ್ತಿತ್ತು. ಸಫಾರಿಗೊ ಚಾರಣಕ್ಕೊ ಬರುವ ನಗರವಾಸಿಗಳಿಗೆ ಹಾದಿತೋರಲು, ಅವರ ಫೋಟೊಗ್ರಫಿಗೆ ವಸ್ತುವಾಗಲು, ಅವರನ್ನು ಖುಷಿಪಡಿಸಲು ತಾಲೀಮು ಪಡೆದಿರುವ ಆತ, ಬೇಸಾಯಕ್ಕಿಂತ ಹೆಚ್ಚು ರಖಮು ತರುವ ನಾಗರಿಕ ಸಮಾಜದ ಸಹವಾಸಕ್ಕೆ ಹಾತೊರೆಯುತ್ತಿದ್ದನು. ನಾವು, ನಗರ ಬದುಕಿನ ಏಕತಾನತೆಯಿಂದ ಬೇಸತ್ತು, ಮೈಮನಗಳಿಗೆ ಮೆತ್ತಿಕೊಂಡಿರುವ ಮಂಕನ್ನು ಕಳೆದುಕೊಂಡು ಚೈತನ್ಯ ಪಡೆಯಲು ಕಾಡನ್ನು ಹೊಕ್ಕವರು. ನಮಗೆ ಬಿಡುಗಡೆಯಂತೆ ಕಾಣುವ ಕಾಡು, ಬೆಟ್ಟಗಳು, ಅದರೊಳಗೇ ಇರುವವರಿಗೆ ಬಂಧನವಾಗಿವೆಯೇ? ಇದೊಂದು ವೈರುಧ್ಯಕರ ಸೆಳೆತಗಳ ಮುಖಾಮುಖಿ. ಅರಾವಳಿಯ ಕಾಡುಬೆಟ್ಟ ಖಗಮೃಗಗಳಿಗೆ ಬಾಯಿದ್ದಿದ್ದರೆ ಏನನ್ನುತ್ತಿದ್ದವೊ? ನಿಮ್ಮ ಸಫಾರಿ, ಕ್ವಾರಿ, ಚಾರಣ, ಹೊಲಗದ್ದೆ, ರೆಸಾರ್ಟು ಎಲ್ಲವೂ ನಮ್ಮ ಪಾಲಿನ ಪೀಡೆಗಳೆಂದೇ? ಹೊಸ ಅನುಭವವನ್ನೂ ಇನ್ನಿಲ್ಲದ ಆನಂದವನ್ನೂ ಕೊಟ್ಟ ಅರಾವಳಿ, ಕಳವಳದ ಪ್ರಶ್ನಾವಳಿಯನ್ನೂ ಹುಟ್ಟಿಸಿ ಕಳಿಸಿತು.

ಮುನ್ನೋಟ 30-01-2022 ರಿಂದ 05-02-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಹಣದ ಒಳಹರಿವು ಉತ್ತಮವಾಗಿರುತ್ತದೆ. ನಿರೀಕ್ಷಿತ ಮೂಲಗಳಿಂದ ಆದಾಯ ಇರುತ್ತದೆ. ವಿದೇಶಿ ವ್ಯವಹಾರಗಳನ್ನು ಮಾಡುವವರಿಗೆ ಲಾಭವಿರುತ್ತದೆ. ಕುಟುಂಬದಲ್ಲಿ ಮಹಿಳೆಯರ ನಡುವೆ ಮನಸ್ತಾಪ ತಲೆದೋರಬಹುದು. ಅತಿಯಾದ ಮನಸ್ಸಿನ ಚಾಂಚಲ್ಯ ಎಡಬಿಡಂಗಿತನಕ್ಕೆ ಕಾರಣವಾಗಬಹುದು. ಸಿಹಿ ಪದಾರ್ಥಗಳನ್ನು ಮಾರಾಟ ಮಾಡುವವರಿಗೆ ಲಾಭವಿದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಆರ್ಥಿಕ ಸಂಪನ್ಮೂಲಗಳು ಸಮಾಧಾನ ಪಡುವಷ್ಟು ಇರುತ್ತವೆ. ಉದ್ಯೋಗದಲ್ಲಿ ಸ್ವಲ್ಪ ಏರಿಳಿತಗಳನ್ನು ಕಾಣಬಹುದು. ಭೂವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಮಾತಿನ ಬಗ್ಗೆ ಗೃಹಿಣಿಯರು ಅತ್ಯಂತ ಜಾಗರೂಕರಾಗಿರುವುದು ಬಹಳ ಒಳ್ಳೆಯದು. ರೈತಾಪಿ ವರ್ಗದವರಿಗೆ ಜಮೀನು ಕೃಷಿ ಮಾಡಲು ಇದ್ದ ಕಾನೂನು ತೊಡಕು ನಿವಾರಣೆಯಾಗುತ್ತದೆ. ಉಪನ್ಯಾಸಕರಿಗೆ ಉತ್ತಮ ಗೌರವ ಸಿಗುವ ಸಾಧ್ಯತೆಗಳಿವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ವಾರದ ಆರಂಭದಲ್ಲಿ ಬಹಳ ಸಂತೋಷವಿರುತ್ತದೆ. ಬಂಧುಗಳ ಮಕ್ಕಳ ನಡುವೆ ಪ್ರೀತಿ ಪ್ರೇಮ ಬೆಳೆಯಬಹುದು. ಸ್ವಂತ ಉದ್ದಿಮೆ ಸ್ಥಾಪಿಸುವ ಬಗ್ಗೆ ಸಾಕಷ್ಟು ಆಲೋಚನೆ ನಡೆಯುತ್ತದೆ. ನಿಮ್ಮ ಕೆಲವು ಸಮಸ್ಯೆಗಳನ್ನು ನೀವೇ ಕುಳಿತು ಬಗೆಹರಿಸಿಕೊಳ್ಳುವಿರಿ. ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಇರುವ ಎಂಜಿನಿಯರ್‌ಗಳಿಗೆ ಉತ್ತಮ ಬೇಡಿಕೆ ಬರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಗೌರವಾನ್ವಿತ ಜನರ ಸಂಪರ್ಕಗಳು ದೊರೆಯುತ್ತವೆ. ಮಹಿಳೆಯರೊಂದಿಗೆ ವ್ಯವಹಾರ ಮಾಡುವಾಗ ಎಚ್ಚರ ಇರಲಿ. ಮೋಸ ಹೋಗುವ ಸಾಧ್ಯತೆಗಳಿವೆ. ಬಾಂಧವರ ನಡುವೆ ಸಂಪರ್ಕ ಹೆಚ್ಚಾಗುತ್ತದೆ. ಕೆಲಸಗಳಲ್ಲಿ ಹೆಚ್ಚಿನ ಒತ್ತಡ ಕಂಡು ಬಂದರೂ ಅದನ್ನು ನಿಭಾಯಿಸುವ ಶಕ್ತಿ ಇರುತ್ತದೆ. ಮಿತವ್ಯಯವನ್ನು ಸಾಧಿಸುವುದು ನಿಮಗೆ ಉತ್ತಮ. ಆರೋಗ್ಯದಲ್ಲಿ ಹೆಚ್ಚಿನ ಸುಧಾರಣೆಯನ್ನು ಕಾಣಬಹುದು.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಕಮಿಷನ್ ಏಜೆಂಟರುಗಳಿಗೆ ಉತ್ತಮ ಕಮಿಷನ್ ದೊರೆಯುವ ಸಂದರ್ಭ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ಉದ್ಯೋಗಿಗಳಿಗೆ ಹಿತಶತ್ರುಗಳ ಕಾಟ ಇರುತ್ತದೆ. ಕುಟುಂಬದಲ್ಲಿ ಹೆಚ್ಚಿನ ಸಂತೋಷವನ್ನು ಕಾಣುವಿರಿ. ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಮಾರಾಟ ಮಾಡುವವರಿಗೆ ಹೆಚ್ಚಿನ ಲಾಭ ಇರುತ್ತದೆ. ಹೊಸ ಉದ್ಯೋಗದ ಬಗ್ಗೆ ಸಾಕಷ್ಟು ಮಾತುಕತೆ ನಡೆಯುತ್ತದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಉದ್ಯೋಗ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳುವುದು ಬಹಳ ಉತ್ತಮ. ವಿದ್ಯಾರ್ಥಿಗಳು ಉತ್ತಮ ಫಲಿತಾಂಶಕ್ಕಾಗಿ ಹೆಚ್ಚಿನ ಶ್ರಮ ವಹಿಸಬೇಕು. ಹೊಸ ವಸ್ತ್ರಗಳನ್ನು ಕೊಳ್ಳುವ ಯೋಗವಿದೆ. ರಾಜಕೀಯ ವ್ಯಕ್ತಿಗಳಿಗೆ ಅವರ ಹಿಂಬಾಲಕರಿಂದ ಸ್ವಲ್ಪಮಟ್ಟಿನ ಹಿನ್ನಡೆಯಾಗಬಹುದು. ಶೃಂಗಾರ ಸಾಮಗ್ರಿಗಳ ಸಗಟು ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಿರುತ್ತದೆ. ಸರಕು ಸಾಗಣೆ ವ್ಯವಹಾರದಲ್ಲಿ ಹೆಚ್ಚಿನ ಆದಾಯವಿರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖ 1,2,3
ಪತ್ನಿಯಿಂದ ನಿಮ್ಮ ಕೆಲಸಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ಕೆಲವು ರಾಜಕೀಯ ವ್ಯಕ್ತಿಗಳಿಂದ ಕಿರುಕುಳ ಬರಬಹುದು. ಆಪ್ತ ಸ್ನೇಹಿತನ ದ್ವಂದ್ವ ನಿಲುವಿನಿಂದಾಗಿ ವ್ಯವಹಾರದಲ್ಲಿ ಸಲ್ಪ ಹಿನ್ನಡೆಯಾಗಬಹುದು. ಸಂಗಾತಿಯ ಶೃಂಗಾರ ಸಾಮಗ್ರಿಗಳಿಗಾಗಿ ಹೆಚ್ಚಿನ ಹಣ ಖರ್ಚಾಗುವುದು. ಹಣದ ಒಳಹರಿವು ಸಾಮಾನ್ಯ ಮಟ್ಟದಲ್ಲಿರುತ್ತದೆ. ಖರ್ಚನ್ನು ಕಡಿಮೆ ಮಾಡುವುದು ಅತಿ ಮುಖ್ಯ. ಸ್ಥಿರಾಸ್ತಿಯನ್ನು ಮಾಡುವಾಗ ದ್ವಂದ್ವ ನಿಲುವುಗಳು ಖಂಡಿತ ಬೇಡ.

ವೃಶ್ಚಿಕ — ವಿಶಾಖ 4 ಅನೂರಾಧ, ಜ್ಯೇಷ್ಠ
ದೈನಂದಿನ ಕೆಲಸಕಾರ್ಯಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವಿರಿ. ಇಂಧನ ಇಲಾಖೆಯಲ್ಲಿ ಕೆಲಸ ಮಾಡುವವರು ಎಚ್ಚರ ವಹಿಸಿರಿ. ಆರ್ಥಿಕ ಸ್ಥಿತಿಯಲ್ಲಿ ಚೇತರಿಕೆಯನ್ನು ಕಾಣಬಹುದು. ಉದ್ಯಮಿಗಳಿಗೆ ಇದ್ದ ಕಾರ್ಮಿಕರ ಸಮಸ್ಯೆ ಬಗೆಹರಿಯುವುದು. ಸರ್ಕಾರಿ ಅಧಿಕಾರಿಗಳಿಂದ ಸಹಾಯ ದೊರೆತು ನಿಮ್ಮ ವ್ಯವಹಾರದಲ್ಲಿದ್ದ ಗೋಜಲುಗಳು ಪರಿಹಾರವಾಗುತ್ತವೆ.


ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಹಿರಿಯರ ಒಡವೆಗಳನ್ನು ಖರೀದಿಸುವ ಸಾಧ್ಯತೆ ಇದೆ. ಆರ್ಥಿಕ ಸ್ಥಿತಿಯಲ್ಲಿ ಅಂತಹ ಹಿಂಜರಿಕೆ ಇರುವುದಿಲ್ಲ. ಕೋರ್ಟ್ ಕಚೇರಿ ಸಂಬಂಧದ ಕೆಲಸಗಳಲ್ಲಿ ಮುನ್ನಡೆ ಇರುತ್ತದೆ. ಮಂದಗತಿಯ ಆರ್ಥಿಕ ಸ್ಥಿತಿಗೆ, ಸಂಬಂಧಪಟ್ಟ ಸಂಸ್ಥೆಗಳಿಂದ ಸಾಲ ಪಡೆದು ಸರಿದೂಗಿಸುವಿರಿ. ರಂಗ ಕಲಾವಿದರುಗಳಿಗೆ ಕೆಲವು ಸಂಸ್ಥೆಗಳಿಂದ ಗೌರವ ದೊರೆಯುತ್ತದೆ. ಕೀಲು ನೋವು ಬಾಧಿಸಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಪುರಾತನ ವಸ್ತುಗಳನ್ನು ಮಾರಾಟ ಮಾಡುವವರ ಆದಾಯ ಹೆಚ್ಚುತ್ತದೆ. ವಾಹನಗಳ ಬಿಡಿಭಾಗಗಳನ್ನು ಮಾರಾಟ ಮಾಡುವವರ ವ್ಯವಹಾರದಲ್ಲಿ ವಿಸ್ತರಣೆಯಾಗುತ್ತದೆ. ಷೇರು ಮಾರುಕಟ್ಟೆಯ ಮಧ್ಯವರ್ತಿಗಳಿಗೆ ಆದಾಯ ಹೆಚ್ಚುತ್ತದೆ. ಮಾಧ್ಯಮ ಮಿತ್ರರಿಗೆ ಕೆಲವು ಮೂಲಗಳಿಂದ ಧನಲಾಭವಿರುತ್ತದೆ. ಕೃಷಿಕರ ಆದಾಯದಲ್ಲಿ ಸ್ವಲ್ಪ ವ್ಯತ್ಯಾಸಗಳಾಗಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಕೆಲವು ಕಲಾವಿದರುಗಳಿಗೆ ಉತ್ತಮ ಪ್ರೋತ್ಸಾಹ ದೊರೆಯುವುದು. ಆರ್ಥಿಕವಾಗಿ ಚೇತರಿಕೆ ಕಾಣಬಹುದು. ಹೊಸ ಸ್ಥಿರಾಸ್ತಿ ಕೊಳ್ಳುವ ಬಗ್ಗೆ ಸಾಕಷ್ಟು ಆಲೋಚನೆಯನ್ನು ಮಾಡುವಿರಿ. ಉಪನ್ಯಾಸಕರಿಗೆ ಉತ್ತಮ ಸ್ಥಾನ ದೊರಕುತ್ತದೆ. ಸಂಶೋಧನಾ ಕ್ಷೇತ್ರದಲ್ಲಿರುವವರಿಗೆ ಹೊಸ ಆಶಾಕಿರಣವೊಂದು ಗೋಚರಿಸುತ್ತದೆ. ಕುಟುಂಬದಲ್ಲಿ ಮುಸುಕಿನ ಗುದ್ದಾಟ ನಡೆಯಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಾಭಾದ್ರ, ರೇವತಿ
ಸಿದ್ಧವಸ್ತ್ರ ಉಡುಪುಗಳನ್ನು ಮಾರಾಟ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವ್ಯವಹಾರಗಳ ಮಧ್ಯವರ್ತಿ ಕೆಲಸವನ್ನು ಮಾಡುವವರಿಗೆ ಅವರ ಕೆಲಸದಲ್ಲಿ ಯಶಸ್ಸು ಇರುತ್ತದೆ. ಕ್ರೀಡಾಪಟುಗಳಿಗೆ ಅನಿರೀಕ್ಷಿತವಾಗಿ ವಿದೇಶಯಾನ ದೊರೆಯಬಹುದು. ಮಣ್ಣಿನ ಆಲಂಕಾರಿಕ ಗೊಂಬೆಗಳನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚುತ್ತದೆ. ಸಾಹಸ ಕಲಾವಿದರುಗಳಿಗೆ ನಿಂತಿದ್ದ ಸಂಭಾವನೆ ಈಗ ಬರುತ್ತದೆ.

ಪದಬಂಧ 2724



ಮೇಲಿನಿಂದ ಕೆಳಕ್ಕೆ

1. ಗುಂಪು ನಾಡುಗಳ ಸಂತೋಷ ಸಂಭ್ರಮದ ರಾಷ್ಟ್ರ ಹಬ್ಬ 6
2. ಮನಸ್ಸು ಮುದುಡಿ ಹೋದ ದುರ್ಬಲ ಸ್ಥಿತಿ 3
3. ಕಲ್ಲಿಗೆ ಪ್ರಸಿದ್ಧಿ ಪಡೆದ ಆಂಧ್ರ ಜಿಲ್ಲೆ 3
4. ಕರಾವಳಿಯಲ್ಲಿ ಸಿಗುವ ಈ ಸಣ್ಣಮೀನಿಗೆ ಬೆಲೆ ಹೆಚ್ಚು 5
6. ವಿರಳವಾಗಿ ಮಾಡಬೇಕಾದ ಕರ್ಮ 3
8. ಹಸೆಮಣೆ ಏರಿರುವ ಹೆಣ್ಣು ಗಂಡು 5
10. ನಾನು ನನ್ನದೆಂಬ ಅಹಂ ಇಲ್ಲದವ 5
12. ರಾಹು, ಗುಳಿಕದಂತೆ ಕಾಲಪುರುಷನ ಹೆಸರಲ್ಲಿ ಸೀಮಿತ ಸಮಯ 6
14. ಮುಖ ಗಂಟಿಕ್ಕಿ ಸಿಡಿದು ಬೀಳುವ ಪ್ರವೃತ್ತಿ 3
17. ಎಲ್ಲೋ ಇರುವ ಕೋಗಿಲೆ ಹಾಡಲೆಂದು ಅರಸಿ ಬರುವ ಮರ 3
18. ಕನ್ನಡ ಕಾವ್ಯ ರಚಿಸಿದ ರಮಾರಮಣ 3

ಎಡದಿಂದ ಬಲಕ್ಕೆ

1. ಆಕಾಶಯಾನದಲ್ಲಿ ಉಪಚರಿಸುವ ಗೆಳತಿ 5
3. ಕನ್ನಡದ ಕಂಪು ಹರಡುವ ಮೃಗ ಸುಗಂಧ 3
4. ಹಿಂದಿ ಸಿನಿಮಾಗಳಲ್ಲಿ ಮಿನುಗುವ ನಕ್ಷತ್ರ 3
5. ಇನ್ನೂ ಗಟ್ಟಿಯಾಗದ ಸಕ್ಕರೆ ದ್ರವದ ಹದ 4
7. ದೀಪದ ಬೆಳಕಿನಲ್ಲಿ ಅಡಗಿರುವ ಭಗವಂತ 4
9. ಖರ್ಚಿಗೆ ಬೇಕಾಗುವ ಆಂಗ್ಲ ಹಣ 2
11. ಭೂಮಿ ಒಡೆಯನ ಮಗನೆಂದು ಶ್ರೀಕೃಷ್ಣನನ್ನು ಹೀಗೆ ಬಣ್ಣಿಸುತ್ತಾರೆ 7
13. ಬಟ್ಟೆಗಳಲ್ಲಿ ಅಡಗಿಕೊಳ್ಳುವ ಕೀಟ 2
15. ಮಹಾಶಿವನ ಕೊರಳಲ್ಲಿರುವ ಹಾವು ಕೊನೆಯಲ್ಲಿ ಶೂನ್ಯವಾಗಿ ಸುತ್ತಿದೆ 4
16. ಶಂಕರಾಚಾರ್ಯರ ಜೊತೆ ಮೀಮಾಂಸೆ ಚರ್ಚಿಸಿದ ವಿದ್ವಾಂಸ 3
19. ಫಲಾಹಾರಕ್ಕೆ ಒಪ್ಪವಾದ ಮುಚ್ಚಳವಿರುವ ಪಾತ್ರೆ 3
20. ಇಹ ಲೋಕದ ಸಂಪೂರ್ಣ ಸಾರವನ್ನು ತಿಳಿಸಿಕೊಡುವ ಕುಟುಂಬ 3
21. ದೇಹದಲ್ಲಿನ ಶಕ್ತಿ 5

ಪದಬಂಧ ಉತ್ತರ -2723

ಮೇಲಿಂದ ಕೆಳಕ್ಕೆ

1.ಗೋವಿನಹಾಡು 2.ನವಿರು 3.ಕಷಾಯ 4.ನವತರುಣಿ 6.ಯಮ 9.ಲಕ್ಷ್ಮಣ 10.ಆತುರ 11.ರಾಮಾಸ್ತ್ರ 12.ಕರುಣೆ 13.ಆಮ್ಲಜನಕ 14.ವರದಾ 15.ವಿಜಯಧ್ವಜ 17.ಥಳಕು 18.ಸವಿ 19.ಕಾಯಕ

ಎಡದಿಂದ ಬಲಕ್ಕೆ

1. ಗೋವರ್ಧನ 3.ಕವಿಮನ 5.ವಿದಾಯ 7.ನಡುನೀರು 8.ಮಲಯಮಾರುತ 10.ಆದಿಪುರಾಣ 12.ಕಲ್ಯಾಣಿ 13.ಆದರ 14.ವಸ್ತ್ರಧಾರಣೆ 16.ಜಗನ್ನಾಥದಾಸ 19.ಕಾರ್ತಿಕೇಯ 20.ವಿಧೇಯ 21.ಕತ್ತುಳುಕು 22.ಕರಬೂಜ


ಗಾಂಧಿ ಹಾದಿಯಲ್ಲಿ ದಣಿವರಿಯದ ಪಯಣ

ರಘುನಾಥ ಚ.ಹ.

'ಗಾಂಧಿ ಮಹಾತ್ಮರಾದುದು: ದಕ್ಷಿಣ ಆಫ್ರಿಕಾ ದಿನಗಳು' ಹಾಗೂ 'ಬಾಪೂ ನಂತರದ ಭಾರತ' ಸಂಪುಟಗಳ ಖ್ಯಾತಿಯ ರಾಮಚಂದ್ರ ಗುಹ ಅವರ 'ಗಾಂಧಿಧ್ಯಾನ'ದ ಹೊಸ ಕೃತಿ – 'ಗಾಂಧಿ: ಪ್ರಪಂಚವನ್ನು ಬದಲಾಯಿಸಿದ ಆ ವರ್ಷಗಳು, 1914–1948'. ಎರಡು ಸಂಪುಟಗಳಲ್ಲಿನ ಈ ಬಾಪೂ ಕಥನ, ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಗಾಂಧಿ ಮರಳಿದ ದಿನದಿಂದ ಅವರ ಬದುಕಿನ ಕೊನೆಯವರೆಗಿನ ಕಥನವನ್ನು ಒಳಗೊಂಡಿದೆ.

ಭಾರತದ ಸ್ವಾತಂತ್ರ್ಯ ಚಳವಳಿಯ ನಿರ್ಣಾಯಕ ಘಟ್ಟದ ಚರಿತ್ರೆಯೊಂದಿಗೆ ಪ್ರತ್ಯೇಕವಾಗಿ ನೋಡಲು ಸಾಧ್ಯವಾಗದ ಗಾಂಧಿಯ ಬದುಕಿನ ಕಥೆ ಈ ಕೃತಿಗಳಲ್ಲಿದೆ. ಸ್ವಾತಂತ್ರ್ಯ–ಸ್ವರಾಜ್ಯದ ಸಾಧನೆಯೊಂದಿಗೆ, ಜಡಗಟ್ಟಿದ ಸಮಾಜದಲ್ಲಿ ಚಲನೆಯುಂಟು ಮಾಡಲು ಗಾಂಧೀಜಿ ನಡೆಸಿದ ಮಾನವೀಯ–ನೈತಿಕ ಪ್ರಯತ್ನ–ಪ್ರಯೋಗಗಳು ಗುಹ ಅವರ ಆಸಕ್ತಿಯ ಕೇಂದ್ರವಾಗಿವೆ. ಸ್ವಾತಂತ್ರ್ಯ ಚಳವಳಿಯಲ್ಲಿ ವಿದ್ಯಾರ್ಥಿಗಳು ಹಾಗೂ ಮಹಿಳೆಯರನ್ನು ಗಣನೀಯ ಸಂಖ್ಯೆಯಲ್ಲಿ ತೊಡಗಿಸುವ ಮೂಲಕ ಚಳವಳಿಗೆ ವ್ಯಾಪಕತೆಯನ್ನು ತಂದುಕೊಟ್ಟ ಗಾಂಧೀಜಿ, ರಾಜಕೀಯ ಚಲನೆಯ ಜೊತೆಜೊತೆಯಲ್ಲಿಯೇ ಭಾರತೀಯ ಸಮಾಜದಲ್ಲಿನ ತರತಮಗಳ ನಿವಾರಣೆಯೂ ಆಗಬೇಕೆಂದು ಶ್ರಮಿಸಿದವರು. ಹಿಂದೂ–ಮುಸಲ್ಮಾನರನ್ನು ಒಟ್ಟಿಗೆ ಕರೆದೊಯ್ಯಲು ಹಾಗೂ ಅಸ್ಪೃಶ್ಯರನ್ನು ಸಮಾಜದ ಮುಖ್ಯವಾಹಿನಿಯೊಂದಿಗೆ ಉಳಿಸಿಕೊಳ್ಳಲು ಅವರು ನಡೆಸಿದ ಪ್ರಯತ್ನಗಳ ಯಶಸ್ಸು ಹಾಗೂ ವೈಫಲ್ಯ ಎರಡರ ವಿಶ್ಲೇಷಣೆಗೂ ಈ ಕೃತಿಗಳು ಒತ್ತು ನೀಡಿವೆ.

ಗುಹ ಅವರ ನಿರೂಪಣೆ ಗಾಂಧಿಯ ಗೆಲುವಿನ ಕಥನವಷ್ಟೇ ಆಗಿಲ್ಲ, ಗಾಂಧಿ ಮತ್ತು ಅವರು ನೆಚ್ಚಿದ್ದ ತತ್ವಗಳ ಸೋಲಿನ ಕಥನವೂ ಆಗಿದೆ. ಗಾಂಧಿ ಬದುಕನ್ನು ನಿರೂಪಿಸುತ್ತಲೇ, ಅವಕಾಶ ಸಿಕ್ಕಾಗಲೆಲ್ಲ ಮಹಾತ್ಮನ ನಡವಳಿಕೆಗಳ ಬಗ್ಗೆ ಗುಹ ಅವರು ತಮ್ಮ ವಿಮರ್ಶಾತ್ಮಕ ಅಭಿಪ್ರಾಯವನ್ನೂ ದಾಖಲಿಸಿದ್ದಾರೆ. ಗಾಂಧಿಯ ಬಗೆಗಿನ ತಪ್ಪುಕಲ್ಪನೆಗಳನ್ನು ನಿವಾರಿಸುವ ಸಂದರ್ಭದಲ್ಲಿ ಮಹಾತ್ಮನ ವಕ್ತಾರರ ಉತ್ಸಾಹ ಮೈದುಂಬಿಕೊಳ್ಳುವ ಅವರು, ಉಳಿದಂತೆ ತಾವು ಬಹುವಾಗಿ ಮೆಚ್ಚುವ ವ್ಯಕ್ತಿತ್ವವನ್ನು ವಿಮರ್ಶಿಸುವ ಸಾಧ್ಯತೆಯನ್ನು ಬಿಟ್ಟುಕೊಟ್ಟಿಲ್ಲ. ಆ ಕಾರಣದಿಂದಾಗಿಯೇ ಈ ಕೃತಿಗೆ ವಿಶಿಷ್ಟವಾದ ವಸ್ತುನಿಷ್ಠತೆ ಲಭ್ಯವಾಗಿದೆ. ಗಾಂಧಿಯನ್ನು ವಿಮರ್ಶಿಸುವ ಸಂದರ್ಭದಲ್ಲೂ ಬಾಪೂ ಎನ್ನುವ ವ್ಯಕ್ತಿತ್ವ ಎಲ್ಲ ಅಳತೆಗೋಲುಗಳನ್ನು ಮೀರಿದ ಒಂದು ವಿಶಿಷ್ಟ ವಿದ್ಯಮಾನ ಎನ್ನುವ ಅರಿವು ಲೇಖಕರಿಗಿದೆ. ಈ ಅರಿವಿಗೆ, 'ಗಾಂಧಿ ಪ್ರಪಂಚವನ್ನು ಬದಲಿಸಿದ ಆ ವರ್ಷಗಳು' ಶೀರ್ಷಿಕೆಯನ್ನೇ ಉದಾಹರಣೆಯಾಗಿ ಗಮನಿಸಬಹುದು. ಗಾಂಧಿಯನ್ನು ಅವರ ಮಿತಿಗಳೊಂದಿಗೇ ಅರ್ಥ ಮಾಡಿಕೊಳ್ಳುವ, ಒಪ್ಪುವ ಇಲ್ಲವೇ ಚರ್ಚಿಸುವ 'ಗುಹ ವಿಧಾನ' ಮಹಾತ್ಮನನ್ನು ಓದುಗರಿಗೆ ಇನ್ನಷ್ಟು ಆತ್ಮೀಯವಾಗಿಸುವ ಬಗೆಯೂ ಆಗಿದೆ.





ಗಾಂಧಿ- ಪ್ರಪಂಚವನ್ನು ಬದಲಾಯಿಸಿದ ಆ ವರ್ಷಗಳು, 1914–1948 (ಎರಡು ಸಂಪುಟ)
ಲೇ: ರಾಮಚಂದ್ರ ಗುಹ, ಅ: ಎಂ.ಸಿ. ಪ್ರಕಾಶ್
ಪ್ರ: ವಸಂತ ಪ್ರಕಾಶನ. ಸಂ: 7892106719.


ಗಾಂಧಿಯನ್ನು ಮಹಾತ್ಮನ ಚೌಕಟ್ಟಿನಲ್ಲಿ ವಿಶ್ಲೇಷಿಸುವ ಈ ಕಥನ, ಗಾಂಧಿಯನ್ನು 'ಮಹಾತ್ಮ'ನನ್ನಾಗಿ ಉಳಿಸಿಕೊಳ್ಳಲಿಕ್ಕಾಗಿ ಅವರ ಸಹಚರರು ಪಟ್ಟ ಪಡಿಪಾಟಲುಗಳನ್ನೂ ವಿಶದವಾಗಿ ದಾಖಲಿಸಿದೆ. ಕಸ್ತೂರ್ ಬಾ, ಮಹದೇವ ದೇಸಾಯಿ, ರಾಜಾಜಿ, ಮೀರಾ ಬೆನ್, ಸಿ.ಎಫ್. ಆ್ಯಂಡ್ರೂಸ್, ರವೀಂದ್ರನಾಥ ಟ್ಯಾಗೋರ್ ಮೊದಲಾದವರು ಗಾಂಧಿಯ ಆಪ್ತವಲಯದವರಷ್ಟೇ ಆಗಿರಲಿಲ್ಲ, ಆತ್ಮಸಾಕ್ಷಿಯ ರೂಪದಲ್ಲೂ ಗಾಂಧಿಯನ್ನು ಸ್ವವಿಮರ್ಶೆಗೆ ಒಡ್ಡಬಲ್ಲ ಶಕ್ತಿಗಳಾಗಿದ್ದರು. ತಾನೊಬ್ಬ ಪರಿವರ್ತಿತ ಅಸ್ಪೃಶ್ಯ ಎಂದು ಗಾಂಧಿ ಹೇಳಿಕೊಳ್ಳುವಂತಾಗಲು, ಅಸ್ಪೃಶ್ಯರ ಸಂಕಟಗಳಿಗೆ ಅವರು ಸ್ಪಂದಿಸುವಂತಾಗಲು ಆ್ಯಂಡ್ರೂಸ್ ಅವರ ಒತ್ತಾಸೆಯೊಂದಿಗೆ, ಅಂಬೇಡ್ಕರ್ ಅವರೊಂದಿಗಿನ ತಾತ್ವಿಕ ಸಂಘರ್ಷವೂ ಪ್ರಮುಖ ಕಾರಣ. ಸರಳಾದೇವಿ ಚೌಧುರಾಣಿ ಅವರೊಂದಿಗೆ ಗಾಂಧೀಜಿ ಹೊಂದಿದ್ದ ಮಾನಸಿಕ ಸಾಮೀಪ್ಯ ಅವರ ಸಾರ್ವಜನಿಕ ವರ್ಚಸ್ಸಿಗೆ ಧಕ್ಕೆಯುಂಟು ಮಾಡಬಹುದೆನ್ನುವ ಆತಂಕದಿಂದ, ತಮ್ಮ ಪ್ರಶ್ನಾತೀತ ನಾಯಕನೊಂದಿಗೆ ನಿರ್ದಾಕ್ಷಿಣ್ಯವಾಗಿ ನಡೆದುಕೊಳ್ಳಲು ರಾಜಾಜಿ ಮತ್ತು ಮಹದೇವ ದೇಸಾಯಿ ಹಿಂಜರಿಯಲಿಲ್ಲ. ಈ ಇಬ್ಬರು ಮಹನೀಯರಿಗೆ, ಸ್ವಾತಂತ್ರ್ಯ ಚಳವಳಿ ಮತ್ತು ಸತ್ಯದೊಂದಿಗಿನ ಪ್ರಯೋಗದಲ್ಲಿ ತೊಡಗಿಕೊಳ್ಳುವಲ್ಲಿ ಗಾಂಧೀಜಿ ಅವರ ಮನಸ್ಸು ವಿಚಲಿತವಾಗದಂತೆ ನೋಡಿಕೊಂಡ ಶ್ರೇಯಸ್ಸು ಸಲ್ಲಬೇಕು.

ವಿಮರ್ಶೆ

ಅಂದರೆ, ಗಾಂಧೀಜಿ 'ಮಹಾತ್ಮ' ಎನ್ನಿಸಿಕೊಂಡ ಪ್ರಕ್ರಿಯೆ ವೈಯಕ್ತಿಕ ಸಾಧನೆಯಷ್ಟೇ ಆಗಿರಲಿಲ್ಲ; ಅದು ಸಂಘಟಿತ ಪ್ರಯತ್ನವೂ ಆಗಿತ್ತು. ಬಾಪೂ ಮಹಾತ್ಮನಾದುದು ಕಾಲಘಟ್ಟವೊಂದರ ಹಂಬಲವೂ ಆಗಿತ್ತು ಎನ್ನುವುದನ್ನು ಗುಹ ಬಹು ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ತಮ್ಮ ನಿರೂಪಣೆ-ವಿಶ್ಲೇಷಣೆ ಭಾವುಕ ನೆಲೆಗಟ್ಟಿನಲ್ಲಿರದೆ, ಚಾರಿತ್ರಿಕ ಸತ್ಯಗಳನ್ನು ಆಧರಿಸಿರಬೇಕು ಎನ್ನುವ ಎಚ್ಚರ ಅವರಿಗಿದೆ. ಪ್ರತಿ ಪುಟದಲ್ಲೂ ಅವರು ಉಲ್ಲೇಖಿಸಿರುವ ದಾಖಲೆಗಳು 'ಗಾಂಧಿ ಕಥನ'ದ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿವೆ ಹಾಗೂ ಚರಿತ್ರೆಯನ್ನು ಕಟ್ಟಬೇಕಾದ ಸರಿಯಾದ ಮಾದರಿಯನ್ನು ನಮ್ಮ ಮುಂದಿರಿಸಿವೆ.

ಗುಹ ಅವರ ಈ ಎರಡು ಸಂಪುಟಗಳ ವಿಶೇಷ ಇರುವುದು, ಗಾಂಧಿ ಅವರ ಪತ್ರಸಂಗ್ರಹವನ್ನು ಬಳಸಿಕೊಂಡಿರುವುದರಲ್ಲಿ. ಈ ಮೊದಲಿನ ಚರಿತ್ರಕಾರರು ಗಾಂಧಿ ಜೀವನಚರಿತ್ರೆಯನ್ನು ಕಟ್ಟಲು 'ಕಲೆಕ್ಟೆಡ್ ವರ್ಕ್ಸ್'ನ 97 ಸಂಪುಟಗಳಿಗೆ ಋಣಿಯಾಗಿದ್ದಾರೆ. ಗುಹ ಅವರು ಆ ಸಂಗ್ರಹಗಳ ಜೊತೆಗೆ, ಪ್ಯಾರೇಲಾಲ್ ನಯ್ಯರ್ ಅವರು ಸಂಗ್ರಹಿಸಿದ್ದ, ಈಗ 'ನೆಹರೂ ಸ್ಮಾರಕ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ'ದ ಭಾಗವಾಗಿರುವ ಗಾಂಧೀಜಿಯವರ ಪತ್ರ ವ್ಯವಹಾರದ ಬಹುದೊಡ್ಡ ಸಂಗ್ರಹ ಬಳಸಿಕೊಂಡಿದ್ದಾರೆ. ಆ ಸಂಗ್ರಹವನ್ನು ಬಳಸಿಕೊಂಡ 'ಮೊದಲ ಗಾಂಧಿ ಚರಿತ್ರಕಾರ' ಎಂದು ಗುಹ ತಮ್ಮನ್ನು ಕರೆದುಕೊಂಡಿರುವುದಕ್ಕೆ ಸಾಕ್ಷ್ಯಗಳು ಕೃತಿಯುದ್ದಕ್ಕೂ ಇವೆ.

ಗುಹ ಅವರ ಈ ಸಂಪುಟಗಳು ನಾವು ಈಗಾಗಲೇ ಅರಿತಿರುವ ಗಾಂಧಿಯನ್ನು ಮತ್ತಷ್ಟು ಆಳವಾಗಿ ಅರ್ಥೈಸಿಕೊಳ್ಳಲು ನೆರವು ನೀಡುತ್ತವೆ. ವ್ಯಕ್ತಿಯಾಗಿ ಮಾತ್ರವಲ್ಲದೆ, ಮೌಲ್ಯಗಳ ಸಂಘರ್ಷದ ರೂಪದಲ್ಲಿ ಚಿತ್ರಣಗೊಂಡಿರುವ ಈ ಕೃತಿ, ಗಾಂಧಿ ಕಥನದ ಜೊತೆಗೆ ಭಾರತದ ಸ್ವಾತಂತ್ರ್ಯ ಚಳವಳಿ ಗಳಿಸಿದ್ದು ಹಾಗೂ ಬಿಟ್ಟುಕೊಟ್ಟಿದ್ದರ ವಿಶ್ಲೇಷಣೆಯೂ ಆಗಿದೆ. ಅಸಂಖ್ಯ ಜನರ ತ್ಯಾಗ-ಬಲಿದಾನದ ಸ್ವಾತಂತ್ರ್ಯ ಚಳವಳಿ ವೈಯಕ್ತಿಕ ಹಿತಾಸಕ್ತಿಗಳ ಹೋರಾಟವೂ ಆಗಿದ್ದುದನ್ನು ಕೃತಿ ಕಾಣಿಸುತ್ತದೆ. ಸ್ವಾತಂತ್ರ್ಯ ಚಳವಳಿಯೊಂದಿಗೆ ಸತ್ಯ–ಅಹಿಂಸೆಯ ಮೌಲ್ಯಗಳನ್ನು ಕಸಿ ಮಾಡಿದ್ದ ಗಾಂಧೀಜಿ ಎನ್ನುವ ಜಾದೂಗಾರ, ತನ್ನ ಬೆಳೆ ತನ್ನ ಕಣ್ಣಮುಂದೆಯೇ ಗಾಸಿಗೊಳ್ಳುವುದನ್ನು ಹತಾಶನಾಗಿ ನೋಡುವುದನ್ನು ಹಾಗೂ ಭರವಸೆಗಳೆಲ್ಲ ಹುಸಿಯಾದ ಸಂದರ್ಭದಲ್ಲೂ ಮತ್ತೆ ಮತ್ತೆ ಕನಸು ಕಾಣುತ್ತ ಮುನ್ನಡೆಯುವ ಅಪೂರ್ವ ಕಥನವನ್ನು ಗುಹ ಚಿತ್ರಿಸುತ್ತಾರೆ. ಜೀಸಸ್‌ನಂತೆ, ಬುದ್ಧನಂತೆ ಕಾಣಿಸುವ ಗಾಂಧಿಯನ್ನು ಕಪಟ ವೇಷಧಾರಿಯಾಗಿ, ಸರ್ವಾಧಿಕಾರಿಯಾಗಿ, ಕುಟಿಲ ರಾಜಕಾರಣಿಯಾಗಿ ಕಂಡವರೂ ಇದ್ದಾರೆ. ಗಾಂಧಿಯ ಸಮರ್ಥಕರೊಂದಿಗೆ ಟೀಕಾಕಾರರ ಅಭಿಪ್ರಾಯಗಳಿಗೂ ಅವಕಾಶ ದೊರಕಿಸಿಕೊಡುವ ಮೂಲಕ, ಓದುಗರು ಗಾಂಧಿಯ ಕುರಿತ ತಮ್ಮ ನಂಬಿಕೆಗಳನ್ನು ಒರೆಗೆ ಹಚ್ಚಿಕೊಳ್ಳುವ ಅವಕಾಶವೊಂದನ್ನು ಲೇಖಕರು ಮುಕ್ತವಾಗಿಟ್ಟಿದ್ದಾರೆ.


ಕಲೆ: ಎಂ.ಎಸ್. ಮೂರ್ತಿ

ಗಾಂಧಿಯನ್ನು ಹೀಗಳೆವವರು ಅವರ ಜೀವಿತ ಕಾಲದಲ್ಲಿ ಸಾಕಷ್ಟಿದ್ದರಷ್ಟೆ. ಆ ಪರಂಪರೆ ಈಗಲೂ ಜೀವಂತವಾಗಿರುವುದನ್ನು 'ಗುಹ ಕಥನ' ಅಪರೋಕ್ಷವಾಗಿ ಓದುಗರ ಗಮನಕ್ಕೆ ತರುತ್ತದೆ. ಹಿಂದೂ– ಮುಸ್ಲಿಂ ಸಮುದಾಯದ ಸಹನಡಿಗೆಯಲ್ಲಿ ದೇಶದ ಹಿತ ಅಡಗಿದೆ ಎನ್ನುವ ಗಾಂಧಿಯ ನಂಬಿಕೆ ಅವರ ಜೀವಿತ ಕಾಲದಲ್ಲಿಯೇ ಮತ್ತೆ ಮತ್ತೆ ಪರೀಕ್ಷೆಗೊಳಗಾದುದನ್ನು ದಾಖಲಿಸಿದ್ದಾರೆ. ಈ ವಿರೋಧಾಭಾಸದ ಕಥನ, ಗಾಂಧಿ ಮನುಕುಲಕ್ಕೆ ಏಕೆ ಅಗತ್ಯ ಎನ್ನುವುದನ್ನು ಸೂಚಿಸುವುದರೊಂದಿಗೆ, ಮತೀಯವಾದ ಜೀವನದ ಭಾಗವೇ ಆಗಿರುವಂತಿರುವ ಸಂದರ್ಭದಲ್ಲಿ ದೇಶ ಯಾವ ದಿಕ್ಕಿನಲ್ಲಿ ಸಾಗಬೇಕು ಎನ್ನುವುದರ ಹೊಳಹುಗಳೂ ಗಾಂಧಿ ಕಥನದಲ್ಲಿ ನಿಚ್ಚಳವಾಗಿ ಕಾಣಿಸುತ್ತದೆ. ಹೊಸ ತಲೆಮಾರಿಗೆ ಅಗತ್ಯವಾಗಿದ್ದ ಗಾಂಧಿಯ ನಿರ್ವಚನವೂ ಗುಹ ಅವರ ಮೂಲಕ ಸಾಧ್ಯವಾಗಿದೆ.

ಗಾಂಧಿ ಕಥನವನ್ನು ಕನ್ನಡಕ್ಕೆ ಸರಳವಾಗಿ ತರಲು ಪ್ರಯತ್ನಿಸಿರುವ ಅನುವಾದಕರಾದ ಎಂ.ಸಿ. ಪ್ರಕಾಶ್ ಅವರ ಶ್ರಮ ಮೆಚ್ಚುಗೆಗೆ ಅರ್ಹ. ಆದರೆ, ಉದ್ದಕ್ಕೂ ಎದುರಾಗುವ ಉದ್ದುದ್ದದ ವಾಕ್ಯಸರಣಿಗಳು ಹಾಗೂ ತಪ್ಪಿಸಬಹುದಾಗಿದ್ದ ಪುನರಾವರ್ತನೆಗಳು ದೀರ್ಘ ಓದಿನ ಓಟಕ್ಕೆ ನಿಯಂತ್ರಕಗಳಂತಿವೆ. ಇದನ್ನು ಅನುವಾದದ ಮಿತಿಯೆನ್ನುವುದರ ಬದಲು, ಕನ್ನಡ ಪುಸ್ತಕಲೋಕ ವೃತ್ತಿಪರ ಸಂಪಾದಕರನ್ನು ಹೊಂದಬೇಕಾದ ಅಗತ್ಯದ ಸೂಚನೆಯಾಗಿದೆ ಎನ್ನುವುದೇ ಹೆಚ್ಚು ಸೂಕ್ತ.


ಸಾಂಸ್ಕೃತಿಕ ವಿರಹಕ್ಕೆ ರಸಿಕತೆಯ ಉಪಚಾರ

ಎಸ್. ಸೂರ್ಯಪ್ರಕಾಶ ಪಂಡಿತ್

'ಮೋಡದೊಡನೆ ಮಾತುಕತೆ' – ಈ ಕೃತಿಯ ಪರಿಚಯವನ್ನು ಮಾಡಿಕೊಡುವಾಗ ಮೊದಲು 'ಯಾವ ಮಾತಿನಿಂದ ಆರಂಭಿಸುವುದು' ಎಂಬ ಪ್ರಶ್ನೆ ಎದುರಾಯಿತು. ಆಗ ಕಣ್ಣಿಗೆ ಬಿದ್ದದ್ದು ಪುತಿನ ಅವರ ಈ ಮಾತು: 'ಪದ್ಯದಲ್ಲಿ ವಾಸ್ತವ ಹುಚ್ಚಿಗೇರಬೇಕು; ಗದ್ಯದಲ್ಲಿ ಹುಚ್ಚು ವಾಸ್ತವಕ್ಕಿಳಿಯಬೇಕು.' 'ಮೋಡದೊಡನೆ ಮಾತುಕತೆ'ಯು ಕಾಳಿದಾಸನ 'ಮೇಘದೂತ'ವನ್ನು ಕುರಿತು ಕೆ.ವಿ. ಅಕ್ಷರ ಅವರು ರಚಿಸಿರುವ ವಿವರಣೆ, ಪದ್ಯಾನುವಾದ ಸಹಿತ. ಮೇಘದೂತದಲ್ಲಿ ವಾಸ್ತವವು ಹುಚ್ಚಿಗೇರಿರುವುದನ್ನು ನೋಡುತ್ತೇವೆ. ಪ್ರೇಮದಲ್ಲಿ ವಿರಹವೂ ಸಹಜಾವಸ್ಥೆ. ಆದರೆ ಪ್ರೇಮಿಯೊಬ್ಬ ಪ್ರಿಯತಮೆಗೆ ವಿರಹದ ಸಂದೇಶವನ್ನು ಮೋಡದ ಮೂಲಕ ಕಳುಹಿಸಲು ತವಕಿಸುತ್ತಾನೆ ಎಂದರೆ, ಅದು 'ವಾಸ್ತವವು ಹುಚ್ಚಿಗೇರಿದೆ' ಎಂದೇ ಅಲ್ಲವೆ! ಈ 'ಹುಚ್ಚಿನ' ವಾಸ್ತವಾಂಶಗಳನ್ನು ಕಂಡುಹಿಡಿಯುವ ಪ್ರಯತ್ನವೇ ಅಕ್ಷರ ಅವರ ಗದ್ಯವಿವರಣೆ.

ಕಾಳಿದಾಸನ 'ಮೇಘದೂತ' ಸಾವಿರಾರು ವರ್ಷಗಳಿಂದ ವಿಶ್ವಸಾರಸ್ವತಲೋಕದಲ್ಲಿ ಸಹೃದಯರನ್ನು ಆನಂದಿಸುತ್ತ ಬಂದಿದೆ. ಪ್ರಾಚೀನ ಭಾರತೀಯ ಕಾವ್ಯಪರಂಪರೆಯ ಸ್ವರೂಪ ಏನು; ಈ ಪರಂಪರೆ ಇಂದಿಗೂ ಹೇಗೆ ಸಲ್ಲುತ್ತದೆ – ಎಂಬ ಎರಡು ಪ್ರಶ್ನೆಗಳು ಅಕ್ಷರ ಅವರನ್ನು ಮುಖ್ಯವಾಗಿ ಕಾಡಿದಂತಿವೆ. ಸಮಾಧಾನವನ್ನು ಕಂಡುಕೊಳ್ಳಲು ಅವರು ಮೇಘದೂತವನ್ನು ಆರಿಸಿಕೊಂಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಭಾಷೆ–ಸಂಸ್ಕೃತಿಗಳ ಸುತ್ತ ಹಲವು ನೆಲೆಗಳ ವಾದ–ವಿವಾದಗಳು ನಡೆಯುತ್ತಿವೆ. ಸಂಸ್ಕೃತವನ್ನು ಕನ್ನಡಕ್ಕೆ ವಿರೋಧ ಎಂಬಂತೆ ಚಿತ್ರಿಸುವ ಹುನ್ನಾರ, ಕನ್ನಡವನ್ನೇ ಕುಬ್ಜಗೊಳಿಸುವ ಉತ್ಸಾಹಗಳು ನಮ್ಮ ನಡುವೆ ಕಾಣುತ್ತಿವೆ. 'ನಮಗೆ ಸಂಸ್ಕೃತ ಏಕೆ ಬೇಕು' ಎಂಬುದರ ಜೊತೆಗೆ 'ಸಂಸ್ಕೃತ-ಕನ್ನಡಗಳ ನಂಟು ಏಕೆ, ಹೇಗೆ' ಎಂಬ ನಮ್ಮ ಕಾಲದ ಬೌದ್ಧಿಕ ಒತ್ತಡಕ್ಕೆ ಉತ್ತರವನ್ನು – ತನಗೆ ಅರಿವಿಲ್ಲದೆಯೇ – 'ಮೋಡದೊಡನೆ ಮಾತುಕತೆ' ತಿಳಿಸಿಕೊಡುವಂತಿದೆ. ಸಮಕಾಲೀನ ಸಮಾಜ ಎದುರಿಸುತ್ತಿರುವ 'ಸಾಂಸ್ಕೃತಿಕ ವಿರಹ'ಕ್ಕೆ ಬೇಕಾದ ಉಪಚಾರ ಒದಗುವುದು ಪ್ರಾಚೀನ ಸಂಸ್ಕೃತವಾಙ್ಮಯದ ಅನುಸಂಧಾನದಿಂದಲೇ ಹೌದು ಎಂಬ ನಂಬಿಕೆ ಈ ಕೃತಿಯಲ್ಲಿದೆ. ನಮಗೆ ಸಂಸ್ಕೃತ ಬೇಕು. ಹಾಗಾದರೆ ಕನ್ನಡಕ್ಕೆ ಈ ಸಂಸ್ಕೃತ ಹೇಗೆ ಬೇಕು? 'ಹಿಂದೆ ಸಂಸ್ಕೃತದಿಂದ ಕನ್ನಡ ಬದುಕಿತು; ಮುಂದಕ್ಕೆ ಕನ್ನಡದಲ್ಲಿ ಸಂಸ್ಕೃತ ಬದುಕಬೇಕು' ಎಂಬ ಡಿವಿಜಿ ಅವರ ಮಾತಿನ ಅರ್ಥವನ್ನು ಅಕ್ಷರ ಅವರ ಕೃತಿಯಲ್ಲಿ ನೋಡಬಹುದು.



ಮೋಡದೊಡನೆ ಮಾತುಕತೆ
ಲೇ: ಅಕ್ಷರ ಕೆ. ವಿ.
ಪ್ರ: ಬಹುವಚನ
ಸಂ: 63625 88659

'ಹಳೆಗಾಲದ ಪಠ್ಯಗಳನ್ನು ನಮ್ಮ ಕಾಲದ ಒಂದೊಂದು ತಲೆಮಾರು ತನ್ನದೇ ಹುಡುಕಾಟದ ಅಂಗವಾಗಿ ಮರು-ಆವಿಷ್ಕಾರ ಮಾಡಿಕೊಳ್ಳುವುದು ತುಂಬ ತುರ್ತಾಗಿ ನಡೆಯಬೇಕಾದ ಒಂದು ಸಾಂಸ್ಕೃತಿಕ ಅಗತ್ಯ' ಎಂಬ ವ್ರತಬುದ್ಧಿಯಿಂದ ಅಕ್ಷರ ಮೇಘದೂತದ ವ್ಯಾಖ್ಯಾನದಲ್ಲಿ ತೊಡಗಿದ್ದಾರೆ. ಮೇಘದೂತಕ್ಕೆ ಸಂಸ್ಕೃತದಲ್ಲಿಯೇ ಹಲವು ವ್ಯಾಖ್ಯಾನಗಳಿವೆ; ನಮ್ಮ ಕಾಲದಲ್ಲಿ ಹಿಂದಿಯಲ್ಲಿ ಹಜಾರೀ ಪ್ರಸಾದ್ ದ್ವಿವೇದಿ ಒಂದು ಅಪೂರ್ವವಾದ ವ್ಯಾಖ್ಯಾನವನ್ನು ರಚಿಸಿದ್ದಾರೆ. ಇವೆಲ್ಲವೂ ಅಕ್ಷರ ಅವರಿಗೆ ನೆರವಾಗಿವೆ; ಜೊತೆಗೆ ಶ್ರೀರಾಮ ಭಟ್ ಅವರ ತರಗತಿಗಳು, ಅಕ್ಷರ ಅವರ ಬೇರೆಯ ಓದು, ನಾಟಕರಂಗದಲ್ಲಿಯ ಅವರ ಅನುಭವಗಳೂ ಕೈಹಿಡಿದಿವೆ. ಎಲ್ಲಕ್ಕಿಂತಲೂ ಮಿಗಿಲಾಗಿ ಅವರಲ್ಲಿ ವಿದ್ಯಾರ್ಥಿಯ ಕುತೂಹಲ ಮತ್ತು ಶಿಸ್ತು ಎದ್ದುಕಾಣುತ್ತವೆ. ಹೀಗಾಗಿ ಅವರ ಬರಹದಲ್ಲಿ ಸಹೃದಯತೆಯ ಸಂಭ್ರಮವನ್ನೂ ವಿದ್ಯಾರ್ಥಿಯ ವಿನಯವನ್ನೂ ಕಾಣುತ್ತೇವೆ. 'ಮೇಘದೂತದಂಥ ಕಾವ್ಯವನ್ನು ಮೊದಲ ಸಲ ಅವಲೋಕಿಸುವುದೇ ನಮ್ಮ ಜೀವನದ ವಿಶೇಷ ಸಂಭ್ರಮದ ಮಹಾಘಟನೆ' ಎಂಬ ಗಯಟೆಯ ಮಾತು ಅವರ ಬರಹದಲ್ಲಿ ಸ್ಪಷ್ಟವಾಗುತ್ತದೆ. ಹೀಗಿದ್ದರೂ ಕೆಲವೊಮ್ಮೆ ಅವರು ಕಾವ್ಯಮಂದಿರದ ಒಳಗೆ ಪ್ರವೇಶಿಸಲು ಸ್ವಲ್ಪ ಹೆದರುತ್ತಿರಬಹುದು ಎಂದೂ ಅನಿಸದಿರದು. ಈ ಹೆದರಿಕೆಗೂ ಸಕಾರಣ ಇದೆಯೆನ್ನಿ!

ಒಳನೋಟ

ಸಂಸ್ಕೃತಪ್ರಪಂಚದ ಅಗಾಧತೆಯ ಅರಿವು ಅವರಲ್ಲಿ ಸದಾ ಎಚ್ಚರವಾಗಿರುವುದು ಖಂಡಿತ. ಹೀಗಾಗಿಯೇ, ಯಕ್ಷನು ಮೋಡಕ್ಕೆ ಒದಗಿಸಿದ ಸಾಂಸ್ಕೃತಿಕ–ಸಾಹಿತ್ಯಾತ್ಮಕ ನಕ್ಷೆಗಳಿಗಿಂತಲೂ ಅವರ ಆಖ್ಯಾನ–ವ್ಯಾಖ್ಯಾನಯಾನದಲ್ಲಿ ಕೆಲವೆಡೆ 'ಜಿಪಿಎಸ್' ಸೌಲಭ್ಯವನ್ನು ಬಳಸಿದಂತೆ ಕಾಣುತ್ತದೆ. ಈ ಮಾತು ಅವರು ವಿವರಣೆಯಲ್ಲಿ ಬಳಸಿರುವ ಆಧುನಿಕ ಉದಾಹರಣೆ-ವಿವರಣೆಗಳನ್ನು ಉದ್ದೇಶಿಸಿದ್ದಲ್ಲ; ವಸ್ತುತಃ ಇವು ಸಾರ್ಥಕವಾಗಿಯೇ ಬಳಕೆಯಾಗಿವೆ. ಕಂಬಾರ, ಅಡಿಗ, ಬೇಂದ್ರೆಯವರಂಥ ಆಧುನಿಕರ ಪ್ರತಿಭೆಯಲ್ಲಿ ಅವರು ಕಾಣುವ ಕಾವ್ಯಪರಂಪರೆಯ ಸಾತತ್ಯ ಅವರ ವಿಶಿಷ್ಟ ಕಾಣ್ಕೆ. 'ಕಚ್ಚಿತ್ ಸೌಮ್ಯ' ಎಂಬ ಪದ್ಯಕ್ಕೆ ವಿವರಣೆ ನೀಡುವಾಗ ಅವರಿಗೆ ಒದಗಿರುವ ನಾಟಕದ ವಿವರಗಳೂ ಪದ್ಯದ ಆಯಾಮವನ್ನು ಹಿಗ್ಗಿಸಿವೆ.

'ಈ ಕೃತಿಯೊಳಗೆ ಮೋಡವು ಬರಿಯ ಮೋಡವೂ ಅಲ್ಲ, ಸಂದೇಶವು ಬರಿಯ ಸಂದೇಶವೂ ಅಲ್ಲ' ಎಂಬ ಪ್ರತಿಜ್ಞೆಯನ್ನು ಅವರು ಸಮರ್ಥವಾಗಿಯೇ ಸಾಧಿಸಿದ್ದಾರೆ. ಅವರು ಬಳಸುವ ಸಿನಿಮಾದ ಪರಿಭಾಷೆ, ಅಲಂಕಾರತತ್ತ್ವಗಳ ಪರಾಮರ್ಶೆ, ನಮ್ಮ ಕಾಲದ ತಾತ್ತ್ವಿಕ ಸಿದ್ಧಾಂತಗಳು, ಆಧುನಿಕತೆಯ ತವಕ–ತಲ್ಲಣಗಳು ಮೇಘದೂತವನ್ನು ಸಾರ್ವಕಾಲಿಕ ಕೃತಿಯನ್ನಾಗಿ ಕಂಡರಿಸುವುದರಲ್ಲಿ ಯಶಸ್ವಿಯಾಗಿವೆ; ನಮ್ಮ ಕಾಲಕ್ಕೆ ಅನಿವಾರ್ಯವಾಗಿದ್ದ ಇಂಥದೊಂದು ಕೃತಿಯನ್ನು ಅವರು ಒದಗಿಸಿದ್ದಾರೆ. ಶ್ರೀರಾಮ ಭಟ್ ಅವರ ಟಿಪ್ಪಣಿಗಳು ಸಂಸ್ಕೃತ ಕಾವ್ಯಪರಂಪರೆಯನ್ನು ಆರ್ಷೇಯ ಸಂಬಂಧವನ್ನು ಎತ್ತಿಹಿಡಿದಿವೆ. 'ಮೇಘದೂತದ ಓದು ಕಾಳಿದಾಸನ ಮಹಾಕಾವ್ಯ ನಾಟಕಗಳ ಓದಿಗೆ ಬೇಕಾದ ಶಕ್ತಿ ನೀಡುತ್ತದೆ' ಎಂಬ ಅವರ ಮಾತು ಈ ಕೃತಿಯ ಭರತವಾಕ್ಯವಾಗಿರುವುದೂ ಧ್ವನಿಪೂರ್ಣವಾಗಿದೆ.


ಕೊನೆಯ ಮಾತು: ಈ ಕೃತಿಯನ್ನು ನೋಡಿದ ಕೂಡಲೇ ಮೂಡಿದ ಮೊದಲ ಮಾತು – ಪುಸ್ತಕದ ಮುದ್ರಣಕ್ಕೆ 'ಪಾರ್ಚ್‌ಮೆಂಟ್' ಕಾಗದದ ಬದಲಿಗೆ 'ಎನ್‌ಎಸ್' ಕಾಗದವನ್ನು ಬಳಸಿಕೊಂಡಿದ್ದಿದ್ದರೆ ಬೆಲೆಯಲ್ಲಿ ಕನಿಷ್ಠ ₹50ಗಳಷ್ಟಾದರೂ ಕಡಿಮೆಯಾಗುತ್ತಿತ್ತೇನೋ!

ಮೊದಲ ಓದು

ಕರಕುಶಲ ಜಗತ್ತಿನ ವಿರಾಟ್ ದರ್ಶನ

ಕರ್ನಾಟಕದ ಸಾಂಸ್ಕೃತಿಕ ಪರಂಪರೆಯಲ್ಲಿ ಕರಕುಶಲ ಕಲೆಗಳಿಗೆ ವಿಶಿಷ್ಟ ಸ್ಥಾನವಿದೆ. 'ಕರಕುಶಲ' ಎಂದರೆ ಮನುಷ್ಯನ ಹೃದಯ, ಬುದ್ಧಿ ಮತ್ತು ಕೈಗಳು ಏಕೀಭವಿಸಿ ತನ್ಮಯತೆಯಿಂದ ಕಾರ್ಯ ನಿರ್ವಹಿಸುವ ಅಪೂರ್ವ ಶ್ರಮದ ಪ್ರತಿಫಲ. ಈ ನೆಲದ ವೈವಿಧ್ಯಮಯ ಕರಕುಶಲ ಕಲೆಗಳನ್ನು ನಾಡಿಗೆ ಪರಿಚಯಿಸುವ ಕೃತಿಯೇ ಬಿ.ಎಂ. ಚಂದ್ರಶೇಖರಯ್ಯ ಅವರ 'ಕರ್ನಾಟಕದ ಕರಕುಶಲ ಕಲೆಗಳು'. ಕರಕುಶಲ ಕಲೆಯೆಂದರೆ ಮಕ್ಕಳ ಆಟಿಕೆ ಅಥವಾ ಮನರಂಜನೆಯ ವಸ್ತುಗಳ ತಯಾರಿಕೆ ಮಾತ್ರವಲ್ಲ. ಮನುಷ್ಯನ ಅಗತ್ಯಗಳಿಗೆ ತಕ್ಕಂತೆ ರೂಪುಗೊಂಡ ಹಲವು ಬಗೆಯ ವಸ್ತುಗಳಿಗೆ ಕಲಾತ್ಮಕ ಮೆರುಗು ನೀಡುವ ಒಂದು ರೀತಿಯ ಧ್ಯಾನ. ಅಂತಹ ಧ್ಯಾನದಲ್ಲಿ ಅರಳಿದ ಕರ್ನಾಟಕದ ಸಂಸ್ಕೃತಿಯನ್ನು ಈ ಕೃತಿಯು ಘನೀಕರಿಸಿ ಹಿಡಿದಿಟ್ಟಿದೆ ಎಂದರೆ ತಪ್ಪಾಗಲಾರದು.

ರಾಜ್ಯದ ಕರಕುಶಲ ಕಲೆಗಳಲ್ಲಿ ವೈವಿಧ್ಯ ಮೇಳೈಸಿದೆ. ಚಿತ್ರಕಲೆ, ಕುಂಭಕಲೆ, ಮರದ ಕೆತ್ತನೆ, ಕಲ್ಲು ಕೆತ್ತನೆ, ಲೋಹ ಶಿಲ್ಪ, ಆಭರಣಗಳ ತಯಾರಿಕೆ, ಮಣ್ಣಿನ ಮೂರ್ತಿ, ಮಡಕೆ–ಕುಡಿಕೆಗಳ ತಯಾರಿಕೆ, ದಂತ ಕೆತ್ತನೆ, ಹುದುಗು ಕಲೆ, ಜಾನಪದ ಗೊಂಬೆ, ಕೈಮಗ್ಗ, ಜವಳಿ, ಕಸೂತಿ ಕೆಲಸ, ಆಟಿಕೆ, ಕಂಬಳಿ ಮತ್ತು ಗುಡಾರಗಳ ನೇಯ್ಗೆ, ಬುಟ್ಟಿ, ಚಾಪೆಗಳ ಹೆಣಿಗೆ ಮೊದಲಾದ ನೂರಾರು ಕಲೆಗಳ ಒಳನೋಟವನ್ನು ಇಲ್ಲಿ ನೀಡಲಾಗಿದೆ. ಇಳಕಲ್ ಸೀರೆಗಳ ಸೊಗಸನ್ನು 'ನೂಲಿನಲ್ಲಿ ನೇಯ್ದ ಕಾವ್ಯ' ಅಧ್ಯಾಯದಲ್ಲಿ ಬಣ್ಣಿಸಲಾಗಿದೆ.



ಕರ್ನಾಟಕದ ಕರಕುಶಲ ಕಲೆಗಳು
ಲೇ:ಬಿ.ಎಂ. ಚಂದ್ರಶೇಖರಯ್ಯ
ಪ್ರ: ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ
ಸಂ: 94498 86390

ಅತಿಪ್ರಮುಖವಾದ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳನ್ನು ಆಮೂಲಾಗ್ರವಾಗಿ ಚರ್ಚಿಸಲಾಗಿದೆ. ಗೊಮ್ಮಟೇಶ್ವರ, ನಟರಾಜ, ಮಹಿಷಮರ್ಧಿನಿ, ಐಹೊಳೆಯ ಮೂರು ಗುಹಾಂತರ್ದೇವಾಲಯಗಳು, ವೆಲ್ಲೂರಿನ ಜಲಕಂಠೇಶ್ವರ ದೇವಾಲಯದ ಆವರಣದಲ್ಲಿರುವ ಕಲ್ಯಾಣ ಮಂಟಪ, ಹಂಪಿಯ ಕಲ್ಲಿನ ರಥ, ಅಜ್ಞಾತ ಶಿಲಾಬಾಲಿಕೆಯರ ಬೀಡಾದ ಜಲಸಂಗ್ವಿಯನ್ನು ಪರಿಚಯಿಸಲಾಗಿದೆ. ಗಂಗ ಶೈಲಿ, ಹೊಯ್ಸಳ ಶೈಲಿ, ವಿಜಯನಗರ ಶೈಲಿ, ಬ್ರಿಟಿಷರು ಹಾಗೂ ಇಸ್ಲಾಂ ವಾಸ್ತುಶಿಲ್ಪದ ಮೇಲೂ ಬೆಳಕು ಚೆಲ್ಲಲಾಗಿದೆ. ನಿರ್ದಿಷ್ಟ ಕರಕುಶಲ ಕಲೆಗಳಿಗೆ ಸಂಬಂಧಿಸಿದ ಕೆಲವು ಅಧ್ಯಯನಗಳನ್ನು ಲೇಖಕರು ಇಲ್ಲಿ ಪ್ರಸ್ತುತಪಡಿಸಿದ್ದಾರೆ. ಅವರು ಬಹು ವರ್ಷಗಳ ಹಿಂದೆ ಇದೇ ಹೆಸರಿನ ಕೃತಿಯನ್ನು ಮಕ್ಕಳಿಗಾಗಿ ಪರಿಚಯಿಸಿದ್ದರು.


ಸುರಿದ 'ಮಳೆ'ಯಲ್ಲಿ ಬಯಲಾದ ಬಣ್ಣ

ಅಭಿಲಾಷ್ ಪಿ.ಎಸ್.

'ಧೋ' ಎಂದು ಸುರಿಯುವ ಮಳೆಯನ್ನು ಭದ್ರವಾದ ಸ್ಥಾವರದಲ್ಲಿ, ಎತ್ತರದ ತಾಣದಲ್ಲಿ ಕುಳಿತು ಆಸ್ವಾದಿಸುವುದು ತುಂಬಾ ಸುಲಭ. ಅದೇ ಮಳೆಗೆ ಸಿಕ್ಕು ಮನೆ ಉರುಳಿಬಿದ್ದ, ಪ್ರೀತಿಪಾತ್ರರಾದವರನ್ನು ಕಳೆದುಕೊಂಡ, ಹೊಲದಲ್ಲಿ ಬೆಳೆದು ನಿಂತಿದ್ದ ಬೆಳೆ ಎಲ್ಲವೂ ತೇಲಿಹೋದ, ಬದುಕೇ ಮೂರಾಬಟ್ಟೆಯಾದ ಸ್ಥಿತಿಯಲ್ಲಿ ನಾವಿದ್ದರೆ? ಉತ್ತರ ಕರ್ನಾಟಕದ ಹಲವು ಜಿಲ್ಲೆಗಳು ದಶಕದ ಹಿಂದೆ ಅಂತಹ ಕುಂಭದ್ರೋಣ ಮಳೆ ಮತ್ತು ಅದರಿಂದ ಉಂಟಾದ ಮಹಾಪೂರದಲ್ಲಿ ಇದೇ ರೀತಿ ತತ್ತರಿಸಿ ಹೋಗಿದ್ದವು. ಅಂತಹ ಮಳೆಯ ಅನುಭವಗಳೇ ಚಿದಾನಂದ ಸಾಲಿ ಅವರಿಂದ 'ಮಳೆ' ಎಂಬ ನೀಳ್ಗಥೆಯಾಗಿ ಅರಳಿವೆ.

'ಮಳೆ' ಕಥೆಯೂ ಹೌದು. ಅದೇ ಉಸಿರಿನಲ್ಲಿ ವಾಸ್ತವಿಕ ಅನುಭವವೂ ಹೌದು. ಆಗೊಮ್ಮೆ ಈಗೊಮ್ಮೆ ಆರ್ಭಟಿಸಿ ಸುರಿಯುವ ಮಹಾಮಳೆ ಎನ್ನುವುದು ಸರ್ಕಾರದ ಆಡಳಿತ ವೈಖರಿ, ಜನರ ಆಕ್ರಂದನ ಹಾಗೂ ಸ್ವಭಾವದ ನಿಜ ಬಣ್ಣವನ್ನು ತೋರಿಸುವ ಸಾಧನವೂ ಹೌದು. ಹಾಗೆ ಬಣ್ಣ ಕಳೆದುಕೊಂಡು ಬೆತ್ತಲೆಯಾಗಿ ನಿಂತವರ ಚಿತ್ರಣವನ್ನು ಈ ಕಥೆ ಮಳೆಯಷ್ಟೇ ಹದವಾಗಿ ಕಟ್ಟಿಕೊಡುತ್ತದೆ. ಇದನ್ನು ಲೇಖಕರು ನೀಳ್ಗಥೆ ಎಂದು ಕರೆದಿದ್ದಾರಾದರೂ ಮುನ್ನುಡಿಯಲ್ಲಿ ಕೇಶವ ಮಳಗಿ ಅವರು ಹೇಳಿದಂತೆ 'ಮಳೆ' ಒಂದು ರೀತಿಯ ಕಾದಂಬಕಥನ.

'ಆಡಿನಮರಿ ನುಂಗಿದ ಆಯಾಸದಲ್ಲಿ ಸಂತೃಪ್ತಿ ಮತ್ತು ಉದಾಸೀನ ಬೆರೆತಂತೆ ಬಿದ್ದುಕೊಂಡಿರುವ ಹೆಬ್ಬಾವಿನ ಹಾಗೆ, ಈ ಪ್ರದೇಶದಲ್ಲಿ ರಣಬಿಸಿಲೆಂಬುದು ಮೈಚಾಚಿ ಮಲಗಿಕೊಂಡಿರುತ್ತದೆ'– ಹೀಗೆ ಬಿಸಿಲೂರು ಬಯಲು ಸೀಮೆಯನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾ 2009ರಲ್ಲಿ ಬಯಲು ಸೀಮೆಯಲ್ಲಿ ಸುರಿದ ಮಹಾ ಮಳೆಯ ತಮ್ಮ ಅನುಭವವನ್ನು 'ತಿಮೋತಿ' ಪಾತ್ರದ ಮುಖಾಂತರ ಕಥೆಯಾಗಿಸಿದ್ದಾರೆ ಸಾಲಿ.



ಮಳೆ
ಲೇ: ಚಿದಾನಂದ ಸಾಲಿ
ಪ್ರ: ಪಲ್ಲವ ಪ್ರಕಾಶ, ಚನ್ನಪಟ್ಟಣ
ಸಂ: 8880087235

ಅವಲೋಕನ

ಹಳ್ಳಿಯಿಂದ ನಗರಕ್ಕೆ ಬಂದು ಪತ್ರಕರ್ತನಾದ ತಿಮೋತಿ ವೃತ್ತಿಯಲ್ಲಿ ದಕ್ಷ, ಪ್ರಾಮಾಣಿಕ ಮತ್ತು ಕಳಕಳಿಯುಳ್ಳವ. ಈ ಕಾರಣ ದಿಂದಾಗಿ ಈತನ ಮಾತು ನೇರ; ಮಾತ್ರವಲ್ಲ, ಚುಚ್ಚುವಂಥದ್ದು. ಹಳ್ಳಿಗಳಲ್ಲಿ ಜೀವಂತವಾಗಿರುವ ಮೇಲುಕೀಳಿನ ಬಗ್ಗೆ ಬೀಡಿ ಎಳೆದುಕೊಂಡು ವಿವರಿಸುವ ನದಿಜಾವೂರಿನ ತಾತನ ಮಾತಿನಷ್ಟೇ ಅದು ಹರಿತ. ಪ್ರತೀ ಬಾರಿಯೂ ಪ್ರವಾಹದ ಪರಿಸ್ಥಿತಿ ಎದುರಾದಾಗ ಸರ್ಕಾರ ಮಾಡುವ ಎಡವಟ್ಟುಗಳು, ಪರಿಹಾರದ ಹೆಸರಿನಲ್ಲಿ ಸಂಗ್ರಹವಾಗಿ ನಿರುಪಯುಕ್ತವಾಗುವ ವಸ್ತುಗಳು, ಹೆಸರಿಗಷ್ಟೇ ನಡೆಯುವ ದಾನ ಕಾರ್ಯಗಳು ಮುಂತಾದ 'ಕೊಳೆ', ತನ್ನ ಕುರೂಪ ತೋರಿಸುತ್ತಾ ಈ ಮಳೆ ನೀರಿನಲ್ಲಿ ಮೆರವಣಿಗೆ ಹೊರಟಿದೆ.

ಬೆನ್ನುಡಿಯಲ್ಲಿ ನಟರಾಜ ಎಸ್. ಬೂದಾಳು ಅವರೆನ್ನುವಂತೆಯೇ 'ದುರಂತ ಏನಂದ್ರೆ ವಾಸ್ತವವೇ ಇಲ್ಲಿ ಕಥೆಯಾಗಿದೆ'. ಇದರಲ್ಲಿ ಮಹಾಮಳೆ ಬಿದ್ದಿದ್ದ ಪ್ರದೇಶ, ರಾಜಕೀಯ, ಅಧಿಕಾರಿ ವರ್ಗದ ವಾಸ್ತವದ ಜೊತೆಗೆ ಪ್ರಸ್ತುತ ಪತ್ರಿಕೋದ್ಯಮದ ವಾಸ್ತವವೂ ಢಾಳಾಗಿದೆ. ತಿಮೋತಿ ಹಾಗೂ ಸಂಪಾದಕ ದೇಸಾಯಿ ನಡುವಿನ ಸಂಭಾಷಣೆ ಈ ವಾಸ್ತವಕ್ಕೆ ಸಾಕ್ಷ್ಯ. ಕೆಲಕಾಲ ಪತ್ರಕರ್ತರಾಗಿದ್ದ ಲೇಖಕರ ಅನುಭವವೂ 'ಮಳೆ'ಯಾಗಿ ಸುರಿದಿದೆ.

'ಅಪ್ಪ ಬೀಡಿಯ ತುದಿಯನ್ನು ನೆಲಕ್ಕೊರೆಸಿ ಮೂಲೆಗೆಸೆದ. ಅದು ಆತನ ಕದನವಿರಾಮದ ಮತ್ತೊಂದು ಸಂಕೇತ' – ಇಂತಹ ವಾಕ್ಯ ಬಯಲು ಸೀಮೆಯ ಮನೆ ವಾತಾವರಣವನ್ನು ಬಲು ಸಮರ್ಥವಾಗಿ ಕಟ್ಟಿಕೊಡುತ್ತದೆ. ಹೀಗೆ ಓದುತ್ತಾ ಮತ್ತೊಮ್ಮೆ ಓದಿಸುವ ಉಪಮೆಗಳಿಗೆ ಇಲ್ಲಿ ವಿಶೇಷ ಸ್ಥಾನವಿದೆ. ನಡುವೆ 'ಲೆಫ್ಟಿಸ್ಟ್ ರೈಟಿಸ್ಟ್' ಅಜೆಂಡಾಗಳ ಬಗ್ಗೆ ಪ್ರಶ್ನೆಗಳೆದ್ದು ಪುಟಗಳು ಉರುಳುವುದರೊಳಗೆ ಉತ್ತರಗಳೂ ಸಿಗುತ್ತವೆ.

'ಮಳೆ' ಎನ್ನುವುದು, 'ಯಾಕಾಗಿ ಮಳೆ ಬಂದವೋ...' ಎನ್ನುವ ಶೀರ್ಷಿಕೆಯಲ್ಲಿ 'ಪ್ರಜಾವಾಣಿ'ಯಲ್ಲೇ ಪ್ರಕಟವಾದ ನುಡಿಚಿತ್ರದ ವಿಸ್ತೃತ ಕಥೆಯಾಗಿ ಕಂಡರೂ (ಈ ವಿಸ್ತೃತ ರೂಪ 'ಸುಧಾ'ದಲ್ಲಿ ಧಾರಾವಾಹಿಯಾಗಿ ಬಂತು) ವಾಸ್ತವಕ್ಕೆ ಹಿಡಿದ ಕೈಗನ್ನಡಿಯಾಗಿದೆ. 'ಇಲ್ಲಿನ ಎಲ್ಲ ಪಾತ್ರಗಳೂ ಕಾಲ್ಪನಿಕ. ಇಲ್ಲಿನ ಘಟನೆಗೆ ನಿಜ ಜೀವನದ ಯಾವುದಕ್ಕಾದರೂ ಕಿಂಚಿತ್ತಾದರೂ ಹೋಲಿಕೆಯಿದೆ ಅನಿಸಿದಲ್ಲಿ ಅದು ಆಕಸ್ಮಿಕವೇ ಹೊರತು ಉದ್ದೇಶಪೂರ್ವಕವಲ್ಲ' ಎಂದು ಲೇಖಕರು ಆರಂಭದಲ್ಲಿ ಸ್ಪಷ್ಟಪಡಿಸುವುದೇನೋ ನಿಜ. ಆದರೆ, ಬಯಲುಸೀಮೆಯ ಪ್ರತೀ ಊರಿನ, ಪ್ರತೀ ಮನೆಯ ಕಥೆ ಇದಾಗಿದೆ ಎಂಬ ಭಾವ ಮಹಾಪೂರದ ಚಿತ್ರಣವನ್ನು ಖುದ್ದು ಕಂಡವರಿಗೆ ಅನಿಸದೇ ಇರದು.

ಭುವಿಯ ಕಿಚ್ಚು, ಮುಗಿಲ ಮಿಂಚು

10ನೇ ಪುಟದಿಂದ...

ಹಾಗೆ ನೋಡಿದರೆ 'ಊರುಕೇರಿ'ಯನ್ನು ಮೊದಲ ಬಾರಿ ಓದಿದಾಗಲೇ ನನಗೆ ನಿರಾಸೆಯಾಗಿತ್ತು. ಯಾವ ಯಾವ ಇಟ್ಟಿಗೆಗಳನ್ನು ಎಲ್ಲೆಲ್ಲಿಂದ ತಂದು ಸಿದ್ಧಲಿಂಗಯ್ಯನವರ ವ್ಯಕ್ತಿತ್ವದ ಕಟ್ಟಡ ಆಕಾರ ಪಡೆಯಿತು ಎಂಬ ಲವಲೇಶ ಸೂಚನೆಯೂ ಅಲ್ಲಿ ದೊರೆಯುವುದಿಲ್ಲ. ಇನ್ನು ಇವರ ದಲಿತ ಅನುಭವ ಲೋಕ ಕೂಡ ತೆಳು ಹಾಸ್ಯದ ಸಕ್ಕರೆ ಲೇಪ ಪಡೆದು ಒಂದಾದ ಮೇಲೊಂದು ಸ್ವಾರಸ್ಯದ ಪ್ರಸಂಗಗಳಾಗಿ ಪರ್ಯವಸಾನವಾಗಿದೆಯೇ ಹೊರತು, ನಮ್ಮ ಸಾಮಾಜಿಕ ಸಂದರ್ಭದ ಕನ್ನಡಿಯಾಗಿ ಅಲ್ಲ. ವಿಮರ್ಶಕ ಡಿ.ಆರ್. ನಾಗರಾಜರೇನೋ 'ಊರುಕೇರಿ'ಯಲ್ಲಿ 'ಬಡವರ ನಗುವಿನ ಶಕ್ತಿ' ಕಂಡು ಸಂಭ್ರಮಿಸಿದರೂ, ನನಗೇನೋ ಆ ನಗುವಿನ ಶಕ್ತಿಗೂ ಅಲ್ಲಿ ಪುರಾವೆ ಕಾಣಲಿಲ್ಲ! ಡಿಆರ್, ತಮ್ಮ ಪೂರ್ವನಿಶ್ಚಿತ ಥಿಯರಿಯನ್ನು ನಿರೂಪಿಸಲು ಸಿದ್ಧಲಿಂಗಯ್ಯನವರ ಕೃತಿಯನ್ನು ನೆಪವಾಗಿ ಬಳಸಿದಂತಿತ್ತು! 'ದಲಿತನ ಸಿಟ್ಟಿನಿಂದ ಲೋಕ ಒಡೆದು ಹೋಗುವುದು ಕೊಂಚ ಅನುಮಾನದ ಸಂಗತಿ. ಆದರೆ, ಇಲ್ಲಿ ಆತ ಗೊಳ್ಳೆಂದು ನಗುವ ರೀತಿಗೆ ಲೋಕ ಬೆಚ್ಚಿ ಜಾರಿ ಬೀಳುವುದು ಖಾತ್ರಿ' ಎನ್ನುವ ಡಿಆರ್ ಹೇಳಿಕೆ 'ಊರುಕೇರಿ'ಗೆ ಅನ್ವಯಿಸುವ ಮಾತಲ್ಲ! ಯಾಕೆಂದರೆ ಇಂದಿಗೂ, (ಮುಂದೆ ಬಹುಕಾಲವೂ) ಸಿದ್ಧಲಿಂಗಯ್ಯನವರ ಕ್ರಾಂತಿಗೀತೆಗಳು ಹೋರಾಟಗಾರರನ್ನು ಬಡಿದೆಬ್ಬಿಸುತ್ತ ಲೋಕವನ್ನು ಬೆಚ್ಚಿ ಬೀಳಿಸಿವೆಯೇ ಹೊರತು ಅವರ ತೆಳು ಹಾಸ್ಯದ ಗದ್ಯವಲ್ಲ.

ಈ ತಲೆಮಾರಿನ ಅನೇಕರು ಭರತ್ ಜುಂಜುನ್‌ವಾಲ ಹೆಸರನ್ನು ಕೇಳಿರಲಾರರು. ಭರತ್ ವಿದೇಶದಲ್ಲಿ ಓದಿ ಬಂದು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟಿನಲ್ಲಿ ಪ್ರೊಫೆಸರ್ ಆಗಿದ್ದವರು. ವಿಶೇಷವೆಂದರೆ ಅವರು ಬಡತನದ ವಿವರಗಳ ಸಾಕ್ಷಾತ್ ಗ್ರಹಿಕೆಗಾಗಿ ಸ್ವತಃ ಸ್ಲಂನಲ್ಲಿ ವಾಸವಾಗಿದ್ದರು. ಅವರೊಮ್ಮೆ ಕನ್ನಡದ ಕೆಲವು ಕಿರಿಯ ಬರಹಗಾರರನ್ನು ತಮಿಳುನಾಡಿನ ಹಳ್ಳಿಯೊಂದಕ್ಕೆ ಕರೆದೊಯ್ದು ಅಲ್ಲಿನ ದಲಿತರ ಅನುಭವಗಳನ್ನು ಹಂಚಿಕೊಳ್ಳುವ ಅವಕಾಶ ಕಲ್ಪಿಸಿದ್ದರು. ಆ ಲೇಖಕರ ತಂಡದಲ್ಲಿ ಸಿದ್ಧಲಿಂಗಯ್ಯ, ಡಿಆರ್ ಸಹ ಇದ್ದರು. ಅಲ್ಲಿನ ದಲಿತರ ಅನುಭವಗಳನ್ನು ಕೇಳಿದಾಗ ಉಕ್ಕೇರಿದ ಅಸಹಾಯಕ ಆಕ್ರೋಶವೇ ತಮ್ಮ ಹಾಡುಗಳಾಗಿ ಹೊಮ್ಮಿದವೆಂದು ಸಿದ್ಧಲಿಂಗಯ್ಯನವರೇ ಹೇಳಿಕೊಂಡಿದ್ದಾಗಿ ನಟರಾಜ ಹುಳಿಯಾರ್ ಈಚೆಗೆ ಬರೆದ ಶ್ರದ್ಧಾಂಜಲಿ ಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದರು. ಹೋಗಲಿ, ಕೊನೇ ಪಕ್ಷ ಅದರ ವಿವರಗಳಾದರೂ ಊರುಕೇರಿಯಲ್ಲಿ ಸಿಗಬಹುದೇ ಎಂದು ಹುಡುಕಿದರೆ, ಅಲ್ಲಿ ಅದರ ಪ್ರಸ್ತಾಪವೂ ಇಲ್ಲ!

ಇಂಥ ಬೋಳು ಆತ್ಮಕಥನದಿಂದ ನಾವು ಸಿದ್ಧಲಿಂಗಯ್ಯನವರ ಬಗೆಗೋ ಅಥವಾ ನಮ್ಮ ಸಾಮಾಜಿಕ ಸಂದರ್ಭದ ಬಗೆಗೋ ತಿಳಿದುಕೊಳ್ಳುವುದು ಹೇಗೆ? ಆತ್ಮಕಥನ- ಅದರಲ್ಲೂ ದಲಿತ ಆತ್ಮಕಥನವೆಂದರೆ ಭಾರತದ ಎದೆಗೆ ಬರೆ ಇಟ್ಟಂತಿರಬೇಕು ಎನ್ನುವುದು ನನ್ನ ನಿರೀಕ್ಷೆ. ಬರೆಯ ಗಾಯ ಮಾಯ್ದರೂ ಅದರ ಗುರುತು ಶಾಶ್ವತವಾಗಿ ಉಳಿದಿರಬೇಕು. ಆದರೆ ಸಿದ್ಧಲಿಂಗಯ್ಯ ಆ ಜವಾಬ್ದಾರಿಯಿಂದಲೇ ತಪ್ಪಿಸಿಕೊಂಡು ಎಲ್ಲರಿಗೂ ಪ್ರಿಯರಾಗುವ ಹಾದಿ ಹಿಡಿದರೇ ಎಂಬ ಪ್ರಶ್ನೆ ಮೊದಲ ಬಾರಿ ಊರುಕೇರಿ ಓದಿದಾಗಲೇ ಎದ್ದಿತ್ತು. ಮುಂದಕ್ಕೆ ಅವರ ರಾಜಕೀಯ ಹಾದಿ ಗಮನಿಸುತ್ತ ಹೋದವರಿಗೆ ಅದೇ ಮೂಲ ಅನುಮಾನ ಮತ್ತಷ್ಟು ಗಟ್ಟಿಯಾಗಿದ್ದೇನೂ ಅಚ್ಚರಿಯ ಸಂಗತಿಯಲ್ಲ.

ಸಿದ್ಧಲಿಂಗಯ್ಯ, ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಎರಡು ಬಾರಿ ಎಂಎಲ್‌ಸಿ ಆದರು. ಆಗಲೇ ಒಂದಷ್ಟು ಗೆಳೆಯರಿಗೆ, 'ಇವರೇಕೆ ಅಧಿಕಾರದ ಹಿಂದೆ ಹೋದರು' ಎಂದು ಇರಿಸುಮುರಿಸಾಗಿದ್ದು ನಿಜ. ಮತ್ತೂ ಮುಂದಕ್ಕೆ ಅವರು ಹಲವಾರು ಅಧಿಕಾರ ಸ್ಥಾನಗಳನ್ನು ಒಂದಾದ ಮೇಲೊಂದು ಅಲಂಕರಿಸುತ್ತ ಹೋದರು. ಅದೂ ಹೋಗಲಿ ಎಂದರೆ ಕೊನೆಗೆ ಸೀದಾ ಬಿಜೆಪಿಯ ಆಲಿಂಗನದಲ್ಲಿ ಮೈಮರೆತು ಕೂತುಬಿಟ್ಟರು.

ವರ್ಷಗಳ ಹಿಂದೆ ನಾನು ದೊಡ್ಡಬಳ್ಳಾಪುರಕ್ಕೆ ಯಾವುದೋ ಸಮಾರಂಭಕ್ಕೆ ಹೋಗಿ ವಾಪಸು ಬರುತ್ತಿರುವಾಗ ನನ್ನೊಟ್ಟಿಗೇ ಇದ್ದ 'ಪ್ರಗತಿಪರ' ಗೆಳೆಯರು ಉದ್ದಕ್ಕೂ ಒಂದೇ ಸಮ ಸಿದ್ಧಲಿಂಗಯ್ಯನವರ ವಿರುದ್ಧ ಟೀಕಾಪ್ರಹಾರವನ್ನೇ ನಡೆಸುತ್ತ ಬಂದರು; ಅವರು ಅವಕಾಶವಾದಿ, ಚಳವಳಿಗೆ ದ್ರೋಹ ಬಗೆದವರು ಇತ್ಯಾದಿ, ಇತ್ಯಾದಿ.

ನಿಜ, ಸಿದ್ಧಲಿಂಗಯ್ಯನವರು ಹಿಡಿದ ಹಾದಿ ನನ್ನಂಥ ಎಲ್ಲರನ್ನೂ ನಿರಾಸೆಗೊಳಿಸಿದ್ದು ಹೌದು. ಅವರು ಯಡಿಯೂರಪ್ಪನವರನ್ನು ಬಸವಣ್ಣನಿಗೆ ಹೋಲಿಸಿದ್ದು, ಮನುಸ್ಮೃತಿಯಲ್ಲೂ ಒಳ್ಳೆಯದಿದೆ ಎಂದು ಪ್ರತಿಪಾದಿಸಿದ್ದು- ಇಂಥ ಅಪದ್ಧಗಳನ್ನು ಜೀರ್ಣಿಸಿಕೊಳ್ಳುವುದು ಹೇಗೆ? ಕವಿ ಸಿದ್ಧಲಿಂಗಯ್ಯನವರ ಬೆನ್ನಿಗೆ ಸ್ವತಃ ಸಿದ್ಧಲಿಂಗಯ್ಯನವರೇ ಚೂರಿ ಹಾಕಿದ ಆಘಾತಕಾರಿ ಪ್ರಸಂಗವದು. ಒಡಲಿನ ಕೆಂಡವನ್ನೇ ಕಾವ್ಯ ಮಾಡಿದ ಈ ಕವಿಯ ಇಂಥ ತಾತ್ವಿಕ ಅವನತಿ ಹೃದಯವಿದ್ರಾವಕವಾಗಿ ಕಂಡಿದ್ದೂ ನಿಜ.

ಅಷ್ಟಾದರೂ ಕೆಲವು ಗೆಳೆಯರು ಸಿದ್ಧಲಿಂಗಯ್ಯನವರ ಸಮರ್ಥನೆಯನ್ನೂ ಮಾಡುತ್ತ ಬಂದಿದ್ದಾರೆ. 'ಸಿದ್ಧಲಿಂಗಯ್ಯ ಎಂದೂ ಭ್ರಷ್ಟರಾಗಲಿಲ್ಲ, ಅವರು ಹಣ ಮಾಡಲಿಲ್ಲ' ಎಂಬ ಸಮಜಾಯಿಷಿ ಕೊಟ್ಟಿದ್ದಾರೆ. ಆದರೆ ಇಲ್ಲಿ ಯಾರೂ ದುಡ್ಡಿನ ಪ್ರಶ್ನೆ ಎತ್ತಿಲ್ಲ ಎಂಬುದನ್ನು ಅವರೇಕೆ ಅರಿಯುತ್ತಿಲ್ಲವೋ?! ಸಿದ್ಧಲಿಂಗಯ್ಯ ಎಲ್ಲಿದ್ದರೂ ದಲಿತರ ಹಿತವನ್ನು ಎಂದೂ ಮರೆಯಲಿಲ್ಲ ಎಂಬುದು ಗೆಳೆಯರ ವಿವರಣೆ. ಆದರೆ ಅನೇಕ ಸಂದರ್ಭಗಳಲ್ಲಿ ನಾವು ಎಲ್ಲಿ ನಿಂತಿದ್ದೇವೆ ಎಂಬುದೇ ಮುಖ್ಯವಾಗುವುದಿಲ್ಲವೇ? ಹಿಟ್ಲರನು ಜರ್ಮನಿಯಲ್ಲಿ ಯಹೂದ್ಯರ ನರಮೇಧ ನಡೆಸುತ್ತಿದ್ದಾಗ ಅವನ ಜೊತೆ ಕಾಣಿಸಿಕೊಂಡವರು 'ಇಲ್ಲ, ನಾವು ಅವನ ಜೊತೆಯೇ ಇದ್ದರೂ ಯಹೂದ್ಯರ ಪರವಾಗಿ ವಾದ ಮಾಡುತ್ತಿದ್ದೆವು' ಎಂದರೆ ಎಂಥ ನಗೆಪಾಟಲಿನ ಸಮರ್ಥನೆಯಾಗಿ ಕಾಣಬಹುದು? ಇಂಥ ಆತ್ಮಸಮರ್ಥನೆಯನ್ನು ಚರಿತ್ರೆ ಒಪ್ಪುವುದೇ? ಇನ್ನು 'ಬಿಜೆಪಿಯ ನಂಬರ್ ಟೂ' ಅಮಿತ್ ಶಾ, ಸಿದ್ಧಲಿಂಗಯ್ಯನವರ ಮನೆಗೇ ಬಂದು ಹೋದ ಮೇಲಂತೂ ಕವಿಗಳ 'ಅಂದರಿಕಿ ಮಂಚಿವಾಡು ಅನುಕೂಲ ಸಿದ್ಧಾಂತ'ದ ವಿಷಯದಲ್ಲಿ ಯಾರಿಗೂ ಗೊಂದಲಗಳಿರಬಾರದು.

ಇಷ್ಟು ಹೇಳಿದ ಮೇಲೂ, ನಮ್ಮ ಗೆಳೆಯರಷ್ಟು ಕಠೋರವಾಗಿ ಸಿದ್ಧಲಿಂಗಯ್ಯನವರನ್ನು ಆಕ್ಷೇಪಿಸಲು ನನಗೆ ಎಂದಿಗೂ ಮನಸ್ಸು ಬರುವುದಿಲ್ಲ. ಯಾಕೆಂದರೆ ದಲಿತ ಚಳವಳಿಗೆ ಮತ್ತು ಕನ್ನಡ ಕಾವ್ಯ ಪರಂಪರೆಗೆ ಅವರು ಕೊಟ್ಟ ಕೊಡುಗೆ ನನ್ನ ಕಣ್ಣಿನಿಂದ ಮರೆಯಾಗುವುದೇ ಇಲ್ಲ.

ಸಿದ್ಧಲಿಂಗಯ್ಯ ಕನ್ನಡ ಕಾವ್ಯದ ನುಡಿಗಟ್ಟನ್ನೇ ಬದಲಿಸಿದರು ಎಂಬ ಮಾತನ್ನು ಎಷ್ಟೋ ಮಂದಿ ಹೇಳಿದ್ದಾರೆ. ಆರಂಭದಲ್ಲಿ ಇಡೀ ಸಾರಸ್ವತ ಲೋಕ ಆಗ ಹೇಗೆ ತಬ್ಬಿಬ್ಬಾಯಿತು ಎನ್ನಲು ಇಲ್ಲಿ ಒಂದು ಪ್ರಸಂಗ ಹೇಳಬಹುದು: ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು' ಸಂಕಲನ ಹೊರತರುವ ಹೊಸ್ತಿಲಲ್ಲಿ ಕಿ.ರಂ. ನಾಗರಾಜ್, ಶೂದ್ರ ಶ್ರೀನಿವಾಸ್, ಅಗ್ರಹಾರ ಕೃಷ್ಣಮೂರ್ತಿ (ಬಹುಶಃ ಡಿಆರ್ ಅವರೂ ಇದ್ದರು ಅನಿಸುತ್ತದೆ) ಲಂಕೇಶರ ಬಳಿ ಹೋಗಿ ಆ ಸಂಕಲನಕ್ಕೆ ಮುನ್ನುಡಿ ಬರೆದುಕೊಡುವಂತೆ ಕೇಳಿದರು. ಆದರೆ ಅದನ್ನು ಓದಿದ ಲಂಕೇಶರು, 'ಇದು ಕಾವ್ಯವಲ್ಲ, ಹಾಗಾಗಿ ನಾನು ಮುನ್ನುಡಿ ಬರೆಯುವುದಿಲ್ಲ' ಎಂದರಂತೆ! ಅಂದರೆ ಲಂಕೇಶರಂಥ ಮೇಧಾವಿಗೂ ಒಬ್ಬ ಜನಕವಿಯ ಹುಟ್ಟನ್ನು ಕಾಣುವ ಕಣ್ಣು ಲಭಿಸಿರಲಿಲ್ಲ.

ಆದರೆ ಸಿದ್ಧಲಿಂಗಯ್ಯ ಇತಿಹಾಸ ಸೃಷ್ಟಿಸಿದರು. ಕನ್ನಡದಲ್ಲಿ ಕುವೆಂಪು ನಂತರ ಸಾವಿರಾರು ಜನರ ಕೊರಳ ಹಾಡಾಗಿ ಹೊಮ್ಮಿದ್ದು ಸಿದ್ಧಲಿಂಗಯ್ಯನವರ ರಚನೆಗಳೇ. ಸಿದ್ಧಲಿಂಗಯ್ಯನವರ ಶೈಲಿ ಅನುಕರಿಸಿದವರು ನೂರಾರು ಮಂದಿ ಇದ್ದಾರೆ. ಆದರೆ ಅವರ ಹಾಗೆ ಯುಗದ ಯಾತನೆಗೆ ಬಾಯಿ ಕೊಟ್ಟ ಕವಿಗಳು ತೀರಾ ಕಮ್ಮಿ. ಭುವಿಯ ಕಿಚ್ಚು, ಮುಗಿಲ ಮಿಂಚು ಒಂದುಗೂಡಿ ಕಾವ್ಯವಾಗಿ ಹರಿದಂತೆ ಸಿದ್ಧಲಿಂಗಯ್ಯನವರ ಪ್ರತಿಭೆ.

1999- 2000ದ ಸಮಯದಲ್ಲಿ ನಾನೊಮ್ಮೆ ದೂರದರ್ಶನಕ್ಕಾಗಿ ಮಾಡಿದ ಕಾರ್ಯಕ್ರಮಕ್ಕೆ ಸಿದ್ಧಲಿಂಗಯ್ಯನವರಿಂದಲೇ ಅವರ ಸುಪ್ರಸಿದ್ಧ 'ಯಾರಿಗೆ ಬಂತು ಎಲ್ಲಿಗೆ ಬಂತು 47ರ ಸ್ವಾತಂತ್ರ್ಯ' ಪದ್ಯ ಓದಿಸಿದ್ದೆ. ಅದರ ರೆಕಾರ್ಡಿಂಗ್ ಈಗಲೂ ದೂರದರ್ಶನದ ಆರ್ಕೈವ್‌ಗಳಲ್ಲಿ ಇರಬಹುದು. ಸ್ವಾತಂತ್ರ್ಯ ಎಂಬ ಮಾತು ಬಂದಾಗಲೆಲ್ಲ ನನಗೆ ತಪ್ಪದೇ ಅವರ ಈ ಪದ್ಯ ನೆನಪಿಗೆ ಬರುತ್ತದೆ.

ಮನಸ್ಸು ಕೃತಜ್ಞತೆಯಿಂದ ತಲೆ ಬಾಗುತ್ತದೆ...

ಕರಾವಳಿಯ ಭಗೀರಥ!

ಯಾರಿಗೂ ಬೇಡವಾದ ಬರಡು ಗುಡ್ಡದಲ್ಲಿ ಏಕಾಂಗಿಯಾಗಿ ಸುರಂಗಗಳನ್ನು ಕೊರೆದು, ನೀರನ್ನು ಹರಿಸಿದ ಅಮೈ ಮಹಾಲಿಂಗ ನಾಯ್ಕರ ಯಶೋಗಾಥೆ ಎಂಥವರಿಗೂ ಸ್ಫೂರ್ತಿ ತುಂಬಬಲ್ಲದು. ಮೈಸೂರು ವಿಶ್ವವಿದ್ಯಾಲಯದ ಬಹುಮಾಧ್ಯಮ ವಿದ್ಯುನ್ಮಾನ ಸಂಶೋಧನಾ ಕೇಂದ್ರವು ನಾಯ್ಕರನ್ನು ಕುರಿತು ನಿರ್ಮಿಸಿದ 'ಇನ್‌ಕ್ರೆಡಿಬಲ್ ಟೇಲ್ ಆಫ್ ಎ ವಾಟರ್ ವಾರಿಯರ್' ಸಾಕ್ಷ್ಯಚಿತ್ರಕ್ಕೆ ರಾಷ್ಟ್ರೀಯ ವಿಜ್ಞಾನ ಚಿತ್ರೋತ್ಸವದಲ್ಲಿ ಜ್ಯೂರಿ ಸ್ಪೆಷಲ್ ಮೆನ್ಷನ್ ಪ್ರಶಸ್ತಿ ಲಭಿಸಿತ್ತು. ಈ ಸಾಕ್ಷ್ಯಚಿತ್ರಕ್ಕೆ ಲೇಖಕ ಬರೆದ ಚಿತ್ರಕಥೆಯನ್ನು ಆಧರಿಸಿದ ಕಿರು ಲೇಖನವಿದು.

ಸತ್ಯಪ್ರಕಾಶ್ ಎಂ.ಆರ್.

1970ರ ದಶಕದಲ್ಲಿ ಅಂದಿನ ಮುಖ್ಯಮಂತ್ರಿ ದೇವರಾಜ ಅರಸು, ಭೂಸುಧಾರಣಾ ಕಾಯ್ದೆಯನ್ನು ಜಾರಿಗೆ ತಂದ ಸಂದರ್ಭದಲ್ಲಿ ಬಂಟ್ವಾಳದ ಅಡ್ಯನಡ್ಕದ ಸ್ಥಳೀಯ ಜಮೀನ್ದಾರರಾಗಿದ್ದ ಮಹಾಬಲ ಭಟ್ಟರು ಎರಡು ಎಕರೆ ಭೂಮಿಯನ್ನು ಅಮೈ ಮಹಾಲಿಂಗ ನಾಯ್ಕರಿಗೆ ಸರ್ಕಾರದಿಂದ ದೊರಕಿಸಿಕೊಟ್ಟಿದ್ದರು. ಆದರೆ ಅದು ಯಾರಿಗೂ ಬೇಡವಾದ ಬರಡು ಗುಡ್ಡವಾಗಿತ್ತು! ಕೃಷಿ ಮಾಡುವುದಿರಲಿ, ಮನೆ ಕಟ್ಟಿಕೊಂಡು ಜೀವನ ನಡೆಸುವುದಕ್ಕೂ ಲಾಯಕ್ಕಿಲ್ಲದ ಸ್ಥಳ ಅದಾಗಿತ್ತು. ಒಣ ಹುಲ್ಲು ಮತ್ತು ಕಾಡು ಬಳ್ಳಿಗಳಿಂದ ಆವೃತ್ತವಾಗಿದ್ದ ಬರಡು ಬೆಟ್ಟದಲ್ಲಿ ನೀರಿನ ಕುರುಹಂತೂ ಇರಲೇ ಇಲ್ಲ. ಇಂಥ ಭೂಮಿಯಲ್ಲಿ ಸುರಂಗಗಳನ್ನು ಏಕಾಂಗಿಯಾಗಿ ಕೊರೆದು, ನೀರು ಹರಿಸಿ ಕೃಷಿ ಮಾಡುವ ದುಸ್ಸಾಹಸಕ್ಕೆ ಕೈಹಾಕಿದ ನಾಯ್ಕರಿಗೆ ಈಗ ಪದ್ಮಶ್ರೀ ಪ್ರಶಸ್ತಿ ಒಲಿದಿದೆ. ಹಲವು ಪುರಸ್ಕಾರಗಳೂ ಹುಡುಕಿಕೊಂಡು ಬಂದಿವೆ. ಆದರೆ, ಒಮ್ಮೆ ಕೂಡ ಮಹಾಲಿಂಗ ನಾಯ್ಕರಿಗೆ ಇದ್ಯಾವುದೂ ದೊಡ್ಡ ಸಾಧನೆ ಎನಿಸಲೇ ಇಲ್ಲ! ಭೂರಹಿತ ಕೃಷಿ ಕಾರ್ಮಿಕನಾಗಿ ಇತರರ ಜಮೀನುಗಳಲ್ಲಿ ಕೆಲಸ ಮಾಡುತ್ತಿದ್ದ ನಾಯ್ಕರಿಗೆ ತಮ್ಮ ಪಾಲಿಗೆ ಬಂದ ಭೂಮಿಯಲ್ಲಿ ಕಷ್ಟಪಟ್ಟು ದುಡಿದು ಬದುಕುವುದಷ್ಟೇ ಮುಖ್ಯ ಎನಿಸಿತು. ಒಂದು ಕಾಲದ ಬರಡು ಬೆಟ್ಟ ಮೂರು ದಶಕಗಳ ಇವರ ಭಗೀರಥ ಪ್ರಯತ್ನದಿಂದ ಈಗ ನಂದನವನವೇ ಆಗಿದೆ.

ದೂರದ ಬೆಟ್ಟದಲ್ಲಿ ತನ್ನದೊಂದು ಪುಟ್ಟ ಮನೆಯನ್ನು ಕಟ್ಟಿಕೊಂಡು ಬದುಕು ಸಾಗಿಸಲು ಕೃಷಿ ಮಾಡುವ ಸಣ್ಣ ಕನಸಿನೊಂದಿಗೆ ಬರಡು ಪ್ರದೇಶದಲ್ಲಿ ಕಾಲಿರಿಸಿದ ನಾಯ್ಕರು ಮತ್ತು ಅವರ ಪತ್ನಿ ಲಲಿತ, 'ಏರಿಳಿತದಿಂದ ಕೂಡಿರುವ ಗುಡ್ಡವು ಯಾವುದೇ ರೀತಿಯಲ್ಲಿಯೂ ಕೃಷಿಗೆ ಯೋಗ್ಯವಲ್ಲ. ಇಂಥ ಭೂಮಿಯಲ್ಲಿ ಕೃಷಿ ಮಾಡಲು ಹೊರಟಿರುವ ಇವರಿಗೆ ಹುಚ್ಚು ಹಿಡಿದಿರಬೇಕು' ಎಂದು ನೆರೆಹೊರೆಯವರಿಂದ, ಗ್ರಾಮಸ್ಥರಿಂದ ಹೀಯಾಳಿಕೆಗೆ ಗುರಿಯಾಗಿದ್ದರು. ಬಹುಶಃ ಅದು ನಿಜವೂ ಆಗಿತ್ತು. ಆದರೆ, ಗ್ರಾಮಸ್ಥರ ಟೀಕೆಗೆ ಧೃತಿಗೆಡದೆ ಮುಂದಡಿಯಿಟ್ಟ ನಾಯ್ಕರು, ಮೊದಲಿಗೆ ಗುಡ್ಡದ ಮಧ್ಯಭಾಗದಲ್ಲಿ ಸುಮಾರು ಹತ್ತು ಸಾವಿರ ಚದರ ಅಡಿಯಷ್ಟು ಭೂಮಿಯನ್ನು ಸಮತಟ್ಟು ಮಾಡಿ,



ಸುರಂಗದಿಂದ ಹರಿದುಬಂದ ನೀರಿನಿಂದ ನಳನಳಿಸುತ್ತಿರುವ ಕೃಷಿ ಹೊಂಡ

ಪುಟ್ಟ ಮಣ್ಣಿನ ಮನೆಯನ್ನು ಸ್ವತಃ ಕಟ್ಟಿಕೊಂಡರು. ನಂತರ ಇಡೀ ಗುಡ್ಡವನ್ನು ಎರಡು ಮೀಟರ್ ಎತ್ತರ ಮತ್ತು ಐದು ಮೀಟರ್ ಅಗಲದ ಮೆಟ್ಟಿಲುಗಳಾಗಿ ಸಮತಟ್ಟು ಮಾಡಿ, ಪ್ರತಿಯೊಂದು ಮೆಟ್ಟಿಲಿಗೂ, ಸ್ಥಳೀಯವಾಗಿ ದೊರಕುತ್ತಿದ್ದ ಜಂಬಿಟ್ಟಿಗೆಯ ಮೂಲಕ ಕಾಂಪೌಂಡ್‌ನಂತಹ ಗೋಡೆ ನಿರ್ಮಿಸಿದರು.

ಜಮೀನಿನ ಸುತ್ತ ಕಾಂಪೌಂಡ್ ಮತ್ತು ಮೆಟ್ಟಿಲುಗಳನ್ನು ಕಟ್ಟಲು ಜಂಬಿಟ್ಟಿಗೆಗಳನ್ನು ಗುಡ್ಡದ ಮೇಲೆ ಸಾಗಿಸಿದ್ದೇ ಮತ್ತೊಂದು ರೋಚಕ ಕಥನ! ನಾಯ್ಕರದು ಏಕಾಂಗಿ ಹೋರಾಟವಾದರೂ ಮನೆ ಮತ್ತು ಮಕ್ಕಳನ್ನು ಸಂಭಾಳಿಸಿಕೊಂಡು ಬಂದ ಪತ್ನಿ ಲಲಿತ ಕೂಡ ಯಶಸ್ಸಿನ ಪಾಲುದಾರರೆಂದರೆ ತಪ್ಪಾಗಲಾರದು. ಪ್ರತಿದಿನ ಕೂಲಿ ಮುಗಿಸಿ ಮಧ್ಯಾಹ್ನದ ವೇಳೆಗೆ ಹಿಂದಿರುಗುವಾಗ ನಾಯ್ಕರು ಎರಡು ಜಂಬಿಟ್ಟಿಗೆಯನ್ನು ಹೊತ್ತು ತರುತ್ತಿದ್ದರು. ಹದಿನೈದು ದಿನಗಳಿಗೊಮ್ಮೆ ಮೂವತ್ತು ಜಂಬಿಟ್ಟಿಗೆಗಳು ಸೇರ್ಪಡೆಯಾದಾಗ, ಗುಡ್ಡದ ಸುತ್ತ ಕಾಂಪೌಂಡ್ ನಿರ್ಮಿಸಲಾರಂಭಿಸಿದರು. ಹೀಗೆ ಹಂತ ಹಂತವಾಗಿ ಛಲಬಿಡದ ತ್ರಿವಿಕ್ರಮನಂತೆ ಜಮೀನಿನ ಸುತ್ತಲೂ ಸುಮಾರು 250 ಮೀಟರ್ ಉದ್ದ, ಎರಡು ಮೀಟರ್ ಎತ್ತರದ ಕಾಂಪೌಂಡ್ ನಿರ್ಮಿಸಿದರು. ಮಳೆಗಾಲದಲ್ಲಿ ಭೂಕುಸಿತವಾಗದಂತೆ ಜಮೀನನ್ನು ರಕ್ಷಿಸಲು ಮತ್ತು ಕೃಷಿ ಚಟುವಟಿಕೆ ಕೈಗೊಳ್ಳುವ ದೃಷ್ಟಿಯಿಂದ ಕಾಂಪೌಂಡ್ ನಿರ್ಮಿಸಿದರೂ, ನೀರಾವರಿಯ ಯಾವುದೇ ಯೋಜನೆ ರೂಪಿಸದೆ ಕೃಷಿ ಮಾಡುವುದಾದರೂ ಹೇಗೆ? ಹೀಗೆ ಪೂರ್ವಾಪರ ಯೋಚಿಸದೆ ಬರಡು ಗುಡ್ಡವನ್ನು ಕೃಷಿಗೆ ಅನುವಾಗುವಂತೆ ಮೆಟ್ಟಿಲುಗಳನ್ನಾಗಿ ಸಮತಟ್ಟು ಮಾಡಿ ಆಯಿತು. ನಂತರ ಜಮೀನಿನ ಸುತ್ತ ಕಾಂಪೌಂಡ್ ಕೂಡ ಕಟ್ಟಿ ಆಯಿತು. ಆದರೆ ನೀರಿನ ಯಾವ ಕುರುಹೂ ಇಲ್ಲ! ಇದ್ಯಾವುದರಿಂದಲೂ ವಿಚಲಿತರಾಗದ ನಾಯ್ಕರು, ಕುಡಿಯಲು, ಮನೆ ಬಳಕೆಗೆ ಮತ್ತು ಕೃಷಿಗೆ ಗುಡ್ಡದ ಕೆಳಗಿನಿಂದ ನೀರು ತರಲಾರಂಭಿಸಿದರು. ದಿನಕಳೆದಂತೆ, ನಿತ್ಯ ಜಂಜಾಟದಿಂದ ರೋಸಿಹೋದ ನಾಯ್ಕರಿಗೆ ಹೊಸದೊಂದು ಆಲೋಚನೆ ಹೊಳೆಯಿತು. ಅದುವೇ ನೀರಿಗಾಗಿ ಸುರಂಗ ಕೊರೆಯುವುದು!

ಕರಾವಳಿಯ ಹಲವೆಡೆ, ಅದರಲ್ಲಿಯೂ ವಿಶೇಷವಾಗಿ ವಿಟ್ಲ, ಕಾಸರಗೋಡು ಭಾಗದಲ್ಲಿ ನೀರಾವರಿ ಮತ್ತು ಕುಡಿಯುವ ನೀರಿಗೆ ಸುರಂಗಗಳನ್ನು ಕೊರೆಯುವುದು ಸರ್ವೇಸಾಮಾನ್ಯ. 'ಈ ಭಾಗದಲ್ಲಿ ಮನೆಬಳಕೆ ಮತ್ತು ಕುಡಿಯುವ ನೀರಿಗಾಗಿ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಸುರಂಗಗಳನ್ನು ಬಳಸಲಾಗುತ್ತಿದೆ' ಎನ್ನುತ್ತಾರೆ ಕಾಸರಗೋಡು ಮೂಲದ 'ಅಡಿಕೆ ಪತ್ರಿಕೆ'ಯ ಸಂಪಾದಕ ಶ್ರೀಪಡ್ರೆ. ಗುಡ್ಡಗಳಲ್ಲಿ ತೆರೆದ ಬಾವಿಗಳನ್ನು ಕೊರೆಯಲು ಸಾಧ್ಯವಿಲ್ಲ. ಇಲ್ಲಿ ಇತರೆ ಇನ್ಯಾವುದೇ ನೀರಿನ ಮೂಲಗಳು ಇಲ್ಲದಿರುವುದರಿಂದ, ಉಳಿದಿರುವ ಒಂದೇ ಮಾರ್ಗ, ನೀರಿನ ಸುರಂಗಗಳು ಮತ್ತು ಅಡ್ಡ ಬೋರ್‌ವೆಲ್‌ಗಳು. ನೀರಾವರಿಗಾಗಿ ಸುರಂಗಗಳನ್ನು ಬಳಸುವುದು ಕರಾವಳಿಯ ಈ ಭಾಗದಲ್ಲಿ ವಿಶೇಷವೇನಲ್ಲ! ಇದು ಸುರಂಗಗಳ ಕಥೆಯೂ ಅಲ್ಲ. ಏಕಾಂಗಿಯಾಗಿ ಮೂರು ದಶಕಗಳ ಕಾಲ ಒಮ್ಮೆಯೂ ಧೃತಿಗೆಡದೆ, ನಿರಾಶೆಗೊಳ್ಳದೆ ಸುರಂಗಗಳನ್ನು ಕೊರೆದು ನೀರಿನ ಒರತೆಯನ್ನು ಹರಿಸಿದ ಕರಾವಳಿಯ ಭಗೀರಥ ನಾಯಕರ ಸಾಹಸ ಸ್ಫೂರ್ತಿದಾಯಕ.

ನಾಯಕರು ಆರಂಭದಲ್ಲಿ ಪ್ರತಿದಿನ ದಿನಗೂಲಿ ಮುಗಿಸಿ ಹಿಂದಿರುಗಿದ ಮೇಲೆ ಮಧ್ಯಾಹ್ನದ ನಂತರ ಸುರಂಗವನ್ನು ಕೊರೆಯುತ್ತಿದ್ದರು. ಗುದ್ದಲಿ, ಪಿಕಾಸಿ, ಮಣ್ಣಿನ ಬಾಣಲೆ ಮತ್ತು ಬುಡ್ಡಿ ದೀಪ ಹಿಡಿದು ಮಧ್ಯರಾತ್ರಿಯವರೆಗೂ ಸುರಂಗ ಕೊರೆಯುವ ಕಾಯಕದಲ್ಲಿ ನಿರತರಾಗುತ್ತಿದ್ದರು. ಹೀಗೆ ದಿನಗಳು, ತಿಂಗಳುಗಳು ಕಳೆದು, ಒಂದು ವರುಷದ ಬಳಿಕ ಸುಮಾರು 30 ಮೀಟರ್‌ವರೆಗಿನ ಆಳೆತ್ತರದ ಸುರಂಗವನ್ನು ಕೊರೆದರೂ ನೀರು ಬರಲಿಲ್ಲ! ಮೊದಲ ಸುರಂಗ ವಿಫಲವಾಯಿತು. ಮೊದಲ ವೈಫಲ್ಯದಿಂದ ವಿಚಲಿತರಾಗದೆ ಮರುವರ್ಷ ಮತ್ತೊಂದು ಸ್ಥಳದಲ್ಲಿ ಸುರಂಗ ಕೊರೆಯಲಾರಂಭಿಸಿದರು. ಸ್ಥಳೀಯ ಗ್ರಾಮಸ್ಥರೊಬ್ಬರು 'ಯಾರಾದರೂ ಗುಡ್ಡದ ಮೇಲೆ ನಿಂತು ಮೂತ್ರ ಮಾಡಿದರೆ ಮಾತ್ರ ನೀರು ಬರಬಹುದು. ಸುರಂಗ ಕೊರೆಯುವುದರಿಂದ ಯಾವುದೇ ಪ್ರಯೋಜನವಿಲ್ಲ' ಎಂದು ಜರಿದರು. ಬೇರೆ ಯಾರಾಗಿದ್ದರೂ ಬಹುಶಃ ಕೆಲಸ ಕೈಬಿಡುತ್ತಿದ್ದರೇನೋ, ಆದರೆ ದೃಢಮನಸ್ಸಿನ ನಾಯ್ಕರು ಎಲ್ಲರ ಮಾತುಗಳನ್ನು ನಿರ್ಲಕ್ಷಿಸಿ ಸುರಂಗದ ಕಾರ್ಯ ಮುಂದುವರಿಸಿದರು. ಎರಡು, ಮೂರು ಮತ್ತು ನಾಲ್ಕನೆಯ ಸುರಂಗಗಳೂ ನೀರು ಒದಗಿಸಲು ವಿಫಲವಾದವು.

ಐದನೆಯ ಸುರಂಗವನ್ನು ಸುಮಾರು 20 ಮೀಟರ್‌ನಷ್ಟು ಕೊರೆದಾಗ ಮೇಲ್ಭಾಗದಿಂದ ನೀರು ತೊಟ್ಟಿಕ್ಕಲು ಪ್ರಾರಂಭವಾಯಿತು. ಥಟ್ಟನೆ, ಅಲ್ಲಿಂದಲೇ ಮೂರು ಮೀಟರ್ ಎತ್ತರಕ್ಕೆ ಮಣ್ಣು ತೆಗೆದು, ಒಬ್ಬ ವ್ಯಕ್ತಿ ಕೂರುವಷ್ಟು ಎತ್ತರದ ಸುರಂಗವನ್ನು ಕೊರೆಯಲಾರಂಭಿಸಿದರು. ಭೂಕುಸಿತದ ಭಯವಿದ್ದರೂ ಅಂಜದೆ ಕೆಲಸ ಮುಂದುವರಿಸುವ ನಾಯ್ಕರ ಛಲಬಿಡದ ಪ್ರಯತ್ನಕ್ಕೆ ಗೆಲುವು ಲಭಿಸಲೇಬೇಕಿತ್ತು. ಐದನೆಯ ಸುರಂಗದಲ್ಲಿ ನೀರಿನ ಮೂಲ ಸಿಕ್ಕೇಬಿಟ್ಟಿತು! ಐದನೆಯ ಸುರಂಗ ನಾಯ್ಕರ ಜೀವನವನ್ನೇ ಬದಲಾಯಿಸಿತು. ಈ ಸುರಂಗವನ್ನು ಸುಮಾರು 70 ಮೀಟರ್ ಉದ್ದ ಕೊರೆದು ನೀರನ್ನು ಮನೆಗೆ ಮತ್ತು ಕೃಷಿಗೆ ಬಳಸಲಾರಂಭಿಸಿದರು. ಬರಡು ಗುಡ್ಡದ ಮೆಟ್ಟಿಲುಗಳಲ್ಲಿ ಸುಮಾರು 300 ಅಡಿಕೆ ಸಸಿಗಳು, 40 ತೆಂಗಿನ ಸಸಿಗಳು ಮತ್ತು ಮೆಣಸಿನ ಬಳ್ಳಿಗಳನ್ನು ನೆಟ್ಟರು. ಈಗ ಇವೆಲ್ಲವೂ ಫಸಲು ನೀಡುತ್ತಿವೆ!

ನಾಯಕರ ಭೂಮಿಗೆ ಈ ಸುರಂಗದ ನೀರೇ ಮೂಲಾಧಾರ. ಮನೆಯ ಮೇಲ್ಭಾಗದ ಎತ್ತರದಲ್ಲಿರುವ ಸುರಂಗದಿಂದ ಹರಿದು ಬರುವ ನೀರನ್ನು 15 ಅಡಿ ಆಳ ಮೂವತ್ತು ಅಡಿ ಸುತ್ತಳತೆಯ ಟ್ಯಾಂಕ್ ನಿರ್ಮಿಸಿ ಶೇಖರಣೆ ಮಾಡುತ್ತಿದ್ದಾರೆ. ಈ ಟ್ಯಾಂಕ್ ತುಂಬಿ ಹರಿದು ಬರುವ ನೀರನ್ನು ಸ್ಪ್ರಿಂಕ್ಲರ್‌ಗಳನ್ನು ಬಳಸಿ ತುಂತುರು ನೀರಾವರಿಯ ಮೂಲಕ ಮೂರು ಮೆಟ್ಟಿಲುಗಳಲ್ಲಿರುವ ಗಿಡಗಳಿಗೆ ಹಾಯಿಸುತ್ತಿದ್ದಾರೆ. ಮೇಲ್ಭಾಗದ ಗಿಡಗಳಿಗೆ ಕೊಳವೆಯ ಮೂಲಕ ನೀರನ್ನು ಹಾಯಿಸುತ್ತಿದ್ದಾರೆ. ಇಷ್ಟಕ್ಕೇ ತೃಪ್ತರಾಗದ ನಾಯ್ಕರು ಇನ್ನೆರಡು ಸುರಂಗಗಳನ್ನು ಕೊರೆದಿದ್ದಾರೆ. ಇದರಲ್ಲಿ ಒಂದು ಸುರಂಗ ಮನೆಯ ಹಿಂದೆಯೇ ಇದ್ದು, ಇದರಲ್ಲಿ ನೀರಿನ ಒರತೆ ದೊರಕಿದೆ. ಸುಮಾರು ಹನ್ನೆರಡು ಸಾವಿರ ಅಡಿಯ ಟ್ಯಾಂಕ್ ನಿರ್ಮಿಸಿ ಈ ಸುರಂಗದ ನೀರನ್ನು ಶೇಖರಿಸುತ್ತಿದ್ದಾರೆ. ಈಗ ಇದೇ ನೀರನ್ನು ಮನೆಬಳಕೆಗೆ ಮತ್ತು ಕುಡಿಯುವ ನೀರಿಗೆ ಬಳಸಲಾಗುತ್ತಿದೆ. ಆರು ದಿನಗಳಿಗೊಮ್ಮೆ ತುಂಬಿ ಹರಿಯುವ ನೀರನ್ನು ಕೆಳಭಾಗದ ಜಮೀನಿಗೆ ಹರಿಸಲಾಗುತ್ತಿದೆ.

ನಾಯ್ಕ ದಂಪತಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳಿದ್ದು, ಕಿರಿಯ ಮಗ ಮತ್ತು ಸೊಸೆಯೊಂದಿಗೆ ಹಸಿರು ಗುಡ್ಡದ ಮೇಲಿನ ತಮ್ಮ ಮನೆಯಲ್ಲಿ ವಾಸಿಸುತ್ತಿದ್ದಾರೆ. ಕಿರಿಯ ಮಗ ಪುತ್ತೂರಿನ ಆಯುಷ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದು, ಇನ್ನೊಬ್ಬ ಮಗ ಸಣ್ಣಪುಟ್ಟ ಕೃಷಿ ಕೆಲಸ ಮಾಡಿಕೊಂಡಿದ್ದಾರೆ. ಮಗಳಿಗೆ ಮದುವೆಯಾಗಿದ್ದು, ಸಮೀಪದ ಬೊಳ್ನಾಡು ಗ್ರಾಮದಲ್ಲಿ ನೆಲೆಸಿದ್ದಾರೆ. ತಾವು ಬೆಳೆಸಿದ ತೋಟವನ್ನು ನೋಡಿಕೊಂಡು ಮಕ್ಕಳು ಸ್ವಾವಲಂಬಿಗಳಾಗಲಿ ಎಂಬ ಆಸೆಯಿದ್ದರೂ ಅವರಿಗೆ ಕೃಷಿಯಲ್ಲಿ ಆಸಕ್ತಿಯಿಲ್ಲ ಎಂದು ನಾಯ್ಕರು ನಿರಾಶರಾಗುತ್ತಾರೆ. ತಮ್ಮ ಜೀವನದ ಇಳಿಸಂಜೆಯಲ್ಲಿ ಮೂರು ದಶಕಗಳ ಪರಿಶ್ರಮದಿಂದ ಕಟ್ಟಿದ ನಂದನವನವನ್ನು ಮಕ್ಕಳು ಪೋಷಿಸುತ್ತಾರೆ ಎಂಬ ನಂಬಿಕೆಯನ್ನು ಈಗಲೂ ಇರಿಸಿಕೊಂಡಿರುವ ನಾಯ್ಕರನ್ನು ಈಗ ಪದ್ಮಶ್ರೀ ಪ್ರಶಸ್ತಿ ಅರಸಿ ಬಂದಿದೆ.



ತಾವೇ ಕೊರೆದ ಸುರಂಗದ ಮುಂದೆ ಅಮೈ ಮಹಾಲಿಂಗ ನಾಯ್ಕ

ಏರ್ ಇಂಡಿಯಾ...

10ನೇ ಪುಟದಿಂದ...

ನಮಗೆಲ್ಲ ಡಬಲ್ ಡ್ಯೂಟಿ. ತುಂಬಿತುಳುಕುವ ವಿಮಾನ; ಊಟತಿಂಡಿಗೆ, ಬ್ಲಾಂಕೆಟ್, ಮಫ್ಲರ್‌ಗೆ, ಟಾಯ್ಲೆಟ್ ಎಂಟ್ರಿಗೆ ನೂಕುನುಗ್ಗಲು; ಸುಸ್ತು, ಬಾಯಾರಿಕೆಗೂ ವಿರಮಿಸದೆ, ಕಣ್ಣೆವೆ ಮುಚ್ಚಲೂ ಬಿಡುವಿಲ್ಲದ ಸಹನೆ ಪರೀಕ್ಷೆಯ ಸಮಯ. ಈ ಪ್ರಯಾಣಿಕರೆಲ್ಲ ಭಾರತದ ಮಟ್ಟಿಗೆ ದಿನಾರ್‌ಗಳನ್ನು, ಡಾಲರ್‌ಗಳನ್ನು ಕಳಿಸುವ ಶ್ರಮಿಕರು. ಅನೇಕರು ಅರೆಸಾಕ್ಷರ ಕೂಲಿಯಾಳುಗಳು. ಚಿನ್ನದ ಮೊಟ್ಟೆ ಇಡುವ ಈ ಕೋಳಿಗಳನ್ನ ಕುರಿಹಿಂಡುಗಳಂತೆ ಪರಿಗಣಿಸಬಾರದು ತಾನೆ? ಭಾರತದ ಘನತೆ, ಗೌರವದ ಪ್ರಶ್ನೆ. ಎಲ್ಲರೂ ಕೆಳಕ್ಕಿಳಿಯುವಾಗ ತಲೆಬಾಗಿ ನಮಗೆ ಕೈಜೋಡಿಸಬೇಕು. ಎಲ್ಲರೂ ಭಾರತದಲ್ಲಿ ಮತ್ತೆ ಪದಾರ್ಪಣೆ ಮಾಡಿದಾಗ ನಮ್ಮ ನೆಲಕ್ಕೆ ಸಾಷ್ಟಾಂಗ ನಮಿಸಬೇಕು.

1960-70-80-90ರವರೆಗೂ ಗಗನದ ಐರಾವತ ಎಂತಲೋ ಮೋಡದ ಮೇಲಿನ ಮಹಾರಾಜ ಎಂತಲೋ ಪ್ರಸಿದ್ಧಿ ಪಡೆದು ಅಂತರರಾಷ್ಟ್ರೀಯ ವಿಮಾನಮಾರ್ಗದ ದೊರೆಯಾಗಿ ವಿಜೃಂಭಿಸಿದ ಏರ್ ಇಂಡಿಯಾದ ಪ್ರತಿಷ್ಠೆ ಕ್ರಮೇಣ ಜಾಗತೀಕರಣದ ನಂತರದ ಪೈಪೋಟಿಯಲ್ಲಿ ಕೆಳಕ್ಕಿಳಿಯಲಾರಂಭಿಸಿತು. ಪೈಪೋಟಿಯ ಭಯದಿಂದ ಭಾರತೀಯ ಸಂಸ್ಕೃತಿಯ ಅನೇಕ ಬಿಂಬಗಳನ್ನು ಕೈಬಿಡಲಾಯಿತು. ಮಹಾರಾಜನನ್ನು ಮೂಲೆಗೆ ತಳ್ಳಿದ ಏರ್ ಇಂಡಿಯಾ ಅದ್ಯಾವ ಹೊತ್ತಿಗೆ 'ಹಾರುವ ಹಂಸ'ದ ಲಾಂಛನವನ್ನು ಮತ್ತು ಕೋನಾರ್ಕದ ಚಕ್ರದ ಚಿತ್ರವನ್ನೂ ತನ್ನ ಚುಕ್ಕಾಣಿಯ ಮೇಲೆ ಕೂರಿಸಿತೊ ಅದರ ವೈಭವವೂ ಇತಿಹಾಸದ ಪುಟಕ್ಕೆ ಸೇರತೊಡಗಿತು.

ವೆಚ್ಚ ಮಾತ್ರ ಗಗನಮುಖಿಯಾಗಿ, ಲಾಭಾಂಶ ಕಮ್ಮಿಯಾಗುತ್ತ ಬಂದಹಾಗೆ ಪ್ರಯಾಣಿಕರ ಸೌಕರ್ಯಗಳನ್ನೂ ಕಡಿತಗೊಳಿಸುತ್ತ, ಪದೇ ಪದೇ ಸಮಸ್ಯೆಗಳನ್ನು ಎದುರಿಸುತ್ತ ಹತ್ತರೊಳಗೊಂದಾಗಿ ತೀರ ಸಾಮಾನ್ಯ ವಿಮಾನ ಕಂಪನಿ ಎನಿಸಿತು. ಏನೋ ನಮ್ಮದೆಂಬ ಅಭಿಮಾನದಿಂದ ಏರ್ ಇಂಡಿಯಾದ ಟಿಕೆಟ್ ಪಡೆದವರು ಕೊನೇ ನಿಮಿಷದಲ್ಲಿ ಪ್ರಯಾಣ ರದ್ದಾಗಿದ್ದಕ್ಕೋ ಬ್ಯಾಗೇಜ್ ದಿಕ್ಕುತಪ್ಪಿದ್ದಕ್ಕೊ, ರಿಫಂಡ್ ಸಿಕ್ಕದ್ದಕ್ಕೊ, ಪ್ರಯಾಣದಲ್ಲಿ ಬರೀ ನೀರು-ಬ್ರೆಡ್ ತಿನ್ನಿಸಿದ್ದಕ್ಕೊ ಶಾಪ ಹಾಕಬೇಕಾಯಿತು. ಅಂತೂ ಸುಸ್ತಾದ ಏರ್ ಇಂಡಿಯಾ ಹೇಗೋ ತೇಲುತ್ತಿರಬೇಕೆಂಬ ಹಟದಲ್ಲಿ ಸಾಲದಲ್ಲಿ ಮುಳುಗಿ ತಳಕಚ್ಚುವಂತಾದಾಗ ಇದೀಗ ಮತ್ತೆ ಟಾಟಾ ಕಂಪನಿ ಏರ್ ಇಂಡಿಯಾವನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿದೆ.

ಮಹಾರಾಜ ಮತ್ತೆ ಮೈಕೊಡವಿ ಮೇಲೇಳುತ್ತಾನೆಯೆ? ತನ್ನ ಮಣ್ಣಾಗಿದ್ದ ಮೀಸೆಗೆ ಎಣ್ಣೆಹಚ್ಚಿ, ಚಿನ್ನದ ಪೇಟಾವನ್ನು ಮುಡಿಗೇರಿಸಿ ಮುಗುಳ್ನಕ್ಕು ಪ್ರಯಾಣಿಕರನ್ನು ಮತ್ತೆ ಸ್ವಾಗತಿಸುತ್ತಾನೆಯೆ? ನೋಡಬೇಕು. ಏರ್‌ಲೈನ್ಸ್ ಎಂದರೆ ಏರ್‌ಇಂಡಿಯಾ ಎಂಬ ಖ್ಯಾತಿಯನ್ನು ಮತ್ತೆ ಗಳಿಸಲು ಏನೇನು ಸಿದ್ಧತೆ ಆಗಬೇಕೊ? ಚೆಕ್‌ಲಿಸ್ಟ್ ತುಂಬ ಉದ್ದವಿರುವಂತೆ ಕಾಣುತ್ತದೆ.

ನಿರೂಪಣೆ: ನಾಗೇಶ ಹೆಗಡೆ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಕ್ಸ್ಗ ಚಕ್ಕುಕೀಶ್ರಪ್ಪು ಕಥೆಯ ಮೇಜರ್ ಸಂದೀಪ್ ಉನ್ನಿಕೃಷ್ಣನ್

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಇವರು ಮೇಜರ್ ಸಂದೀಪ್ ಉನ್ನಿಕೃಷ್ಣನ್. 2008ರ ನವೆಂಬರ್ 26ರಂದು ಮುಂಬೈನ ತಾಜ್ ಹೋಟೆಲ್ ಮೇಲೆ ದಾಳಿ ನಡೆಸಿದ ಭಯೋತ್ಪಾದಕರ ವಿರುದ್ಧ ಹೋರಾಡುತ್ತಲೇ ಹುತಾತ್ಮರಾದ ವೀರ ಸೇನಾನಿ



ಸಂದೀಪ್ ಅವರ ಕುಟುಂಬದ ಮೂಲ ಕೇರಳದ ಕಲ್ಲಿಕೋಟೆ ಜಿಲ್ಲೆಯ ಚೆರುವಣ್ಣೂರು. ತಂದೆ ನಿವೃತ್ತ ಇಸ್ರೋ ಅಧಿಕಾರಿ ಕೆ.ಉನ್ನಿಕೃಷ್ಣನ್ ಮತ್ತು ತಾಯಿ ಧನಲಕ್ಷ್ಮೀ ಉನ್ನಿಕೃಷ್ಣನ್. ಉನ್ನಿಕೃಷ್ಣನ್ ದಂಪತಿಗೆ ಸಂದೀಪ್ ಒಬ್ಬನೇ ಮಗ



2008ರ ನವೆಂಬರ್ 26ರಂದು ಮುಂಬೈನ ಗೇಟ್ ವೇ ಆಫ್ ಇಂಡಿಯಾ ಸಮೀಪದ ತಾಜ್ ಹೋಟೆಲ್ ಮೇಲೆ ಪಾಕಿಸ್ತಾನದ ಭಯೋತ್ಪಾದಕರು ದಾಳಿ ನಡೆಸಿದರು. ಘಟನೆಯಲ್ಲಿ 164 ಜನ ಮೃತಪಟ್ಟರು.



ದಾಳಿ ನಿಯಂತ್ರಿಸಲು ರಾಷ್ಟ್ರೀಯ ಭದ್ರತಾ ದಳದಲ್ಲಿ ಮೇಜರ್ ಆಗಿದ್ದ ಸಂದೀಪ್, ತಮ್ಮ ತಂಡದೊಂದಿಗೆ ಮುಂಬೈಗೆ ಬಂದರು. ಉಗ್ರರಿದ್ದ ಹೋಟೆಲ್‌ನೊಳಗೆ ನುಗ್ಗಲು ನಿರ್ಧರಿಸಿ ತಂಡವನ್ನು ಅಣಿಗೊಳಿಸಿದರು.



ಹೋಟೆಲ್‌ನ ಒಳಗೆ ನುಗ್ಗಿದ ಸಂದೀಪ್ ಮತ್ತು ಅವರ ತಂಡದವರು ಉಗ್ರರನ್ನು ಹತ್ಯೆ ಮಾಡುತ್ತಾ, ಒತ್ತೆಯಾಳುಗಳನ್ನು ಬಿಡುಗಡೆಗೊಳಿಸಿದರು. ಆದರೆ ಈ ವೇಳೆ ಉಗ್ರರು ಹಾರಿಸಿದ ಗುಂಡೊಂದು ಸಂದೀಪ್ ಅವರನ್ನು ಬಲಿ ತೆಗೆದುಕೊಂಡಿತು



ಸಂದೀಪ್ ಅವರ ಧೈರ್ಯ, ಸಾಹಸ ತ್ಯಾಗ ಬಲಿದಾನಕ್ಕಾಗಿ 2009ರ ಗಣರಾಜ್ಯೋತ್ಸವದಂದು ಅವರಿಗೆ ಮರಣೋತ್ತರವಾಗಿ ಅಶೋಕಚಕ್ರ ರಾಷ್ಟ್ರಪತಿ ಪುರಸ್ಕಾರ ಪ್ರದಾನ ಮಾಡಿ ಗೌರವಿಸಲಾಯಿತು

ಗಣಿತದಲ್ಲಿ ಗರ್ದಿ ಗಮ್ಮತ್ತು

ಇವು 'ವಿ'ಭಿನ್ನರಾಶಿಗಳು

1ರಿಂದ 9ರವರೆಗಿನ ಸಂಖ್ಯೆಗಳನ್ನು ಒಮ್ಮೆ ಮಾತ್ರ ಬಳಸಿಕೊಂಡು ಭಿನ್ನರಾಶಿ ಬರೆಯಲಾಗಿದೆ. ಕಡಿತ ಹೊಡೆದಾಗ ಎಲ್ಲ ಉತ್ತರಗಳು 100ಕ್ಕೆ ಸರಿ ಹೊಂದುತ್ತವೆ.


1) $81\frac{5643}{297}$ 2) $81\frac{7524}{396}$

3) $91\frac{5742}{638}$ 4) $91\frac{5823}{647}$

5) $91\frac{7524}{836}$ 6) $91\frac{7524}{836}$

7) $94\frac{1578}{263}$ 8) $96\frac{1428}{357}$

ಶಬ್ದಗಳೊಡನೆ ಸರಸ



ಬೇಂದ್ರೆ ಅಂದ್ರೆ ... ಅವರೊಬ್ಬ ಪದ ಮಾಂತ್ರಿಕ, ಶಬ್ದ ಗಾರುಡಿಗ, ಜ್ಞಾನನಿಧಿ. ಅವರ ಪ್ರಾಸಂಗಿಕ ಪದವಿನೋದಗಳು ಜನರ ಬಾಯಲ್ಲಿ ಬೇರೂರಿವೆ. ಅಂಥ ಕೆಲವು ಉದಾಹರಣೆಗಳು ಇಲ್ಲಿವೆ.
ಒಮ್ಮೆ ಬೇಂದ್ರೆಯವರನ್ನು ಯಾರೋ ಕೇಳಿದರು. ನಿಮ್ಮ ಕಾವ್ಯ ಸ್ಫೂರ್ತಿ ಯಾವುದು? ಅದಕ್ಕೆ ಅವರು, ನನ್ನ ಕಾವ್ಯಸ್ಫೂರ್ತಿಯೇ 'ನಂಬರು', ಹಾಗೆ ಹೇಳಿದರೆ 'ಯಾರೂ ನಂಬರು' ಎಂದು ಹೇಳಿದರಂತೆ. ಡಾಕ್ಟರೇಟ್ ಕೊಟ್ಟಾಗ ಅವರು ಹೇಳಿದ್ದು, ನಾನು ಹುಟ್ಟುತ್ತಲೇ ಡಾಕ್ಟರು. ಏಕೆಂದರೆ ನನ್ನ ಹೆಸರಿನಲ್ಲೇ ಇದೆ D.R. ಎಂದರಂತೆ.
ತಂದೆ ಬಗ್ಗೆ ಹೀಗೆ ಹೇಳಿದ್ದರು. 'ನೀ ತಂದೆ, ನಾ ಈ ಭೂಮಿಗೆ ಬಂದೆ' ಎಂದು. ತಾಯಿ ಬಗ್ಗೆ, 'ನಾ ನಿನ್ನ ಉದರದ ಹೂವು' ಎಂದು ಹೇಳಿದ್ದರು. 'ಕನ್ನಡ ಮಾತೇ ಕನ್ನಡ ಮಾತೆ...' ಹೀಗೆ ಬೇಂದ್ರೆಯವರ ಶ್ಲೇಷಾರ್ಥಗಳ ಪದ ಸಂಗ್ರಹ ಮಾಡಿದರೆ ಒಂದು ಸಣ್ಣ ನಿಘಂಟೇ ಆಗಬಹುದು.

ಪದ - ಹಿಗ್ಗು

1.ವರ 3. ಅರ 5. ಬಾಡಿ 7.ಪತಿ
2. ಶಿರ 4. ಪರ 6. ಕಿರಿ 8.ಕಿಡಿ

1		ಚ		5		ಣ	
2		ನಾ		6		ಲಾ	
3		ಬ್ಬ		7		ಗಾ	
4		ತಾ		8		ಶಿ	


ತಿಳಿಸಾರು: ಪಾಲಿಥೀನ್ ಚೀಲದಲ್ಲಿ ಕಬ್ಬಿಣದ ವಸ್ತುಗಳನ್ನು ಹಾಕಿಟ್ಟು ಗಾಳಿ ಆಡದಂತೆ ಚೀಲದ ಬಾಯಿಯನ್ನು ಭದ್ರಪಡಿಸಿದಲ್ಲಿ ಆ ವಸ್ತುಗಳು ತುಕ್ಕು ಹಿಡಿಯುವುದಿಲ್ಲ

ಟ್ವೆಂಟಿ – 20 ಮ್ಯಾಚ್

A. ಒಗಟಿಗೆ ಉತ್ತರ ಹೊಂದಿಸಿ

1	ಸೊಲ್ಲಾಪುರದ ಬೀಜ ಬಿತ್ತಲು ಬರುತ್ತದೆ ಕೀಳಲು ಬರುವುದಿಲ್ಲ	A ಕಾರ್ಡು
2	ಆಚೆಮಗ, ಈಚೆಮಗ, ಚೋಟೆಮಗ ಸರ್ಕಾರಕ್ಕೂ ಹೋಗಿ ಸಹಿ ಮಾಡಿ ಬರುತ್ತಾನೆ	B ಗರಗಸ
3	ಈಟ ಪಾರ ಸುದ್ದಿ ಮುಟ್ಟಸ್ತದ	C ಅಕ್ಷರ
4	ಬಾಯಿ ಇಲ್ಲದ ಬಳ್ಳಿ ಬಾರಿ ಬಾರಿಗೆ ಮಾತಾಡ್ತದ	D ಪತ್ರೋಳಿ
5	ಕಾಸಲಾರದ ತುಪ್ಪ	E ಪೆನ್ನು
6	ಗಿಡ್ಡನ ಹುಡುಗ ಬಡ್ಯಾಗ ಸಿಕ್ಕೊಂಡಾನ	F ಟೆಲಿಫೋನ್
7	ಭರ್ಣನೆ ಬಂತು ಬಂಗಾರ ಮನೆ ಕಟ್ತು, ದುಷ್ಮನ್ ಬಂದು ಕಸಗೊಂಡು ಹ್ವಾದ	G ಜೇನುತುಪ್ಪ
8	ಹೋಗ್ತಾ ಕೊರೀತದ ಬರ್ತಾ ಕೊರೀತದ	H ಜೇನು
9	ಹಸುರು ಕುಪ್ಪಸಕ್ಕ ಹನ್ನೆರಡು ಟಬ್ಬಿ	I ಬೆಣ್ಣೆ
10	ಬೆಳ್ಳಿ ಗಿಂಡಿಗೆ ಬಾಯಿ ಇಲ್ಲ	J ಕೊಡಲಿ

B. ಇಲ್ಲಿರುವ ಗಣಿತದ ಚಿತ್ರಗಳಿಗೂ ಹೆಸರುಗಳಿಗೂ ಹೊಂದಿಸಿ



1) A ತ್ರಾಪಿಜ್ಯ
2) B ಶಂಕು
3) C ವೃತ್ತ
4) D ಗೋಳ
5) E ಘನ
6) F ಆಯತಘನ
7) G ಪಟ್ಟಕ
8) H ಗೋಪುರ
9) I ಸ್ತಂಭಾಕೃತಿ
10) J ಅರ್ಧಗೋಳ

ಅದಲು ಬದಲು ಕಂಚಿ ಕದಲು

1 ನರಸರಾಜ = ------
2 ಅನಾಥಮರ = ------
3 ತಾಳದಜನ = ------
4 ಮನದಾತ = ------

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಹಿಗ್ಗು: 1 ಕಾಡಿಸು 2 ಮಾಲಿನ್ಯ 3 ಬಾಲಾಜಿ 4 ಸೇತುವೆ 5 ಗೋಮಾಳ 6 ಗುರಾಣಿ 7 ಪಗಡೆ 8 ಚಿರತೆ

ಅದಲು ಬದಲು ಕಂಚಿ ಕದಲು: 1 ಕೆಳಗಿಳಿದಿ 2 ವಿನಾಯಿತಿ 3 ಸುಪ್ರಭಾತ 4 ನೂರುಮತ

ಶಬ್ದಗಳೊಡನೆ ಸರಸ: A 1 ಒಂಟೆ 2 ಹಂದಿ 3 ಜಿಂಕೆ 4 ಸಿಂಹ 5 ಮಂಗ B 1 ಹೋರಿ 2 ಕೋಣ 3 ಗೋವು 4 ಕೋತಿ 5 ಮೇಕೆ C 1 ಕತ್ತೆ 2 ಎಮ್ಮೆ 3 ಎತ್ತು 4 ಬೆಕ್ಕು

ಗಣಿತದಲ್ಲಿ ಗರ್ದಿ ಗಮ್ಮತ್ತು: A) 3 9 5 7 12 2 11 1 10 8 6 4 B) 5 3 2 8 1 7 6 4

ಟ್ವೆಂಟಿ – 20 ಮ್ಯಾಚ್: A ವಿಭಾಗ: 1-B 2-A 3-B 4-B 5-B 6-A 7-B 8-A 9-A 10-B
B ವಿಭಾಗ: 1-J 2-H 3-F 4-E 5-G 6-D 7-I 8-A 9-C 10-B

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ಸಾತ್ವಿಕ್ ಇ.ವಿ., ದಾವಣಗೆರೆ



ಬಾಲಾಜಿ ಟಿ. ಚಂದ್ರಗುತ್ತಿ ಶಿವಮೊಗ್ಗ



ಮಿನುಗು, ಯಾದಗಿರಿ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.
ಉತ್ತರ ಕಳುಹಿಸಲು ಇಮೇಲ್ ವಿಳಾಸ:
majakoora@prajavani.co.in

ಒಡಿಶಾ ಓಪನ್ ಬ್ಯಾಡ್ಮಿಂಟನ್: ಪ್ರಿಯಾಂಶುಗೆ ಜಯ

ಪ್ರಶಸ್ತಿ ಸುತ್ತಿಗೆ ಉನ್ನತಿ, ಕಿರಣ್

ಕಟಕ್ (ಪಿಟಿಐ): ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಗೆದ್ದ ಭಾರತದ ಉನ್ನತಿ ಹೂಡಾ, ಒಡಿಶಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದ ಫೈನಲ್ ತಲುಪಿದ್ದಾರೆ.

ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ 14 ವರ್ಷದ ಉನ್ನತಿ 24-22, 24-22ರಿಂದ ಭಾರತದವರೇ ಆದ ಮಾಳವಿಕಾ ಬಂಸೋಡ್ ಅವರನ್ನು ಸೋಲಿಸಿದರು.

ಮಾಳವಿಕಾ, ಈ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ವಿಶ್ವ ಜೂನಿಯರ್ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ತಸ್ನಿಂ ಮೀರ್ ಅವರಿಗೆ ಸೋಲುಣಿಸಿದ್ದರು.

ಮಹಿಳಾ ಸಿಂಗಲ್ಸ್ ಮತ್ತೊಂದು ಹಣಾಹಣಿಯಲ್ಲಿ ಭಾರತದ ಸ್ಮಿತ್ ತೋಷ್ನಿವಾಲ್ 21-19, 10-21, 21-17ರಿಂದ ಭಾರತದವರೇ ಆದ ಅಸ್ಮಿತಾ ಚಲಿಹಾ ಅವರನ್ನು ಸೋಲಿಸಿದರು.

ಪ್ರಶಸ್ತಿಗಾಗಿ ಪ್ರಿಯಾಂಶು– ಕಿರಣ್ ಪೈಪೋಟಿ: ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಪ್ರಿಯಾಂಶು ರಾಜಾವತ್ ಮತ್ತು ಕಿರಣ್ ಜಾರ್ಜ್ ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. ಸೆಮಿಫೈನಲ್ ಪಂದ್ಯಗಳಲ್ಲಿ ಪ್ರಿಯಾಂಶು 21-17, 21-14ರಿಂದ ಕುಶಲ್ ಧರ್ಮಾಮೆರ್ ಎದುರು, ಕಿರಣ್ 19-21, 21-12, 21-14ರಿಂದ ಅನ್ಸಲ್ ಯಾದವ್ ಎದುರು ಗೆಲುವು ಸಾಧಿಸಿದರು.



ಉನ್ನತಿ ಹೂಡಾ– ಟ್ವಿಟರ್ ಚಿತ್ರ

ಪುರುಷರ ಡಬಲ್ಸ್‌ನಲ್ಲಿ ರವಿ ಕೃಷ್ಣ ಪಿ.ಎಸ್. ಮತ್ತು ಶಂಕರ್ ಪ್ರಸಾದ್ ಉದಯಕುಮಾರ್ ಜೋಡಿ 21-12, 18-21, 21-18ರಿಂದ ವಸಂತಕುಮಾರ್ ರಂಗನಾಥ್ ಮತ್ತು ಅಶಿತ್ ಸೂರ್ಯ ಜೋಡಿಯನ್ನು ಸೋಲಿಸಿ ಪ್ರಶಸ್ತಿ ಸುತ್ತು ತಲುಪಿತು.

ಫೈನಲ್‌ನಲ್ಲಿ ರವಿಕೃಷ್ಣ–ಶಂಕರ್ ಅವರು ಮಲೇಷ್ಯಾದ ನೂರ್ ಮೊಹಮ್ಮದ್ ಅಯೂಬ್ ಅಜ್ರಿಯಾನ್– ಲೀ ಖಿಮ್ ವಾಹ್ ಅವರನ್ನು ಎದುರಿಸುವರು.

ಮಿಶ್ರ ಡಬಲ್ಸ್‌ನಲ್ಲಿ ಎಂ.ಆರ್. ಅರ್ಜುನ್– ತ್ರೀಶಾ ಜೋಲಿ 21-9, 21-9ರಿಂದ ಬಾಲಕೇಸರಿ ಯಾದವ್-ಶ್ವೇತಪರ್ಣ ಪಂಡಾ ಅವರನ್ನು ಮಣಿಸಿ ಪ್ರಶಸ್ತಿ ಸುತ್ತು ತಲುಪಿದರು. ಫೈನಲ್‌ನಲ್ಲಿ ಭಾರತದ ಜೋಡಿಗೆ ಶ್ರೀಲಂಕಾದ ಸಚಿನ್ ದಿಯಾಸ್ ಮತ್ತು ತಿಳಿನಿ ಹೆಂದಾವ ಸವಾಲು ಎದುರಾಗಿದೆ.

ಮಾಳವಿಕಾ, ಲಕ್ಷ್ಯಗೆ ಸಾರಥ್ಯ

ಲಕ್ಷ್ಯ ಸೇನ್ ಮತ್ತು ಮಾಳವಿಕಾ ಬಂಸೋಡ್ ಅವರು ಫೆಬ್ರುವರಿ 15ರಿಂದ 20ರವರೆಗೆ ಮಲೇಷ್ಯಾದಲ್ಲಿ ನಡೆಯಲಿರುವ ಬ್ಯಾಡ್ಮಿಂಟನ್ ಏಷ್ಯಾ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಭಾರತದ ಪುರುಷ ಮತ್ತು ಮಹಿಳಾ ತಂಡಗಳನ್ನು ಮುನ್ನಡೆಸಲಿದ್ದಾರೆ.

ತಂಡಗಳು: ಪುರುಷರ ಸಿಂಗಲ್ಸ್: ಲಕ್ಷ್ಯ ಸೇನ್, ಮಿಥುನ್ ಮಂಜುನಾಥ್, ಕಿರಣ್ ಜಾರ್ಜ್, ರಘು ಎಂ. ಡಬಲ್ಸ್: ಪಿ.ಎಸ್. ರವಿ ಕೃಷ್ಣ–ಉದಯ್‌ಕುಮಾರ್ ಶಂಕರ್ ಪ್ರಸಾದ್, ಅಮ್ಸಕರುಣನ್ ಹರಿಹರನ್– ರುಬಾನ್, ಡಿಂಕು ಸಿಂಗ್–ಮಂಜೀತ್ ಸಿಂಗ್

ಮಹಿಳೆಯರ ಸಿಂಗಲ್ಸ್: ಮಾಳವಿಕಾ, ಆಕರ್ಷಿ ಕಶ್ಯಪ್, ಅಸ್ಮಿತಾ ಚಲಿಹಾ, ತಾರಾ ಶಾ. ಡಬಲ್ಸ್: ಸಿಮ್ರಾನ್ ಸಿಂಘಿ–ಖುಷಿ ಗುಪ್ತಾ, ವಿ ನೀಲಾ –ರೂಬಲ್, ಆರತಿ ಸುನಿಲ್–ರೀಜಾ

ಗಾಲ್ಫ್: ಅಗ್ರ ಐದರಲ್ಲಿ ಅದಿತಿ

ಬೋಕಾ ರಿಯೊ, ಅಮೆರಿಕ (ಪಿಟಿಐ): ಭಾರತದ ಅದಿತಿ ಅಶೋಕ್ ಇಲ್ಲಿ ನಡೆಯುತ್ತಿರುವ ಗೇನ್‌ಬ್ರಿಜ್ ಎಲ್‌ಪಿಜಿಎ ಗಾಲ್ಫ್ ಟೂರ್ನಿಯ ಎರಡನೇ ಸುತ್ತಿನ ಮುಕ್ತಾಯಕ್ಕೆ ಅಗ್ರ ಐದರಲ್ಲಿ ಸ್ಥಾನ ಗಳಿಸಿದ್ದಾರೆ. ಆದರೆ ಮೊದಲ ದಿನಕ್ಕಿಂತ ಎರಡು ಸ್ಥಾನಗಳ ಹಿನ್ನಡೆ ಕಂಡಿದ್ದಾರೆ.

ಡ್ಯಾನಿಯಲ್ ಕಿಂಗ್ ಅಗ್ರಸ್ಥಾನದಲ್ಲಿದ್ದು ಎರಡನೇ ಸ್ಥಾನದಲ್ಲಿ ಲಿಡಿಯಾ ಕೊ ಇದ್ದಾರೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದ ಬೆಂಗಳೂರಿನ ಅದಿತಿ ಅವರಿಗೆ 2022ರಲ್ಲಿ ಇದು ಮೊದಲ ಟೂರ್ನಿಯಾಗಿದೆ. ಎಲ್‌ಪಿಜಿಎಗೆ ಪದಾರ್ಪಣೆ ಮಾಡಿದ ನಿಶ್ತಾ ಮದನ್ ಈಗಾಗಲೇ ಟೂರ್ನಿಯಿಂದ ಹೊರಬಿದ್ದಿದ್ದಾರೆ. ಅಗ್ರ ಐದರಲ್ಲಿ ಅದಿತಿ ಸೇರಿದಂತೆ ಐದು ಮಂದಿ ಇದ್ದಾರೆ. ಕಳೆದ ವರ್ಷ ಮಹಿಳಾ ವಿಭಾಗದ ಪ್ರಶಸ್ತಿ ಯೂಕೊ ಸಾಸೊ ಅವರ ಪಾಲಾಗಿತ್ತು.



ಅದಿತಿ ಅಶೋಕ್

ಪ್ರೊ ಬಾಕ್ಸಿಂಗ್‌ಗೆ ಸರ್ಜುಬಾಲಾ

ನವದೆಹಲಿ (ಪಿಟಿಐ): ಭಾರತದ ಮಹಿಳಾ ಬಾಕ್ಸರ್, ಒಲಿಂಪಿಯನ್ ಸರ್ಜುಬಾಲಾ ದೇವಿ ಅವರು ಪ್ರೊ ಬಾಕ್ಸಿಂಗ್ ಕಣಕ್ಕಿಳಿಯಲು ನಿರ್ಧರಿಸಿದ್ದಾರೆ. ಈ ನಿಟ್ಟಿನಲ್ಲಿ ಅವರು ಅನುಭವಿ ಕೋಚ್ ಮುಜ್ತಬಾ ಕಮಲ್ ಮತ್ತು ಇಂಫಾಲ್‌ನ ಗ್ರಾಸ್‌ರೂಟ್ ಬಾಕ್ಸಿಂಗ್ ಪ್ರೊಮೋಷನ್‌ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

ಮಣಿಪುರದ 28 ವರ್ಷದ ಸರ್ಜುಬಾಲಾ, 2014ರಲ್ಲಿ ಕೊರಿಯಾದಲ್ಲಿ ನಡೆದ ಎಐಬಿಎ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು.2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಅವರು ಭಾರತವನ್ನು ಪ್ರತಿನಿಧಿಸಿದ್ದರು.

ಫೆಬ್ರುವರಿ 26ರಂದು ದುಬೈನಲ್ಲಿ ನಡೆಯುವ ಬೌಟ್ ಮೂಲಕ ವೃತ್ತಿಪರ ಬಾಕ್ಸಿಂಗ್‌ಗೆ ಸರ್ಜುಬಾಲಾ ಪದಾರ್ಪಣೆ ಮಾಡಲಿದ್ದಾರೆ.

ಬ್ಯಾಸ್ಕೆಟ್‌ಬಾಲ್ ಪಟು ರಾಜೇಂದ್ರ ಪ್ರಸಾದ್ ನಿಧನ

ಬೆಂಗಳೂರು: ಕರ್ನಾಟಕ ತಂಡದಲ್ಲಿ ಆಡಿದ್ದ ಬ್ಯಾಸ್ಕೆಟ್ ಬಾಲ್ ಆಟಗಾರ ರಾಜೇಂದ್ರ ಪ್ರಸಾದ್ (71) ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ, ಮಗ ಮತ್ತು ಮಗಳು ಇದ್ದಾರೆ. 1970-80ರ ಅವಧಿಯಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು. ವೈಎಂಎಂಎ ಮತ್ತು ಐಟಿಐ ಸ್ಪೋರ್ಟ್ಸ್ ಕ್ಲಬ್ ತಂಡಗಳ ಪರವೂ ಆಡಿದ್ದರು.




ರಾಜೇಂದ್ರ ಪ್ರಸಾದ್

ಸ್ಟಾರ್ಕ್‌ಗೆ 'ಅಲನ್ ಬಾರ್ಡರ್' ಗೌರವ

ಕ್ಯಾನ್‌ಬೆರಾ (ಪಿಟಿಐ): ಅನುಭವಿ ವೇಗಿ ಮಿಚೆಲ್ ಸ್ಟಾರ್ಕ್ ಅವರು ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ನೀಡುವ 'ಅಲನ್ ಬಾರ್ಡರ್' ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ಮೊದಲ ಬಾರಿ ಅವರಿಗೆ ಈ ಗೌರವ ಸಂದಿದೆ.

ಆ್ಯಶ್ಲಿ ಗಾರ್ಡನರ್ ಅವರು ಬೆಲಿಂಡಾ ಕ್ಲಾರ್ಕ್ ಪುರಸ್ಕಾರ ಪಡೆಯುವುದರ ಮೂಲಕ ಈ ಪ್ರಶಸ್ತಿಗೆ ಭಾಜನರಾದ ಮೊದಲ ಮೂಲನಿವಾಸಿ ಆಟಗಾರ್ತಿ ಎನಿಸಿದ್ದಾರೆ.

ಕ್ರಿಕೆಟ್‌ನ ಮೂರು ಮಾದರಿಗಳಲ್ಲಿ ಸ್ಟಾರ್ಕ್ ತೋರಿದ ಸಾಮರ್ಥ್ಯವನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ. 22 ವರ್ಷಗಳ ಅವಧಿಯಲ್ಲಿ ಈ ಪುರಸ್ಕಾರ ಪಡೆದ ಐದನೇ ಬೌಲರ್ ಅವರು.



ಮಿಚೆಲ್ ಸ್ಟಾರ್ಕ್



ಅಲಿಸಾ ಹೀಲಿ

ಸ್ಟಾರ್ಕ್ ಪತ್ನಿ, ಆಸ್ಟ್ರೇಲಿಯಾ ಮಹಿಳಾ ತಂಡದ ವಿಕೆಟ್‌ಕೀಪರ್ ಬ್ಯಾಟರ್ ಅಲಿಸಾ ಹೀಲಿ ಅವರಿಗೆ ವರ್ಷದ ಏಕದಿನ ಆಟಗಾರ್ತಿ ಪುರಸ್ಕಾರ ಒಲಿದಿದೆ.


ಟ್ರೇನರ್ ರಶೀದ್ ಬೈರಾಮ್ಜಿ ಇನ್ನಿಲ್ಲ

ಬೆಂಗಳೂರು: ಕುದುರೆ ರೇಸ್‌ನ ಖ್ಯಾತನಾಮ ಟ್ರೇನರ್ ರಶೀದ್ ಆರ್ ಬೈರಾಮ್ಜಿ (88) ಶನಿವಾರ ಬೆಂಗಳೂರಿನ ತಮ್ಮ ನಿವಾಸದಲ್ಲಿ ನಿಧನರಾದರು.

ವಿಶ್ವದ ಪ್ರತಿಷ್ಠಿತ ರೇಸ್ ಕೇಂದ್ರಗಳಲ್ಲಿ ಬೈರಾಮ್ಜಿಯವರು ಅಪಾರ ಮನ್ನಣೆ ಗಳಿಸಿದ್ದರು. ಅವರ ದಾಖಲೆಗಳಿಗೆ ಅವರೇ ಸರಿಸಾಟಿ.

3200 ವಿಜಯಗಳು ಅವರ ಹೆಸರಲ್ಲಿವೆ. ಅದರಲ್ಲಿ 230 ಕ್ಲಾಸಿಕ್ , 10 ಇಂಡಿಯನ್ ಡರ್ಬಿ ಮತ್ತು 12 ಆಹ್ವಾನಿತ ಕಪ್ ಗೆಲುವುಗಳು ಸೇರಿವೆ.

ಅವರು ಜನಿಸಿದ್ದು ಟ್ರೇನರ್‌ಗಳ ಕುಟುಂಬದಲ್ಲಿಯೇ. ತಮ್ಮ ಅಜ್ಜ ಬೈರಾಮ್ಜಿ ರುಸ್ತುಮಜಿ ಅವರು ಕುದುರೆಗಳನ್ನು ತರಬೇತುಗೊಳಿಸುವುದನ್ನು ಬಾಲ್ಯದಲ್ಲಿಯೇ ನೋಡಿ ಆಕರ್ಷಿತರಾದರು. ಅವರ ತಂದೆ ರುಸ್ತುಮಜಿ ಬೈರಾಮ್ಜಿ ಕೂಡ ಟ್ರೇನರ್ ಆಗಿದ್ದರು.1955ರ ಮೇ 1ರಂದು ಪುಣೆಯಲ್ಲಿ ಟ್ರೇನರ್ ಲೈಸೆನ್ಸ್ ಪಡೆದರು. ಆಗ ಸೈರಸ್ ಪೂನಾವಾಲಾ ನೀಡಿದ ನಾಲ್ಕು ಕುದುರೆಗಳ ತರಬೇತಿಯೊಂದಿಗೆ ಅವರ ವೃತ್ತಿಜೀವನ ಆರಂಭವಾಯಿತು.



ರಶೀದ್ ಬೈರಾಮ್ಜಿ

21ನೇ ವಯಸ್ಸಿನಿಂದಲೇ ಯಶಸ್ಸಿನ ಒಂದೊಂದೇ ಮೆಟ್ಟಿಲು ಹತ್ತಿದರು. ಭಾರತದ ರೇಸಿಂಗ್ ವಲಯದಲ್ಲಿ ಅವರದ್ದು ವಿಶೇಷ ಛಾಪು. ಅವರಲ್ಲಿದ್ದ ಅಶ್ವಗಳನ್ನು ಪಳಗಿಸುವ ಕಲೆ ಅನನ್ಯವಾದದ್ದು. ಅವರ ಮಾರ್ಗದರ್ಶನದಲ್ಲಿ ಹಲವರು ಟ್ರೇನರ್‌ಗಳಾಗಿ ರೂಪುಗೊಂಡಿದ್ದಾರೆ.

ಭಾರತದ ಚೆಸ್ ಆಟಗಾರರಿಗೆ ಆನಂದ್ ಮಾರ್ಗದರ್ಶನ

ನವದೆಹಲಿ (ಪಿಟಿಐ): ಮುಂದಿನ ಸೆಪ್ಟೆಂಬರ್‌ನಲ್ಲಿ ಚೀನಾದ ಹಾಂಗ್ಜುವಿನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ನ ಚೆಸ್‌ನಲ್ಲಿ ಪಾಲ್ಗೊಳ್ಳುವ ಭಾರತ ತಂಡಕ್ಕೆ ಮಾಜಿ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ಮಾರ್ಗದರ್ಶನ ನೀಡಲಿದ್ದಾರೆ.

ಏಷ್ಯನ್ ಗೇಮ್ಸ್‌ನಲ್ಲಿ 12 ವರ್ಷಗಳ ಬಳಿಕ ಚೆಸ್ ಸೇರ್ಪಡೆಯಾಗಿದೆ. ಗೇಮ್ಸ್‌ನಲ್ಲಿ ಅತ್ಯುತ್ಕೃಷ್ಟ ತಂಡವನ್ನು ಕಣಕ್ಕೆ ಇಳಿಸಲು ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್) ಯೋಜನೆ ಹಾಕಿಕೊಂಡಿದೆ. 2010ರಲ್ಲಿ ಗುವಾಂಗ್ಜುವಿನಲ್ಲಿ ನಡೆದ ಗೇಮ್ಸ್‌ನಲ್ಲಿ ಭಾರತ ಎರಡು ಕಂಚಿನ ಪದಕಗಳನ್ನು ಗೆದ್ದುಕೊಂಡಿತ್ತು.

'ಸಿದ್ಧತೆಗಳು ಈಗಲೇ ಆರಂಭವಾಗಿವೆ. ನಾಲ್ಕು ಚಿನ್ನದ ಪದಕಗಳನ್ನು ಗೆಲ್ಲುವ ಗುರಿ ಇದೆ. ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ತಲಾ 10 ಮಂದಿ ಸಂಭಾವ್ಯರನ್ನು ಆರಿಸಲಾಗಿದೆ. ಅಂತರರಾಷ್ಟ್ರೀಯ ಮಟ್ಟದ ರೇಟಿಂಗ್ ಆಧಾರದಲ್ಲಿ ಆಯ್ಕೆ ನಡೆದಿದೆ. ಆಟಗಾರರು ಮತ್ತು ವಿಶ್ವನಾಥನ್ ಆನಂದ್ ಮೊದಲ ಮುಖಾಮುಖಿ ಮುಂದಿನ ಗುರುವಾರ ನಡೆಯಲಿದೆ' ಎಂದು ಎಐಸಿಎಫ್ ಪ್ರಕಟಣೆ ತಿಳಿಸಿದೆ.



ವಿಶ್ವನಾಥನ್ ಆನಂದ್

ಪುರುಷರ ವಿಭಾಗದಲ್ಲಿ ವಿದಿತ್ ಗುಜರಾತಿ, ಪಿ.ಹರಿಕೃಷ್ಣ, ನಿಹಾಲ್ ಸರಿನ್, ಎಸ್.ಎಲ್.ನಾರಾಯಣನ್, ಕೆ.ಶಶಿಕಿರಣ್, ಬಿ.ಅಧಿಬನ್, ಕಾರ್ತಿಕೇಯನ್ ಮುರಳಿ, ಅರ್ಜುನ್ ಎರಿಗೈಸಿ, ಅಭಿಜಿತ್ ಗುಪ್ತಾ ಮತ್ತು ಸೂರ್ಯ ಶೇಖರ್ ಗಂಗೂಲಿ, ಮಹಿಳೆಯರ ವಿಭಾಗದಲ್ಲಿ ಕೊನೇರು ಹಂಪಿ, ಡಿ.ಹರಿಕಾ, ವೈಶಾಲಿ ಆರ್, ತಾನಿಯ ಸಚ್‌ದೇವ್, ಭಕ್ತಿ ಕುಲಕರ್ಣಿ, ವಂತಿಕಾ ಅಗರವಾಲ್, ಮೇರಿ ಆ್ಯನ್ ಗೊಮೆಜ್, ಸೌಮ್ಯ ಸ್ವಾಮಿನಾಥನ್ ಮತ್ತು ಈಶ ಕರವಡೆ ಸಂಭಾವ್ಯರ ಪಟ್ಟಿಯಲ್ಲಿ ಸ್ಥಾನ ಗಳಿಸಿದ್ದಾರೆ.

ಕಾರ್ಲ್‌ಸನ್ ಜೊತೆ ಡ್ರಾ ಸಾಧಿಸಿದ ವಿದಿತ್

ವಿಜ್ಕ್ ಆನ್ ಜೀ, ನೆದರ್ಲೆಂಡ್ಸ್ (ಪಿಟಿಐ): ವಿಶ್ವ ಕ್ರಮಾಂಕದಲ್ಲಿ ಒಂದನೇ ಸ್ಥಾನದಲ್ಲಿರುವ ಮ್ಯಾಗ್ನಸ್ ಕಾರ್ಲ್‌ಸನ್ ಎದುರು ಡ್ರಾ ಸಾಧಿಸಿದ ಭಾರತದ ಗ್ರ್ಯಾಂಡ್ ಮಾಸ್ಟರ್ ವಿದಿತ್ ಗುಜರಾತಿ ಅವರು ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ನಾಲ್ಕನೇ ಸ್ಥಾನವನ್ನು ಹಂಚಿಕೊಂಡರು.

11ನೇ ಸುತ್ತಿನಲ್ಲಿ ಗಳಿಸಿದ ಅಮೋಘ ಡ್ರಾದೊಂದಿಗೆ ವಿದಿತ್ ಖಾತೆಯಲ್ಲಿ ಆರು ಪಾಯಿಂಟ್‌ಗಳು ಇವೆ. ಭಾರತದ ಮತ್ತೊಬ್ಬ ಆಟಗಾರ ಆರ್.ಪ್ರಜ್ಞಾನಂದ 11ನೇ ಸುತ್ತಿನಲ್ಲಿ ಅಮೆರಿಕದ ಫ್ಯಾಬಿಯಾನೊ ಗರುವಾನ ಎದುರು ಸೋತರು. ಅವರ ಬಳಿ ಈಗ 3.5 ಪಾಯಿಂಟ್‌ಗಳಿದ್ದು ಜಂಟಿ 12ನೇ ಸ್ಥಾನದಲ್ಲಿದ್ದಾರೆ. 7.5 ಪಾಯಿಂಟ್‌ಗಳೊಂದಿಗೆ ಕಾರ್ಲ್‌ಸನ್ ಅಗ್ರ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಹೈದರಾಬಾದ್ ರೇಸ್

ಟೆರೆಸಿಟ ಗೆಲ್ಲುವ ನಿರೀಕ್ಷೆ

ಗೋಲ್ಕಂಡ್ ಡರ್ಬಿ ಸ್ಟೇಕ್ಸ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟೆರೆಸಿಟ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12.15ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ದಿ ಇಮೇಜ್ 6, ವಿಂಡ್ ಸ್ಟ್ರೈಟ್ 5, ಸಿಟಿ ಆಫ್ ಗ್ರಾವಿಟಿಸ್ 1
2ನೇ ರೇಸ್: ಸೋಲಾರ್ ಎಕ್ಲಿಪ್ಸ್ 2, ಎನ್ ಆರ್.ಐ ಬ್ಲೂ 1, ಇನ್ಸೆಪ್ಶನ್ 6
3ನೇ ರೇಸ್: ಮೋರಿಯರ್ 2, ಇನ್ವಿಕ್ಟಸ್ 2, ಇಸ್ರಾ 12. ಸಿಲ್ವರ್ ಬೆಲ್ಸ್ 11
4ನೇ ರೇಸ್: ನಾಟಿ ಡ್ಯಾನ್ಸರ್ 2, ಬ್ಲೂ ಆರಿಜನ್ 1, ಅಕಿಡೊ 3
5ನೇ ರೇಸ್: ಹಾಟ್ ಸೀಟ್ 3, ನರಕಮಿಸಿ 8, ಅನ್‌ಮ್ಯಾಚ್ಡ್ 2
6ನೇ ರೇಸ್: ಮಾರ್ಕೆಟ್ ಕಿಂಗ್ 3, ವಾಚ್ ಮೈ ಸ್ಟ್ರೈಡ್ 8, ಎಕ್ಸ್‌ಫಿನಿಟಿ 4
7ನೇ ರೇಸ್: ಫಿಲಾನ್‌ಥ್ರೊಪಿಸ್ಟ್ 3, ಬ್ಲೂಮ್ ಬಡ್ಡಿ 1, ಗ್ರ್ಯಾಂಡ್ ಡ್ಯೂಕ್ 7
8ನೇ ರೇಸ್: ಟೆರೆಸಿಟ 10, ಸ್ಟಾಕ್‌ಬ್ರಿಡ್ಜ್ 7, ಅಶ್ವ ರಾಡಿ 1
9ನೇ ರೇಸ್: ಸ್ಪೆಕ್ಟಾಕ್ಯುಲರ್ ಕ್ರೂಯ್ಸ್ 4, ಎನ್.ಆರ್.ಐ ಗಿಫ್ಟ್ 8, ಗುಡ್ ಟೈಡಿಂಗ್ಸ್ 9

ಉತ್ತಮ ಬೆಟ್: ದಿ ಇಮೇಜ್

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್
1,2,3,4,5,6	5,6,7,8,9	2,3,4,5	6,7,8,9

1ನೇ ಟ್ರಬಲ್	2ನೇ ಟ್ರಬಲ್	3ನೇ ಟ್ರಬಲ್
1,2,3	4,5,6	7,8,9